
ಕರ್ಣಚೈತ್ರನ ಪರ್ಣಶಾಲೆ

(ಕುವೆಂಪು ಶ್ರೀ ರಾಮಾಯಣದರ್ಶನಂ ಮಹಾಕಾವ್ಯ ವಿಮರ್ಶೆ)



ಡಾ.ಜಿ.ಕೃಷ್ಣಪ್ಪ



ಕರ್ಣಚೈತ್ರನ ಪರ್ಣಶಾಲೆ

(ಕುವೆಂಪು ಶ್ರೀ ರಾಮಾಯಣದರ್ಶನಂ ಮಹಾಕಾವ್ಯ ವಿಮರ್ಶೆ)

ಡಾ.ಜಿ.ಕೃಷ್ಣಪ್ಪ

ಪ್ರಕಾಶಕರು

ಅನ್ನಪೂರ್ಣ ಪಬ್ಲಿಷಿಂಗ್ ಹೌಸ್

#176, 12ನೇ ಕ್ರಾಸ್, ಅಗ್ರಹಾರ ದಾಸರಹಳ್ಳಿ,
ಮಾಗಡಿ ಮುಖ್ಯರಸ್ತೆ, ಬೆಂಗಳೂರು – 560079

KARNACHAITHRANA PARNNASHALE
Written by :
Dr.G.Krishnappa
No.22, Sri Gurudatta Nilaya,
1st Cross, Netaji Nagara
Mathikere, Bangalore-560054
Mob: 99721 09209
Published by
Annapoorna Publishing House
#176, 12th Cross, Agraharadasarahalli,
Magadi Main Road
Bangalore - 560079

First Print	:	2022
©	:	Author
Pages	:	iv + xxii + 152
Price	:	200/-
Book Size	:	1/8demmy, 70Gsm
Copies	:	1000
Coverpage	:	Suresh.B.K.
D.T.P	:	Annashree Graphics, Bangalore
Printed at	:	Sri Annapoorna Publishers and Distributors Bangalore Rural Dist - 562111

ಡಾ.ಜಿ.ಕೃಷ್ಣಪ್ಪ

ಬೇಂದ್ರೆ ಕೃಷ್ಣಪ್ಪ ಎಂದೇ ಜನಪ್ರಿಯರಾಗಿರುವ ಡಾ.ಜಿ.ಕೃಷ್ಣಪ್ಪ (1948) ಅವರು ಸೃಜನಶೀಲ ಲೇಖಕರು, ಬೇಂದ್ರೆ ಸಾಹಿತ್ಯ ಪರಿಚಾರಕರು. ಬೇಂದ್ರೆ ಕಾವ್ಯದ ಓದಿಗೆ ಹೊಸ ಆಯಾಮ ಕೊಟ್ಟವರು. ಬೆಂಗಳೂರು ಕೃಷ್ಣಪ್ಪನವರ ಹುಟ್ಟೂರು. ಆಟೋಮೊಬೈಲ್ ಇಂಜಿನೀಯರ್, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ನಿವೃತ್ತಿ. ಉದ್ಯೋಗದ ನಡುವೆ ಬಿ.ಎ, ಎಲ್.ಎಲ್.ಬಿ., ಕನ್ನಡದಲ್ಲಿ ಸ್ನಾತಕೋತ್ತರ ಪದವಿ, 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ : ಒಂದು ಅಧ್ಯಯನ' ಕುರಿತು ಪಿಎಚ್.ಡಿ.

ಸತತ ಮೂರು ದಶಕಗಳಿಂದ ಶಾಲಾ-ಕಾಲೇಜುಗಳಲ್ಲಿ 650ಕ್ಕೂ ಅಧಿಕ ಬೇಂದ್ರೆ ಕಾವ್ಯ ಗಾಯನ ಸ್ಪರ್ಧೆ ಆಯೋಜನೆ. ಬಹುಮಾನವಾಗಿ ಬೇಂದ್ರೆ ಕೃತಿಗಳ ನೀಡಿಕೆ. ನಾಡಿನಾದ್ಯಂತ ಸಂಚಾರ. ಬೇಂದ್ರೆ ಕಾವ್ಯಾನುಭವವನ್ನು ಅಕ್ಷರಕ್ಕೆ ಅಕ್ಷರಶಃ ಇಳಿಸಿದ ಭಗೀರಥರು. ಬೇಂದ್ರೆ ಕಾವ್ಯಕೂಟ ಸ್ಥಾಪನೆ. ಸ್ನಾತಕೋತ್ತರ ಹಾಗೂ ಪಿಎಚ್.ಡಿ., ವಿದ್ಯಾರ್ಥಿಗಳಿಗೆ ಕಾವ್ಯ ವಿಮರ್ಶಾ ಸ್ಪರ್ಧೆ ಆಯೋಜಿಸಿ ಬಹುಮಾನ ವಿತರಣೆ. 'ನಾಕುತಂತಿ – ಒಂದು ಟಿಪ್ಪಣಿ', 'ಬೇಂದ್ರೆಕಾವ್ಯ : ಪದನಿರುಕ್ತ' ಮುಂತಾದ 12 ಬೇಂದ್ರೆ ಕಾವ್ಯ ವಿಮರ್ಶಾ ಕೃತಿಗಳ ರಚನೆ.

ಸರಳ ಕನ್ನಡದಲ್ಲಿ ಲಕ್ಷ್ಮೀಶನ ವಚನ ಜೈಮಿನಿ ಭಾರತ, ಹರಿಹರನ ವಚನ ಗಿರಜಾಕಲ್ಯಾಣ, ರಾಗವಾಂಕನ ವಚನ ಹರಿಶ್ಚಂದ್ರ ಚಾರಿತ್ರ ಹಾಗೂ ಕನಕದಾಸರ 'ನಳದಮಯಂತಿ ಪ್ರೇಮಕಥೆಯ ರಚನೆ.

ಕೃಷ್ಣಪ್ಪನವರು 'ಬೇಂದ್ರೆ ವ್ರತ'ದಿಂದ 'ಕುವೆಂಪು ಧ್ಯಾನ'ಕ್ಕೆ ಹೊರಳಿ 'ಶ್ರೀ ರಾಮಾಯಣದರ್ಶನಂ ವಚನ ದೀಪಿಕೆ', 'ಕುವೆಂಪು ಹನುಮದ್ದರ್ಶನ', 'ಶ್ರೀ ರಾಮಾಯಣದರ್ಶನಂ ಪಾತ್ರಗಳ ಕಥಾವಳಿ' ಕೃತಿಗಳನ್ನು ಸಹೃದಯರಿಗೆ ನೀಡಿದ್ದಾರೆ. ಸತತ ಸಾಹಿತ್ಯ ಸೇವೆಗೆ ಡಾ.ಜಿ.ಪಿ.ರಾಜರತ್ನಂ ಕನ್ನಡ ಸಾಹಿತ್ಯ ಪರಿಚಾರಕ ಪ್ರಶಸ್ತಿ, ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಾಹಿತ್ಯ ಶ್ರೀ ಪ್ರಶಸ್ತಿ, ಮತ್ತಿತರ ಗೌರವಗಳಿಗೆ ಪಾತ್ರರಾಗಿದ್ದಾರೆ.

ಅರ್ಪಣೆ

ಕುವೆಂಪು ಪ್ರತಿಷ್ಠಾನದ ಸೇವಾ ಸಂತ
ಶ್ರೀ ಕಡಿದಾಳ್ ಪ್ರಕಾಶ್
ಮತ್ತು ಅವರ ಧರ್ಮಪತ್ನಿ
ಶ್ರೀಮತಿ ಜೆ.ಟಿ.ಕಲ್ಪನ
ಅವರಿಗೆ

ಮುನ್ನುಡಿ

ಕುವೆಂಪು ಕಾವ್ಯ ಕುರಿತು ಅದರಲ್ಲೂ ಹೊಸಗನ್ನಡದ ಮೊಟ್ಟಮೊದಲ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ'ಕುರಿತು ಸಮತೂಕದ ಅಂದರೆ ಕವಿಕೃತಿಗೆ, ಕವಿಪ್ರತಿಭೆಗೆ, ಕವಿಶ್ರಮಕ್ಕೆ ನ್ಯಾಯ ದೊರಕಿಸಿಕೊಡುವಂಥ ವಿಮರ್ಶೆಯೊಂದು ಬಂದಿದೆಯೇ ಎಂದು ಅನುಮಾನಿಸಬೇಕಾಗಿರುವ ಹೊತ್ತಿನಲ್ಲಿ ಗೆಳೆಯರಾದ ಡಾ.ಜಿ.ಕೃಷ್ಣಪ್ಪನವರು 'ಕರ್ಣಚೈತ್ರನ ಪರ್ಣಶಾಲೆ' ಎನ್ನುವ ಹೆಸರಿನಲ್ಲಿ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ವಿಮರ್ಶೆಯನ್ನು 35 ಅಧ್ಯಾಯಗಳನ್ನು ಒಳಗೊಂಡ ಕೃತಿರೂಪದಲ್ಲಿ ಪ್ರಕಟಿಸುತ್ತಿದ್ದಾರೆ. ಪೂರ್ವ-ಪಶ್ಚಿಮದ ಮಹಾಕಾವ್ಯಗಳನ್ನೂ ಕಾವ್ಯಮೀಮಾಂಸೆಯನ್ನೂ ಕಾವ್ಯವಿಮರ್ಶೆಯನ್ನೂ ಶ್ರದ್ಧಾಸಕ್ತಿಯಿಂದ ಅಧ್ಯಯನ ಮಾಡಿ, ಚಿಂತನ-ಮಂಥನ ಮಾಡಿ ಅರಗಿಸಿಕೊಂಡು ಪರಿಪುಷ್ಟವಾದ ಕುವೆಂಪು ಅವರ ದೈತ್ಯಪ್ರತಿಭೆಯಿಂದ ಹೊಮ್ಮಿದ ದರ್ಶನ ಮಹಾಕಾವ್ಯವನ್ನು ವಿಮರ್ಶೆಗೆ ಒಳಪಡಿಸಬೇಕಾದರೆ ಕವಿಪ್ರತಿಭೆಯ ಸ್ವರೂಪವನ್ನು ಸಮರ್ಪಕವಾಗಿ ಅರ್ಥಮಾಡಿಕೊಳ್ಳುವ ಮಟ್ಟಿಗಿನ ಓದು ಗ್ರಹಿಕೆ ಚಿಂತನೆಗಳು ಬೇಕಾಗುತ್ತವೆ. ಮಹಾಕಾವ್ಯ ಸೃಜನೆ ಕುವೆಂಪು ಅವರಿಗೆ ತಪಸ್ಸಾದಂತೆ, ಆ ಕಾವ್ಯದ ವಿಮರ್ಶೆಯೂ ಒಂದು ತಪಸ್ಸಾಗಬೇಕಾಗುತ್ತದೆ. ಅದು ಹೇಗೆ ಇರಬೇಕು ಎನ್ನುವುದಕ್ಕೆ ಸಂಬಂಧಿಸಿದಂತೆ 'ವಿಮರ್ಶೆಯ ಪೂರ್ವ ಪಶ್ಚಿಮ'ದಲ್ಲಿ ಜಿ.ಎಸ್.ಶಿವರುದ್ರಪ್ಪನವರು ಆಡಿರುವ ಈ ಮಾತುಗಳನ್ನು ಗಮನಿಸುವುದು, ಮನನ ಮಾಡಿಕೊಳ್ಳುವುದು ವಿಮರ್ಶಕರೆನಿಸಿಕೊಳ್ಳುವವರಿಗೆ, ವಿಮರ್ಶಿಸುವ ಉತ್ಸಾಹದಲ್ಲಿ ಇರುವವರಿಗೆ ಬಹಳ ಮುಖ್ಯ ಎಂದು ನನಗನ್ನಿಸುತ್ತದೆ. ಮಹಾಕಾವ್ಯದ ವಿಮರ್ಶೆಗೂ ಅನ್ವಯಿಸಿಕೊಳ್ಳಬಹುದಾದಂತೆ "ಸಾಹಿತ್ಯ ವಿಮರ್ಶೆ ಎಂದರೆ ಸಾಕಷ್ಟು ಸಮೃದ್ಧವಾದ ಸಾಹಿತ್ಯವಿರುವಲ್ಲಿ, ಶಕ್ತನಾದ ಸೂಕ್ಷ್ಮಜ್ಞನಾದ ಸಹೃದಯನೊಬ್ಬ ಅದನ್ನು ಆಸ್ವಾದಿಸಿ, ಆಲೋಚಿಸಿ, ಅದರ ಗುಣದೋಷಗಳನ್ನು ವಿವೇಚಿಸಿ, ಅದರ ಬೆಲೆಯನ್ನು ಕಟ್ಟುವ ನಿಷ್ಪಕ್ಷಪಾತವಾದ ಪ್ರಯತ್ನ ಎನ್ನಬಹುದು." ಕುವೆಂಪು ಅವರೇ 'ಕಾವ್ಯ ವಿಹಾರ' ಕೃತಿಯಲ್ಲಿ ಹೇಳಿರುವಂತೆ "ವಿಮರ್ಶೆ ಎಂದರೆ ಕವಿಪ್ರತಿಭೆಯಿಂದ ಹೊರಹೊಮ್ಮುವ ಭಾವಮಯ ಕಾವ್ಯ ಕ್ಷೇತ್ರಗಳಲ್ಲಿ ಸೂಕ್ಷ್ಮಮತಿಯಾದ ಸಹೃದಯನು ಕೈಗೊಳ್ಳುವ ವಿಹಾರಯಾತ್ರೆಯ ಅಥವಾ

ಸಾಹಸಯಾತ್ರೆಯ ಕಥನ ಕಾರ್ಯ." ಎಂದರೆ ಕಾವ್ಯದ ಭಾವ, ಅರ್ಥ, ಉದ್ದೇಶಗಳನ್ನು ವಿಚಾರಪೂರ್ವಕವಾಗಿ ವಿಶ್ಲೇಷಿಸಿ ವಿವೇಚಿಸುವುದೇ ವಿಮರ್ಶೆ. ಬುದ್ಧಿಪ್ರಧಾನವಾದ ಈ ಕ್ರಿಯೆ ಕಾವ್ಯಸೃಷ್ಟಿಶಕ್ತಿ ಮತ್ತು ಕಾವ್ಯಾಸ್ವಾದನ ಶಕ್ತಿ ಇವುಗಳಿಂದ ಭಿನ್ನವಾದುದು ಮತ್ತು ವಿಶಿಷ್ಟವಾದುದು. ಅಬರ್ ಕ್ರಾಂಬಿ ಹೇಳುವಂತೆ "ಸಾಹಿತ್ಯ ವಿಮರ್ಶೆ ಎನ್ನುವುದು ಸಾಹಿತ್ಯ ಸೃಷ್ಟಿಯಷ್ಟೇ ವ್ಯಕ್ತಿವಿಶಿಷ್ಟವಾದುದು ಮತ್ತು ಅದೂ ಅಷ್ಟೇ ಪ್ರತಿಭಾ ಸೃಷ್ಟಿಯೇ." ಈ ಅಭಿಪ್ರಾಯಗಳನ್ನೆಲ್ಲ ಮನಗಾಣಿಸಿಕೊಂಡಾಗ ಹೊಳೆಯುವ ಸಂಗತಿ ಎಂದರೆ, ರಸಜ್ಞನಾದ, ಕವಿಹೃದಯವುಳ್ಳ ವಿಮರ್ಶಕನ ವಿಮರ್ಶೆ ಎಷ್ಟೋ ವೇಳೆ ಸಾಹಿತ್ಯಾಸ್ವಾದನದಿಂದ ಒದಗುವ ಸುಖವನ್ನು ಕೊಡಬಹುದು. ಅಂಥ ವಿಮರ್ಶೆಯಿಂದ ಕವಿಯ ಕಡೆಗೂ ಕೃತಿಯ ಕಡೆಗೂ ಸಹೃದಯರ ಗಮನ ಹಾದು ಕವಿಯ ಕೀರ್ತಿ ಹೆಚ್ಚಬಹುದು. ಕವಿಗೆ ತನ್ನ ಕಾವ್ಯದ ಬೆಲೆ ಅರ್ಥವಾಗಬಹುದು. ಅತಿ ಪ್ರಶಂಸೆಯ ಭಾವನೆಯ ನೆರೆ ಬತ್ತಬಹುದು. ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ವಿಚಾರದಲ್ಲಿ ಇದೆಲ್ಲ ಏನೇನು ಆಗಬೇಕಿತ್ತೋ ಅದು ಬಹುಮಟ್ಟಿಗೆ ಆಗಿಲ್ಲ ಎಂಬುದನ್ನು ಮನಗಂಡೇ ಜಿ.ಕೃಷ್ಣಪ್ಪನವರು ಮಹಾಕಾವ್ಯ ಸಾಹಸಯಾತ್ರೆಯ ಕಥನಕಾರ್ಯವನ್ನು ಸಾಕಷ್ಟು ಪೂರ್ವಸಿದ್ಧತೆಯೊಂದಿಗೆ ಕೈಗೊಂಡಿದ್ದಾರೆ. ಇಲ್ಲಿ ಪೂರ್ವಸಿದ್ಧತೆ ಎಂದರೆ ಕುವೆಂಪು ಮಹಾಕಾವ್ಯವನ್ನು ವಿಮರ್ಶಿಸಲು ಬೇಕಾದ ಅರ್ಹತೆಯನ್ನು ಗಳಿಸಿಕೊಳ್ಳುವುದು. ಆ ಅರ್ಹತೆ ಯಾವುದೆಂದರೆ ಸಮರ್ಪಕವಾದ ಸಹೃದಯತೆ. ಅದು ಜೇಮ್ಸ್ ರೀವ್ಸ್ ಹೇಳುವಂತೆ "ಮೊದಲು ಆಸ್ವಾದ, ಅನಂತರ ವಿಮರ್ಶೆ. ಈ ವಿಮರ್ಶನ ಶಕ್ತಿ ರಸಾನುಭವದ ಜೊತೆಯಲ್ಲಿಯೇ ಬೆಳೆಯತಕ್ಕದ್ದು. ವಿಮರ್ಶಕ ದಿವ್ಯ ಸ್ಫೂರ್ತಿಗೆ ವಶನಾದವನೆಂದಾಗಲೀ, ಕೇವಲ ಪರೋಪಜೀವಿ ಎಂದಾಗಲೀ ತಿಳಿಯಬಾರದು. ಅವನೂ ನಮ್ಮಂತೆ ಒಬ್ಬ ಸಹೃದಯ. ತಾನು ಓದಿದ್ದರಲ್ಲಿ ಹಲವು ರುಚಿಸಿದ್ದು ಏಕೆ, ಮತ್ತೆ ಹಲವು ರುಚಿಸಲಿಲ್ಲ ಏಕೆ ಎನ್ನುವ ಪ್ರಶ್ನೆಗಳನ್ನು ಕಂಡುಕೊಂಡವನು." ಜಿ.ಕೃಷ್ಣಪ್ಪನವರು ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಮತ್ತೆ ಮತ್ತೆ ಪ್ರೀತಿಯಿಂದ ಓದಿಕೊಂಡು ಅಲ್ಲಿನ ರಸಸ್ಥಾನಗಳಲ್ಲಿ ಸಹೃದಯರಾಗಿ ವಿಹಾರ ಮಾಡಿ ರಸಾನುಭವವನ್ನು ಪಡೆದುಕೊಂಡಿರುವುದು, ಇಡೀ ಕಾವ್ಯದ ದರ್ಶನಲಾಭ ಸಾಮಾನ್ಯ ಓದುಗರಿಗೂ ಆಗಬೇಕೆನ್ನುವ ಮಹತ್ವಾಕಾಂಕ್ಷೆಯಿಂದ ತಿಳಿಗನ್ನಡಕ್ಕೆ ತಂದಿರುವುದು, ಕುವೆಂಪು ಅವರನ್ನು ತೀವ್ರವಾಗಿ ಪ್ರಭಾವಿಸಿರುವ ನಿಸರ್ಗ ಅಧ್ಯಾತ್ಮ ವೈಚಾರಿಕತೆ ಎಂಬ ತ್ರಿವಳಿಗಳ ಸೂಕ್ಷ್ಮತೆಯನ್ನು ಹಿಡಿಯಲು ಪ್ರಯತ್ನಿಸಿರುವುದು, ಅವರಿಗೆ ಈವರೆಗಿನ ಕುವೆಂಪು ಕಾವ್ಯವಿಮರ್ಶೆಯ ಕೊರತೆಗಳನ್ನು ತುಂಬುವ ಶಕ್ತಿಯನ್ನೂ ಸ್ಫೂರ್ತಿಯನ್ನೂ ಕೊಟ್ಟಿದೆ. ಇತ್ತೀಚೆಗೆ 'ಶ್ರೀ ರಾಮಾಯಣ ದರ್ಶನಂ' ಕುರಿತು ಬರೆದಿರುವ

ಲೇಖನಗಳನ್ನು ಗಮನಿಸಿದರೆ, ಪ್ರಸ್ತುತದಲ್ಲಿ ಕುವೆಂಪು ಕಾವ್ಯವನ್ನು ಸಮರ್ಪಕವಾದ ರೀತಿಯಲ್ಲಿ ಅರ್ಥಮಾಡಿಕೊಂಡು ಬರೆಯಬಲ್ಲ ಸಾಮರ್ಥ್ಯವಿರುವ ಕೆಲವೇ ಲೇಖಕರಲ್ಲಿ ಒಬ್ಬರು ಎನ್ನುವುದು ಖಚಿತವಾಗುತ್ತದೆ.

ಕುವೆಂಪು 1934 ರಷ್ಟು ಹಿಂದೆಯೇ ಬರೆದ 'ನನ್ನ ಕವಿತೆ ತನ್ನ ವಿಮರ್ಶಕನಿಗೆ' ಎನ್ನುವ ಕವನದಲ್ಲಿ ಅವರ ರಚನೆಗಳ ಅಂತರಾರ್ಥವನ್ನು ಸರಿಯಾಗಿ ಗ್ರಹಿಸದೆ, ಮನಸ್ಸಿಗೆ ತೋಚಿದಂತೆ ಬೇಕಾಬಿಟ್ಟಿಯಾಗಿ ವಿಮರ್ಶೆ ಬರೆಯುತ್ತಿದ್ದವರಿಗೆ ಸಿಟ್ಟಿನಿಂದ ಎಸೆದಿರುವ ಸವಾಲು ಇವತ್ತಿನ ಕೆಟ್ಟ ವಿಮರ್ಶಕರನ್ನೂ ಮುಟ್ಟಿ ನೋಡಿಕೊಳ್ಳುವಂತೆ ಮಾಡುವಷ್ಟು ಪ್ರಖರವಾಗಿದೆ. ಅವರು ವಿಮರ್ಶಕರಿಗೆ ನೇರವಾಗಿ ಹಾಕುವ ಪ್ರಶ್ನೆ ಖಡಕ್ಕಾಗಿದೆ. "ನೀನೇರಬಲ್ಲೆಯಾ ನಾನೇರುವೆತ್ತರಕೆ? ನೀ ಹಾರಬಲ್ಲೆಯಾ ನಾ ಹಾರುವಗಲಕ್ಕೆ? ನೀ ಮುಳುಗಬಲ್ಲೆಯಾ ನಾ ಮುಳುಗುವಾಳಕ್ಕೆ? ಇಲ್ಲ? ನಡೆ, ದೂರಸರಿ! ಹೌದು? ಬಾ, ಹತ್ತಿರಕೆ! ಎನಿತು ಹಿರಿದಾದರೂ ನಿನ್ನ ಪಂಡಿತತನಕೆ ನಿಲುಕೆನ್ನೈ : ನಾನು ಆನಂದ–ಉನ್ಮಾದಿನಿ, ದಿವ್ಯಾನುಭೂತಿ ಸಂಭೂತ ರಸವಾಹಿನಿ!" ಇಲ್ಲಿ ಆಡಿರುವ ಮಾತುಗಳ ಜೊತೆಗೆ ಬಳಸಿರುವ ಪ್ರಶ್ನಾರ್ಥಕ ಚಿಹ್ನೆ, ಭಾವಸೂಚಕ ಚಿಹ್ನೆ, ಅರ್ಧವಿರಾಮ, ವಿವರಣ ಚಿಹ್ನೆ ಅಡ್ಡಗೆರೆ ಇವೆಲ್ಲಕ್ಕೂ ವಿಶೇಷ ಅರ್ಥವಿರುವುದನ್ನು ಗಮನಿಸಬೇಕು. ಹತ್ತನೇ ಶತಮಾನದ ಕವಿ ರನ್ನ 'ಗದಾಯುದ್ಧ' ಕಾವ್ಯಾರಂಭದಲ್ಲಿ "ಫಣಿಪತಿಯ ಫಣಾರತ್ನಮುಮಂ, ರನ್ನನ ಕೃತಿರತ್ನಮುಮಂ ಪೇಳ್ ಪರೀಕ್ಷಿಪಂಗೆಂಟೆರ್ದೆಯೆ?" ಎಂದು ಆತ್ಮಪ್ರತ್ಯಯದಲ್ಲಿ ಎಸೆಯುವ ಸವಾಲು, 20ನೇ ಶತಮಾನದಲ್ಲಿ ಕುವೆಂಪು ವಿಮರ್ಶಕನಿಗೆ ನೇರವಾಗಿ ಹಾಕುವ ಸವಾಲು ಈ ಎರಡರಲ್ಲೂ ಸಮಾನ ಅಂಶಗಳಿವೆ. ಇಬ್ಬರೂ ಅಧ್ಯಯನ ಮತ್ತು ಚಿಂತನೆಯಿಂದ ಗಟ್ಟಿಗೊಳ್ಳದ ಬಣಗು ವಿಮರ್ಶಕರ ಯೋಗ್ಯತೆಯನ್ನೇ ಪ್ರಶ್ನಿಸಿ ತರಾಟೆಗೆ ತೆಗೆದುಕೊಳ್ಳುತ್ತಿದ್ದಾರೆ. ಈ ಎಲ್ಲದರ ಬಗೆಗೆ ಚೆನ್ನಾಗಿ ತಿಳಿದುಕೊಂಡಿರುವ ಕೃಷ್ಣಪ್ಪನವರು ಕುವೆಂಪು ಸವಾಲನ್ನು ವಿನಮ್ರವಾಗಿ ಸ್ವೀಕರಿಸುವ ಪೂರ್ವಸಿದ್ಧತೆಯಿಂದಲೇ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಸಹೃದಯ ವಿಮರ್ಶೆಯ ಸಾಹಸಕ್ಕೆ ಇಳಿದಿದ್ದಾರೆ. ಕುವೆಂಪು ತಮ್ಮ ಸಾಹಿತ್ಯದ ಬಗೆಗೆ ಬರುತ್ತಿದ್ದ ವಿಮರ್ಶೆಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು ಎನ್ನುವುದಕ್ಕೆ 'ಕುವೆಂಪು ಯುಗ' ಕೃತಿಯಲ್ಲಿ ಕೆ.ಎಸ್.ಭಗವಾನ್ ಕೊಡುವ ಒಂದು ಉದಾಹರಣೆಯನ್ನು ಗಮನಿಸಬಹುದು. ಜಿ.ಎಸ್.ಶಿವರುದ್ರಪ್ಪನವರು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದ ಸಂದರ್ಭದಲ್ಲಿ ಸೆಂಟ್ರಲ್ ಕಾಲೇಜಿನ ಸೆನೆಟ್ ಸಭಾಂಗಣದಲ್ಲಿ ಆಯೋಜಿಸಿದ್ದ ಎರಡು ಮೂರು ದಿನಗಳ ವಿಚಾರ ಸಂಕಿರಣಗಳು ಬಹು ಜನಪ್ರಿಯತೆ ಪಡೆದುಕೊಂಡಿದ್ದವು. ಅಲ್ಲಿ ಮಂಡಿಸಿದ

ಪ್ರಬಂಧಗಳು, ನಡೆಸಿದ ಸಂವಾದ– ಚರ್ಚೆಗಳು ನಂತರ ಪುಸ್ತಕ ರೂಪದಲ್ಲೂ ಪ್ರಕಟವಾಗುತ್ತಿದ್ದವು. ಹಾಗೆ ಪ್ರಕಟವಾದ ಪುಸ್ತಕಗಳಲ್ಲಿ 'ಶ್ರೀ ಕುವೆಂಪು' ಕೂಡ ಒಂದು. ಅದರ ಬಗೆಗೆ ಭಗವಾನರು ಕುವೆಂಪು ಗಮನ ಸೆಳೆದಾಗ ಅವರು ಹೇಳಿದ್ದು: "ಆ ಪುಸ್ತಕದಲ್ಲಿ ಎರಡೇ ಲೇಖನಗಳು ಚೆನ್ನಾಗಿರೋದು. ಒಂದು ನಿಮ್ಮದು, ಇನ್ನೊಂದು ಸುಜನಾ ಅವರದು. ಉಳಿದವರು ವಿಮರ್ಶೆಯ ಮಟ್ಟಕ್ಕೆ ಬರುವುದಿರಲಿ, ಅವರಿಗೆ ವಿಮರ್ಶೆ ಎಂದರೇನೆಂದೇ ತಿಳಿಯದು." ಕುವೆಂಪು ಯಾವುದನ್ನು ಸರಿಯಾದ ವಿಮರ್ಶೆ ಎಂದು ಒಪ್ಪಿಕೊಳ್ಳುತ್ತಾರೆ, ಯಾವುದನ್ನು ನಿರಾಕರಿಸುತ್ತಾರೆ, ಅಂಥ ಗ್ರಹಿಕೆಯ ಹಿಂದಿರುವ ಕುವೆಂಪು ಮನೋಧರ್ಮ ಎಂಥದ್ದು ಎಂಬುದನ್ನೂ ಕೃಷ್ಣಪ್ಪನವರು ತಿಳಿದುಕೊಂಡಿದ್ದಾರೆ.

ಕೀರ್ತಿನಾಥ ಕುರ್ತಕೋಟಿ ಅವರಂಥ ವಿಮರ್ಶಕರು ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಸರಿಯಾಗಿ ಓದದೆ ಅಥವಾ ಸಮರ್ಪಕವಾಗಿ ಗ್ರಹಿಸದೆ ಬರೆದ ವಿಮರ್ಶೆಯ ಬಗೆಗೆ ಕೆ.ಎಸ್.ಭಗವಾನ್ ಹಂಪಿ ಕನ್ನಡ ವಿಶ್ವವಿದ್ಯಾಲಯದಲ್ಲಿ 1994 ಡಿಸೆಂಬರ್ 29 ಮತ್ತು 30 ರಂದು ನಡೆದ 'ಕುವೆಂಪು ನಮನ' ಕಾರ್ಯಕ್ರಮದಲ್ಲಿ ತರಾಟೆಗೆ ತೆಗೆದುಕೊಳ್ಳುತ್ತಾರೆ. ಆಗ ಅವರು ಹೇಳುವುದು –1936ರಲ್ಲಿ ಟಿ.ಎಸ್.ಎಲಿಯಟ್ ಬರೆದ ಪ್ರಬಂಧವೊಂದರಲ್ಲಿ 'ಮಿಲ್ಟನ್ ದೊಡ್ಡ ಕವಿಯಲ್ಲ' ಎಂದು ಹೇಳುತ್ತಾನೆ. ಹತ್ತು ವರ್ಷ ಕಳೆದ ಮೇಲೆ 1947ರಲ್ಲಿ 'ನಾನು ಮಿಲ್ಟನ್‌ನನ್ನು ಮತ್ತೆ ಮತ್ತೆ ಓದಿಕೊಂಡಿದ್ದೇನೆ. ಅವನ ಹಾಗೆ ಇಂಗ್ಲಿಷ್ ಭಾಷೆಯನ್ನು ಕಟ್ಟಿದವರಿಲ್ಲ. ಅವನು ಮಹಾಕವಿ' ಎನ್ನುತ್ತಾನೆ. ಮಿಲ್ಟನ್‌ನನ್ನು ಎಲಿಯಟ್ ಮರುಪರಿಶೀಲನೆ ಮಾಡಿದಂತೆ ಕುವೆಂಪು ಕಾವ್ಯವನ್ನು ನೀವು ಮತ್ತೆ ಪರಿಶೀಲಿಸುವ ಅಗತ್ಯವಿದೆ, ಎಂದ ಭಗವಾನರ ಮಾತನ್ನು ಕುರ್ತಕೋಟಿ ಒಪ್ಪಿಕೊಳ್ಳುತ್ತಾರೆ. ಇದೆಲ್ಲವೂ ಜಿ.ಕೃಷ್ಣಪ್ಪನವರಿಗೆ ಚೆನ್ನಾಗಿ ಗೊತ್ತಿದೆ. ವಿಮರ್ಶಕರು ಪೂರ್ವಗ್ರಹಪೀಡಿತರಾಗಿ ಬರೆಯುವುದು, ಮತ್ತೊಬ್ಬ ವಿಮರ್ಶಕನ ಜೇಬಿಗೆ ಕೈ ಹಾಕುವುದು, ಬರೆಯುವಾಗ ಮುಗ್ಗರಿಸುವುದು, ತೂಕಡಿಸುವುದು ಇದೆಲ್ಲವನ್ನು ಬಲ್ಲವರು ಅವರು. ಶೂದ್ರ ಸಮುದಾಯದಿಂದ ಬಂದ ಕುವೆಂಪು ಹೊಸಗನ್ನಡದಲ್ಲಿ ಅಸಾಧ್ಯ ಎನಿಸಿಕೊಂಡಿದ್ದ ಮಹಾಕಾವ್ಯವನ್ನು ಮೊದಲಿಗರಾಗಿ ಬರೆದು ಉಜ್ವಲವಾದ ಪ್ರತಿಭೆ, ವಿದ್ವತ್ತನ್ನು ಸಾರಸ್ವತ ಲೋಕದೆದುರು ಪ್ರಕಟಪಡಿಸಿದ್ದೇ ಹಲವರಿಗೆ ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಒಳಗೆ ಕುದಿಯುತ್ತಿದ್ದ ಅಸಹನೆಯನ್ನು ಬೇರೆಬೇರೆ ರೀತಿಯಲ್ಲಿ ಹೊರಹಾಕಿದ್ದುಂಟು. ಕುವೆಂಪು ಕೂಡ ಸುಮ್ಮನಿರಲಿಲ್ಲ, ನೇರ ಟೀಕೆಗಳಿಗೆ ನಿರ್ದಾಕ್ಷಿಣ್ಯವಾಗಿ ಉತ್ತರ ಕೊಟ್ಟರು. ಕೂಟಚರ್ಚೆಗಳಲ್ಲಿ ಹಾರಾಡಿದ ಅಸಹನೆಯ

ಮಾತುಗಳನ್ನು ನಿರ್ಲಕ್ಷಿಸಿದರು. ಇಂಥವುಗಳ ಹಿನ್ನೆಲೆಯನ್ನೆಲ್ಲ ಸೂಕ್ಷ್ಮವಾಗಿ ಗಮನಿಸುತ್ತಲೇ ಇದ್ದ ಕೃಷ್ಣಪ್ಪನವರು ಬರಹ ರೂಪದಲ್ಲಿರುವ ಪೂರ್ವಗ್ರಹಪೀಡಿತ ಟೀಕೆಗಳಿಗೆ ಸರಿಯಾದ ಉತ್ತರ ಕೊಡಬೇಕೆಂದು ಸಂಕಲ್ಪಿಸಿ 'ಬೇಂದ್ರೆ ವ್ರತ'ದಿಂದ 'ಕುವೆಂಪು ಧ್ಯಾನ'ಕ್ಕೆ ಹೊರಳಿದರು. ಅವರನ್ನು ಹಲವು ವರ್ಷಗಳಿಂದ ಕಾಡುತ್ತಲೇ ಇದ್ದ ರಾಮಾಯಣ ದರ್ಶನದ ಮರುಪರಿಶೀಲನೆಗೆ ತೊಡಗಿದಾಗ ಆವರೆಗಿನ ವಿಮರ್ಶೆಗಳಲ್ಲಿ ಕಂಡುಬರದಿದ್ದ ಹೊಸ ಹೊಳಹುಗಳು ಗೋಚರಿಸಿದವು. ಅಲ್ಲಿನ ಪಾತ್ರಗಳು ವಿಶೇಷವಾಗಿ ಗಮನ ಸೆಳೆದವು. ವಾಲ್ಮೀಕಿ ರಾಮಾಯಣದಲ್ಲಿ ಇದ್ದುದಕ್ಕಿಂತ ಭಿನ್ನವಾಗಿ ರೂಪುಗೊಂಡಿದ್ದ ಪಾತ್ರಗಳನ್ನು, ಅಲ್ಲಿ ನಿರ್ಲಕ್ಷಿತವಾಗಿದ್ದ ಪಾತ್ರಗಳನ್ನು ವೈಶಿಷ್ಟ್ಯಪೂರ್ಣವಾಗಿ ಪರಿಚಯಿಸಿರುವುದರಿಂದ ಪ್ರಾರಂಭವಾದ ರಾಮಾಯಣ ದರ್ಶನಯಾನ ಮುಂದೆ ಅಗಾಧವಾದ ಮತ್ತು ಸವಾಲಿನದು ಎನ್ನಿಸುವಂಥ ಸಾಹಸಕ್ಕೆ ಮುನ್ನಡೆದು ಆ ಮಹಾಕಾವ್ಯವನ್ನು ಮೂಲದಲ್ಲಿ ಇರುವಂತೆಯೇ ರಸಪೂರ್ಣವಾಗಿ ತಿಳಿಗನ್ನಡದಲ್ಲಿ ಕಟ್ಟಿಕೊಟ್ಟು ಸಹೃದಯರ ಮೆಚ್ಚುಗೆಗೆ ಪಾತ್ರವಾಯಿತಾದರೂ ಅಲ್ಲಿಗೇ ವಿರಮಿಸದೆ 'ಕರ್ಣಚೈತ್ರನ ಪರ್ಣಶಾಲೆ' ಎನ್ನುವ ಹೆಸರಿನ ಕೃತಿಯಾಗಿ ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ವಿಮರ್ಶೆ 34 ಲೇಖನಗಳಲ್ಲಿ ಹರಡಿಕೊಂಡಿದೆ. ಇವುಗಳಲ್ಲಿ ಕೆಲವು ಕನ್ನಡದ ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದರೆ, ಮತ್ತೆ ಹಲವು ಸಂಕಲನದಲ್ಲಿ ಸೇರ್ಪಡೆಯಾಗಲೆನ್ನುವ ಉದ್ದೇಶದಿಂದ ಹೊಸದಾಗಿ ಬರೆಯಲ್ಪಟ್ಟವು. ಕೃತಿಗೆ 'ಕರ್ಣಚೈತ್ರನ ಪರ್ಣಶಾಲೆ' ಎಂದು ಹೆಸರಿಡಲು ಕಾರಣವಾದುದೇನೆಂಬುದನ್ನು ಕೃಷ್ಣಪ್ಪನವರು ಅದೇ ಹೆಸರಿನ ಮೊದಲ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ. ಮಲೆನಾಡಿನ ದಟ್ಟ ಅರಣ್ಯದ ನಡುವಿನ ಕುಪ್ಪಳಿಯಲ್ಲಿ ಹುಟ್ಟಿ ಬೆಳೆದ ಕುವೆಂಪು ಕಾಡಿನ ಕವಿ. ಪ್ರಕೃತಿಯ ಆರಾಧನೆಯನ್ನೇ ಪರಮನ ಆರಾಧನೆ ಎಂದು ನಂಬಿ ನಿಸರ್ಗ ಧ್ಯಾನದಲ್ಲಿ ಲೀನವಾದವರು. ವೇದಾಂತದ ಪ್ರಕಾರ ಜೀವನಿಗೆ ಇರುವುದು ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಆನಂದಮಯ ಎನ್ನುವ ಪಂಚಕೋಶಗಳಾದರೂ "ಅವುಗಳಾಚೆ ನನಗಿರುವುದೊಂದೆ ಅರಣ್ಯಮಯ ಕೋಶ" ಎಂದು ಹೇಳಿಕೊಂಡಿದ್ದಾರೆ. ಅವರಿಗೆ ಹಾಡುವ ಹಕ್ಕಿಗಳು ನಭದಲ್ಲಿ ಪ್ರಕಾಶಿಸುವ ಹೂವುಗಳಂತೆ ಕಂಡರೆ, ಆ ಹಕ್ಕಿಗಳ ಉಲಿತ ವಾಙ್ಮಯ ವೇದ ಓಂಕಾರವಾಗಿ, ಅದು ಶ್ರೀಗುರುವಿನ ಕೃಪೆಯಿಂದ ತನಗೆ ದೊರೆತುದು ಎಂದು ಹೇಳಿದ್ದಾರೆ. ಅವರ ಕವಿಪ್ರತಿಭೆ ವಸಂತ ಋತುವನ್ನು ಕರ್ಣಚೈತ್ರವಾಗಿ ಅಂದರೆ ಚೈತ್ರಮಾಸದ ಸವಿ ಸೊಗಸೆಲ್ಲವೂ ಶ್ರವಣೇಂದ್ರಿಯದ ಮೂಲಕ ಆನಂದಮಯ ಅನುಭೂತಿಯಾಗಿ ಮನಸ್ಸನ್ನು ತಟ್ಟುತ್ತಿದೆ. ವಸಂತ ಋತುವಿನ ಗತಿಶೀಲತೆಗೆ ಹಕ್ಕಿಗಳು ಪ್ರತೀಕವಾಗಿವೆ. ವಸಂತ ಋತುವಿನಲ್ಲಿ ಕೇಳಿಬರುವ ಪಕ್ಷಿಗಳಿಂಚರದ

ನಾದಾನುಭವದಲ್ಲಿ ಲೀನವಾಗಿ, ಕರ್ಣಾನಂದ ರಸತತ್ವವನ್ನು ಆಸ್ವಾದಿಸಿ, ಕಾವ್ಯಮುಖೇನ ಆ ಆಹ್ಲಾದವನ್ನು ಅಭಿವ್ಯಕ್ತಿಸುತ್ತಿದ್ದಾರೆ. ಪಕ್ಷಿಗಳು ವಸಂತ ಋತುವಿನ ಧ್ವನಿ ಎನ್ನುವ ಈ ಕಲ್ಪನಾ ಸೌಂದರ್ಯವೇ ಕಾವ್ಯಲೋಕದಲ್ಲಿ ಹೊಸದು. ಅದನ್ನು ಕೃಷ್ಣಪ್ಪನವರು "ಕುವೆಂಪು ಅವರು ವಸಂತಕಾಲದ ಪಕ್ಷಿಗಳ ಆನಂದ ಕಲರವವನ್ನು ಆಸ್ವಾದಿಸಿ ಶ್ರಾವ್ಯ ವಸಂತವಾಗಿ ಕಾವ್ಯದಲ್ಲಿ ನೀಡಿರುವುದು ವಿಶ್ವಕಾವ್ಯಲೋಕಕ್ಕೆ ನೀಡಿದ ಹೊಸ ಕಾಣಿಕೆ. ಅದು ಚೈತ್ರಕರ್ಣ, ಅಂದರೆ ಚೈತ್ರಮಾಸವು ಕಿವಿಗಳಿಗೆ ಪಕ್ಷಿಗಳ ಮುಖಾಂತರ ನೀಡಿದ ಭಾಷೆ, ಅರ್ಥವಿಲ್ಲದ ಅತಿವಾಙ್ಮಯವೇದ, ಓಂಕಾರನಾದ" ಎಂದಿದ್ದಾರೆ.

ಶ್ರೀರಾಮನು ಲಕ್ಷ್ಮಣನೊಂದಿಗೆ ಸೀತಾನ್ವೇಷಣೆಯಲ್ಲಿ ತೊಡಗಿರುವಾಗ ಮಾಲ್ಯವತ್ ಪರ್ವತದಲ್ಲಿ ಮಳೆಗಾಲವನ್ನು ಕಡು ಕಷ್ಟದಿಂದ ಕಳೆಯುವ ಸಂದರ್ಭವನ್ನು 'ಕಿಷ್ಕಿಂಧಾ ಕಾಂಡ'ದಲ್ಲಿ ವರ್ಣಿಸಲಾಗಿದೆ. ಮನೆಗೆ ಅತಿಥಿಯಾಗಿ ಬಂದವನು ತನ್ನ ಒಡೆತನವನ್ನು ಒಡ್ಡಿ ನಿಲ್ಲುವಂತೆ ಮಳೆ ಹಿಡಿದು, ದುರ್ದಿನವು ದ್ರವರೂಪಿಯಾಗಿ ಕರೆಕರೆಯಾಗಿ ಸುರಿಯುತ್ತಿರಲು ಹಗಲನ್ನು ಕಪ್ಪು ಮುಗಿಲಿನ ಮಬ್ಬಿನ ಮಂಕು ಕವಿಯುತ್ತದೆ. ಅಂಥ ಸಂದರ್ಭದಲ್ಲಿ ಬೆಳಗ್ಗೆ ಸಂಜೆ ಹಗಲು ರಾತ್ರಿ ಸೀತೆಯ ಅಗಲಿಕೆಯ ಬೆಂಕಿ ಅವನನ್ನು ದಹಿಸುತ್ತದೆ. ಭೋರೆಂದು ಮಳೆ ಸುರಿಯುತ್ತಲೇ ಇರುವುದರಿಂದ ಅಣ್ಣ ತಮ್ಮಂದಿರು ಮುಂದಿನ ಕಾರ್ಯಯೋಜನೆಯ ಬಗೆಗೆ ಚರ್ಚಿಸುತ್ತಾರೆ. ಸಾವಿರಾರು ಹುಳು ಹುಪ್ಪಡಿ ಕಪ್ಪೆಗಳ ಕೊರಳ ಗರಗಸ ನಿಶ್ಶಬ್ದತೆಯ ಚಿಪ್ಪನ್ನು ಕೊರೆಯುವಾಗ ರಾಮ ಲಕ್ಷ್ಮಣನೊಡನೆ "ಮಲೆ ಕಾಡು ನಾಡು ಬಾನು ಏಕಾಭಿಪ್ರಾಯದಿಂದ ಗೋಳಾಡುತ್ತ ಬೊಬ್ಬಿರಿಯುತ್ತಿವೆ. ಪ್ರಕೃತಿಯ ಈ ಅಬ್ಬರದ ಉಗ್ರತೆಯ ಮಧ್ಯೆ ಮನುಷ್ಯರಾದ ನಾವೇ ಅತ್ಯಲ್ಪ ಕೃತಿಗಳಲ್ಲವೇ? ನಮ್ಮ ಅಹಂಕಾರದ ರೋಗಕ್ಕೆ ಈ ರೀತಿಯ ಬೃಹತ್ ಉಗ್ರತಾ ಸಾನ್ನಿಧ್ಯವೇ ದಿವ್ಯ ಔಷಧಿ" ಎಂದು ಹೇಳುವಾಗ, ಆ ಘೋರಾಂಧಕಾರದ ಸಾಗರದಲ್ಲಿ ತೇಲಿಬರುವ ಹನಿಮಿಂಚಿನಂತೆ ಒಂದು ಮಿಂಚುಹುಳು ನಿಧಾನವಾಗಿ ಆ ಕಗ್ಗತ್ತಲೆಯ ಗವಿಯನ್ನು ಹೊಕ್ಕು ಮೆಲ್ಲನೆ ತೇಲುತ್ತ ಮಿಂಚಿನ ಹನಿಯನ್ನು ಅಲ್ಲಲ್ಲಿ ಚೆಲ್ಲಿ ನಲಿದಾಡುತ್ತದೆ. ಆ ಮಿಂಚುಹುಳುವನ್ನು ರಾಮ ಕಣ್ಣು ಸೋಲುವವರೆಗೆ ನೋಡುತ್ತಿರಲು ಕಣ್ಣೊಳಗೆ ಹನಿಮೂಡಿ ಕೆನ್ನೆ ನೆನೆಯುತ್ತದೆ; ಅವನ ಆತ್ಮ ಶಾಂತಿಯಿಂದ ತುಂಬಿಹೋಗುತ್ತದೆ.

ಕುವೆಂಪು ಮಲೆನಾಡ ಬನಗಳಲ್ಲಿ ಬೆಳಗಿನ ಹೊತ್ತು ಅಲೆದಾಡುವಾಗಲೆಲ್ಲ ಕಣ್ಣಿಗೆ ಬೀಳುತ್ತಿದ್ದ ಹಸುರು ಗರಿಕೆಯ ಮೇಲೆ ಸುರಿದ ಮಳೆ ಅಥವಾ

ಮಂಜಿನಿಂದಾಗಿ ಅಲ್ಲಿ ಕುಳಿತು ಹೊಳೆಯುವ, ತೃಣ ಸುಂದರಿಯ ಮೂಗುತಿ ಮುತ್ತಿನಂತೆ ಕಾಣುವ ಅಮೂಲ್ಯ ಹಿಮಬಿಂದುವನ್ನು ಕಂಡು ಭಾವಪರವಶರಾಗಿ ಎಷ್ಟೋ ಹೊತ್ತಿನವರೆಗೆ ಆ ಅಪೂರ್ವ ಸೌಂದರ್ಯವನ್ನು ಆಸ್ವಾದಿಸಿರುವುದುಂಟು. ಅಂಥ ಒಂದು ರಸಾನುಭೂತಿ 'ಕವಿಕ್ರತು ದರ್ಶನಂ' ಸಂಚಿಕೆಯಲ್ಲಿ ಬಂದಿರುವುದನ್ನು ಕೃಷ್ಣಪ್ಪನವರು ಉಲ್ಲೇಖಿಸಿ, ಅದಕ್ಕೆ ಸಂವಾದಿಯಾಗಿ ವಿಶಿಷ್ಟ ಚೆಲುವಿನಿಂದ ಹೊಳೆಯುವ ಹಿಮಬಿಂದುವಿನ ಬಣ್ಣನೆಯು ಕುವೆಂಪು ಅವರ ನಿಸರ್ಗ ಕವಿತೆಗಳಲ್ಲಿ ಹೇಗೆ ಮೂಡಿಬಂದಿದೆ ಎನ್ನುವುದನ್ನು ಜೊತೆಗಿರಿಸಿ ನೋಡುವ ಕೆಲಸವನ್ನು ಮಾಡಿದ್ದಾರೆ. ಅವುಗಳಲ್ಲಿ 'ಪಕ್ಷಿಕಾಶಿ' ಸಂಕಲನದ 'ಶರತ್ಕಾಲದ ಸೂರ್ಯೋದಯದಲಿ' ಕವಿತೆಯ "ಹಚ್ಚನೆ ಪಚ್ಚನೆ ವೇದಿಕೆಯಲ್ಲಿ, ಸಾಸಿರಗಟ್ಟಲೆ ಮುತ್ತನು ಚೆಲ್ಲಿ, ರನ್ನದ ಕಿರುಹಣತೆಗಳಲ್ಲಿ, ಶ್ಯಾಮಲ ಶೈಲದಿ ಹೊನ್ನಿನ ಬತ್ತಿ, ಕಾಮನಬಿಲ್ಲಿನ ಬೆಂಕಿಯು ಹೊತ್ತಿ, ಸೊಡರುರಿಯುತ್ತಿವೆ ಅಲ್ಲಲ್ಲಿ" ಎನ್ನುವ ಸಾಲುಗಳು ಅನನ್ಯ ಎನಿಸುವಂಥ ಕಾಣುವಿಕೆ ಮತ್ತು ಬಣ್ಣನೆಗೆ ಸಾಕ್ಷಿಯಾಗಿವೆ. ಅದನ್ನು ಕೃಷ್ಣಪ್ಪನವರು "ಪ್ರಕೃತಿಯಾರಾಧನೆಯೇ ಪರಮನಾರಾಧನೆ ಎಂಬ ನಿಸರ್ಗ ಅಧ್ಯಾತ್ಮ ಭಾವದಲ್ಲಿ ಲೀನವಾದ ಕುವೆಂಪು "ದೇವರ ಮುಖದರ್ಶನಕೆ ಹನಿಯ ಕಿರುದರ್ಪಣ ಸಾಲದೇ" ಎಂದು ಪ್ರಶ್ನಿಸುತ್ತಾ ಅನಂತ ಶಕ್ತನಾದ ದೇವರನ್ನು ಆ ಹನಿಯ ಕಿರುಗನ್ನಡಿಯಲ್ಲಿ ಕಂಡು ಧ್ಯಾನಶೀಲರಾಗಿದ್ದಾರೆ; ಜಗತ್ತಿನ ಕಾವ್ಯಲೋಕದಲ್ಲಿ ಇಬ್ಬನಿಯ ಕಿಡಿಗುಡಿಯಲ್ಲಿ ಆರಾಧನೆಗೈದ ಪ್ರಕೃತಿ ಧ್ಯಾನಿ ಕುವೆಂಪು ಎಂಬುದು ಕನ್ನಡಿಗರ ಹೆಮ್ಮೆ" ಎಂದಿದ್ದಾರೆ.

ಕನ್ನಡದ ಪ್ರಾಚೀನ ಕಾವ್ಯಗಳಲ್ಲಿ ಪ್ರಕೃತಿ ಸೌಂದರ್ಯ ವರ್ಣನೆ ಮಾಡುವಾಗ, ದಟ್ಟಕಾಡಿನ ಚಿತ್ರವನ್ನು ಕಟ್ಟಿಕೊಡುವಾಗ ಕಾಣಿಸಿಕೊಳ್ಳುವ ಮರಗಳಲ್ಲಿ ಬೂರುಗ ಮುಖ್ಯವಾದುದು. ಕವಿಮನವನ್ನು ಆಕರ್ಷಿಸುವಂಥ ಏನೋ ಒಂದು ಅದರಲ್ಲಿದೆ. ಅದು ಹೊಸಗನ್ನಡದ ಮೊದಲ ಮಹಾಕಾವ್ಯವಾದ ಶ್ರೀರಾಮಾಯಣ ದರ್ಶನದಲ್ಲೂ ಸ್ಥಾನ ಪಡೆದುಕೊಂಡಿರುವುದನ್ನು ಕೃಷ್ಣಪ್ಪನವರು ಗುರುತಿಸಿ, ಆ ಸಂದರ್ಭದ ವಿಶೇಷತೆಯನ್ನು ವಿವೇಚಿಸಿದ್ದಾರೆ. ಅದಕ್ಕಾಗಿ ದೇಜಗೌ ಮಹಾಕವಿ ಕುವೆಂಪು ಅವರನ್ನು ಸಂದರ್ಶಿಸುವಾಗ ಕೇಳಿದ ಪ್ರಶ್ನೆಯೊಂದನ್ನು ಹಿನ್ನೆಲೆಯಾಗಿಸಿಕೊಂಡಿದ್ದಾರೆ. ದೇಜಗೌ ಕೇಳಿದ ಪ್ರಶ್ನೆ "ಶ್ರೀರಾಮಾಯಣ ದರ್ಶನಂ ಮಹಾಕಾವ್ಯ ವಾಲ್ಮೀಕಿ ರಾಮಾಯಣದ ಅನುಕರಣೆಯಲ್ಲ, ಇದೊಂದು ಸ್ವತಂತ್ರ ಕೃತಿ ಎನ್ನುವ ಅಭಿಪ್ರಾಯಕ್ಕೆ ಪುಷ್ಟಿ ನೀಡುವ ಸಂಗತಿಗಳು ಅದರೊಳಗೇ ಇವೆ. ಈ ಕಾವ್ಯ ಮಲೆನಾಡಿನ ಪ್ರಕೃತಿಯು ಗರ್ಭದಿಂದ ಉದ್ಭವಿಸಿರುವಂತೆ ತೋರುತ್ತದೆಯಲ್ಲವೇ?" ಅದಕ್ಕೆ ಕುವೆಂಪು ಕೊಟ್ಟ ಉತ್ತರ "ದಂಡಕಾರಣ್ಯದ

ಚಿತ್ರಣಕ್ಕೆ ಮಲೆನಾಡಿನ ಮಳೆಗಾಳಿ ಹಾಗೂ ಅನೇಕ ದೃಶ್ಯಗಳು ಸ್ಫೂರ್ತಿಯನ್ನು ನೀಡಿವೆ. ಕವಿಶೈಲದ ಬಳಿ ಬೂರುಗದ ಮರವೊಂದಿದೆ. ಕಾಳ್ಗಿಚ್ಚಿನಿಂದಾಗಿ ಸಣ್ಣಪುಟ್ಟ ಗಿಡಗಂಟೆ ಹುಲ್ಲು ಬೆಂದು ನೆಲವೆಲ್ಲ ಕಪ್ಪಾಗುತ್ತದೆ. ಬಲಿತ ಬೂರುಗದ ಕಾಯಿ ಬಿಸಿಲಿಗೆ ಸಿಡಿದು ಮಸಿನೆಲದ ಮೇಲೆ ಅರಳೆ ಚೆಲ್ಲಿದಾಗ ಶರತ್ಕಾಲದ ಮೇಘ ನೆನಪಿಗೆ ಬರುತ್ತದೆ. ಅದನ್ನು ನಾನು ನೋಡದಿದ್ದರೆ 'ಸುಗ್ರೀವಾಜ್ಞೆ' ಸಂಚಿಕೆಯ ಪ್ರಾರಂಭದ ದೃಶ್ಯದ ವರ್ಣನೆಯೇ ಸಾಧ್ಯವಾಗುತ್ತಿರಲಿಲ್ಲ." ಕಾವ್ಯದಲ್ಲಿ ಬರುವ ಬೂರುಗದ ಮರದಲ್ಲಿ "ಬಲಿತ ಕಾಯ್ ಒಡೊಡೆದು ಬಿಸಿಲ ಕಾಯ್ಪಿಗೆ ಸಿಡಿದು, ಹೊಮ್ಮಿತ್ತು ಸೂಸಿತ್ತು ಚಿಮ್ಮಿತ್ತು ಚೆದರಿತ್ತು, ಚೆಲ್ಲಿತ್ತರಳೆ ಬಿಳ್ಪು, ಮಸಿಯ ಚೆಲ್ಲಿರ್ದವೊಲ್ ಕಾಳ್ಗಿಚ್ಚು ಕರಿಕುವರಿಸಿದ ನೆಲದ ಕರ್ಪಿನೊಳ್ ಚಿತ್ರಿಸಿ ಶರನ್ಮೇಘದೊಲ್ಮೆಯಂ." ಕಾಡುಕಿಚ್ಚಿನ ಮಸಿನೆಲದ ಮೇಲೆ ಬೂರುಗದ ಬಿಳಿ ಅರಳೆ ಚೆಲ್ಲಿ ನಲಿದಾಡಿದುದನ್ನು ಬಾನಿನಲ್ಲಿ ಶೋಭಿಸುವ ಶರತ್ಕಾಲದ ಮೋಡಕ್ಕೆ ಹೋಲಿಸಿ ವರ್ಣಿಸಿರುವುದು ಕವಿಯ ಪಂಚೇಂದ್ರಿಯಗಳ ರಸಾನುಭವ, ಬಾನು ಭುವಿಗಳನ್ನು ಒಂದಾಗಿಸಿದ್ದು ಅದ್ವೈತಾನುಭವ – ಎನ್ನುವುದು ಕೃಷ್ಣಪ್ಪನವರ ಗ್ರಹಿಕೆ. ಇದನ್ನು ಹೇಳುವಾಗ ಅವರು ನಾಗವರ್ಮನ 'ಕರ್ಣಾಟಕ ಕಾದಂಬರಿ' ಕಾವ್ಯದಲ್ಲಿ ಬರುವ ಶಾಪಗ್ರಸ್ತ ವೈಶಂಪಾಯನ ಗಿಳಿಮರಿ ಇದ್ದ 'ಜರಠ ಮಹಾಶಾಲ್ಮಲೀ ವೃಕ್ಷ'ವನ್ನು ನೆನಪು ಮಾಡಿಕೊಳ್ಳುವುದು ಔಚಿತ್ಯಪೂರ್ಣವಾಗಿದೆ.

ಹೀಗೆಯೇ, ಅಡಿಗೆ ಮಾಡಿಯೇ ಅನುಭವವಿಲ್ಲದ ಸೀತೆ ಕಾಡಿನಲ್ಲಿ ಅಡಿಗೆ ಮಾಡುವುದಕ್ಕಾಗಿ ಒಲೆ ಹಚ್ಚಿ ಹಸಿ ಸೌದೆಗಳೊಂದಿಗೆ ಗುದ್ದಾಡುತ್ತ ಮಸಿಯಿಡಿದ ಮುಸುಡಿಯಾದುದನ್ನು ಕಂಡ ರಾಮ ಲಕ್ಷ್ಮಣನಿಗೆ "ನೋಡು ನಡೆ ಒಳಗೆ, ಅತ್ತಿಗೆಗೆ ಬದಲಾಗಿ ಇರುವ ಹೆಣ್ಣು ಕೋತಿಯನ್ನು" ಎಂದು ಹೇಳಿ ಗಹಗಹಿಸಿ ನಗುವುದು, ಲಕ್ಷ್ಮಣ ಒಳಗೆ ಹೋಗಿ ನೋಡಿ, ನಗೆಗೆ ಮೀರಿದ್ದ ಆ ಧೂಮದೃಶ್ಯವನ್ನುಗಮನಿಸಿ "ಹಸಿ ಸೌದೆಯನ್ನು ತಂದ ಅಪರಾಧಿಯಾದ ನನ್ನ ಕ್ಷಮಿಸಿ" ಎಂದು ಹೇಳಿ ಒಣಗಿದ ಪುಳ್ಳೆಗಳನ್ನು ಒಲೆಯಲ್ಲಿ ಅಡಕಿ ಊದಿದಾಗ ಹೊಗೆಯ ಶರೀರದಿಂದ ಬೆಂಕಿ ಧಗ್ಗನೆ ಚಿಮ್ಮಿ, ಕಳೆಗುಂದಿದ್ದ ಸೀತೆಯ ಮುಖವನ್ನು ಬೆಳಗುವುದು; ನಾರುಬಟ್ಟೆಯ ಜಡೆಗಟ್ಟಿದ ಕೂದಲಿನ ಭರತ ರಾಮನನ್ನು ಹೇಗಾದರೂ ಮಾಡಿ ಅಯೋಧ್ಯೆಗೆ ಕರೆತರಬೇಕೆಂದು ನಿರ್ಧರಿಸಿ ಮಂತ್ರಿ ಸುಮಂತ್ರ ಮತ್ತು ಪುರದ ಜನರೊಡನೆ ಚಿತ್ರಕೂಟಕ್ಕೆ ಬಂದು ಸೀತಾ ಲಕ್ಷ್ಮಣ ಸಮೇತನಾದ ರಾಮನನ್ನು ಕಂಡು ನಮಸ್ಕರಿಸಲು ಪಾದಗಳತ್ತ ಬಾಗಿದಾಗ ರಾಮ ನೊಂದ ಎದೆಗೆ ತಮ್ಮನನ್ನು ಬಿಗಿದಪ್ಪಿಕೊಂಡು, ಮುದ್ದಾಡಿ ಹಣೆಗೆ ಮುತ್ತಿಟ್ಟು

ಗದ್ಗದಿತನಾದದ್ದು, ರಾಮನ ಕಣ್ಣಿನ ಗಂಗೆಯು ಭರತನ ಕಣ್ಣಿನ ಯಮುನೆಯನ್ನು ಸಂಗಮಿಸಲು ಹಾತೊರೆದದ್ದು; ಅಪರಾಧಿ ಭಾವದಿಂದ ಪಶ್ಚಾತ್ತಾಪದಗ್ಧಳಾದ ಕೈಕೆ ರಾಮನಿಗೆ ಕಾಣದಂತೆ ದೂರದಲ್ಲಿ ನಿಂತಿರುವುದನ್ನು ಗಮನಿಸಿ ಕರುಣಿ ರಾಮನೇ ಆಕೆಯ ಬಳಿ ಧಾವಿಸಿ ಪಾಪಿಯನ್ನು ಬೆಂಬಿಡದೆ ಹಿಂಬಾಲಿಸಿ ಅಟ್ಟಿ ಹಿಡಿಯುವ ಕೃಪೆಯ ಬೆಳಕಿನ ಕಿರಣದಂತೆ ತಾಯಿಯ ಪಾದಗಳನ್ನು ಮುಟ್ಟಿ ನಮಸ್ಕರಿಸಲು ಸಿಡಿಲಿನ ಹೊಡೆತಕ್ಕೆ ಮರವು ಉರುಳಿ ಬೀಳುವಂತೆ ಕೈಕೆ ರಾಮನ ಪಾದಗಳ ಮೇಲೆ ಉರುಳಿ ಬೀಳಲು, ಭಗವಂತನ ಪ್ರೀತಿ ಭಕ್ತನ ಆತ್ಮವನ್ನು ಎತ್ತುವಂತೆ ತಾಯಿಯನ್ನು ಹಿಡಿದೆತ್ತಲು ಅವಳು ಶಾಂತ ಮನಸ್ಕಳಾಗುವುದು; ಯುದ್ಧಬೇಗೆಯಲ್ಲಿ ಬೆಂದ ಲಂಕೆಯ ಸಂಕಟವನ್ನು ತ್ರಿಜಟೆಯು ಸೀತೆಯೊಂದಿಗೆ ಹಂಚಿಕೊಳ್ಳುತ್ತ "ಅಮ್ಮ ಇಂದು ಮನೆಮನೆಯಲ್ಲಿ ಲಂಕೆ ಅಳುತ್ತಿದೆ. ಮಗ ಸತ್ತ ತಾಯಿ, ಪತಿಯನ್ನು ಕಳೆದುಕೊಂಡ ಹೆಣ್ಣು, ತಂದೆ ತೀರಿಹೋದ ಮಗ, ಅಣ್ಣನಿಗೆ ಅಳುವ ತಂಗಿ, ಆ ಗೋಳನ್ನು ಕೇಳುವವರು ಯಾರು? ನನಗಾದರೂ ಇನ್ನು ಮುಂದೆ ಪತಿಯ ಸೇವಾ ಪುಣ್ಯ ದೊರಕುವುದೋ ಇಲ್ಲವೋ? ಏನು ತಾಯಿ, ನಿನ್ನೊರ್ವಳಿಂದ ಯಾರು ಯಾರಿಗೆ ಏನೇನು ಆಗುವುದಿದೆಯೋ?" ಎಂದಾಗ ಸೀತೆಯ ಕೊರಳ ಸೆರೆ ಬಿಗಿಯೊತ್ತಿ, ಅವಳಿಗಾಗಿ ಮರುಗುತ್ತ ಸಂತೈಕೆಯ ಮಾತುಗಳನ್ನು ಆಡುವುದು– ಇಂಥ ಇನ್ನೂ ಎಷ್ಟೋ ಸಂದರ್ಭಗಳಲ್ಲಿ ಕೃಷ್ಣಪ್ಪನವರು ಕುವೆಂಪು ದರ್ಶನದ ಎತ್ತರ ಆಳ ಅಗಲಗಳನ್ನು ಸಮರ್ಪಕವಾಗಿ ವಿಮರ್ಶಿಸುವುದಕ್ಕೆ ಸಾಧ್ಯವಾದ ಆವಾಹಿತ ನಿಸರ್ಗ ಪ್ರೀತಿ, ಅಧ್ಯಾತ್ಮ, ವೈಚಾರಿಕ ಶಕ್ತಿಗಳನ್ನು ತೋರುತ್ತಾರೆ.ಇದು ಕೃಷ್ಣಪ್ಪನವರಿಗೆ ರಾಮಾಯಣದರ್ಶನದ ಓದು, ಮರುಓದು, ಚಿಂತನೆ, ಮರುಚಿಂತನೆ, ವಿಶ್ಲೇಷಣೆ, ಮರುವಿಶ್ಲೇಷಣೆ, ಮನನವಾಯಿತು ಎಂದುಕೊಂಡಿದ್ದನ್ನು ಮತ್ತೆ ಸ್ಪಷ್ಟಪಡಿಸಿಕೊಳ್ಳುವುದು ಇಂಥ ಸಾಹಸದಿಂದಲೂ ಸಂಕಲ್ಪದಿಂದ ಪ್ರಾಪ್ತವಾಗಿರುವ ಶಕ್ತಿ. ಜಗದ್ಭವ್ಯ ರಾಮಾಯಣ ಎನ್ನುವಂತೆ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಸೃಷ್ಟಿಸಲು ಸಾಧ್ಯವಾದ ಕುವೆಂಪು ವಿಶ್ವಮಾನವ ಸಂದೇಶವನ್ನು ಬೇರೆಯವರು ಅಳವಡಿಸಿಕೊಳ್ಳಲಿ ಎಂದು ಕೊಟ್ಟಿದ್ದಲ್ಲ, ಸ್ವತಃ ಅಂತೆಯೇ ಬದುಕಿ ತೋರಿದವರು ಎನ್ನುವುದನ್ನು ಸ್ಪಷ್ಟಪಡಿಸಲು ಬೇಂದ್ರೆ ಅವರ ಬಗ್ಗೆ ಹೇಳಿದ "ಚಾರುತ್ವದ ಕುಂದಣದಲ್ಲಿ ಚಾರಿತ್ರ್ಯದ ರತ್ನ" ಎನ್ನುವ ಮಾತನ್ನು ಉಲ್ಲೇಖಿಸಿದ್ದಾರೆ. ಅಂಥ ಮಹೋನ್ನತ ಚಾರಿತ್ರ್ಯ ಪುರುಷ ನಡೆದ ದಾರಿಯತ್ತ ಬೆರಗುಗಣ್ಣಿನಿಂದ ಕಣ್ಣು ಹಾಯಿಸಿ, ಆ ದಾರಿಯಲ್ಲಿ ಸಾಗುವುದರಿಂದ ನಮ್ಮ ಬದುಕೂ ಹಸನಾದೀತು ಎನ್ನುವ ಭರವಸೆಯಿರಿಸಿಕೊಂಡು ಕೃಷ್ಣಪ್ಪನವರು

ರಾಮಾಯಣ ದರ್ಶನದ ವಿಮರ್ಶೆಯಲ್ಲಿ ತೊಡಗಿರುವುದರಿಂದಲೇ ಅನ್ಯರಿಗೆ ಸಾಧ್ಯವಾಗದ ಹಲವು ಹೊಳಹುಗಳು ಗೋಚರಿಸುವುದನ್ನು ಸಾಕ್ಷೀಕರಿಸುವಂತೆ 'ಕರ್ಣಚೈತ್ರನ ಪರ್ಣಶಾಲೆ' ರೂಪುಗೊಂಡಿದೆ. ಅಪಾರ ವಿದ್ವತ್ತನ್ನು ಬಯಸುವ ಈ ಶ್ರಮಸಾಧ್ಯವಾದ ಕೆಲಸವನ್ನು ಮಾಡಿರುವುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ನೂಲ ಹುಣ್ಣಿಮೆ 2022

– **ಡಾ.ಬೈರಮಂಗಲ ರಾಮೇಗೌಡ**
ಬೆಂಗಳೂರು

ಲೇಖಕರ ನುಡಿ

ಮಹಾಕವಿ ಕುವೆಂಪು ಅವರ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯವನ್ನು ನಾನು ಸರಳ ಕನ್ನಡದಲ್ಲಿ 'ವಚನ ದೀಪಿಕೆ'ಯಾಗಿ ಬರೆಯಲು ತೊಡಗಿದೆ. ಆಗ ವಿಶ್ವದ ಕಾವ್ಯಪರಂಪರೆಯಲ್ಲಿ ಅರಳಿದ ಅದರ ವೈಶಿಷ್ಟ್ಯತೆ ಅಚ್ಚರಿಯನ್ನುಂಟು ಮಾಡಿತು.

> **'ಸೃಷ್ಟಿ ಸೌಂದರ್ಯದೊಲ್ಮೆಯೆ ಸೃಷ್ಟಿಕರ್ತಂಗೆ**
> **ಪೂಜೆಯಯ್. ರಸಜೀವನಕೆ ಮಿಗಿಲ್ ತಪಮಿಹುದೆ ?**
> **ರಸಸಿದ್ಧಿಗಿಂ ಮಿಗಿಲೆ ಸಿದ್ಧಿ ?' (1.2:126–28)**

ಎಂದು ಪ್ರಕೃತಿಯ, ಜೀವನದ ಅಧ್ಯಾತ್ಮಾನುಭವದ ರಸಾನಂದದಲ್ಲಿ ಮಿಂದವರು ಕುವೆಂಪು. ಅವರ 'ಪ್ರಕೃತಿ ಸೌಂದರ್ಯ ಸುಧೆ ಪಾನ'ದ, ಜೀವನಾನುಭವದ ಆನಂದಾಭಿವ್ಯಕ್ತಿಯೇ 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯವಾಗಿದೆ. ಅದು ಅವರ ಒಂಭತ್ತು ವರ್ಷಗಳ ದೀರ್ಘ ತಪಸ್ಸಿನಿಂದ ಮೂಡಿ ಬಂದು ಕನ್ನಡ ಸಾಹಿತ್ಯದಲ್ಲಿ ಅಚ್ಯುತ ಜ್ಯೋತಿಯಾಗಿದೆ ; ಜನರ ಆತ್ಮೋದ್ಧಾರವನ್ನುಂಟು ಮಾಡುತ್ತಿದೆ. ವಿಶ್ವ ಸಾಹಿತ್ಯಕ್ಕೆ ನವಚೈತನ್ಯದಂತೆ ಸೇರ್ಪಡೆಗೊಂಡ ಅವರ ಕಾವ್ಯ ಸೃಷ್ಟಿಯಲ್ಲಿ 'ಕರ್ಣಚೈತ್ರನ ಪರ್ಣಶಾಲೆ', 'ತೃಣಸುಂದರಿಯ ಮೂಗುತಿಯ ಮುತ್ತುಪನಿ', 'ಮಲೆತಲೆಯಕೋಡು ಬೂರುಗ ಮರ' ಮುಂತಾದವುಗಳನ್ನು ಓದಿ ಹೆಮ್ಮೆ ಪಡಬೇಕಾಗಿದೆ. ಅವರು ಕನ್ನಡದಲ್ಲಿ ಮೊಟ್ಟಮೊದಲಿಗೆ ಪ್ರಯೋಗಕ್ಕೆ ತಂದ ಮಹೋಪಮೆಗಳು, ಕನ್ನಡ ಪದಗಳ ಬೆಡಗು, ಜನಪದ ನುಡಿಯ ಸಾಂಗತ್ಯವನ್ನು ಅಧ್ಯಯನ ಮಾಡಬೇಕಾಗಿದೆ.

'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದ ಅಂತರ್ಯದಲ್ಲಿ ಶೋಭಿಸುವ ಕಾವ್ಯಧ್ವನಿಯನ್ನು ಸಹೃದಯ ಕಿವಿ ತೆರೆದು ಆಲಿಸಿ ಅನುಭವಿಸಬೇಕು. ಆಗ ಅದರ ವೈಶಿಷ್ಟ್ಯದ ದರ್ಶನವಾಗುತ್ತದೆ. ಹಾಗಾಗಿ ಈ ಮಹಾಕಾವ್ಯವೇ 'ಕರ್ಣಚೈತ್ರನ ಪರ್ಣಶಾಲೆ'ಯಾಗಿದೆ.

'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯದಲ್ಲಿ ಚಿತ್ರಿತವಾದ ದಂಡಕಾರಣ್ಯ, ಅಶೋಕವನ, ಸೂರ್ಯೋದಯ ಸೂರ್ಯಾಸ್ತಗಳು, ಕಾರ್ಗಾಲ ಮುಂತಾದ ಋತುಮಾನಗಳು ಕುಪ್ಪಳಿ ಪರಿಸರದ ನಿಸರ್ಗ ವೈಭವ. ಅದನ್ನು ಸಹೃದಯರಿಗೆ ತಿಳಿಸಲು 'ಕುವೆಂಪು ಸೃಜಿಸಿದ ಸಾಹಿತ್ಯ ಸಾಂಸ್ಕೃತಿಕ ಐತಿಹ್ಯಗಳು' ಲೇಖನ ಇಲ್ಲಿ ಸೇರ್ಪಡೆಯಾಗಿದೆ.

ನಾಡಿನಖ್ಯಾತ ವಿಮರ್ಶಕರಾದ ಡಾ.ಬೈರಮಂಗಲ ರಾಮೇಗೌಡರನ್ನು ಈ ವಿಮರ್ಶಾಕೃತಿಗೆ ಮುನ್ನುಡಿ ಬರೆದುಕೊಡಲು ಪ್ರಾರ್ಥಿಸಿದೆನು. ಅವರು ಪ್ರೀತಿಯಿಂದ ಅಮೂಲ್ಯವಾದ ಮುನ್ನುಡಿ ಬರೆದುಕೊಟ್ಟಿದ್ದಾರೆ. ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಕುವೆಂಪು ಸಾಹಿತ್ಯ ಪ್ರಸಾರ, ಕುಪ್ಪಳಿಯ ಕವಿಮನೆ, ಕವಿಶೈಲ, ಶತಮಾನೋತ್ಸವ ಭವನದ ರೂವಾರಿ ಕುವೆಂಪು ಪ್ರತಿಷ್ಠಾನದ ಶ್ರೀ ಕಡಿದಾಳ್ ಪ್ರಕಾಶ್. ಅವರಿಗೆ ಮತ್ತು ಅವರ ಧರ್ಮಪತ್ನಿ ಶ್ರೀಮತಿ ಜೆ.ಟಿ.ಕಲ್ಪನ ಅವರಿಗೆ ಈ ಕೃತಿಯನ್ನು ಅರ್ಪಿಸಿದ್ದೇನೆ. ಇದನ್ನವರು ಪ್ರೀತಿಯಿಂದ ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

ಈ ವಿಮರ್ಶಾ ಕೃತಿಯಲ್ಲಿರುವ ಹಲವು ಲೇಖನಗಳನ್ನು ಪ್ರಕಟಿಸಿ ಸಹೃದಯರಿಗೆತಲುಪುವಂತೆ ಮಾಡಿದ 'ಪ್ರಜಾವಾಣಿ', 'ಸುಧಾ', 'ಸಂಯುಕ್ತಕರ್ನಾಟಕ', 'ವಿಜಯಕರ್ನಾಟಕ', 'ಸಿಹಿಗಾಳಿ', 'ಉದಯ ವಿಕಾಸ' ಪತ್ರಿಕೆಗಳ ಸಂಪಾದಕರಿಗೆ ನನ್ನ ನಮನಗಳು. ನನ್ನ ಸಾಹಿತ್ಯ ಅಧ್ಯಯನಕ್ಕೆ ತುಂಬು ಪ್ರೋತ್ಸಾಹ ನೀಡುತ್ತಿರುವ ಗುರು ಡಾ.ಕೆ.ಅನಂತರಾಮು, ಪ್ರೊ॥ ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಎಂ.ನರಸಿಂಹ, ಶ್ರೀ ಕೆ.ಎನ್.ಶಾಂತಕುಮಾರ್, ಶ್ರೀ ಚ.ಹ.ರಘುನಾಥ, ಶ್ರೀ ಪ್ರವೀಣಕುಲಕರ್ಣಿ, ಶ್ರೀ ರಾಜು ಮಳವಳ್ಳಿ, ಪ್ರೊ॥ ಎಂ.ಜಿ.ಮಂಜುನಾಥ, ಡಾ.ವಿ.ಚಂದ್ರಶೇಖರ ನಂಗಲಿ, ಪ್ರೊ॥ ಕೆ.ಎಸ್.ನರಸಿಂಗರಾವ್, ಡಾ.ಸಿ.ನಾಗಣ್ಣ, ಡಾ.ಎಚ್.ಎಲ್.ನಾಗರಾಜ, ಅಸಿಸ್ಟೆಂಟ್ ಕಮೀಷನರ್ ಪ್ರೊ॥ ಕೆ.ಎಸ್.ಭಗವಾನ್, ಡಾ. ಟಿ.ಎನ್.ವಾಸುದೇವ ಮೂರ್ತಿ, ಶ್ರೀ ಡಿ.ಎಚ್.ಪುಟ್ಟರಾಮು ಮತ್ತು ನಮ್ಮ ದ.ರಾ.ಬೇಂದ್ರೆ ಕಾವ್ಯಕೂಟದ ಎಲ್ಲ ಸದಸ್ಯರಿಗೆ ನನ್ನ ನಮನಗಳು.

ಈ 'ಕರ್ಣಚೈತ್ರನ ಪರ್ಣಶಾಲೆ'ಯನ್ನು ಆಸಕ್ತಿ ವಹಿಸಿ ಪ್ರೀತಿಯಿಂದ ಡಿ.ಟಿ.ಪಿ. ಮಾಡಿದ ಸ್ನೇಹಿತ ಡಾ.ಎ.ಕೆ.ರವಿಶಂಕರನನ್ನು ನೆನೆಯುವುದು ನನಗೊಂದು ಆನಂದ.

ನನ್ನ ಸಾಹಿತ್ಯ ಅಧ್ಯಯನಕ್ಕೆ ತುಂಬು ಉತ್ತೇಜನ ನೀಡುತ್ತಿರುವ ನನ್ನ ಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಸೊಸೆಯನ್ನು ನೆನೆಯುವುದು; ಪ್ರೀತಿಯ ಮೊಮ್ಮಕ್ಕಳಾದ ಚಿ॥ಎಂ.ಉಜ್ವಲ್, ಚಿ॥ ಜೆ.ಸುಜನ, ಕು॥ ಜೆ.ಸುಗ್ಗಿ, ಚಿ॥ ಬಿ.ಎಸ್. ಸಂವಿತ್ ಕೃಷ್ಣ, ಚಿ॥ ಬಿ.ಎಸ್. ಸುಮೇರು ಕೃಷ್ಣ ಅವರ ಮುಗ್ಧ ಆನಂದಕ್ಕೆ ನಲಿಯುವುದು ನನ್ನ ಕುಟುಂಬ ಸಾಹಿತ್ಯ ಪೋಷಕ ವಾತಾವರಣದ ಆಹ್ಲಾದ.

ಈ ಕುವೆಂಪು ಮಹಾಕಾವ್ಯ ವಿಮರ್ಶಾಕೃತಿಯನ್ನು ಪ್ರಕಟಿಸುತ್ತಿರುವ ಶ್ರೀ ಬಿ.ಕೆ.ಸುರೇಶ್, ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ಅವರಿಗೆ ನನ್ನ ನಮಸ್ಕಾರಗಳು.

ನಾನು ಈ ಮೊದಲು ರಚಿಸಿರುವ ಕೃತಿಗಳನ್ನು ಓದಿ ಸವಿದ ಕನ್ನಡ ಸಾಹಿತ್ಯಾಸಕ್ತರು ಮತ್ತು ವಿದ್ವನ್ಮಣಿಗಳು ಈ ವಿಮರ್ಶಾಕೃತಿಯನ್ನು ಪ್ರೀತಿಯಿಂದ ಸ್ವೀಕರಿಸಿ, ಓದಿ ಆಶೀರ್ವದಿಸಬೇಕೆಂದು ಪ್ರಾರ್ಥಿಸುತ್ತೇನೆ.

30–08–2022

– ಡಾ.ಜಿ.ಕೃಷ್ಣಪ್ಪ

ಪರಿವಿಡಿ

❖❖❖

ಕರ್ಣಚೈತ್ರನ ಪರ್ಣಶಾಲೆ

ಕುವೆಂಪು ಅವರು 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದ ಅಯೋಧ್ಯಾ ಸಂಪುಟದ 'ಚಿತ್ರಕೂಟಕೆ' ಸಂಚಿಕೆಯಲ್ಲಿ ಭರದ್ವಾಜ ಋಷಿಗಳ ಆಶ್ರಮದ ಚಿತ್ರಣ ನೀಡಿದ್ದಾರೆ. ಮುನಿಗಳು ಶಿಷ್ಯ ಹಾರೀತನಿಗೆ ಹಿರಿಯ ಅತಿಥಿಗಳಾದ ಶ್ರೀರಾಮ, ಸೀತೆ, ಲಕ್ಷ್ಮಣರನ್ನು ಕಾಯ್ದು ಕರೆದುಕೊಂಡು ಬರಲು ತಿಳಿಸುತ್ತಾರೆ. ಆ ಆಶ್ರಮ ಧ್ಯಾನ, ಜಪತಪ ಶಾಂತಿಯ ನೆಲೆಯಾಗಿರುತ್ತದೆ. ಆಗ ಚೈತ್ರಮಾಸ. ವಸಂತ ಋತುವಿನ ಮೊದಲ ತಿಂಗಳು. ಭಾರತೀಯರಿಗೆ ಹೊಸ ವರ್ಷದ ಪ್ರಾರಂಭದ ಪವಿತ್ರ ಮಾಸ.

ಕುವೆಂಪು ಅವರು ಹುಟ್ಟಿ ಬೆಳೆದಿದ್ದು ದಟ್ಟ ಅರಣ್ಯದ ನಡುವಿನ ಕುಪ್ಪಳಿಯಲ್ಲಿ. ಅವರು 'ಕಾಡಿನ ಕವಿ'. ಅವರು 'ಪ್ರಕೃತಿಯಾರಾಧನೆಯೆ ಪರಮನಾರಾಧನೆ; ಪ್ರಕೃತಿಯೊಲ್ಮೆಯೆ ಮುಕ್ತಿಯಾನಂದ ಸಾಧನೆ' ಎಂದು ನಿಸರ್ಗ ಧ್ಯಾನದಲ್ಲಿ ಲೀನವಾದವರು. ವೇದಾಂತದ ಪ್ರಕಾರ ಜೀವನಿಗಿರುವ ಪಂಚಕೋಶಗಳು: ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ ಮತ್ತು ಆನಂದಮಯ. ಕುವೆಂಪು ಅವರು ಇವುಗಳ ಜೊತೆಗೆ ಅರಣ್ಯಮಯಕೋಶ ತನಗಿದೆ ಎಂದು ಹೇಳಿಕೊಂಡಿದ್ದಾರೆ.

'ಅನ್ನಮಯದಾಚೆಯಲಿ ಪ್ರಾಣಮಯದೀಚೆಯಲಿ
ನನಗಿರುವುದೊಂದಲೆ, ಅರಣ್ಯಮಯ ಕೋಶ'. (ಅನಿಕೇತನ)

ಹೀಗೆ ಮಲೆನಾಡಿನ ವನದ ಹಸುರು ಕಡಲಿನಲ್ಲಿ ಉಸಿರಾಡಿದ ಕವಿಯು ಅದರಲ್ಲಿ ಒಂದಾಗಿ ತನ್ನ ಆತ್ಮ ಹಸುರುಗಟ್ಟಿತು ಎಂದು ತಿಳಿಸಿದ್ದಾರೆ.

ಹಸುರತ್ತಲ್! ಹಸುರಿತ್ತಲ್!
ಹಸುರೆತ್ತಲ್ ಕಡಲಿನಲಿ

ಹಸುರ್ಗಟ್ಟಿತೊ ಕವಿಯಾತ್ಮಂ
ಹಸುರ್‌ನೆತ್ತರ್ ಒಡಲಿನಲಿ! (ಪಕ್ಷಿಕಾಶಿ)

ಅದೊಂದು ಹಸುರಿನಲ್ಲಿ ಒಂದಾದ ರಸಾನುಭೂತಿ. ಅಂತಹ ಹಸುರಿಗೆ ಬಣ್ಣ ಬೆಡಗು ಹೊಸ ಚೈತನ್ಯ, ಹೊಸರೂಹು, ಹೊಸ ನಲಿವು ಬರುವುದು ವಸಂತ ಋತುವಿನಲ್ಲಿ. ಬಿರುಬಿಸಿಲಿದ್ದರೂ ನೆಲದ ಪಸೆ ಹೀರಿದ ಸಸ್ಯಸಂಕುಲವು ಹಸಿರಿನಿಂದ ನಳನಳಿಸುತ್ತಿರುತ್ತದೆ. ಅವುಗಳ ಆನಂದ ಬಗೆ ಬಗೆಯ ಹೂಗಳಲ್ಲಿ ಹಲವು ವರ್ಣಗಳಲ್ಲಿ ಪ್ರಕಟಗೊಳ್ಳುತ್ತಿರುತ್ತದೆ. ಅದು ಹಲಸು, ಮಾವು, ನೇರಳೆ, ಕಿತ್ತಳೆ, ಸೀಬೆ ಮೊದಲಾದ ಹಣ್ಣುಗಳನ್ನು ನೀಡಿ ಪ್ರಾಣಿ–ಪಕ್ಷಿಗಳನ್ನು ಪೋಷಿಸುತ್ತಿರುತ್ತದೆ.

ವಸಂತ ಮಾಸದ ಕೋಗಿಲೆ, ಗಿಣಿ, ಕಾಜಾಣ ಮುಂತಾದ ವಿವಿಧ ಪ್ರಭೇದದ ಪಕ್ಷಿಗಳ ಕೂಜನ, ಕುಕಿಲು, ಕಲರವ ನಾದವನ್ನು ಕುವೆಂಪು ಅವರು

'ಮೌನವೆ ಮಹಾಸ್ತೋತ್ರಂ
ಈ ಭೂಮ ಭವ್ಯಸೌಂದರ್ಯದಾರಾಧನೆಗೆ!' (ಪಕ್ಷಿಕಾಶಿ)

ಎಂದು ಧ್ಯಾನಿಸಿದ್ದಾರೆ. ಅವರಿಗೆ ಹಾಡುವ ಹಕ್ಕಿಗಳು, ನಭದಲ್ಲಿ ಪ್ರಕಾಶಿಸುವ ಹೂವುಗಳಾಗಿವೆ.

'ಹಾಡುವ ಹಕ್ಕಿಗಳೆಸೆಯುವ ಹೂಗಳು,
ನೆರೆ ಮನಮೋಹಿಪ ನೋಟಗಳು' (ಕದರಡಕೆ).

ಹಕ್ಕಿಗಳ ಉಲಿತ ಅವರಿಗೆ ವಾಙ್ಮಯ ವೇದ ಓಂಕಾರನಾದವಾಗಿ, ಅದು ತನಗೆ ಶ್ರೀಗುರುವಿನ ಕೃಪೆಯಿಂದ ದೊರೆತುದು ಎಂದು ಹಿಗ್ಗಿದ್ದಾರೆ.

ಶ್ರೀಗುರುವಿನ ಅಹಮಸ್ಮಿಯ ಆಶೀರ್ವಾದ,
ಭಾಷೆಯೆ ಅಲ್ಲದ ಅರ್ಥವೆ ಇಲ್ಲದ ಅತಿವಾಙ್ಮಯ ವೇದ,
ಉಲಿವ ವಿಹಂಗಮವಾಗಿದೆ ಆ ಓಂಕಾರದ ನಾದ! (ಅನಿಕೇತನ)

ಅವರ ಕವಿ ಪ್ರತಿಭೆ ವಸಂತ ಋತುವನ್ನು ಕರ್ಣಚೈತ್ರವಾಗಿ ಆಲಿಸಿದೆ. ವಸಂತ ಋತುವಿನ ಗತಿಶೀಲತೆಗೆ ಹಕ್ಕಿಗಳು ಪ್ರತೀಕವಾಗಿವೆ. ವಸಂತ ಋತುವನ್ನು ಇದುವರೆಗೆ ಅನುಭವಿಸಿ ವರ್ಣಿಸಿದ ಕವಿಗಳಿಗಿಂತ ಭಿನ್ನವಾಗಿ –ಪಕ್ಷಿಗಳ ನಾದಾನುಭವದಲ್ಲಿ ಲೀನವಾಗಿ ಆ ಋತುವನ್ನು 'ಕರ್ಣಚೈತ್ರ' ಎಂದು ಕರೆದಿದ್ದಾರೆ.

ಅದು ವಸಂತ ಋತುವಿನ ಕರ್ಣಾನಂದ ರಸತತ್ವವನ್ನು ಆಸ್ವಾದಿಸಿ ಕಾವ್ಯದಲ್ಲಿ ಪ್ರಕಟಿಸಿದ ಆಹ್ಲಾದ. ಪಕ್ಷಿಗಳು ಆ ಋತುವಿನ ಧ್ವನಿಯಾಗಿ, ಪ್ರಕೃತಿಯ ಸಂವಹನ ಧಾತುವಾಗಿರುವ ಕಲ್ಪನಾ ಸೌಂದರ್ಯ ಕಾವ್ಯಲೋಕದಲ್ಲಿ ಹೊಸತು. ಅದನ್ನು ಸಿ. ನಾಗಣ್ಣ ಅವರು, 'Auditory spring' ಎಂದು ಕರೆದಿದ್ದಾರೆ.

'ಕರ್ಣಚೈತ್ರ' ವಸಂತ ಋತುವಿನ ಬಗ್ಗೆ ಧ್ಯಾನಿಸಿದ ಮಹಾಕವಿಯ ನವನವೀನ ಬೌದ್ಧಿಕ ಲಹರಿಯ ಹೊಸ ಪದ ಸೃಷ್ಟಿ. ಅದನ್ನು ಆಶ್ರಮದ ಚಿತ್ರಣದಲ್ಲಿ ಹೀಗೆ ಬಣ್ಣಿಸಿದ್ದಾರೆ.

'ಹಸುರು ಹೂ
ಹಣ್ಣು ಕಾಯ್‌ವೊತ್ತ ತರುಗಳಲಿ ಶತಶತ ವಿವಿಧ
ಪಕ್ಷಿಚಿತ್ರಸ್ವನಂ ವರ್ಣ ವರ್ಣ ಸ್ವರ್ಣಮಯ
ರಂಗವಲ್ಲಿಯನಿಕ್ಕುತಿದೆ ಕರ್ಣಚೈತ್ರನಾ
ಪರ್ಣಶಾಲೆಯಲಿ' (1.7, ಸಾಲು 173–177)

ವಸಂತ ಋತುಮಾನದ 'ಕರ್ಣಚೈತ್ರ'ನ ಪರ್ಣಶಾಲೆಯ ಆಗಸದಲ್ಲಿ ಹಕ್ಕಿಗಳು 'ವರ್ಣವರ್ಣ ಸ್ವರ್ಣಮಯ ರಂಗವಲ್ಲಿ'ಯನ್ನು ಇಕ್ಕುತ್ತಿವೆ! ಆ ಸ್ವರ್ಣವರ್ಣಮಯ ರಂಗವಲ್ಲಿ ಮುಗಿಲಿನಂತೆ ನೆಲದಲ್ಲಿ ನೆರಳಾಗಿ ಮುದ ನೀಡುತ್ತಿವೆ.

ಕರ್ಣಚೈತ್ರನ ಪರ್ಣಶಾಲೆಯ ಸುಪ್ರಭಾತ ಸಮಯದಲ್ಲಿ ಹೊಮ್ಮಿಬರುವ ವಿವಿಧ ಪಕ್ಷಿಗಳ ದಟ್ಟಧ್ವನಿಯನ್ನು 'ಚಿತ್ರಾಂಗದಾ' ಖಂಡಕಾವ್ಯದಲ್ಲಿ ಹೀಗೆ ಚಿತ್ರಿಸಿದ್ದಾರೆ:

'ಮಡಿವಾಳನಿಂಚೆಳ್ಳು, ಕಾಜಾಣನಿಂಚರಂ,
ಕೋಗಿಲೆಯ ನಿಡುಸರಂ, ಗಿಳಿವಿಂಡುಗಳ ಗಳಹು,
ತರತರ ಪಕ್ಷಿಗಳ ತರತರದ ಕೂಜಿತಂ
ತುಮುಲ ಸುಮಧುರಮಾಗಿ ಚೈತ್ರ ಪ್ರಭಾತಮಂ
ಧ್ವನಿಸಾಂದ್ರಗೈದಿರ್ದುದಂದು (ಸಾಲು: 218–222)

ಕವಿ ಕುವೆಂಪು ಅವರು ವಸಂತಕಾಲದ ಪಕ್ಷಿಗಳ ಆನಂದ ಕಲರವವನ್ನು ಅನುಭಾವಿಸಿ ಶ್ರಾವ್ಯವಸಂತವಾಗಿ ಕಾವ್ಯದಲ್ಲಿ ನೀಡಿರುವುದು ವಿಶ್ವಕಾವ್ಯಲೋಕಕ್ಕೆ ನೀಡಿದ ಹೊಸಕಾಣಿಕೆ. ಅದು ಚೈತ್ರಕರ್ಣ. ಚೈತ್ರಮಾಸ ಕಿವಿಗಳಿಗೆ ಪಕ್ಷಿಗಳ ಮುಖಾಂತರ ನೀಡಿದ ಭಾಷೆ ಅರ್ಥವಿಲ್ಲದ ಅತಿವಾಙ್ಮಯವೇದ, ಓಂಕಾರನಾದ.

(ಪ್ರಜಾವಾಣಿ, ಭಾನುವಾರದ ಪುರವಣಿ, 22–3–2020)

❖❖❖

ಭೀಷ್ಮ ಸೌಂದರ್ಯದಾ ಮುಂಗಾರು

ರಾಮಚಂದ್ರನು ಮಾಲ್ಯವತ್ ಪರ್ವತದ ಗುಹಾಶ್ರಮದಲ್ಲಿ ಮಳೆಗಾಲವನ್ನು ಕಷ್ಟದಿಂದ ತಮ್ಮ ಲಕ್ಷ್ಮಣನೊಡನೆ ಕಳೆಯುತ್ತಿದ್ದನು. ಆಗಿನ ಆ ಮಲೆಯಲ್ಲಿಯ ಮಳೆಗಾಲದ ವೈಭವವನ್ನು ಕುವೆಂಪು ಅವರು 'ಕಿಷ್ಕಿಂಧಾ ಕಾಂಡ'ದಲ್ಲಿ ವರ್ಣಿಸಿದ್ದಾರೆ. ಅವರು ಕಂಡುಂಡ ಅರಣ್ಯದ ವರ್ಷಧಾರೆಯ ಕಾವ್ಯಧಾರೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟವಾಗಿದೆ. ಅವರು ಮೊದಲಿಗೆ ಬಿಸಿಲುಗಾಲದ ತೀವ್ರತೆಯನ್ನು ಚಿತ್ರಿಸಿ ಅನಂತರ ಕಾರ್ಗಾಲದ ಬಿರುಹೊಡೆತಕ್ಕೆ ಜರ್ಝರಿಸಿದ ಕಾಡನ್ನು ಕಂಡರಿಸಿದ್ದಾರೆ.

ಬೇಸಿಗೆಯ ಧಗೆಗೆ ಚಾದಗೆಯಾದುದಯ್ ವಿಪಿನಗಿರಿ ಭೂಮಿ!

ಎಲೆ ಉದುರಿ ಬರಲಾದ ಬೂರುಗದ ಮರದಲ್ಲಿ ಬಲಿತ ಕಾಯಿಯ ಓಡು ಒಡೆಯಿತು. ಅದು ಬಿಸಿಲ ಕಾವಿಗೆ ಸಿಡಿದು ಹೊಮ್ಮಿತು. ಚೆಲ್ಲಿ ಚಿಮ್ಮಿ ತನ್ನಲ್ಲಿದ್ದ ಬಿಳಿ ಅರಳೆಯನ್ನು ಚೆಲ್ಲಿತು. ಮಸಿ ಚೆಲ್ಲಿದಂತೆ ಕಾರ್ಗಿಚ್ಚು ಸುಟ್ಟು ಕಪ್ಪಾಗಿಸಿದ್ದ ನೆಲದ ಕಪ್ಪಿನಲ್ಲಿ ಶರತ್ಕಾಲದ ಮೋಡದ ಪ್ರೀತಿಯನ್ನು ಚಿತ್ರಿಸಿತು. ಚಿಟ್ಟೆ ಹಕ್ಕಿಯು ದಾಂಪತ್ಯ ಸುಖದಲ್ಲಿ ತೃಪ್ತಿಯನ್ನು ಪಡೆಯಿತು. ಬಸಿರ ವ್ರತದ ಸಿರಿಗೆ ಗೂಡುಕಟ್ಟುವ ಅದು ಮೊಟ್ಟೆ ಮರಿಗಳಿಗೆ ಮೆತ್ತೆಯನ್ನಾಗಿಸಲು ಆ ಹತ್ತಿಯನ್ನು ಕೊಕ್ಕಿನಲ್ಲಿ ಆಯ್ದುಕೊಂಡೊಯ್ದಿತು.

ಮುಳ್ಳು ಪೊದೆಯ ಬೆಮ್ಮಾರಲ ಮರವು ಕಾಯಿ ತುಂಬಿತ್ತು. ಅದು ಹಣ್ಣುತನಕ್ಕೆ ತಿರುಗಲು ಹೊಸಮಳೆಯ ಆಶೀರ್ವಾದವನ್ನು ಅಪೇಕ್ಷಿಸುತ್ತಿತ್ತು. ಬೆಟ್ಟದ ತೊರೆಯು ಬಿಸಿಲ ಬೇಗೆಗೆ ಬತ್ತಿ ಬೆನ್ನು ಹೊಟ್ಟೆಗೆ ಹತ್ತಿದಂತಾಗಿತ್ತು. ಅದು ಬರದ ಗರ ಬಡಿದು ಕಲ್ ಕೊರಕು ಅಸ್ಥಿಪಂಜರವಾಗಿ ಅಲ್ಲಲ್ಲಿ ತುಂಡುತುಂಡಾಗಿ ಚಲನೆಯನ್ನು ಉಡುಗಿಸಿಕೊಂಡಿತ್ತು. ಕಾಡುಗಿರಿ ಭೂಮಿಯು ಬೇಸಗೆಯ ಧಗೆಗೆ ಚಾತಕ ಪಕ್ಷಿಯಂತಾಗಿತ್ತು.

ರಾಮನು ಸೀತೆಗೆ ಹೇಗೋ ಹಾಗೆ ಮುಂಗಾರಿಗೆ ತಿರೆಯು ಬಾಯಾರುತ್ತಿತ್ತು. ಆಗ ಓ ಆ ದಿಗಂತದ ಎಡೆಯಲ್ಲಿ ಮಳೆಯನ್ನು ತರುವ ಪ್ರತಿಜ್ಞೆ ಹೊತ್ತ, ರವಿಯ ಸ್ನೇಹಿತ, ಶರಧಿ ಶಿಶುವಿನ ನೀಲಿಯ ಮೋಡದಟ್ಟಣೆ ವರದಂತೆ ಕಾಣಿಸಿತು.

ಕಾರ್‍ಗಾಳಿ ಬೀಸಿದುದು ಮಲೆಯ ಮಂಡೆಯ ಕಾಡುಗೂದಲಂ ಪಿಡಿದಲುಬಿ ತೂಗಿ

ಅದು ಶಿವನ ಜಟೆಯಂತೆ ಶಿಖರದ ಆಕೃತಿಯಿಂದ ಮೂಡಿ, ಮೇಲಮೇಲಕ್ಕೆ ಏರಿ ಬೆಟ್ಟದಾಕಾರದಲ್ಲಿ ಬೆಳೆಯಿತು. ಕೂಡಲೆ ಕುಣಿವ ಕಾಳಿಯ ಕರಿಯ ಮುಡಿಬಿಚ್ಚಿ ಹರಡುವಂತೆ ಕೆದರಿ ಸಂಜೆಯ ಆಗಸವನ್ನು ಮುಸುಕಿ ಮುಚ್ಚಿತು. ಜೊತೆಗೆ ಕಾರ್‍ಗಾಳಿಯು ಮಲೆಯ ಮಂಡೆಯ ಕಾಡುಗೂದಲನ್ನು ಹಿಡಿದು ಅಲುಗಾಡಿಸಿ ತೂಗಿತು. ಹಳೆ ಮರಗಳು ಉರುಳಿ, ಮರಕ್ಕೆ ಮರ ಉಜ್ಜಿ ಕೊಂಬೆಗೆ ಕೊಂಬೆ ತೀಡಿತು. ಮೆಳೆಯಲ್ಲಿ ಬಿದಿರು ಕರ್ಕಶ ಶಬ್ದದಿಂದ ಕೀರಿಟ್ಟಿತು. ಕಾಡುನೋವಿಗೆ ಒರಲಿತು.

ಸಿಡಿರೋಷದಿಂದ ಕಿಡಿಕಾರುವ ಮಸಿ ನವಿರಿನ ಹುಬ್ಬಿನ ಸಿಟ್ಟಿನ ರಾಕ್ಷಸಿಯು ಅಲೆಯುವಂತೆ ಮುಗಿಲಿನ ಅಂಚು ಮಿಂಚಿತು. ಕಾರ್ಗಲ್ ಮುಗಿಲ ಬಂಡೆಗಳ ಸಂಘರ್ಷಣೆ ಸಿಡಿಲು ಹೊಮ್ಮಿಸಿ ಗುಡುಗಿದುವು. ದಪ್ಪನಾದ ಹನಿಗಳು ಮತ್ತು ಆಲಿಕಲ್ಲುಗಳು ಕವಣೆಯಂತೆ ಬೀಸಿದುವು. ಬಿಸಿಲು ಉಡುಗಿ, ದೂಳು ಉಂಡೆಗಟ್ಟಿತು. ಮಣ್ಣು ತೊಯ್ದು ನೆಲದ ಕಂಪು ಪ್ರೀತಿಯಿಂದ ಕಮ್ಮನೆ ಸೊಗಸಿ ತೀಡಿತು. ಝುಣತ್ಕಾರ ನೂಪುರದ ಸುಸ್ವರ ಮಾಧುರ್ಯದಿಂದ, ಕನಕಕಾಂತಿಯ ಜರತಾರಿಯ ತೆರೆಯನ್ನು ಹೊಂದಿ ನರ್ತಿಸುವ ಯೌವನ ಯವನಿಯ ಕೈಯ ಬಂಗಾರದ ಕಠಾರಿಯಂತೆ–ಭಯಂಕರ ಸೌಂದರ್ಯದ ಮುಂಗಾರಿನ ಆಗಮನವು ಮನೋಹರವಾಗಿತ್ತು.

'ಬಂಡೆಗಲ್ ಬಿರುಕಿನಿಂದಾಸೆ
ಕಣ್ದೆರೆಯುವಂತೆ ತಲೆಯೆತ್ತಿದುದು ಸೊಂಪುವುಲ್.
ಮಿಂದು ನಲಿದುದು ನಗಂ; ಮೇದು ತಣಿದುದು ಮಿಗಂ;
ಗರಿಗೊಂಡೆರಂಕೆಗೆದರುತೆ ಹಾಡಿ ಹಾರಾಡಿ
ಹಣ್ಣುಂಡು ಹಿಗ್ಗಿದುದು ಹಕ್ಕಿಯ ಮರಿಯ ಸೊಗಂ. (2.9–44 ರಿಂದ 48)

ತೊರೆಗೆ ಬಡತನ ಹಿಂಗಿತು. ಪೃಥ್ವಿಯಲ್ಲಿ ನವಿರಾದ ಹಸುರು ಮೊಳೆಯಿತು. ಹಸುರು ಗರಕೆಯ ಪಚ್ಚೆ ಹಾಸುಗೆಯಲ್ಲಿ ಹೊನ್ನ ಬಣ್ಣದ ಹೂವು ಉದುರಿತು. ಅದು ಪೀತಾಂಬರಕ್ಕೆ ಜರತಾರಿ ಹಾಕಿದಂತೆ ಕಂಗೊಳಿಸಿತು. ಬಂಡೆಗಲ್ಲಿನ ಬಿರುಕಿನಿಂದ ಆಸೆ ಕಣ್ಣು ತೆರೆಯುವಂತೆ ಸೊಂಪಾದ ಹುಲ್ಲು ತಲೆಯೆತ್ತಿತು. ಬೆಟ್ಟವು ಮಿಂದು ನಲಿಯಿತು. ಪ್ರಾಣಿಗಳು ಮೇದು ತಣಿದವು. ಹಕ್ಕಿಯ ಮರಿಗಳು ರೆಕ್ಕೆಯನ್ನು ಪಡೆದವು. ಹಾರಲು ಸಹಾಯವಾಗುವ ಆ ರೆಕ್ಕೆಗಳನ್ನು ಹರಡಿ ಹಾಡಿ ಹಾರಾಡಿಗವು; ಸೊಬಗಿನಿಂದ ಹಣ್ಣುಂಡು ಹಿಗ್ಗಿದವು.

ಮನೆಗೆ ಅತಿಥಿಯಾಗಿ ಬಂದವನು ತನ್ನ ಒಡೆತನವನ್ನು ಒಡ್ಡಿ ನಿಲ್ಲುವಂತೆ ಮಳೆ ಹಿಡಿಯಿತು. ದುರ್ದಿನವು ದ್ರವರೂಪಿಯಾಗಿ ಕರೆಕರೆಯಾಗಿ ಎಡಬಿಡದೆ ಸುರಿಯಿತು. ಸೂರ್ಯನ ದರ್ಶನ ದೂರವಾಯಿತು. ಹಗಲನ್ನು ಕಪ್ಪು ಮುಗಿಲ ಮಬ್ಬಿನ ಮಂಕು ಕವಿಯಿತು. ಕೀಟಕೋಟಿಯ ಕಂಠದಿಂದ ಹೊಮ್ಮಿದ ವಿಕೃತ ರವವು ರಾತ್ರಿಯ ಕರುಳನ್ನು ಇರಿಯಿತು. ಗರಿ ತೊಯ್ದು ಮೈಗಂಟಿಕೊಂಡುದರಿಂದ ಕಿರುಗಾತ್ರಗೊಂಡು ಮುದುರಿ, ಒದ್ದೆಯ ಮುದ್ದೆಯಾದ ಹಕ್ಕಿಯು ದೊಡ್ಡಕೊಂಬೆಯನ್ನು ಏರಿ ತೂಕಡಿಸಿತು.

‘ಜಿಗಣೆ,
ನುಸಿ, ಹನಿಗಳಿಗೆ ಹೆದರಿ ಹಳುವನುಳಿಯುತ್ತೆ ಹುಲಿ
ಹಳು ಬೆಳೆಯದೆತ್ತರದ ಮಲೆಯ ನೆತ್ತಿಯನರಸಿ
ಚರಿಸಿದುದು. (2.9–64 ರಿಂದ 67)

ಒಂದು ಹೋರಿ ಜಿಂಕೆಯು ಆ ಮಳೆಯಲ್ಲಿ ಕಾಡು ಅಂಚಿನ ಹುಲ್ಲುಗಾವಲಿನಲ್ಲಿ ನಿಂತಿತ್ತು. ಅದರ ಕೂದಲುಗಳು ಪೂರ್ತಿ ತೊಯ್ದು ಚರ್ಮವೆಲ್ಲ ಕಪ್ಪುಬಣ್ಣಕ್ಕೆ ತಿರುಗಿತ್ತು. ಹರೆಹರೆಯ ಕೊಂಬಿನ ಇಂಬಿನಿಂದ ಶೋಭಿಸುವ ಮುಖವನ್ನು ಅದು ಜಡಿಮಳೆಗೆ ರೋಸಿ ಕೆಳಗೆ ಮಾಡಿತ್ತು. ಕೆಸರು ಮುಚ್ಚಿದ ಖುರದ ಕಾಲುಗಳ ಅದು ಆ ಮಳೆಯನ್ನು ಪ್ರತಿಭಟಿಸುವಂತೆ ತನ್ನ ಹಿಂಡಿನೊಡನೆ ನಿಂತಿತ್ತು. ಕಟ್ಟಿರುವೆಗಳ ಹಿಂಸೆಯನ್ನು ತಾಳಲಾರದೆ ಮೊಲವು ಕಲ್ಲರೆಯನ್ನು ಏರಿತು. ಜಿಗಣೆ, ನುಸಿ, ಹನಿಗಳಿಗೆ ಹೆದರಿದ ಹುಲಿಯು ಕಾಡನ್ನು ಬಿಟ್ಟು ಬೆಟ್ಟದ ನೆತ್ತಿ ಹುಡುಕುತ್ತಾ ಸಂಚರಿಸಿತು. ಜೀರುಂಡೆಗಳ ಸೇನೆಯು ಜೀರೆನ್ನುವ ಕೀರ್ ದನಿಯಲ್ಲಿ ಚೀರ್ ಚೀರಿ ಹಗಲಿರುಳು ಗೋಳ್ಗರೆಯಿತು. ಬೇಸರದ ಏಕನಾದವನ್ನು ಓ ಬೇಸರಿಲ್ಲದೆಯೆ ನಿರಂತರವಾಗಿ ಬಾರಿಸುತ್ತ ಜಡಿಯ ಸೋನೆ ಬಡಿಯಿತು!

ಜ್ಯೇಷ್ಠ ಮಾಸವು ಕಳೆಯಿತು. ಆಷಾಢ ತೊಲಗಿತು. ಶ್ರಾವಣ ತೀರಿತು. ಶಿವಶಿವಾ ದೀರ್ಘವಾದ ಭಾದ್ರಪದವು ಹೇಗೊ ಕೊನೆಮುಟ್ಟಿತು! ದಾಶರಥಿಯು ತಾನು ಮಾಲ್ಯವತ್ ಪರ್ವತದ ಗೃಹಾಶ್ರಮದಲ್ಲಿ ಕಷ್ಟದಿಂದ ಮಳೆಯ ಕಾಲವನ್ನು ನೂಕುತ್ತಿದ್ದನು. ಆ ಕಾಲವನ್ನು ಸೀತೆಯ ಚಿಂತೆಗೆ ಹೊಂದಾಣಿಕೆಯಾಗಿಸಿ ದೂಡುತ್ತಿದ್ದನು. ಅವನನ್ನು ಸಂಜೆ ಬೆಳಿಗ್ಗೆ ಹಾಗೂ ಹಗಲು ಇರುಳುಗಳಲ್ಲಿ ಅಗಲಿಕೆಯ ಬೆಂಕಿ ದಹಿಸಿತು. ಆ ವಿರಹವು ಇಂದ್ರಗೋಪವೆಂಬ ಕೆಂಪುಬಣ್ಣದ ಹೊನ್ನೆ ಹುಳುಗಳಲ್ಲಿ ಮತ್ತು ಮಿಂಚು ಹುಳುಗಳಲ್ಲಿ ಪ್ರತಿಬಿಂಬಿಸಿತು.

'ನಮ್ಮಹಂಕಾರ
ರೋಗಕಿಂತಪ್ಪ ಬೃಹದುಗ್ರತಾ ಸಾನ್ನಿಧ್ಯಮೇ
ದಿವ್ಯ ಭೇಷಜಮೆಂಬುದೆನ್ನನುಭವಂ' (2.9–91 ರಿಂದ 93)

ಅಣ್ಣ ತಮ್ಮಂದಿರು ರಾತ್ರಿಯ ಹೊತ್ತು ಗವಿಯಲ್ಲಿ ಮಲಗಿ, ನಿದ್ದೆ ಬಾರದಿರಲು ಮಾತಾಡುತ್ತ ತಮ್ಮ ಕಾರ್ಯ ಯೋಜನೆಯನ್ನು ಚರ್ಚಿಸುವರು. ಕಾರಿರುಳು ಕಪ್ಪು ಕಲ್ಲಂತೆ ಹೆಪ್ಪುಗಟ್ಟಿದೆ. ಹೊರಗೆ ಮಳೆ ಕರೆಕರೆಯ ಕರೆಯುತ್ತಿದೆ. ಕಪ್ಪೆ ಹುಳು ಹುಪ್ಪಡಿಗಳು ತಮ್ಮ ಕೊರಳ ಸಾವಿರ ಹಲ್ಲಿನ ಗರಗಸದಿಂದ ಗರಗರನೆ ನಿಶಿಯ ನಿಶ್ಯಬ್ದತೆಯ ಚಿಪ್ಪನ್ನು ಕೊರೆಯುತ್ತಿವೆ. ಅದನ್ನು ಆಲಿಸಿದ ಕಿವಿ ಮೂರ್ಛೆ ಹೋಗುವಂತಾಗಿದೆ. ಆ ಸಮಯದಲ್ಲಿ ರಾಮಚಂದ್ರನು ತಮ್ಮನೊಡನೆ ಹೀಗೆ ಮಾತಾಡಿದನು:

'ಏನು ವೃಷ್ಟಿಯ ಘೋಷವಿದು, ಸೌಮಿತ್ರಿಯೆ ಕೇಳು! ಮಲೆ ಕಾಡು ನಾಡು ಬಾನು ಏಕಾಭಿಪ್ರಾಯದಿಂದ ಒಂದಾಗಿ ಗೋಳಾಡುತ್ತ ಬೊಬ್ಬಿರಿಯುವಂತೆ ತೋರುತ್ತಿದೆ. ಈ ಪ್ರಕೃತಿಯ ಅಬ್ಬರದ ಈ ಉಗ್ರತೆಯ ಮಧ್ಯೆ ನಾವು ಮನುಷ್ಯರು ಅತ್ಯಲ್ಪ ಕೃತಿಗಳಲ್ಲವೆ? ನಮ್ಮ ಅಹಂಕಾರದ ರೋಗಕ್ಕೆ ಈ ರೀತಿಯ ಬೃಹದ್ ಉಗ್ರತಾ ಸಾನ್ನಿಧ್ಯವೇ ದಿವ್ಯ ಔಷಧಿ ಎಂಬುದು ನನ್ನ ಅನುಭವ. ಇಲ್ಲಿ ಈ ಗರಡಿಯಲ್ಲಿ ಸಾಧನೆ ಮಾಡಿದವನಿಗೆ ಪರ್ವತ ಸದೃಶ ಸ್ಥಿರತೆ ದೊರೆಯುವುದು ಅಸಾಧ್ಯವೇನಲ್ಲ.'

'ಮಿಂಚಿನ ಹನಿಯ ಸೋರ್ವ
ಮಿಂಚುಂಬನಿಯ ಪೋಲ್ವ ಮಿಂಚುಂಬುಳುವನಕ್ಷಿ
ಸೋಲ್ವಿನಂ ನೋಡಿ, ರಾಮನ ಕಣ್ಗೆ ಹನಿ ಮೂಡಿ,
ತೋಯ್ದುದತ್ತು ಕೆನ್ನೆ; ತೆಕ್ಕನೆ ತುಂಬಿದುದು ಶಾಂತಿ
ತನ್ನಾತ್ಮಮಂ!(2.9–132 ರಿಂದ 136)

ಅವರಿಬ್ಬರೂ ನುಗ್ಗುತ್ತಿದ್ದ ಅಶ್ವಯುಜ ವರ್ಷ ಅಶ್ವದಳದ ಹೇಷಾರವದ ಘೋಷವನ್ನು ಆಲಿಸಿದರು. ಘೋರ ಅಂಧಕಾರದ ಆ ಸಾಗರದಲ್ಲಿ ತೇಲಿ ಬರುವ ಹನಿ ಮಿಂಚಿನಂತೆ–ಒಂದು ಮಿಂಚುಹುಳು ನಿಧಾನ ನಿಧಾನವಾಗಿ ಆ ಕಗ್ಗತ್ತಲೆಯ ಗವಿಯನ್ನು ಹೊಕ್ಕಿತು. ಅದು ತೇಲುತ್ತ ಈಜುತ್ತ ಮೆಲ್ಲಮೆಲ್ಲನೆಯೆ ಹಾರಾಡುತ್ತ ಮಿಂಚಿನ ಹನಿಯನ್ನು ಚೆಲ್ಲಿ ಅಲ್ಲಲ್ಲಿ ನಲಿದಾಡಿತು. ರಾಮನು ಮಿಂಚಿನ ಹನಿಯನ್ನು ಸೋರಿಸುವ, ಮಿಂಚಿನ ಪ್ರಕಾಶವನ್ನು ಹೋಲುವ ಮಿಂಚು ಹುಳುವನ್ನು ಕಣ್ಣು ಸೋಲುವವರೆಗೆ ನೋಡಿದನು. ಅವನ ಕಣ್ಣಿಗೆ ಹನಿ ಮೂಡಿ ಕೆನ್ನೆ ನೆನೆಯಿತು. ಕೂಡಲೆ ಅವನ ಆತ್ಮಕ್ಕೆ ಶಾಂತಿ ತುಂಬಿ ಬಂದಿತು. ಆ ಸಾಮಾನ್ಯವಾದ ಅನಿರ್ವಚನೀಯ ಸೌಂದರ್ಯವನ್ನು ಮತ್ತೆ ಮತ್ತೆ ನೋಡಿದನು!

❖❖❖

ತೃಣಸುಂದರಿಯ ಮೂಗುತಿಯ ಮುತ್ತು ಪನಿ

ಮಾರ್ಗಶಿರ ಪುಷ್ಯ ಮಾಸಗಳು ಸೇರಿ ಹೇಮಂತ ಋತು. ಅದು ಚಳಿಗಾಲ. ಆ ಕಾಲದಲ್ಲಿ ತರುಲತೆಗಳಲ್ಲಿ ಪುಷ್ಪಗಳಿರುವುದಿಲ್ಲ. ಆ ಕಾಲದ ಪ್ರಕೃತಿಯ ವರ್ಣನೆಯನ್ನು ಕುವೆಂಪು ಅವರು ಪೃಥ್ವಿಯನ್ನು ವ್ಯಕ್ತಿ ಎಂದು ಪರಿಭಾವಿಸಿ ಅವಳು ಉಟ್ಟ ಉಡುಗೆಯಲ್ಲಿ ಚಿತ್ರಿಸಿರುವ ರೀತಿ ನವನವೀನವಾಗಿದೆ. ಅದು ಅವರ ರಮ್ಯ ಕಾಲ್ಪನಿಕ ಸೌಂದರ್ಯ.

'ಭೂದೇವಿ ಹಸಿರು ಉಡುಗೆ ಉಡುವ ತನ್ವಂಗಿ (ಕೋಮಲಾಂಗಿ). ಅವಳು ಏನೋ ಕಾರ್ಯನಿಮಿತ್ತ ಹೊರ ಹೊರಟು ಮಾರ್ಗ ಮಧ್ಯದಲ್ಲಿ ನಿಂತಿದ್ದಾಳೆ. ಆಗ ಹೇಮಂತ ಋತುವು ಹಿಮವರ್ಷವನ್ನು ಅವಳ ಮೇಲೆ ಸುರಿಸಿದ್ದಾನೆ. ಆ ತುಹಿನವು (ಮಂಜು) ಅವಳ ಒಡಲಿಗೆ ಬಿಳಿಯ ಉಡುಗೆಯನ್ನು ತೊಡಿಸಿದೆ. ಆ ಶ್ವೇತವಸ್ತ್ರದಲ್ಲಿ ಅವಳು ಮನೋಹರೆಯಾಗಿ ಕಾಣುತ್ತಿದ್ದಾಳೆ!'

'ಇಂಬಾದಳಾ ತುಹಿನ ತನುವಸನೆ, ತನ್ವಂಗಿ,
ಸಸ್ಯಶಾಲಿನಿ ಪೃಥಿವಿ ! (1.11–184)

ಕುವೆಂಪು ಅವರು 'ಶ್ರೀ ರಾಮಾಯಣ ದರ್ಶನಂ'ನ ಪ್ರಾರಂಭದ 'ಕವಿಕ್ರತು ದರ್ಶನಂ' ಸಂಚಿಕೆಯಲ್ಲಿ ದೇವಕವಿ ವಾಲ್ಮೀಕಿ ಮತ್ತು ವಿದ್ಯಾದೇವತೆ ಸರಸ್ವತಿಯನ್ನು ಹರಸಿರಿ ಎಂದು ಪ್ರಾರ್ಥಿಸಿದ್ದಾರೆ. ಅವರಿಗೆ ತಾವು ಕೈಗೊಂಡಿರುವ ಮಹಾಕಾವ್ಯದ ರಸಯಾತ್ರೆಯಲ್ಲಿ ಪ್ರಕೃತಿಯ ಸಮಸ್ತವೂ ಮಾನ್ಯವಾದುದು. ರಾಮನ ಕಿರೀಟದ ರತ್ನಮಣಿಯಂತೆ ಪಂಚವಟಿಯ ಸೂರ್ಯೋದಯದ ಶಾದ್ವಲದ ಹಸುರುಗರುಕೆ ತೃಣಸುಂದರಿಯ ಮೂಗುತಿಯ ಮುತ್ತು ಆಗಿರುವ ಹಿಮಬಿಂದುವೂ ಅಮೂಲ್ಯವಾದುದು.

'ರಾಮನ ಕಿರೀಟದಾ
ರನ್ನವಣೆಯೋಲೆ ರಮ್ಯಂ, ಪಂಚವಟಿಯೊಳ್

ದಿನೇಶೋದಯದ ಶಾದ್ವಲದ ಪಸುರ್ ಗರುಕೆಯೊಳ್
ತೃಣಸುಂದರಿಯ ಮೂಗುತ್ತಿಯ ಮುತ್ತು ಪನಿಯಂತೆ
ಮಿರುಮಿರುಗಿ ಮೆರೆವ ಹಿಮಬಿಂದುವುಂ'(1.1–111–15)

ಮನುಷ್ಯ ಹೆಚ್ಚು ಜಾಗೃತನಾಗಿರುವುದು, ಕ್ರಿಯಾಶೀಲನಾಗಿರುವುದು ಮತ್ತು ಧ್ಯಾನಶೀಲನಾಗಿರುವುದು ಹೇಮಂತ ಋತುವಿನಲ್ಲಿ. ಬಾಲ್ಯದಿಂದಲೂ ಅರಣ್ಯದಲ್ಲಿ ಆ ಋತುವಿನಲ್ಲಿ ಓಡಾಡಿ, ಅದರ ವಿವಿಧ ಲಾಸ್ಯವನ್ನು ಕಣ್ತುಂಬಿಕೊಂಡು ಆ ಕಾಲದ ಬಗ್ಗೆ ಚಿಂತನಶೀಲರಾದ ಕುವೆಂಪು ಅವರು, ಆ ಕಾಲದ ಭೂಮಿತಾಯಿಯನ್ನು ಒಂದು ಸೊಗಸಾದ ರೂಪಕದಲ್ಲಿ ಹೀಗೆ ಚಿತ್ರಿಸಿದ್ದಾರೆ:

'ತೂಲಸಮ ಪೀಯೂಷ ಕೋಶದಿಂ
ಕೇಶ ತನುತರ ತಂತುವನ್ನೆಳೆದು ಕುಶಲದಿಂ
ನೇಯ್ದಮೃತ ಕೌಶೇಯ ಯವನಿಕಾಚ್ಛಾದಿತಂ
ಮೆರೆದಿರೆ ಮನೋಹರಾಸ್ಪಷ್ಟ ಕಾನನ ಭೂಮಿ' (1.11–169 ರಿಂದ 172)

ಮನೋಹರಾಸ್ಪಷ್ಟ ಕಾನನ ಭೂಮಿಯು ಚಳಿಯ ಅರಳೆಯಂತಹ ಅಮೃತ ಕೋಶದಿಂದ ಕೇಶ ಶರೀರದ ತಂತುವನ್ನು ಎಳೆದು ಕುಶಲದಿಂದ ನೇಯ್ದ ಅಮೃತ ರೇಷ್ಮೆ ವಸ್ತ್ರದಂತಹ ತೆರೆಯನ್ನು ಹೊದ್ದು ಶೋಭಿಸುತ್ತಿತ್ತು.

* * *

ಮಾಗಿ ಕಾಲವು ನಮ್ಮನ್ನು ಚಳಿಯ ಸಮುದ್ರದಲ್ಲಿ ಅದ್ದಿದಂತಿರುತ್ತದೆ. ಅದು ಎಲ್ಲ ಪ್ರಾಣಿಗಳಲ್ಲಿ ತಣ್ಣನೆಯ ಉಸಿರನ್ನು ಊದಿಸುತ್ತಾ, ಹಣ್ಣೆಲೆಗಳನ್ನು ಉದುರಿಸುತ್ತಾ, ವಯಸ್ಸಾದವರು ದೊಣ್ಣೆಯೂರಿ 'ಹುಹು' ಎನ್ನುವಂತೆ ನಡುಗಿಸುತ್ತಾ ಬರುತ್ತದೆ. ಅದು ಬಂದ ಬಗೆಯನ್ನು ನೋಡು ಎಂದು ಕವಿ ಹೀಗೆ ಚಿತ್ರಿಸಿದ್ದಾರೆ:

'ನೋಡು ನೋಡು ಕುಳಿರ ಬೀಡು ಮಾಗಿ ಬರುತಿದೆ!
ಹಲ್ಲ ಕಡಿದು ಮುಷ್ಟಿ ಹಿಡಿದು ಸೆಡೆತು ಬರುತಿದೆ!
ಐಕಿಲದರ ತಲೆಯ ತಿರುಳು
ಕೊರೆಯುವ ಚಳಿಯದರ ಕರುಳು
ಬೆರೆತ ಮುಗಿಲೆ ನರೆತ ಕುರುಳು
ಮಾಗಿ ಬರುತಿದೆ !
ನೋಡು ನೋಡು ಕುಳಿರಬೀಡು ಸಾಗಿ ಬರುತಿದೆ! (ಮಾಗಿ ಬರುತಿದೆ : ಪಕ್ಷಿಕಾಶಿ)

ಕುವೆಂಪು ಅವರಿಗೆ ಹುಲ್ಲಿನ ಮೇಲಿನ ಇಬ್ಬನಿ ರಾಶಿಯು ಶಿಶುರವಿ ರುಚಿಯಲಿ ನಗೆನಗೆ ಸೂಸುತ್ತದೆ. ಅವರಿಗೆ ಹುಲ್ಲಿನ ಮೇಲಿನ ಪ್ರತೀ ಹನಿಯೂ ಕಾಮನಬಿಲ್ಲು, ಸೊಡರು. ಅದನ್ನು ಅವರು ಕಂಡು ಬಣ್ಣಿಸಿರುವ ರೀತಿ ಅನನ್ಯ.

'ಹಚ್ಚನೆ ಪಚ್ಚನೆ ವೇದಿಕೆಯಲ್ಲಿ
ಸಾಸಿರಗಟ್ಟಲೆ ಮುತ್ತನು ಚೆಲ್ಲಿ,
ರನ್ನದ ಕಿರುಹಣತೆಗಳಲ್ಲಿ
ಶ್ಯಾಮಲ ತೈಲದಿ ಹೊನ್ನಿನ ಬತ್ತಿ
ಕಾಮನ ಬಿಲ್ಲಿನ ಬೆಂಕಿಯು ಹೊತ್ತಿ
ಸೊಡರುರಿಯುತ್ತಿದೆ ಅಲ್ಲಲ್ಲಿ!' (ಶರತ್ಕಾಲದ ಸೂರ್ಯೋದಯದಲಿ: ಪಕ್ಷಿಕಾಶಿ)

ಕಾವ್ಯದ ಅನುಸಂಧಾನದಲ್ಲಿ ಶಬ್ದದಲ್ಲಿಯ ಅರ್ಥವನ್ನು ಹುಡುಕುವಷ್ಟಕ್ಕೆ ಮಿತಿಗೊಳ್ಳುವುದು ವಾಚ್ಯ. ವಾಚ್ಯ ಸ್ವರೂಪದಿಂದ ಚಿತ್ತವೃತ್ತಿ ಸ್ವರೂಪಕ್ಕೆ ಸಾಗಿದ ಕಾವ್ಯಾನುಭವಿಯು ವ್ಯಂಜನಾ ಸ್ವರೂಪದ ವ್ಯಂಗ್ಯ ಧ್ವನಿಯಲ್ಲಿ ಕಾವ್ಯ ಪ್ರಕಾಶವನ್ನು ಕಂಡು ಸುಖಿಸುತ್ತಾನೆ. ಅದನ್ನು ಮೀರಿ ಹೋಗಿ ತಾತ್ವಿಕವಾದ ವಿಶೇಶಾರ್ಥ ದರ್ಶನ ಧ್ವನಿಯನ್ನು ಕಾವ್ಯದಲ್ಲಿ ಮೂಡಿಸುವವನು ದರ್ಶನ ಕವಿ. ಅದು ಅವನ ಕಾವ್ಯ ಸೃಷ್ಟಿಯ ದರ್ಶನ ಶಕ್ತಿ. ಅದು ರಸಋಷಿ ಸವಿಯುವ ರಸಾಮೃತ ಪಾನ. ಆ ದರ್ಶನ ಫಲದ ಸಾರ್ಥಕ ಮಾರ್ಗ:

'ದರ್ಶನ ಧ್ವನಿ ರಸಾಮೃತ ಪಾನದಾನಂದದಿಂ
ಲೋಕಶೋಕವನಳಿಸಿ ಭುವನತ್ರಯಂಗಳಂ
ತಣಿಪನಂದನ ತಪೋದೀಕ್ಷೆ' (4.13–219–21)

ಅಂತಹ ದರ್ಶನ ದೀಪ್ತ ಕುವೆಂಪು ಅವರು, ಕಾಣ್ಕೆ, ದರ್ಶನವನ್ನು 'ದೃಷ್ಟಿ' ಎಂದು ಕರೆದಿದ್ದಾರೆ. 'ಸರ್ವಸೃಷ್ಟಿಯ ದೃಷ್ಟಿ ತಾಂ ಸೆರೆಯಾಗಲೊಪ್ಪಿರುವುದಾ ಹನಿಯ ಹೃದಯದ ಪುಟ್ಟ ಜ್ಯೋತಿಯಲಿ' ಎಂದು ಅನುಭಾವ ಧ್ವನಿ ಹೊಮ್ಮಿಸಿದ್ದಾರೆ. ಸರ್ವಸೃಷ್ಟಿಯ ಹಿಮಮಣಿಯ ಒಳಗಿರುವ ಜ್ಯೋತಿಯು ಕಾವ್ಯ ಧ್ವನಿಗಿಂತಲೂ ವ್ಯಂಜನಾ ವ್ಯಾಪಾರಕ್ಕಿಂತಲೂ ಹಿರಿದಾದದ್ದು. ಆ 'ಹಿಮಬಿಂದು'ವಿನಲ್ಲಿ ಪಂಚ ಮಹಾಭೂತಗಳಾದ ಭೂಮಿ, ಆಪ್, ತೇಜ, ವಾಯು, ಆಕಾಶ ತತ್ವಗಳ ರಹಸ್ಯ ಏಕತ್ರಗೊಂಡು ಹೊರಹೊಮ್ಮಿದಂತಿದೆ.

'ಪ್ರಕೃತಿಯಾರಾಧನೆಯೇ ಪರಮನಾರಾಧನೆ' ಎಂಬ ನಿಸರ್ಗ ಅಧ್ಯಾತ್ಮ ಭಾವದಲ್ಲಿ ಲೀನವಾದ ಅವರು, 'ದೇವರ ಮುಖ ದರ್ಶನಕೆ ಸಾಲದೇನಾ ಹನಿಯ ಕಿರುದರ್ಪಣಂ' ಎಂದು ಪ್ರಶ್ನಿಸುತ್ತಾ ಅನಂತ ಶಕ್ತನನ್ನು ಆ ಹನಿಯ ಕಿರುಗನ್ನಡಿಯಲ್ಲಿ ಕಂಡು ಧ್ಯಾನಶೀಲರಾಗಿದ್ದಾರೆ. ಮತ್ತು ಮುಂದುವರಿದು,

‘ನಿಲ್ಲಿಮ್; ಆ ಇರ್ಬನಿಯ ಕಿಡಿಗುಡಿಯೊಳಾರಾಧನೆಯೆಸಗಿ ಮುಂಬರಿಯುವಂ’ ಎಂದು ರಾಮಚಂದ್ರನು ಪತ್ನಿ ಸೀತೆ ಮತ್ತು ಸಹೋದರ ಲಕ್ಷ್ಮಣರಿಗೆ ತುಸುಹೊತ್ತು ಶಾಂತವಾಗಿ ನಿಲ್ಲಲು ಸೂಚಿಸಿದಂತೆ ಚಿತ್ರಿಸಿದ್ದಾರೆ. ಜಗತ್ತಿನ ಕಾವ್ಯಲೋಕದಲ್ಲಿ ಇಬ್ಬನಿಯ ಕಿಡಿಗುಡಿಯಲ್ಲಿ ಆರಾಧನೆಗೈದ ಪ್ರಕೃತಿಧ್ಯಾನಿ ಕುವೆಂಪು ಎಂಬುದು ಕನ್ನಡಿಗರ ಹೆಮ್ಮೆ.

(ಪ್ರಜಾವಾಣಿ, ಭಾನುವಾರದ ಪುರವಣಿ 20.12.2020)

❖❖❖

ಅಃ! ಬೆಳಕೆ, ಕಣ್ಣು ಹಾಳಾದ ಮೇಲೆ ಕಣ್ಣು ತೆರೆವೆಯಲ್ವೆ?

ಸುಮಂತ್ರನು ಗಂಗೆಯ ಬಳಿ ರಾಮನನ್ನು ಬಿಟ್ಟು ಬಂದನು. ಆತನ ಸಂದೇಶವನ್ನು ದಶರಥನಿಗೆ ಹೇಳಿದನು. ಮೌನ ಶಿಲಾ ಪ್ರತಿಮೆಯಂತೆ ಅದನ್ನು ಕೇಳಿದ ದೊರೆ ವಜ್ರಾಘಾತಕ್ಕೆ ಒಳಗಾಗಿ ಮಂಚದಿಂದ ನೆಲಕ್ಕೆ ಬಿದ್ದನು. ವಾಮದೇವ ವಸಿಷ್ಠಾದಿಗಳು ಸಮಾಧಾನ ಪಡಿಸಲು, ಅದನ್ನು ಕೇಳಿ ರಾಜನ ಎದೆಯಲ್ಲಿ ದುಃಖದ ಜ್ವಾಲೆ ನೂರ್ಮಡಿಸಿತು. ಬಳಿಯಿದ್ದವರನ್ನು ಬಡಿದಟ್ಟಿದನು. ಕೈಗೆ ಯಾರೂ ಸಿಗದಿರಲು 'ಸಿಟ್ಟು ಸೀಕರಿಸುರಿಯಿತು'. ಅವನ ಶೋಕವು ರೌದ್ರರೂಪ ತಾಳಿ, ಘೋರವಾಗಿ ಭಯವನ್ನುಂಟು ಮಾಡಿತು.

'ಸೀಕರಿ' ಎಂದರೆ ಸೀದು ಕರಕಲಾಗುವುದು. ಅದನ್ನು 'ಸೀಕಲು' ಎಂದು ಗ್ರಾಮೀಣರು ಇಂದೂ ಬಳಸುತ್ತಾರೆ. ಕವಿ ಕುವೆಂಪು ಅವರು ರಾಜನ ಕೆರಳಿದ ಕೋಪ ಸೀದು ಹೋದುದನ್ನು ಅಂದರೆ ಇಲ್ಲವಾದುದನ್ನು 'ಸೀಕರಿಸುರಿಯಿತು' ಪದದಲ್ಲಿ ಧ್ವನಿಸಿದ್ದಾರೆ. ಆ ಸ್ಥಿತಿಯಲ್ಲಿ ಹೊರಕ್ಕೆ ಇತರರ ಕಡೆಗೆ ಹರಿವ ಕೋಪ ತನ್ನ ಕಡೆಗೆ ಹೊರಳಿ, ಇತರರಿಗೆ ಭೀತಿಯುಂಟಾಗುವಂತೆ ತನ್ನ ಕಣ್ಣನ್ನು ತಾನೇ ಕಿತ್ತುಕೊಂಡನು! ಕೈಕೆಯನ್ನು ಕೂಗಿ ಬೊಬ್ಬಿರಿದನು.

'ನೆಣವಸೆಯ ನೆತ್ತರಂ ಸೋರಿರ್ದ
ಕಣ್ಣದಂ ಕೈಲಾಂತು, ಸುಟ್ಟಿದೋರ್ದು, ಕನಲ್ದು:
'ದೇಶ ಕೋಸಲವಿದೆಕೊ ಕರತಲಾಮಲಕ ಮೆನೆ
ಕಣ್ಗೊಳಿಸುತಿದೆ. ನನ್ನ ರಾಮನನೆನಗೆ ಕುಡಾ
ನಯನಾಭಿರಾಮನಂ! ಕಣ್ಣಾರ್ವಿನಂ ನೋಡಿ
ತೊರೆವೆನಸುವಂ, ಪ್ರಿಯತಮಾ ಪಿಶಾಚಿನಿ, ಕೈಕೆ!
ಪಾಳ್ ಕಣ್ಗಳಿವೆ ಕಾರಣಂ, ನಿನ್ನ ರೂಪಲ್ತು,
ರಾಣಿ! ಈಗೆಲ್ಲಿ ಪೇಳಾ ನಿನ್ನ ರೂಪ ಪಾಪಂ?... (1.5–54–61)

ಕಣ್ಣು ಪೂರ್ಣ ಮಾಂಸದ ಮುದ್ದೆ. ಅದು ಕೊಬ್ಬಿನ ಅಂಶದಿಂದ ಕೂಡಿದ್ದು.

ಯಾವುದೇ ಮೂಳೆ ಅದರಲಿಲ್ಲ. ದಶರಥ ತನ್ನ ಕಣ್ಣನ್ನು ತಾನೇ ಕ್ರೂರವಾಗಿ ಕಿತ್ತುಕೊಂಡು ಕೈಲಿ ಹಿಡಿದುಕೊಂಡುದನ್ನು ಕವಿ ಗ್ರಾಮೀಣ ಪದ 'ನೆಣ ವಸೆ' (ಕೊಬ್ಬು) ಬಳಸಿ ಅದರ ಲಕ್ಷಣವನ್ನು ತಿಳಿಸಿದ್ದಾರೆ. ಆ ಕೊಬ್ಬು ಕಣ್ಣು ರಕ್ತವನ್ನು ಸೋರುತ್ತಯಿತ್ತು. ಅದನ್ನು ಕೈಯಲ್ಲಿ ಹಿಡಿದುಕೊಂಡು ಸಂಕಟದ ಉರಿಯಿಂದ ರಾಜನು ರೇಗುತ್ತಾನೆ (ಕನಲ್ದು). ಕವಿಯು ಅವನ ಆ ದುರಂತ ಸ್ಥಿತಿಗೆ ಕಾರಣವಾದ ಕೈಕೆಯನ್ನು ಸೂಚಿಸಿ ಹೇಳುವಾಗ ದೇಸಿಪದ 'ಸುಟ್ಟಿದೋರು' ಬಳಸಿದ್ದಾರೆ. ಅದರ ವಾಚ್ಯಾರ್ಥ 'ಬೆರಳಿನಿಂದ ತೋರಿಸು'. ಆದರೆ ಅದರೊಳಗಿರುವ 'ಸುಟ್ಟು'– ಬೇಗೆಯಿಂದ ಸುಡುವ ತಳಮಳದ ಕಾರಣವನ್ನು ನಿರ್ದೇಶಿಸುತ್ತದೆ.

ಅತ್ಯಂತ ಸ್ಪಷ್ಟವಾದುದಕ್ಕೆ ಬಳಸುವ ನುಡಿಗಟ್ಟು 'ಕರತಲಾಮಲಕ'– ಅಂಗೈಯೊಳಗಿನ ನೆಲ್ಲಿ. ಅಯೋಧ್ಯೆಯ ಅರಸುತನ ಒಂದು ಆಕರ್ಷಣೆ. ಅಲ್ಲಿ ಕಂಗೊಳಿಸುವುದು ರಾಜನ ಮಗನಾಗಿ ಹುಟ್ಟಿದುದರ ಹಕ್ಕು ಮತ್ತು ಸಾರ್ಥಕ್ಯ ಎಂಬುದು ಕೈಕೆಯ ಅರಿವು. ಅದಕ್ಕಾಗಿ ಅವಳು ದಶರಥನನ್ನು ವರದ ಇಕ್ಕಳದಲ್ಲಿ ಸಿಲುಕಿಸಿ ರಾಮನನ್ನು ಕಾಡಿಗೆ ಕಳಿಸುವಲ್ಲಿ ಯಶಸ್ವಿಯಾಗಿದ್ದಾಳೆ. 'ರಾಜರ್ಷಿ, ದೀರ್ಘದರ್ಶಿ, ಸಮದರ್ಶಿ'ಯಾದ ರಾಜ ದಶರಥ ಕಣ್ಣನ್ನು ಸೆಳೆಯುವ ರಾಜ ವೈಭೋಗ ಮತ್ತು ಹೆಣ್ಣಿನ ರೂಪು ಲಾವಣ್ಯಗಳ– ತಾನು ಇದುವರೆಗೂ ಕಾಣದ ಮುಖವನ್ನು ಕಂಡು ದುಃಖಿತನಾಗಿದ್ದಾನೆ. ಎಲ್ಲವನ್ನು ಸೆಳೆದು ಆಶಿಸುವ ತನ್ನ ಕಣ್ಣು ಘೋರ ದುರ್ಗತಿಯ ದುರಂತ ದುಃಖಕ್ಕೆ ಕಾರಣವೆಂಬ ತೀರ್ಮಾನಕ್ಕೆ ಬಂದಿದ್ದಾನೆ. ಕಣ್ಣನ್ನು ಕಿತ್ತು ಅಂಗೈಲಿ ಹಿಡಿದುಕೊಂಡು ಕೈಕೆಯನ್ನು ಬೆಟ್ಟು ಮಾಡಿ ತೋರಿಸುತ್ತ ಹೇಳುತ್ತಾನೆ:

'ನಾನು ಕಂಗೊಳಿಸಲು ಕಾರಣವಾದ ಈ ಕಣ್ಣು ನನ್ನ ದೇಶ ಕೋಸಲದ ಪ್ರತೀಕ. ನೋಡು ಅಂಗೈನ ನೆಲ್ಲಿಕಾಯಿಯಂತೆ ಸ್ಪಷ್ಟವಾಗಿ ಕಾಣಿಸುತ್ತಿದೆ. ಇದನ್ನು ತೆಗೆದುಕೊ. ನನ್ನ ಕುವರ ನಯನಾಭಿರಾಮನನ್ನು ನನಗೆ ಕೊಡು! ಕಣ್ಣಾರ್ವಿನಂ ನೋಡಿ ತೆರೆವೆನೆಸುವಂ.'

ಕವಿಯು ರಾಮನು ತಂದೆ ದಶರಥನ ಆಂತರ್ಯದ, ಸೊಗಸಿನ ಮನೋಹರತೆಯ ಪ್ರತೀಕ ಎಂಬುದನ್ನು 'ನಯನಾಭಿರಾಮ' ಪದದಲ್ಲಿ ಅಭಿವ್ಯಕ್ತಿಸಿದ್ದಾರೆ. ಅವರು ದೊರೆಯ ಪುತ್ರ ವಾತ್ಸಲ್ಯವನ್ನು 'ಕಣ್ಣಾರ್' ಪದದಲ್ಲಿ ಪ್ರಕಟಪಡಿಸಿರುವ ರೀತಿ ಅನನ್ಯವಾಗಿದೆ. 'ಕಣ್ಣಾರ್' ಪದ ತೃಪ್ತಿಯಾಗುವಂತೆ ಎಂದು ಅರ್ಥ ಹೊಮ್ಮಿಸುತ್ತದೆ. ಅದಕ್ಕೆ 'ಕಣ್ಣು ತುಂಬುವಂತೆ' ಎಂಬ ಇನ್ನೊಂದು ಅರ್ಥವೂ ಇದೆ.

'ಕಣ್ಣ ತುಂಬುವಂತೆ' ಪದ ಅಸುವನ್ನು ನೀಗುತ್ತೇನೆ ಎಂಬ ಧ್ವನ್ಯಾರ್ಥವನ್ನು ಒಳಗೊಂಡಿದೆ. ಈ ರೂಪಕದಲ್ಲಿ ದಶರಥನ ಪ್ರೀತಿ, ವೇದನೆ, ತಳಮಳ, ಮಾನಸಿಕ ವಿಕಾರದ ಹಲವು ಭಾವಗಳು ಹೆಪ್ಪುಗಟ್ಟಿವೆ.

ದಶರಥನು ಆತ್ಮಶೋಧಕ್ಕೆ ಒಳಗಾಗಿ ಮನುಜ ಲೋಕದ ದುರಂತಕ್ಕೆ ಅವನ ಪಂಚೇಂದ್ರಿಯಗಳೇ ಕಾರಣ ಎಂಬ ಅರಿವಿಗೆ ಬರುತ್ತಾನೆ. ಅಂಗೈಲಿರುವ ಕಣ್ಣುಗಳನ್ನು – ಪ್ರಿಯತಮೆ ಪಿಶಾಚಿನಿ ಕೈಕೆಗೆ ತೋರಿಸುತ್ತ ಹೇಳುತ್ತಾನೆ 'ಎಲ್ಲಕ್ಕೂ ಕಾರಣ ನಿನ್ನ ರೂಪು ಅಲ್ಲ, ನನ್ನ ಕಣ್ಣುಗಳು! ಈಗೆಲ್ಲಿ ಹೇಳು ನಿನ್ನ ರೂಪ ಪಾಪ!'

* * *

ಅಂತರಾತ್ಮವನ್ನು ಶುದ್ಧಿಗೊಳಿಸಿಕೊಳ್ಳುತ್ತ ಸಾಗಿದಂತೆ ದಶರಥನಿಗೆ ಹಠಾತ್ತನೆ ತನ್ನ ಯೌವನ ಕಾಲದಲ್ಲಿ ನಡೆದ ಒಂದು ಘಟನೆ ನೆನಪಾಗುತ್ತದೆ. ಅದನ್ನು ಹೀಗೆ ಪ್ರಕಟಪಡಿಸುತ್ತಾನೆ.

ಓ ಅಂಧತಾಪಸ, ನಿನ್ನ ಕಂದನಂ, ನೀರ್ ಕುಡಿವ
ಕೋಳ್ಮಿಗಂಗೆತ್ತು, ಕಣ್ಣರಿಯದಾ ಕಳ್ತಲೊಳ್,
ಶಬ್ದವೇಧೀ ಧನುರ್ವಿದ್ಯಾ ಪ್ರತಿಷ್ಠೆಯಿಂ
ಕೊಂದುದಕೆ, ವಿಧಿ ನನಗೆ ವಿಧಿಸಿಧೀ ಶಾಪಮಂ ಕಾಣ್! (1.5–62–65)

'ಓ ಅಂಧ ತಪಸ್ವಿಯೇ, ಕತ್ತಲಿನಲ್ಲಿ ನಿನ್ನ ಮಗ ಶ್ರವಣಕುಮಾರನನ್ನು ಕ್ರೂರವಾದ ಪ್ರಾಣಿ ಎಂದು ಭಾವಿಸಿದೆ. ನನ್ನ ಶಬ್ದವೇಧಿ ಧನುರ್ವಿದ್ಯೆಯ ಬಲದಿಂದ ಕೊಂದು ಬಿಟ್ಟೆ. ಅದಕ್ಕೆ ವಿಧಿ ವಿಧಿಸಿದ ಶಾಪವನ್ನು ನೋಡು'

ಆತನು ತನ್ನ ತಪ್ಪಿಗೆ ವಿಧಿ ಶಿಕ್ಷೆ ವಿಧಿಸಿದೆ ಇದಕ್ಕೆಲ್ಲಾ ತಾನೆ ಹೊಣೆ ಎಂದು ಶುದ್ಧಸತ್ವ (ಸತ್ವರಜಸ್ತಮೋಗುಣಗಳಿಗೆ ಅತೀತವಾಗಿ ಪ್ರಸನ್ನತೆ, ತೃಪ್ತಿ, ಅತಿಹರ್ಷ, ಬ್ರಾಹ್ಮೀಸ್ಥಿತಿ ಹೊಂದಿದ ಸತ್ವಗುಣ)ದಲ್ಲಿ ಒಂದಾಗುತ್ತಾನೆ.

ಇದೇನ್ ಶಾಂತಿ ತುಂಬುತಿಹುದೆನ್ನಾತ್ಮಮಂ?
ಮತ್ತಿದೇನ್ ಕಾಂತಿ? ಅಃ! ಬೆಳಕೆ, ನೀಂ ಕಣ್ ಕಿಡಲ್
ಕಣ್ದೆರೆವೆಯಲ್ತೆ? ಕುರುಡಿನ ಮಹಿಮೆ ಕುರುಡಂಗೆ
ಗೋಚರಂ! ಏಂ ದಿವ್ಯದರ್ಶನಂ! (1.5–66–69)

ಇದೇನು ಇಂತಹ ಶಾಂತಿ ನನ್ನ ಆತ್ಮವನ್ನು ತುಂಬುತ್ತಿದೆ? ಮತ್ತೆ ಇದೆಂತಹ ಕಾಂತಿ! ಅಃ ಬೆಳಕೆ ನೀನು ಕಣ್ಣು ಹಾಳಾದ ಮೇಲೆ ಕಣ್ ತೆರೆವೆಯಲ್ಲವೆ? ಓ ಹೊರಗಿನ ಅನಂತ ಬೆಳಕೆ ನನ್ನ ಒಳಗೆ ಹರಿ. ನನ್ನನ್ನು ಬೆಳಗಿಸು ಎಂದು ಹೇಳುತ್ತ ತನ್ನ ಒಳಗಣ್ಣಿನ ಬೆಳಕಿನಲ್ಲಿ ದಿವ್ಯದರ್ಶನವನ್ನು ಕಾಣುತ್ತಾನೆ. ಅನಂತ ಶಕ್ತ ತನ್ನ ಮಗ ರಾಮನಾಗಿ ಜನಿಸಿದುದಕ್ಕೆ ತನ್ನ ಜನ್ಮ ಸಾರ್ಥಕವಾಯಿತು ಎಂಬ ಭಾವದಲ್ಲಿ 'ನಿನಗಿದೊ ನಮಸ್ಕಾರಂ! ಧನ್ಯನಾದೆನ್ ದೇವ!' ಎಂದು ಪ್ರಕೃತಿ ಚೇತನದಲ್ಲಿ ಒಂದಾಗುತ್ತಾನೆ.

(ಪ್ರಜಾವಾಣಿ, ಭಾನುವಾರದ ಪುರವಣಿ, 29.7.2018)

❖❖❖

ಕವಿ ಕೃತಿಯುಮಾ ಬ್ರಹ್ಮ ಕೃತಿಯಂತೆ ಋತಚಿದ್ ವಿಲಾಸಂ

ಅನಾದಿಕವಿ ಪರಮ ಪುರುಷೋತ್ತಮನಾದ ಸರ್ವೇಶ್ವರನು ತನ್ನ ಲೀಲಾಲೋಕಗಳನ್ನು ಸೃಷ್ಟಿಸಿರುವ ಸಲುವಾಗಿ ಬೇರೆ ಬೇರೆಯ ವಿಶ್ವಕವಿಗಳನ್ನು ಬ್ರಹ್ಮರನ್ನು ನಿರ್ಮಿಸಿದ್ದಾನೆ. ಹಾಗೆಯೆ ನಮ್ಮ ಚತುರ್ಮುಖನಾದ ಜಗತ್ ಕರ್ತೃವು ತನ್ನ ಲೀಲೆಯ ಕಾವ್ಯಲೋಕದ ಬೃಹತ್ ಕೃತಿಗಳನ್ನು ರಚಿಸಲು ಈ ಪೃಥ್ವಿಯಲ್ಲಿ ಕವೀಂದ್ರರನ್ನು ಸೃಷ್ಟಿಸಿದ್ದಾನೆ.

ಕವಿದೃಷ್ಟಿಗೆ ಬ್ರಹ್ಮಸೃಷ್ಟಿಯಲ್ಲಿ ಇಹ–ಪರವೆಂಬ ಭೇದವಿಲ್ಲ. ಇಹವೆಂಬುದು ಅಥವಾ ಲೌಕಿಕವೆಂಬುದು ಅಸಲಿಗೆ ಪರದ, ಅವ್ಯಕ್ತದ, ಪರಮತತ್ವದ, ಅಧ್ಯಾತ್ಮ ಛಾಯೆಯಾಗಿದೆ. ಸಚ್ಚಿದಾನಂದ ಎಂಬುದು ಯಾವುದೋ ಪಾರಲೌಕಿಕ ಅನುಭವವಲ್ಲ. ಅದು ಬ್ರಹ್ಮಕೃತಿಯೊಳಗೇ (ಲೋಕದೊಳಗೇ) ವ್ಯಕ್ತಗೊಳ್ಳುತ್ತದೆ. ಅದೇ ಬಗೆಯಲ್ಲಿ ಬ್ರಹ್ಮ ಸೃಷ್ಟಿಯಂತೆಯೇ ಕವಿಸೃಷ್ಟಿ ಕೂಡ. ಕವಿಕರ್ಮವಾದ ಕಾವ್ಯಸತ್ತೆಯೊಳಗೆ (ಕಾವ್ಯಲೋಕದೊಳಗೆ) ಆತ್ಮರಸದ ಸತ್ಯವೂ ಪ್ರಕಟಗೊಳ್ಳುತ್ತದೆ. ಕವಿ ಅಥವಾ ರಸ ಋಷಿ ಪ್ರತಿಮಾ ವಿಧಾನದಿಂದ ಅನಿರ್ವಚನ ಬೋಧ್ಯವನ್ನು (ಅಂದರೆ ಜ್ಞಾನವನ್ನು), ಈ ಪೃಥ್ವೀ ತತ್ವದೊಳಗೆ ಹುದುಗಿರುವ ನುಡಿಯಲಾಗದ ವಿಷಯವನ್ನು ಸಹ ಸಂವೇದ್ಯವಾಗಿಸುತ್ತಾನೆ. ಆ ಮರ್ತ್ಯಪೃಥ್ವಿತತ್ವವು ಪ್ರತಿಭೆಯಿಂದಷ್ಟೇ ಸಂವೇದನೆಗೆ ನಿಲುಕುತ್ತದೆ.

ಉಪನಿಷತ್ತುಗಳ ಪ್ರಕಾರ ಬ್ರಹ್ಮಸತ್ತೆ (ಬ್ರಹ್ಮಾಂಡ) ನಮ್ಮ ಕಣ್ಣೆದುರಿನ ಲೋಕವಾಗಿದೆ. ಇನ್ನು ಅದಕ್ಕಿಂತಲೂ ಮಿಗಿಲಿನದ್ದಾದ ಪರಬ್ರಹ್ಮ ಸತ್ತೆ (ಪಿಂಡಾಂಡ) ನಮ್ಮ ಹೃದಯದೊಳಗೆ ನೆಲೆಸಿದೆ. ಈ ಹೃದಯದ ಕಣ್ಣಿಗೆ ಗೋಚರಿಸುವ ಬ್ರಹ್ಮಸತ್ತೆಯನ್ನು, ಅಂದರೆ ಕಣ್ಣೆದುರಿನ ಲೋಕವನ್ನು ಯಾರಾದರೂ ಮಿಥ್ಯೆ ಎನ್ನುವರೆ? ಹಾಗೆ ಮಿಥ್ಯೆ ಎಂದು ಕರೆದರೆ ಅದು ಪೂರ್ಣಸತ್ಯ ಎನಿಸುವುದೆ? ಅದು ಖಂಡಿತವಾಗಿ ಮಿಥ್ಯೆಯಲ್ಲ, ಪೂರ್ಣಸತ್ಯವಲ್ಲ. ಇಂತಹ ಮಾತನ್ನು ಯೋಗ

ವಿಜ್ಞಾನ ಒಪ್ಪುವುದಿಲ್ಲ. ಅದು ಪೂರ್ಣ; ಇದು ಪೂರ್ಣ; ಪೂರ್ಣದಿಂದ ಬಂದುದು ಈ ಪೂರ್ಣ. (1.1 ಸಾಲು 73, 74)

ಈ ಸಾಲುಗಳಲ್ಲಿ ಈಶಾವಾಸ್ಯ ಉಪನಿತ್ತಿನ ಮಂತ್ರದ ಛಾಯೆಯಿದೆ. ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ! ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥ ಓಂ ಶಾಂತಿಃ ಶಾಂತಿಃ ಶಾಂತಿಃ॥

ಕವಿಯ ಪ್ರಕಾರ ಪೂರ್ಣವೆಂಬುದು ಒಂದು ಏಕರೂಪದ ತತ್ವವಲ್ಲ. ಅದು ಸತ್ಯದ ಆವಿಷ್ಕಾರದ ನಾನಾ ವಿನ್ಯಾಸಗಳ ಸಮಗ್ರ ರೂಪವಾಗಿದೆ.

ಕವಿಯ ಪ್ರಕಾರ ಲೋಕವು ಮಿಥ್ಯೆಯಲ್ಲ. ಕಾವ್ಯಲೋಕವೂ ಮಿಥ್ಯೆಯಲ್ಲ. ಅನ್ಯ ಸತ್ಯದ ಪ್ರಮಾಣವನ್ನು ಬಳಸಿ ಕಾವ್ಯ ಸತ್ಯವನ್ನು ಶೋಧಿಸಲು ಹೊರಟರೆ ಅದು ಮಿಥ್ಯೆಯಾಗುತ್ತದೆ. ಒಂದು ಸರಳ ಉದಾಹರಣೆಯೊಂದಿಗೆ ಹೇಳುವುದಾದರೆ ಗಣಿತದ ಭಾಷೆಯಲ್ಲಿ ಕಾವ್ಯವನ್ನು ಅಥವಾ ಕಾವ್ಯದ ಭಾಷೆಯಲ್ಲಿ ಗಣಿತವನ್ನು ಅರ್ಥಮಾಡಿಕೊಳ್ಳಲಾಗದು.

ಅಲ್ಲಮಪ್ರಭು ಅಂತಹ ಮೂಢಪ್ರಯತ್ನವನ್ನು ಮಾರ್ಮಿಕವಾದ ರೂಪಕದಿಂದ ಹೀಗೆ ವಿಡಂಬಿಸಿದ್ದಾನೆ:

ಮನ ಬಸಿರಾದಡೆ ಕೈ ಬೆಸಲಾಯಿತ್ತ ಕಂಡೆ!
ಕರ್ಪುರದ ಕಂಪ ಕಿವಿ ಕುಡಿಯಿತ್ತ ಕಂಡೆ!
ಮುತ್ತಿನ ಥಾಳವ ಮೂಗು ನುಂಗಿತ್ತ ಕಂಡೆ!
ಕಂಗಳು ಹಸಿದು ವಜ್ರವ ನುಂಗಿತ್ತ ಕಂಡೆ!
ಒಂದು ನೀಲದೊಳಗೆ ಮೂರುಲೋಕವಡಗಿತ್ತ ಕಂಡೆ !

ಕವಿ ಕೃತಿಯೂ ಸಹ ಆ ಬ್ರಹ್ಮನ ಕೃತಿಯ ಸ್ವರೂಪದ್ದೇ ಆಗಿದೆ. ಋತ (ಚಂಚಲವಾದ ಈ ಲೋಕವನ್ನು ಆಳುತ್ತಿರುವ ನಿಶ್ಚಲ ನಿಯಮ ಸತ್ಯ ಧರ್ಮಗಳ) ಚಿದ್ವಿಲಾಸವಾಗಿದೆ. ಕಾವ್ಯಲೋಕವೂ ಪ್ರಕೃತಿಲೋಕದ ಹಾಗೆಯೇ ಬಹುತ್ವ ಇರುವಂಥದ್ದು. ಅದು ಕಲ್ಪನೆಯಲ್ಲ, ಭ್ರಮೆಯಲ್ಲ; ಪ್ರಕೃತಿ ಲೋಕದಷ್ಟೇ ಬೆಳಕಿನಿಂದ ಕೂಡಿದುದು. ನಿಜವಾದ ಸೂರ್ಯನ ಬೆಳಕಿನ ರಸಲೋಕದ ಕಿರಣವಾಗಿದೆ.

ನಾವು ಜನ್ಮ ತಳೆದು ಈ ಭೂಮಿಯ ಮೇಲೆ ಹುಟ್ಟಿ ಬ್ರಹ್ಮನ ಈ ಲೋಕದ ವಿಭವಗಳನ್ನು ಅನುಭವಿಸುವ ಹಾಗೆ, ಉಣ್ಣುವ ಹಾಗೆ, ಕಾಣುವ

ಹಾಗೆ ಕಾವ್ಯ ಪ್ರತಿಭೆಯೊಳಗೂ ಕವಿಯಾದವನು ಜನ್ಮ ತಳೆಯಬೇಕಾಗುತ್ತದೆ. ಕಾವ್ಯಲೋಕದ ಭೂಮಿಯ ಮೇಲೆ ಹುಟ್ಟಬೇಕಾಗುತ್ತದೆ. ಕಾವ್ಯ ಲೋಕದ ವಿಕಲ್ಪಗಳನ್ನು ಅನುಭವಿಸಬೇಕಾಗುತ್ತದೆ. ಕಾವ್ಯಲೋಕದೊಳಗೆ ಹೊಕ್ಕು ಅದನ್ನು ಯಥಾರ್ಥವಾಗಿ ಕಾಣಬೇಕಾಗುತ್ತದೆ. ಏಕೆಂದರೆ ಕುವೆಂಪು ಪ್ರಕಾರ ಕಾವ್ಯಸೃಷ್ಟಿ ಅಸಲಿಗೆ ಬ್ರಹ್ಮ ಹೃದಯದಲ್ಲಿ ಜನಿಸಿದ ಲೋಕವೇ ಆಗಿದೆ. ಅದು ಕವಿ ತನ್ನ ಕಲ್ಪನೆಯೊಳಗೆ ಮೂಡಿಸಿಕೊಂಡುದಲ್ಲ, ಬ್ರಹ್ಮ ತನ್ನ ಸೃಷ್ಟಿಯನ್ನು ಭಾಷೆಯಲ್ಲಿ ಮರುಸೃಷ್ಟಿ ಮಾಡುವ ಅವಕಾಶವನ್ನು ಕವಿಗೆ ನೀಡುತ್ತಾನೆ ಅಷ್ಟೇ. ಹೀಗೆ ಬ್ರಹ್ಮ ಸೃಷ್ಟಿಯನ್ನು ಯಥಾರ್ಥವಾಗಿ ಅರಿಯಲು ಕಾವ್ಯಪ್ರತಿಭೆ ಕವಿಗೆ ಹೊಸ ಕಣ್ಣುಗಳನ್ನು ದಯಪಾಲಿಸುತ್ತದೆ (ಕೃತಿ ನೇತ್ರ ಪಥದಿಂ). ಆ ಕಾವ್ಯದ ಕಣ್ಣು ಕಾಣಿಸುವ ಹಾದಿ ಹಿಡಿದು ಕವಿಯ ಮನಸ್ಸು ಲೋಕದ ಋತಕಲ್ಪನೆಯ ಸ್ವರೂಪವನ್ನು ಭಾವಗಮ್ಯವಾದ ನಿತ್ಯಸತ್ಯವನ್ನು ಕಾಣುತ್ತಾನೆ.

ಕುವೆಂಪು ಅವರು ತನ್ನ ಪಯಣದ ದಾರಿ ಮತ್ತು ಗುರಿಯನ್ನು ಹೀಗೆ ಹೇಳುತ್ತಿದ್ದಾರೆ: ನಾನು ವಾಗ್ದೇವಿಯ ಅಮೃತ ವಾರಿಧಿಯಲ್ಲಿ ರಾಮನ ಹೆಸರಿನ ನಾವೆಯನ್ನು ಏರುತ್ತಿದ್ದೇನೆ. ರಾಮನ ಕಥೆಯ ಜೇನಿನ ಹೊಳೆಯ ಪಥ ಹಿಡಿದು, ಮಹಾ ಛಂದಸ್ಸಿನ ತರಂಗ ವಿನ್ಯಾಸದಲ್ಲಿ ಸಾಗಿ ಗುರುಕೃಪೆಯಿಂದ ರಾಮಕಥೆ ಎಂಬ ಈ ಲೌಕಿಕ ನಾವೆ ಹಿಡಿದು ಅಲೌಕಿಕ ಋತಚಿದ್ ರಸಾಬ್ಧಿಯನ್ನು ಸೇರುವ ಕ್ರತುವನ್ನು ಅಂದರೆ 'ನಾನು ಈ ಕೆಲಸವನ್ನು ಮಾಡುತ್ತೇನೆ ಎಂಬ ಇಚ್ಛಾಶಕ್ತಿಯನ್ನು, ಸಂಕಲ್ಪವನ್ನು ಹೊಂದಿದ್ದೇನೆ.

ಏರುವೆನು ವಾಗ್ದೇವಿಯಮೃತರಸನೆಯ ಲಸನ್
ನಾವೆಯಂ. ರಾಮನ ಕಥೆಯ ಮಧು ಧುನೀ ಪಥಂ
ಪಿಡಿದಾಂ ಮಹಾ ಛಂದಸ್ ತರಂಗ ವಿನ್ಯಾಸದಿಂ
ಸೇರುವೆನು ಗುರುಕೃಪೆಯೊಳಾ ಋತಚಿದ್ ರಸಾಬ್ಧಿಯಂ.(1.1–87–90)

ಗೂಡಿನಲ್ಲಿ ಹುಟ್ಟಿ ಬೆಳೆದು, ಕಾಡಿನಲ್ಲಿ ಹಾರಾಡಿದ ಗರುಡ ಮರಿಯು ಗರಿ ಬಲಿತ ಮೇಲೆ ಸಣ್ಣ ಪುಟ್ಟ ಪ್ರದೇಶಗಳನ್ನು ಸಂಚರಿಸಿ ತೃಪ್ತಿ ಪಡೆಯುತ್ತದೆಯೆ? ಇಲ್ಲ. ಅದು ಆಗಸದ ವಿಶಾಲ ವಿಸ್ತೀರ್ಣವನ್ನು ಬಯಸಿ ಆಕಾಶ ಪರ್ಯಟನವನ್ನು ಕೈಗೊಳ್ಳುತ್ತದೆ. ಕಿರುಮೀನಿಗೆ ಕೆರೆ, ಕೊಳ, ಹೊಳೆ ಸಾಕಾಗುವುದು. ಆದರೆ ತಿಮಿಂಗಲದ ಜಲಕ್ರೀಡೆಗೆ ವಿಸ್ತಾರವೂ ವಿಶಾಲವೂ ಆದ ಸಮುದ್ರವೇ ಬೇಕು. ನಿನ್ನ ರಾಮಾಯಣವು ಆಗಸ, ಸಾಗರಗಳಿಗೆ ಸಮನಾದುದು. ಓ ವಾಲ್ಮೀಕಿ

ಗುರುವೆ, ರಸ ಋಷಿಯೆ ಅದನ್ನು ದಾಟಲು ನನಗೆ ಗರುಡನ ವಜ್ರಶಕ್ತಿಯನ್ನು ದಯಪಾಲಿಸು.

(ಸೋಮನಾಥನಂದ, ಉಪನಿಷತ್ ಭಾವಧಾರೆ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು. ಪುಟ 549 ಕ್ರತು = ಯಾಗ; ಯಜ್ಞ; ಸಂಕಲ್ಪ, ಧ್ಯಾನ; ಧ್ಯೇಯ.)

❖❖❖

ರಾಮಸೀತೆಯರ ನವದಾಂಪತ್ಯ ಸವಿ

ಭಾರತೀಯ ಪೌರಾಣಿಕ ಪರಂಪರೆಯಲ್ಲಿ ಅನಾದಿ ಪ್ರಣಯದ ದೇವತೆಗಳು ರತಿ, ಮನ್ಮಥ. ಅವರಿಂದ ಪ್ರಾರಂಭವಾದ ನಿಸರ್ಗ ಸಹಜ ಸೃಷ್ಟಿಕ್ರಿಯೆ ಜಗದ ಹೆಣ್ಣು ಗಂಡುಗಳಲ್ಲಿ ನಿರಂತರವಾಗಿ ಸಾಗುತ್ತ ಅದರ ಅನಂತತೆಯನ್ನು ಸಾರುತ್ತಿದೆ. ಆ ಶೃಂಗಾರ ಭಾವ ಲಲಿತ ಆಕರ್ಷಕ ಮನೋಹರ. ಅದು ಕೋಮಲ ವಿನೋದಮಯ ಚೆಲುವು. ಆ ರತಿಯನ್ನು ಕುವೆಂಪು 'ಲಲಿತೆ' ಎಂದು ಕರೆದಿದ್ದಾರೆ.

ಲಲಿತೆ, ಓ ಮದನಮೋಹಿನಿ ರತಿಯೆ,
ನಿನ್ನಾದಿ ತಾರುಣ್ಯ ಕಾಲದಾರಂಭಮಂ
ಪೊಸಕೆಂದು ಪೊಸವೊಲ್ಮೆವೇಟಂ ತಗುಳ್ದಂದು
ನೀಂ ಮದನನಧರಕ್ಕೆ ಮುತ್ತೊತ್ತಿದಾ ಇಂಪೆ
ತಾನಾವಗಂ ಮರಳಿ ಮರಳಿ ಮಲರುತೆ ಚಿರಂ
ಸೊಗವೀವುದಲ್ತೆ ನವ ನಿಖಿಲ ದಂಪತಿಗಳ್ಗೆ? (1.3–3–8)

ಲಲಿತೆ, ಓ ಮದನ ಮೋಹಿನಿರತಿಯೆ, ನಿನ್ನ ನವ ತಾರುಣ್ಯದ ಆರಂಭದಲ್ಲಿ – ನವನವೀನ ಒಲುಮೆಯ ಕೂಟದಲ್ಲಿ ನಲಿದೆ. ಆಗ ನೀನು ಮದನನ ತುಟಿಗೆ ಒತ್ತಿದ ಇಂಪು/ಮಾಧುರ್ಯವು ಆನಂದದ ಹೂ ಆಯಿತು. ಅದು ಮರಳಿ ಮರಳಿ ಅರಳುತ್ತ ಜಗದ ಎಲ್ಲ ನವ ದಂಪತಿಗಳಿಗೆ ಹಿತವನ್ನುಂಟು ಮಾಡಿ ಹಿಗ್ಗಿಸುತ್ತಿದೆ. ಆ ಹಿಗ್ಗಿನ ಬಿರಿಯಲ್ಲಿ ದಾಂಪತ್ಯ ಸವಿಯ ಕಂಪನ್ನು ಆಸ್ವಾದಿಸುವಂತೆ ಮಾಡುತ್ತಿದೆ.

ಪೆಣ್ಣೊಲಿದ ನಲ್ಲನಿರೆ, ಗಂಡೊಲಿದ ನಲ್ಲೆಯಿರೆ,
ಸಿರಿಬಾಳ್ತೆ ಸಿಂಗಾರ ಸೊಗಕೆ ಹೊಯಿಕೈಯಿಹುದೆ ಪೇಳ್
ಬದುಕಿನಲಿ?(1.3–1–3)

ಹೆಣ್ಣು ಪ್ರೀತಿಸಿದ ನಲ್ಲ. ನಲ್ಲನನ್ನು ಪ್ರೀತಿಸಿದ ನಲ್ಲೆಯಿರುವ ಬದುಕೆ ಶ್ರೀಮಂತವಾದುದು. ಆ ಶೃಂಗಾರ ಸೊಗಸಿಗೆ ಸಮನಾದುದು ಬೇರೆಯಿಲ್ಲ.

ಅಂತಹ ರಸಿಕಾಲಂಕಾರದ ಅನುರಾಗ ದೀಪ್ತಿಯಲ್ಲಿ ಒಂದಾದ ನವ ವಧುವರರು ಶ್ರೀರಾಮ ಸೀತೆ. ಅವರ ನಲಿವನ್ನು 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಕುವೆಂಪು ಅವರು ನವಿರಾಗಿ ಬಣ್ಣಿಸಿದ್ದಾರೆ.

ಸೀತೆಯು ಶ್ರೀರಾಮನಿಗೆ ಬೆಳದಿಂಗಳಿಗೆ ತೇನೆ ಹಕ್ಕಿ ಒಲಿಯುವಂತೆ ಒಲಿದು ಒನೆದಾಡಿ ಮೈಮರೆತಳು. ನಲಿನಲಿದು ತನ್ನದೆಲ್ಲವನ್ನು ರಮಣನ ಆನಂದಕ್ಕೆ ನೈವೇದ್ಯವಾಗಿ ನೀಡಿದಳು. ಅದು 'ತನ್ನ ತನವನೆ ಸೂನ್ನೆ ಮಾಡಿ'ಕೊಂಡ ದಾಂಪತ್ಯಾನುಭವ. ಅದು ತಾನು ಒಲಿದವನಿಗೆ, ಪ್ರಾಣೇಶ್ವರನಿಗೆ, ಇಷ್ಟಮೂರ್ತಿಗೆ ಪ್ರಾಣವನ್ನು ಅರ್ಪಿಸುವ ಸೊಗಸು. ಅದಕ್ಕಿಂತ ಸ್ವರ್ಗ ಬೇರಿಲ್ಲ. ಜನಕಜಾತೆಯು ಶ್ರೀರಾಮನ ಪ್ರೇಮದಲ್ಲಿ ಜೀವನದ ಪರಮ ಪುರುಷಾರ್ಥವನ್ನು, ಅಖಿಲ ಸೃಷ್ಟಿಲೀಲೆಯ ಮಹೋದ್ದೇಶವನ್ನು ಕಂಡಳು. ಆ ಪ್ರೇಮ ರಸಾಸ್ವಾದನೆಯನ್ನು ಕವಿ ಹೀಗೆ ಬಣ್ಣಿಸಿದ್ದಾರೆ 'ಬರಿದಲಾ ಪ್ರಕೃತಿ ಸೌಂದರ್ಯಮಿನಿಯನ ಚೆಲ್ವುವೆರಸದಿರ್ಪಾ ಪೆಣ್ಗೆ!'

ಇನಿಯನ ಚೆಲುವು ಬೆರೆಯದಿರುವ ಪ್ರಕೃತಿ ಸೌಂದರ್ಯ ಅವಳಿಗೆ ಬರಿದಾಗಿ ಕಾಣುತ್ತದೆ. ಅವಳಿಗೆ ಪ್ರಕೃತಿ ಬೇರೆಯಲ್ಲ, ತನ್ನ ನಲ್ಲ ಬೇರೆಯಲ್ಲ. ಅದು ಅವನೇ ನಿಸರ್ಗ ಎಂಬ ಭಾವದರಿವಿನ ದರ್ಶನ.

ವೈದೇಹಿಗೆ ತನ್ನ ಪತಿಯ ಮುಖಸರೋವರದಲ್ಲಿ ಪ್ರತಿದಿನ ತಾವರೆ ಅರಳುತ್ತಿತ್ತು. ಅದರ ದಳಗಳ ನಡುವೆ ಮೀನುಗಳು ಚಲಿಸುತ್ತಿದ್ದವು. ಮೂರು ಲೋಕದ ಸೌಂದರ್ಯಕ್ಕೆ ತನ್ನ ನಲ್ಲನ ಮುಖವೇ ಕನ್ನಡಿಯಾಗಿತ್ತು. ಸೀತೆ ಆ ರೀತಿ ಪ್ರೇಮಾಸ್ವಾದದಲ್ಲಿರಲು ಶ್ರೀರಾಮನು ಅವಳ ಜೀವ ದೀವಿಗೆಗೆ ಎಣ್ಣೆಯೂ, ಕಾಂತಿಯೂ ಆಗಿದ್ದನು. ಚೆಲುವಾಗಿ ಅರಳಿ ಮಕರಂದ ತುಂಬಿದ ಹೂವಿನಂತಿದ್ದ ಅವಳನ್ನು ತನ್ನ ತುಟಿಯಿಂದ ಹೀರಿ ತನ್ನಾತ್ಮ ತೃಷೆಯನ್ನು ಹಿಂಗಿಸಿಕೊಂಡನು. ಶೃಂಗಾರಸಾರ ಸಂಪೂರ್ಣೆಯನ್ನು ಕಣ್ಣು ಮಿಟುಕಿಸದೆ ದೃಷ್ಟಿಸಿದನು– 'ಸೌಂದರ್ಯ ಸುಖದಿಂ ಸಮಾಧಿ ದೊರೆಕೊಂಡನೋಲ್!'

ಶ್ರೀರಾಮನು ಅವಳ ದನಿಯನ್ನು ಕೇಳಿ ಸವಿಯುವನು. ಅವಳ ಎದೆ ಮೈ ಸ್ಪರ್ಶಕ್ಕೆ ರೋಮಾಂಚನಗೊಂಡು ಮೈ ಮರೆಯುವನು. ಅವಳ ಕಾಲ್ಗೆಜ್ಜೆ, ಅಂದುಗೆ, ಬಳೆ, ಹೊನ್ನ ಒಡವೆಗಳ ಕಿಂಕಿಣಿನಾದಕ್ಕೆ ಚಾತಕ ಪಕ್ಷಿಯು ಮಳೆಗೆ ಕಾಯುವಂತೆ, ಆ ದನಿಯನ್ನು ಮತ್ತೆ ಮತ್ತೆ ಕೇಳಲು ಆಸೆಪಟ್ಟು ನಿರೀಕ್ಷಿಸುವನು. ಅವನು

ಸೀತೆಯ ಪವಿತ್ರ ಆತ್ಮವನ್ನು ಪ್ರೀತಿಸಿದ ರೀತಿಯಲ್ಲಿಯೆ, ಅವಳ ಸುಂದರ ಶರೀರವನ್ನು ಪ್ರೀತಿಸಿದನು. ಅದು ದೇಹ ಆತ್ಮ ಭೇದವನ್ನು ಇಲ್ಲವಾಗಿಸಿದ ರಸದೃಷ್ಟಿಯಾಗಿತ್ತು.

ಒಂದು ಕಾಯಕ್ಕೆ ಎರಡು ಕಣ್ಣುಗಳು ಇರುವಂತೆ ಸೀತಾರಾಮರಲ್ಲಿ ದ್ವೈತವು ಅದ್ವೈತವಾಗಿತ್ತು. ಕಣ್ಣುಗಳು ಎರಡಾದರು ದೃಷ್ಟಿ ಒಂದೇ ಅಲ್ಲವೆ! ಶರೀರಗಳು ಎರಡಾದರೂ ಬಾಳು ಒಂದೇ ಆಗಿತ್ತು.

'ಕಣ್ಗಳೆರಡಾದರೇನೊಂದಲ್ತೆ ಪೇಳ್
ದೃಷ್ಟಿ ತಾಂ? ಮೆಯ್ಗಳೆರಡಾದಡೇನೊಲಿದರ್ಗೆ
ಬಾಳ್ವೆಯೊಂದಲ್ತೆ?' (1.3–51,52)

ಈ ದಾಂಪತ್ಯದ ಅರಿವು ಗಂಡು ಹೆಣ್ಣಿನಲ್ಲಿ ಉಂಟಾದಾಗ ಈ ನೆಲದಲ್ಲಿ ಕೆಲವು ವರ್ಷವಿದ್ದು ಇಲ್ಲವಾಗುವ ನಮ್ಮ ಬದುಕಿಗೆ ಸುಖ, ಶಾಂತಿ, ನೆಮ್ಮದಿ ಒದಗುತ್ತದೆ. ಇಂದಿನ ತರುಣ ದಂಪತಿಗಳ ಅಹಮಿಕೆಯ '96' ರ ವಿರಸ ವರ್ತನೆ ಇಲ್ಲವಾಗಲಿ. '69' ರ ಒಂದಾಗುವ ರಸಭಾವ ಶ್ರೀರಾಮ ಸೀತೆಯರ ಆದರ್ಶದಲ್ಲಿ ಅರಳಲಿ. ಆ ಕಂಪು ಇತರರಿಗೆ ಆಹ್ಲಾದಮಯವಾಗಲಿ.

❖❖❖

ಪುರುಷಕಾರಮೆ ಬಿದಿಗೆ ಬಾಳುಸಿರ್

ತಾಯಿ ಕೌಸಲ್ಯೆಯು ರಾಮನಿಗೆ 'ದಾಶರಥಿಯೇ, ಹೆತ್ತತಾಯಿಯನ್ನೆ ತೊತ್ತಾಗಿಸಿ, ಧರ್ಮಬುತ್ತಿಯನ್ನು ಕಟ್ಟುತ್ತಿರುವೆ. ಅದನ್ನು ಕಾಡಿಗೆ ಹೊತ್ತೊಯ್ದು ಉಣ್ಣುವ ಬುದ್ಧಿಯನ್ನು ಬಿಡು. ಕಿರಿ ಹೆಂಡತಿಗೆ ಮಾರುಹೋದ ನಿನ್ನ ತಂದೆಯನ್ನು ತಿದ್ದು. ಕುಲದ ಬಾಳನ್ನು, ಕೀರ್ತಿಯನ್ನು ಕಾಪಾಡು! ನೀನು ಕಾಡಿಗೆ ಹೋದರೆ, ಕರುವಿನ ಜೊತೆಗೆ ಹಸು ಬರುವಂತೆ ನಾನು ಕಾಡಿಗೆ ಬರುತ್ತೇನೆ.' ಎಂದು ಹೇಳುವಳು.

ಹತ್ತಿರದಲ್ಲಿ ನಿಂತಿದ್ದ ಲಕ್ಷ್ಮಣನು ದೊಡ್ಡಮ್ಮ ಹೇಳಿದುದನ್ನು ಸಮ್ಮತಿಸುತ್ತಾನೆ. 'ರಾಮ ಕಾಡಿಗೆ ಹೋಗುವುದೇಕೆ? ಧರ್ಮವಿಲ್ಲದ ನೀಚ ನೃಪನನ್ನು ಪ್ರಜಾಶಕ್ತಿ ಸಂಹರಿಸುವಂತೆ, ನಾಚಿಕೆ ಇಲ್ಲದ ತಂದೆ ಕೊಲೆಗೆ ಅರ್ಹ.' ಎಂದು ವಾದಿಸುತ್ತಾನೆ. ಅದಕ್ಕೆ ಉತ್ತರವಾಗಿ ರಾಮನು 'ನನಗೆ ಧರ್ಮ ಬಿಟ್ಟು ಬೇರೆ ಸಂಪತ್ತಿಲ್ಲ. ಧರ್ಮಸಹಿತವಾದ ಕಾಡೇ ಅರಮನೆ. ಧರ್ಮರಹಿತವಾದ ಈ ರತ್ನಮಯ ರಾಜಸೌಧ ಸ್ಮಶಾನಕ್ಕಿಂತ ಹೆಚ್ಚು ಭೀಕರ. ಆಂತರ್ಯ ತಿಳಿಯದೆ ತಂದೆಯನ್ನು ಬಯ್ಯಬಾರದು. ಲೇಸನ್ನುಂಟು ಮಾಡುವ ವಿಧಿಗೆ ಅದನ್ನು ಪಡೆಯಲು ಹಲವು ಮಾರ್ಗಗಳುಂಟು. ಇಂದಿನ ಅನಿಷ್ಟವೇ ಮುಂದಿನ ಅಭ್ಯುದಯದ ಶಿಶುವಿಗೆ ತೊಟ್ಟಿಲಾಗುವುದಿಲ್ಲವೆ?' ಎಂದು ಹೇಳುತ್ತಾನೆ.

ಜೊತೆಗೆ 'ನನಗೆ ಪ್ರತಿನಿತ್ಯ ಒಂದು ಕನಸು ಕಾಡಿಗೆ ಕರೆಯುತ್ತಿದೆ. ದಕ್ಷಿಣ ದಿಕ್ಕಿಗೆ ಕೈ ಬೀಸಿ ಕರೆಯುತ್ತಿದೆ. ನನ್ನ ಆತ್ಮ ಆ ಕಡೆಗೆ ತುಡಿಯುತ್ತಿದೆ. ದೈವವನ್ನು ಮೀರುವವರಾರು?' ಎಂದು ತಿಳಿಸುತ್ತಾನೆ.

ಹಾಗೆ ಮಾತನಾಡುತ್ತಿದ್ದ ಅಣ್ಣನನ್ನು ತಡೆದು, ತನ್ನ ಮದ್ದಾನೆ ಸೊಂಡಿಲಿನಂತಹ ತೋಳನ್ನು ತೂಗುತ್ತ ಲಕ್ಷ್ಮಣ ಹೀಗೆ ನುಡಿಯುತ್ತಾನೆ:

'ಕನಸಿನ ಮತ್ತು ದೈವದ ಈ ಭ್ರಾಂತಿಯನ್ನು ಸಾಕುಮಾಡು. ನೀನು ವೀರ ರಘುಕುಲದವನು. ವಿಧಿ ಬರೆದ ಬರೆಹವನ್ನು ಒರಸಿ ಮತ್ತೆ ಬರೆಯುವ

ವೀರನಾಗಿರುವವ ನೀನು ಹೀಗೆ ಮಾಡಿದರೆ ಅದು ನಗೆಗೀಡಾಗುತ್ತದೆ. ಸೋಲು ಹೇಡಿಗಳಿಗೆ ಉಚಿತವಾದುದು. ಧೀರರಿಗೆ ಅಲ್ಲ. ಮನುಷ್ಯ ಪ್ರಯತ್ನ ಮತ್ತು ಸಾಹಸವೆ ವಿಧಿಗೆ ಬಾಳಿನ ಉಸಿರು. ಶೌರ್ಯವಿರಲು ಜಿಪುಣ ವಿಧಿ ಮುಕ್ತ ಹಸ್ತನಾಗಿ ಬೇಡಿದ್ದನ್ನು ಕೊಡುವನು.'

ಎಂದು ಮನುಷ್ಯ ಪ್ರಯತ್ನವನ್ನು ಅದರ ಸಾರ್ಥಕತೆಯನ್ನು ತಿಳಿಸುವನು.

ಕುವೆಂಪು ಅವರ ದೈವ, ಕನಸು, ವಿಧಿಗಳನ್ನು ಎದುರಿಸಿ ಮುನ್ನಡೆಯುವುದು ಮನುಷ್ಯನಿಂದ ಸಾಧ್ಯ. ವಿಧಿಯ ಬಾಳಿನ ಉಸಿರಾಗಿರುವುದು ಮನುಷ್ಯ ಸಾಹಸ. ಅವನ ಪ್ರಯತ್ನ ಸಾಹಸಕ್ಕೆ ಪ್ರತಿಫಲವಾಗಿ ಜಿಪುಣ ವಿಧಿ ತಕ್ಕ ಫಲವನ್ನು ಕೈ ತೆರೆದು ನೀಡುವನು ಎಂಬ ಚಿಂತನೆಯನ್ನು ಈ ಕಾವ್ಯದಲ್ಲಿ ಪ್ರಕಟ ಪಡಿಸಿದ್ದಾರೆ.

❖❖❖

ಮಹೋಪಮೆ

ಕುವೆಂಪು ಅವರು ಮಿಲ್ಟನ್, ಡಾಂಟೆ, ವರ್ಜಿಲ್‌ರ ಮಹಾಕಾವ್ಯಗಳನ್ನು, ಮ್ಯಾಥ್ಯೂ ಆರ್ನಾಲ್ಡ್‌ರ ಕಥನ ಕಾವ್ಯವನ್ನು ಚೆನ್ನಾಗಿ ಅಧ್ಯಯನ ಮಾಡಿದ್ದರು. ಪುರಾಣಕವಿ ಹೋಮರನು ತನ್ನ ಕಾವ್ಯದಲ್ಲಿ ಮೊಟ್ಟಮೊದಲಿಗೆ ಮಹೋಪಮೆಗಳನ್ನು ಪ್ರಯೋಗಿಸಿರುವುದನ್ನು ತಿಳಿದರು. ಅದನ್ನು 'ಹೋಮರೋಪಮೆ' ಎಂದು ಕರೆಯುವರು. ಅಂತಹ ಮಹೋಪಮೆಯ ಪ್ರಯೋಗ ನಮ್ಮ ಭಾರತೀಯ ಕಾವ್ಯಗಳಲ್ಲಿ ಇಲ್ಲ. ಕುವೆಂಪು ಅವರು ಮೊಟ್ಟಮೊದಲಿಗೆ ಮಹೋಪಮೆಯನ್ನು 'ಚಿತ್ರಾಂಗದಾ' ಕಾವ್ಯದಲ್ಲಿ ಪ್ರಯೋಗಕ್ಕೆ ತಂದರು. ಅದನ್ನು 'ಶ್ರೀರಾಮಾಯಣ ದರ್ಶನಂ ಮಹಾಕಾವ್ಯ'ದಲ್ಲಿ ವಿಪುಲವಾಗಿ ಬಳಸಿದರು.

ಅವರೇ ಹೇಳುವಂತೆ 'ಮಹೋಪಮೆ ಎಂದರೆ ಮಹಾ ಉಪಮೆ. ಮಹಾ ಎಂದರೆ ದೀರ್ಘ ಎಂದಷ್ಟೇ ಅರ್ಥವಾಗದಿದ್ದರೂ ದೀರ್ಘತೆಯೂ ಅದಕ್ಕೊಂದು ಅನಿವಾರ್ಯವಾದ ಆತ್ಮಲಕ್ಷಣ... ಮಹಾಕಾವ್ಯಗಳಿಗೆ ಮಾತ್ರ ಮಹೋಪಮೆ ಒಪ್ಪುತ್ತದೆ... ಮಹೋಪಮೆಯಲ್ಲಿ ಪರಿಣಾಮ ರಮಣಿಯತೆಯೇ ಅಗ್ರಗಣ್ಯಫಲ ಮತ್ತು ಪರಮಗಮ್ಯ... ಪಾಶ್ಚಾತ್ಯರಲ್ಲಿ ಮಹೋಪಮೆ ಒಂದು ವಿಶೇಷ ಕಲೆಯಾಗಿ ಪರಿಣಮಿಸಿದೆ... ನಮ್ಮ ಕಾವ್ಯದೇವಿಗೆ ಪಾಶ್ಚಾತ್ಯ ಕಾವ್ಯದೇವಿಯತ್ತ ಹೊಸ ಕಾಣಿಕೆ – 'ಮಹೋಪಮೆ.'

ಶ್ರೀರಾಮನು ತಂದೆ ದಶರಥನು ಕಿರಿಯ ಹೆಂಡತಿ ಕೈಕೆಗೆ ನೀಡಿದ ಮಾತಿನಂತೆ ನಡೆದುಕೊಳ್ಳಲು – ಸೀತೆ ಲಕ್ಷ್ಮಣರೊಂದಿಗೆ ಅರಣ್ಯಕ್ಕೆ ನಡೆದನು. ಆಗ ರಾಜ ದಶರಥನು ಮತಿಭ್ರಮಣೆಗೆ ಒಳಗಾದನು. ಆಗಿನ ಅವನ ಸ್ಥಿತಿಯನ್ನು ಕುವೆಂಪು ಅವರು ಒಂದು ಮಹೋಪಮೆಯಲ್ಲಿ ಹೀಗೆ ವರ್ಣಿಸಿದ್ದಾರೆ:

---

(1) ಕುವೆಂಪು ಸಮಗ್ರ ಗದ್ಯ ಸಂಪುಟ 1, ಮಹೋಪಮೆ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ (ರಿ), ಕುಪ್ಪಳ್ಳಿ 2013, ಪುಟ 201 ರಿಂದ 213.

ದವದ ದಳ್ಳುರಿ ದಹಿಸೆ ಬಿರುಬೇಸಗೆಯ ಮಲೆಯ
ನೀರಸಾರಣ್ಯಮಂ, ಬೆಂಕಿಯ ಬೇಲಿ ಬಳಸಿ
ಬರೆ, ಕಿಚ್ಚುಗೋಂಟೆಯ ನಡುವೆ ಸಿಲ್ಕಿದೊಂದಾನೆ
ಮುಪ್ಪಿನಿಂದೋಡಲಾರದೆ ಹಿಂಡುದಪ್ಪುತ್ತೆ
ಘೀಂಕರಿಪುದೊರಲಿ ದಾವಾಗ್ನಿ ಸುತ್ತಿಂದೊತ್ತಿ
ಮುತ್ತುವುದು, ತುತ್ತುಗೊಳ್ವಾತುರದಿ ಧಾವಿಸುವ
ಮಿತ್ತು ನೆತ್ತರ್ ನಾಲಗೆಯ ಸೇನೆಯಂತೆ. ಆ
ಗಂಭೀರ ದಿಗ್ದಂತಿ, ತೊರೆದು ಗಾಂಭೀರ್ಯಮಂ,
ತರಳ ಚಂಚಲ ಚಿತ್ತದಿಂ ಬೀದಿವರಿವುದಯ್
ದೆಸೆದೆಸೆಗೆ, ಬಟ್ಟೆದೋರದಿರೆ, ಕವಿದಪುದು ಪೊಗೆ
ಕೆಟ್ಟಾಸೆಗತ್ತಲೋಲ್. ಮತ್ತೊಂದು ಮತ್ತೇಭದೊಲ್
ಭೀಮ ಧೂಮಸ್ತೋಮಮರೆಬಂಡೆ ಪಾಂಗುರುಳಿ
ಮೇಲ್ವಾಯೆ, ಮಲೆದೊಂದು ಮದಕರಿಗೆ ಕಾಳೆಗಂ
ಗೊಟ್ಟು ಮಾರ್ ಮಲೆವಂತೆ ವೋಲ್ ಸೆಣಸಿ ಸೋಲ್ತುಸಿರಾರಿ
ಬೀಳುತಿರೆ, ಹೊಗೆಯಾನೆಯಿಂದಾಗುವ ಮಿಂಚಿಂದೆ
ಸಮೆದ ಮೊನೆಯಿೀಟಿ ದಂತಗಳಂತೆ ಕೇಸುರಿಯ
ಜ್ವಾಲಾ ಕಠಾರಿಗಳ್ ತಿವಿಯೆ ಮೈಚರ್ಮಮಂ,
ಮರಸೊಂದುವುದು ವಾರಣಂ, –ಮೈಮರೆದಂತೆವೋಲ್
ಸುತವಿರಹ ಸಂತಾಪದಗ್ಧ ವಸುಧಾಧಿಪಂ! (1.4–455–473)

ಮಲೆನಾಡಿನ ಶಿಶುವಾದ ಕುವೆಂಪು ಅವರು 'ಕಾಡ ಕವಿಯುನಾ' ಎಂದು ಹೇಳಿಕೊಂಡಿದ್ದಾರೆ. ಅವರು ಅರಣ್ಯದ ಕಾಳ್ಗಿಚ್ಚಿನಲ್ಲಿ ಸಿಕ್ಕ ಪ್ರಾಣಿಯನ್ನು ಕಂಡ ನೋವಿನ ನೋಟ ಈ ಮಹೋಪಮೆಯಲ್ಲಿ–ದಶರಥನ ಅಸಹಾಯ ಸ್ಥಿತಿಯ ವಿಲಿವಿಲಿ ಒದ್ದಾಟವನ್ನು ಚಿತ್ರಿಸಿದೆ.

ಕಡುಬೇಸಗೆಯಲ್ಲಿ ಒಣಗಿ ಬರಿದಾದ ಅರಣ್ಯವನ್ನು ಕಾಳ್ಗಿಚ್ಚು ಬೇಲಿಯಂತೆ ಬಳಸಿ ಬರುತ್ತಿದೆ. ಒಂದು ಹಿಂಡು ತಪ್ಪಿದ ಮುದಿ ಆನೆ ಆ ಕಿಚ್ಚು ಕೋಟೆಯ ನಡುವೆ ಓಡಲಾರದೆ ನರಳಿ ಘೀಳಿಡುತ್ತಿದೆ. ಸಾವಿನ ನೆತ್ತರಿನ ನಾಲಗೆಯಂತೆ ಆತುರದಿಂದ ಸುತ್ತಿ ಮುತ್ತುತ್ತ, ಎಲ್ಲವನ್ನು ತುತ್ತಾಗಿಸಿ ನುಂಗಲು ಸಾವಾಗ್ನಿ ನುಗ್ಗಿ ಬರುತ್ತಿದೆ. ಆ ಗಂಭೀರ ದಿಗ್ದಂತಿಯು ತನ್ನ ಗಾಂಭೀರ್ಯವನ್ನು ತೊರೆದು

ಅಸ್ಥಿರ, ಚಂಚಲ ಚಿತ್ತದಿಂದ ದಿಕ್ಕು ದಿಕ್ಕಿಗೆ ಓಡುತ್ತಿದೆ. ಕೆಟ್ಟ ಆಸೆಗತ್ತಲಿನಂತೆ ಹೊಗೆ ಆವರಿಸಲು ಅದಕ್ಕೆ ದಾರಿಗಾಣದಂತೆ ಆಗಿದೆ.

ಆ ಭಯಂಕರ ಹೊಗೆಯ ರಾಶಿ ಅರೆಬಂಡೆಯಂತೆ ಉರುಳಿ, ಮತ್ತೊಂದು ಮದ್ದಾನೆಯಂತೆ ತನ್ನ ಮೇಲೆರಗುತ್ತಿದೆ ಎಂದು ಭಾವಿಸಿದ ಮುದಿಯಾನೆ ಅದರ ಮೇಲೆ ಎರಗುತ್ತದೆ. ಸೆಣಸಿ ಸೋತು ಉಸಿರುಕಟ್ಟಿ ಬೀಳುತ್ತದೆ. ಹೊಗೆ ಆನೆಯಿಂದ ಹೊರ ಹೊಮ್ಮುವ ಕೇಸರಿ ಬಣ್ಣದ ಜ್ವಾಲೆಯ ಉರಿ ಕಠಾರಿಗಳು ಮಿಂಚಿನ ಮೊನೆಯ ದಂತಗಳಂತೆ ಅದರ ಮೈ ಚರ್ಮವನ್ನು ಚುಚ್ಚಿ ಸುಡುತ್ತದೆ. ಅದು ಮೂರ್ಛೆಗೊಂಡು ಬೀಳುತ್ತದೆ. ಹಾಗೆ ಸುತವಿರಹದ ಸಂತಾಪದಿಂದ ಬೆಂದ ದಶರಥನು ಮೂರ್ಛೆಗೊಂಡನು.

ಕವಿ ನೀಡಿರುವ ಆ ಮಹೋಪಮೆಯ ಚಿತ್ರದೊಂದಿಗೆ ಸಹೃದಯ ಒಂದಾಗಿ ಭಾವನುಭವಕ್ಕೆ ಒಳಗಾಗುತ್ತಾನೆ. ಆ ಮಹೋಪಮಾ ಸೃಷ್ಟಿಯಲ್ಲಿ–ಬೇಲಿಯಂತೆ ತನ್ನ ರಕ್ಷಕಳಾಗಿದ್ದ ಕೈಕೆಯು ತನ್ನ ಆಂತರ್ಯದ ಆಸೆ, ದ್ವೇಷ, ಅಸೂಯೆಯ ಕಾವಿನಲ್ಲ ಬೆಂಕಿ ಸೃಷ್ಟಿಸಿಕೊಂಡಿದ್ದಾಳೆ. ಆ ಕಾಡ್ಗಿಚ್ಚು ಅವಳನ್ನು ಸುಡುವಾಗ ಬೇಲಿಯಾಗಿ ತನ್ನ ಪತಿ ದಿಗ್ಗಜನನ್ನೇ ಸುಡಲು ಆವರಿಸಿ ಬರುತ್ತದೆ.

ಆ ದುರಂತ ಸನ್ನಿವೇಶ ಸೃಷ್ಟಿಯ ಮಹೋಪಮೆ ಕಾವ್ಯ ರಸಿಕನ ಭಾವಕ್ಕೆ ಹೊಳೆದು ಅವನು ದಶರಥನ ಸ್ಥಿತಿಗೆ ಮರುಗುತ್ತಾನೆ, ಕರಗುತ್ತಾನೆ.

ದಶರಥನು ನೀಡಿದ ವರವನ್ನೇ ಕೋಟೆಯಾಗಿಸಿ ಕೈಕೆ ಬಂಧಿಸಿದ್ದಾಳೆ. ರಘುವಂಶದ ಕೀರ್ತಿವೆತ್ತ ಗಂಭೀರ ವ್ಯಕ್ತಿತ್ವದ ದಶರಥ – ತನ್ನ ಅರಮನೆಯಲ್ಲಿ ನಡೆದ ಒಳಸಂಚಿನ ದುರಂತದಿಂದ ಎದೆಗುದಿಯೆಂಬ ಕಿಚ್ಚಿಗೆ ಒಳಗಾಗಿದ್ದಾನೆ. ಅದು ಅವನನ್ನು ಬೆಂಕಿಯಿಲ್ಲದ ಬೇಗೆಯಲ್ಲಿ ಬೇಯಿಸುತ್ತಿದೆ. ಹೊರಗೆ ಕೈಕೆ ಮಂಥರೆಯರ ದ್ವೇಷ, ಅಸೂಯೆಯ ಕಿಚ್ಚು ಸುತ್ತುವರೆದಿದೆ. ಆ ಬಗೆಯ ಕಿಚ್ಚಿನಲ್ಲಿ ಸಿಕ್ಕು ತೊಳಲಾಡುತ್ತ ಅವನು ಚಂಚಲ ಚಿತ್ತನಾಗಿ ದಿಕ್ಕು ತೋಚದಂತಾಗಿದ್ದಾನೆ.

ಆ ಎಲ್ಲ ಸ್ಥಿತಿಗೆ ಕಾರಣವಾದ ಕೈಕೆ ಆಸೆಯಗತ್ತಲಿನ ಹೊಗೆಯಾಗಿ ಕಾಡುತ್ತಿದ್ದಾಳೆ. ಅವಳೇ ಮದ್ದಾನೆಯಾಗಿ ತನ್ನ ಕಿಚ್ಚಿನ ಕರಾಳ ದಂತದಿಂದ ತಿವಿದು ಹಿಂಸಿಸುತ್ತಿದ್ದಾಳೆ ಎಂಬ ಮಹೋಪಮೆ ಓದುಗನನ್ನು ನಲುಗಿಸುತ್ತದೆ. ಕುವೆಂಪು ಅವರು ಈ ರೀತಿಯ ಹಲವಾರು ಮಹೋಪಮೆಗಳನ್ನು ಸೃಷ್ಟಿಸಿದ್ದಾರೆ.

❖❖❖

ಮಲೆತಲೆಯ ಕೋಡು: ಬೂರುಗ ಮರ

ಸಂದರ್ಶಕ ದೇಜಗೌ : ಓ ಲಕ್ಷ್ಮಣಾ ರೋದನದ ಭೀಕರ ಧ್ವಾನ ತ್ರೇತಾಯುಗದಿಂದ ಕಲಿಯುಗದ ತನಕ ಚಾಚಿದೆ. ಶ್ರೀರಾಮಾಯಣ ದರ್ಶನಂ ಮಹಾಕಾವ್ಯ ವಾಲ್ಮೀಕಿ ರಾಮಾಯಣದ ಅನುಕರಣೆಯಲ್ಲ, ಇದೊಂದು ಸ್ವತಂತ್ರ ಕೃತಿಯೆನ್ನುವ ಅಭಿಪ್ರಾಯಕ್ಕೆ ಇಂಥ ಹಲವಾರು ಸಂಗತಿಗಳು ಪುಷ್ಟಿ ನೀಡುತ್ತವೆ. ಈ ಕಾವ್ಯ ಮಲೆನಾಡಿನ ಪ್ರಕೃತಿಯ ಗರ್ಭದಿಂದ ಉದ್ಭವಿಸಿರುವಂತೆ ತೋರುತ್ತದೆ.

ಕುವೆಂಪು : ಹೌದ್ಹೌದು, ಮಲೆನಾಡಿನ ಪ್ರಾಕೃತಿಕ ವ್ಯಾಪಾರಗಳ ಹಾಗೂ ಋತು ವೈವಿಧ್ಯದ ವರ್ಣನೆಯನ್ನು ಉದ್ದಕ್ಕೂ ನೋಡುತ್ತೀರಿ. ದಂಡಕಾರಣ್ಯದ ಚಿತ್ರಣಕ್ಕೆ ಮಲೆನಾಡಿನ ಮಳೆಗಾಳಿ ಹಾಗೂ ಅನೇಕ ದೃಶ್ಯಗಳು ಸ್ಫೂರ್ತಿಯನ್ನು ನೀಡಿವೆ. ಕವಿಶೈಲದ ಬಳಿ ಬೂರುಗದ ಮರವೊಂದಿದೆ. ಕಾಡು ಕಿಚ್ಚಿನಿಂದಾಗಿ ಸಣ್ಣ ಪುಟ್ಟ ಗಿಡಗಂಟೆ ಹುಲ್ಲು ಬೆಂದು ನೆಲವೆಲ್ಲ ಕಪ್ಪಾಗುತ್ತದೆ. ಬಲಿತ ಬೂರುಗದ ಕಾಯಿ ಬಿಸಿಲಿಗೆ ಸಿಡಿದು ಮಸಿ ನೆಲದ ಮೇಲೆ ಅರಳೆ ಚೆಲ್ಲಿದಾಗ ಶರತ್ಕಾಲದ ಮೇಘ ನೆನಪಿಗೆ ಬರುತ್ತದೆ. ಅದನ್ನು ನಾನು ನೋಡದಿದ್ದರೆ 'ಸುಗ್ರೀವಾಜ್ಞೆ' ಸಂಚಿಕೆಯ ಪ್ರಾರಂಭದ ದೃಶ್ಯದ ವರ್ಣನೆಯೇ ಸಾಧ್ಯವಾಗುತ್ತಿರಲಿಲ್ಲ.

ಎಲೆಯುದುರಿ ಬರಲಾದ ಬೂರುಗದ ಮರದಲ್ಲಿ
ಬಲಿತ ಕಾಯ್ ಓಡೊಡೆದು ಬಿಸಿಲ ಕಾಯ್ಪಿಗೆ ಸಿಡಿದು,
ಹೊಮ್ಮಿತ್ತು ಸೂಸಿತ್ತು ಚಿಮ್ಮಿತ್ತು ಚೆದರಿತ್ತು
ಚೆಲ್ಲಿತ್ತರಳೆ ಬಿಳ್ಪು, ಮಸಿಯ ಚೆಲ್ಲಿರ್ದವೊಲ್
ಕಾಳ್ಗಿಚ್ಚು ಕರಿಕುವರಿಸಿದ ನೆಲದ ಕರ್ಪಿನೊಳ್
ಚಿತ್ರಿಸಿ ಶರನ್ಮೇಘದೋಲ್ಮೆಯಂ

ಈ ಪಂಕ್ತಿಗಳನ್ನು ರಚಿಸಿದಾಗ ಕವಿಶೈಲವೇ ನನ್ನ ಕಣ್ಮುಂದೆ ನಿಂತಿತ್ತು. (ಕುವೆಂಪು ಸಮಗ್ರ ಗದ್ಯ ಸಂಪುಟ 2, ಪುಟ 871)

ಕಾಡುಕಿಚ್ಚಿನ ಮಸಿನೆಲದ ಮೇಲೆ ಬೂರುಗದ ಬಿಳಿ ಅರಳೆ ಚೆಲ್ಲಿ ನಲಿದಾಡಿದುದನ್ನು ಬಾನಿನಲ್ಲಿ ಶೋಭಿಸುವ ಶರತ್ಕಾಲದ ಮೋಡಕ್ಕೆ ಹೋಲಿಸಿ ವರ್ಣಿಸಿರುವುದು ಕವಿಯ ಪಂಚೇಂದ್ರಿಯಗಳ ರಸಾನುಭವ. ಬಾನು ಭುವಿಗಳನ್ನು ಒಂದಾಗಿಸಿದ್ದು ಅದ್ವೈತಾನುಭವ.

ಆಗಸದ ಶರತ್ಕಾಲದ ಬೆಳ್ಳನೆ ಮೋಡ ಹೊಮ್ಮಿ ಹೊರಳಿ ನಲಿದು ನರ್ತಿಸುವಂತೆ, ಬೂರುಗದ ಅರಳೆಯು ನೆಲದಲ್ಲಿ ಪಸರಿಸುವಾಗ ಕಂಡ ಆನಂದವನ್ನು ಕವಿ ಮಧುರಲಯದ ಒಳ ಪ್ರಾಸದಲ್ಲಿ ಹೊಮ್ಮಿಸಿ, ಸೂಸಿಸಿ, ಚಿಮ್ಮಿಸಿ ಚೆದುರಿಸಿ ಒಂದು ಯಕ್ಷಲೋಕವನ್ನು ಕಂಡರಿಸಿದ್ದಾರೆ.

* * *

ಮಾರೀಚನು ಕನಕಮೃಗವಾಗಿ ಸೀತೆಯ ಮುಂದೆ ಸುಳಿದಾಡಿದನು. ಅದರ ಕೊಂಬುಗಳನ್ನು ಚಿತ್ರಿಸಲು ಕುವೆಂಪು ಅವರು ತಮ್ಮ ಕಾಡಿನ ಅನುಭವದ ಹಿನ್ನೆಲೆಯಲ್ಲಿ ಹೊಸ ಪ್ರತಿಮೆ ಸೃಷ್ಟಿಸಿದ್ದಾರೆ. ಈ ನವನವೀನ ಪ್ರತಿಮಾ ಸೃಷ್ಟಿಯಲ್ಲಿ ಕವಿಯು ಜನಪದರ ನುಡಿ ಬರಲುವೋಗು, ಕವಲ್ಗಣೆ ಪದಗಳನ್ನು ನೇಯ್ದು ಅದರ ಪ್ರಕೃತಿ ಸಹಜ ಸೌಂದರ್ಯಕ್ಕೆ ದೇಸಿ ಬೆಡಗು ನೀಡಿದ್ದಾರೆ.

ಮಾಗಿಯ ಕಾಲದಲ್ಲಿ ಎಲೆಗಳು ಉದುರಿ ಬೋಳಾಗಿ, ಬರಲುವೋದ ಬೂರುಗಮರ ಕೋಡು ಕೋಡಿನಲ್ಲಿ ಕವಲು ಒಡೆದಿರುವುದು ಕಾಣುತ್ತಿರುತ್ತದೆ. ಅದು ಕವಿಯ ಕಣ್ಣಿಗೆ ಬೆಟ್ಟದ ತಲೆಗೆ ಕೊಂಬು ಮೂಡಿದ ರೀತಿ ಕಾಣಿಸುತ್ತಿರುತ್ತದೆ. ಮಲೆಯ ಆ ಪ್ರಕೃತಿ ಸಹಜ ವಿಶಿಷ್ಟ ನೋಟವನ್ನು ಕವಿನೋಡಿ ಸುಖಿಸಿದ್ದಾರೆ. ಅವರು ಸುವರ್ಣ ಜಿಂಕೆಯ ಮನೋಹರ ಕೋಡಿಗೆ ಆ ಬೂರುಗ ಮರವನ್ನು ಹೋಲಿಸಿ ಚಿತ್ರಿಸಿದ್ದಾರೆ. ಸಹೃದಯನಿಗೆ ಅರಣ್ಯಾನುಭವದ ದೃಶ್ಯಾನಂದವನ್ನು ಉಣಬಡಿಸಿದ್ದಾರೆ.

ಮಾಗಿಗೆ ಬರಲುವೋದ ಬೂರುಗಮರಂ
ಕೋಡು ಕೋಡಿನ ಕವಲ್ಗಣೆಗಳಿಂ ಮಲೆತಲೆಗೆ
ಕೋಡು ಮೂಡಿದ ತೆರನ ತೋರ್ಪಂತೆ, ನಿಡುಸೊರ್ಕ್ಕಿ
ಮಲೆತು ನಿಮಿರಿದುವದರ ಹೇಮರತ್ನ ಪ್ರಭೆಯ
ಚಾರು ಶೃಂಗದ್ವಯಂ, ತರುವರ ಸ್ಪರ್ಧಿಗಳ್
ತಾಮೆಂಬವೋಲ್.(2.2–89–94)

* * *

ಹನುಮಂತನು ಮಹೇಂದ್ರ ಪರ್ವತವನ್ನು ಹತ್ತುವಾಗಿನ ವರ್ಣನೆಯಲ್ಲಿ ಬೂರುಗದ ಹತ್ತಿಗೆ ಕಿಡಿ ಹೊತ್ತಿದ್ದನ್ನು ಕವಿ ಹೀಗೆ ಚಿತ್ರಿಸಿದ್ದಾರೆ.

ಕಾಲ್ ಮೀಂಟಲ್ಕೆ
ಕಲ್ಗೆಕಲ್ ಘಟ್ಟಿಸಲ್, ಕಿಡಿ ಪೊಣ್ಮೆ ಮರವೊರೆಯ
ದೂದಿ ಪೊತ್ತಲ್, ಬಗನಿಯ ಸುತ್ತಿ ಪೆಣೆದಿರ್ದ
ಬಿದಿರ ಮೆಳೆಗಳ್ ಧಗಿಸಿ ಪರ್ವಿದುದು ಕಾಳ್ಗಿಚ್ಚು,
ಹೊಗೆಮುಗಿಲ ನಡುನಡುವೆ ದಳ್ಳುರಿಯ ಜಿಹ್ವೆಯಂ
ಝಳ ಝಳಪಿಸಿ.(2.11–24–29)

ಬೂರುಗಮರವನ್ನು ದೂದಿ, ಶಾಲ್ಮಲ, ಪೂರಣ ಎಂದು ಕರೆಯುತ್ತಾರೆ. ಅದನ್ನು ಇಂಗ್ಲಿಷ್‌ನಲ್ಲಿ silk cotton ಎಂದು ಹೇಳುತ್ತಾರೆ. ಅದು ಬಿಳಿ ಹೂ ಬಿಡುತ್ತದೆ. ಅದರ ಸಸ್ಯಶಾಸ್ತ್ರೀಯ ಹೆಸರು CEIBA PENTANDRA (bot. name)

ಹನ್ನೊಂದನೆ ಶತಮಾನದ ಕವಿ ನಾಗವರ್ಮನ ಕಾವ್ಯ 'ಕರ್ನಾಟಕ ಕಾದಂಬರಿ'. ಅದರಲ್ಲಿ ವೈಶಂಪಾಯನನೆಂಬ ಗಿಳಿಮರಿಯು ಶೂದ್ರಕನೆಂಬ ರಾಜನಿಗೆ ತನ್ನ ಕಥೆಯನ್ನು ಹೇಳುತ್ತದೆ. ನಮಗೆ ಗಿಳಿಯು 'ಕನ್ನಡವಕ್ಕಿ' ಆಗಿದೆ. ಅದು ಇದ್ದದ್ದು ಮಹಾ ಶಾಲ್ಮಲಿ ವೃಕ್ಷದಲ್ಲಿ. ಅದು ತಾನಿದ್ದ ಆ ಮರವನ್ನು ಹೀಗೆ ವರ್ಣಿಸಿದೆ.

ಮರಗಟ್ಟೆಂಬಂತೆ ಸುತ್ತುಂ ಮೊದಲೊಳಜಗರಂ ಸುತ್ತೆ ದಿಕ್ಚಕ್ರವಾಳಾಂ
ತರಮಂ ನೋಡಲ್ಕೆ ನೀಳ್ದಂತಿರೆ ಬೆಳೆದ ಮಹಾಶಾಖೆಗಳ್ ತಾಂಡವಾಡಂ
ಬರದೊಳ್ ನಾನಾವಿಧಂ ನರ್ತಿಪ ನಟನ ಭುಜಾದಂಡಮೋ ಪೇಳಿಮೆಂಬಂ
ತಿರೆಮೇಯಸ್ಕಂಧಮಂ ಸಂಧಿಸೆ ಜರಠ ಮಹಾಶಾಲ್ಮಲೀ ವೃಕ್ಷಮಿರ್ಕುಂ.(1.38)
(ಕರ್ಣಾಟಕ ಕಾದಂಬರೀ ಸಂಗ್ರಹ, ಸಂ. ಟಿ. ಎಸ್. ವೆಂಕಣ್ಣಯ್ಯ)

* * *

ಸೀತೆಯು ಒಂದು ದಿನ ಹೊಳೆಯ ನುಣ್ಣನೆಯ ಮರಳಿನ ಬೆಣ್ಣೆಯ ದಿಣ್ಣೆಯ ಮೇಲೆ ಕುಳಿತು ಪತಿ ಮೈದುನರೊಡನೆ ಮಾತಾಡುತ್ತಿದ್ದಳು. ಅವಳು ಆಗಸದ ನೀಲಿಗೆ ಎದುರಾಗಿ ಶರತ್ಕಾಲದ ಮುಗಿಲ ಬೆಳ್ಳಿಮೋಡವನ್ನು ಕಂಡು ಅವರಿಗೆ ತೋರಿಸಿದಳು.

ತೋರಿದಳಾಗಸದ ನೀಲಿಗೆದುರಾಗಿ
ಬೂರುಗದರಳೆರಾಸಿ ಹಂತಿಗೊಂಡೊಪ್ಪಿರ್ದ
ತೆರದ ಶರದದ ಮುಗಿಲ ಬೆಳ್ಪಿನೊಡ್ಡಂ.(1.11–89–91)

ಕುವೆಂಪು ಅವರಿಗೆ ಶರತ್ಕಾಲದ ಮುಗಿಲ ಬೆಳ್ಳಿ ಮೋಡವನ್ನು ಬೂರುಗದ ಅರಳೆ ರಾಸಿಗೆ ಹೋಲಿಸಿ ಚಿತ್ರಿಸುವುದೇ ಬಿಳಿ ಹತ್ತಿಯ ಶುಭ್ರ ಮನೋಲ್ಲಾಸ.

❖❖❖

ಪಾಪಿಗುದ್ಧಾರಮಿಹುದೌ ಸೃಷ್ಟಿಯ ಮಹದ್ ವ್ಯೂಹ ರಚನೆಯೊಳ್

ಭರತನು ಕೇಕೆಯ ಪುರದಲ್ಲಿ ಕೆಟ್ಟ ಕನಸು ಕಾಣುತ್ತಾನೆ. ತನ್ನ ಮಾವನ ಮನೆಯಿಂದ ಶತ್ರುಘ್ನನೊಡನೆ ಅಯೋಧ್ಯೆಗೆ ಧಾವಿಸಿ ಬರುತ್ತಾನೆ. ಅವನಿಗೆ ಆ ಮಹಾನಗರವು ಪಾಳ್ಮನೆಯಂತೆ ನಿರ್ಜನ, ನಿಶ್ಚಲ, ನೀರವ, ನಿರ್ಜೀವ, ನಿಸ್ತೇಜವಾಗಿ ಕಾಣುತ್ತದೆ. ತಾಯಿ ಕೈಕೆಯನ್ನು 'ಅರಮನೆಯೇಕೆ ಸಿರಿಗೆಟ್ಟಂತೆ ಕಂದಿಹುದು?' ಎಂದು ಪ್ರಶ್ನಿಸುತ್ತಾನೆ. ದುಃಖತಪ್ತಳಾದ ಆಕೆ ನುಡಿಯುತ್ತಾಳೆ: 'ಮನ್ನಿಸೆನ್ನನ್, ಮಗನೆ; ಪಾಪಿಯೆನ್!' ಆಗ ಭರತ 'ತಾಯಿ ಆತ್ಮನಿಂದನೆಯನ್ನು ಬಿಡು, ನಿನ್ನನ್ನು ಆಲಂಗಿಸುವಷ್ಟು ಪುಣ್ಯವು ಪಾಪಕ್ಕಿದೆಯೆ? ಅದೇನು ನನಗೆ ನೇರ್ಗಿರಿಯನೇಂ?' ಎಂದು ಹೇಳುತ್ತಾನೆ.

ಸ್ವಲ್ಪ ಮಾತ್ರ ಚಿಕ್ಕವನು; ನಸುವೆ ಕಿರಯನನ್ನು 'ನೇರ್ಗಿರಿಯ' ಎಂದು ಹಳಗನ್ನಡದಲ್ಲಿ ಕರೆಯುವರು. ಕವಿಯು ಈ ಪದವನ್ನು ಪಾಪ ತುಂಬ ಹಳತು ಎಂಬ ಭಾವದಲ್ಲಿ ಬಹು ಎಚ್ಚರಿಕೆಯಿಂದ ಪ್ರಯೋಗಿಸಿದ್ದಾರೆ.

ಪಾಪವು ತನಗೆ ತಮ್ಮನಾಗಿ ಹುಟ್ಟಲು ಸಾಧ್ಯವಿಲ್ಲ. ಅದು ತನ್ನ ತಾಯಿಯ ದೇಹ, ಪ್ರಾಣ, ಮನ ಒಂದಾಗಿ ರೂಪುಗೊಂಡ ಒಡಲ ಭಾಗವಲ್ಲ ಎಂಬ ಧ್ವನಿಯನ್ನು ಭರತನಿಂದ ಕವಿ ಪ್ರಕಟ ಪಡಿಸಿದ್ದಾರೆ. ತನ್ನ ಮಗನನ್ನು ರಾಜನನ್ನಾಗಿ ಮಾಡಬೇಕೆಂಬ ಆಸೆಯಿಂದ ವಿಧಿಯ ಕೈ ಶಿಶುವಾಗಿ ಆಕೆ ನಡೆದುಕೊಂಡಳು. ದುರಾಸೆಯ ತಪ್ಪು ತಂದ ದುರಂತಕ್ಕೆ ಅವಳು ಪರಿತಪಿಸುತ್ತಿರುವುದನ್ನು ಕವಿ ಅವಳ ಪ್ರತಿ ನುಡಿಯಲ್ಲಿ ವ್ಯಕ್ತ ಪಡಿಸಿದ್ದಾರೆ.

ಕೈಕೆಯು ನಡೆದ ಎಲ್ಲ ಘಟನೆಯನ್ನು ಮಗನಿಗೆ ತಿಳಿಸುತ್ತಾಳೆ. ಮಗನ ಏಳಿಗೆ ಬಯಸುವ ತಾಯಿಯಾಗಿ – ನಿಸ್ವಾರ್ಥದ ಆ ಬಯಕೆಗಿಂತ ಹೊರತಾದ ಕಣ್ಣು ಧರ್ಮಕ್ಕಿದೆಯೆ? –ಎಂದು ತನ್ನ ತಾಯಿಧರ್ಮವನ್ನು ಪ್ರತಿಪಾದಿಸುತ್ತಾಳೆ. ಎಲ್ಲವನ್ನೂ ಕೇಳಿದ ಭರತನು 'ಬದುಕೆನಗೆ ಸಾವಿಗೆಣೆ ಅಣ್ಣ ದೇವನನುಳಿದು; ಪಾಳ್ ಮಣ್ಣು ಈ ಕೀಳ್ ನೆಲದ ಸಿರಿ!' ಎಂದು ಹೇಳಿ ತೀರಿಹೋದ ತಂದೆಯನ್ನು

ಮರಳಿ ಪಡೆಯಲು ಸಾಧ್ಯವಿಲ್ಲ. ಹಿರಿಯಣ್ಣನನ್ನು ಕಾಡಿನಿಂದ ಕರೆದು ತರುತ್ತೇನೆ. ಅವನು ಬರಲು ಒಪ್ಪದಿದ್ದರೆ,

'ತಾಯಾತ್ಮದೊಳ್ಪಿಂಗೆ ಹೊಣೆ ಕಂದನದರಿಂದೆ
ರಾಮಸೇವೆಯೊಳಿರ್ದು ನೀಂ ಗೈದ ಕುಕೃತಮಂ
ತವಿಸುವೆನು ಕೇಳ್, ವಿಪಿನಾಶ್ರಮದ ತಪೋಜೀವನದ
ಸುಕೃತ ತೀರ್ಥದಲಿ!'(1.5–274–277)

ಎಂದು ಹೇಳಿ ಜಿಗುಪ್ಸೆಯಿಂದ ಹೊರಡುತ್ತಾನೆ.

ಆಗ ಕೈಕೆಯು ಮಗನಿಗೆ ಎರಗಿ ಕಾಲಿಡಿದು ಹೀಗೆ ಪಶ್ಚಾತ್ತಾಪದ ನುಡಿಗಳನ್ನಾಡುವಳು :

'ನೂಂಕು ನರಕಕೆ; ಸಹಿಸಿ
ಬಹೆನೊ ಕೇಡಂ ತಪಿಸಿ; ನೂಂಕದಿರೊ ಶೂನ್ಯತೆಗೆ!
ಕಲ್ಲಾದಹಲ್ಯೆಯಂ ನುಡಿಸಿದಾ
ರಾಮನಡಿ ಸೋಂಕಿಗುಂ ಕಿಡದೆನ್ನ ಕಲ್ತನಂ!
ಕೈ ಬಿಡದೆ ಕಾಪಿಡೆನ್ನಂ!'(1.5–285,86+294,96)

ತಾಯಿ ಕೈಕೆ ತನ್ನ ಮಗ ಭರತನಿಗಾಗಿಯಷ್ಟೇ ಪತಿಯಿಂದ ವರವನ್ನು ಬೇಡಿದಳು. ಘೋರ ದುರ್ಘಟನೆಗಳಿಗೆ ಕಾರಣವಾದಳು. ಅವಳು 'ನರಕಕ್ಕೆ ನೂಕಿದರೂ ಕೇಡನ್ನು ಪರಿಹರಿಸಿಕೊಂಡು ಬರುತ್ತೇನೆ. ಆದರೆ ನನ್ನನ್ನು ಶೂನ್ಯತೆಗೆ ನೂಕಬೇಡ' ಎಂದು ಪುತ್ರನಲ್ಲಿ ಕೇಳಿಕೊಳ್ಳುತ್ತಾಳೆ. ಆಕೆಗೆ ಕುರೂಪದ ಕಾರಣದಿಂದ ಅರಮನೆಯ ದಾಸಿ ಮಂಥರೆ ಅನುಭವಿಸಿದ ಒಂಟಿತನ–ಶೂನ್ಯತೆಯ ನರಕದ ಅರಿವಿದೆ. ಅದೊಂದು ಮನುಷ್ಯ ಮನುಷ್ಯನಿಗೆ ನೀಡುವ ಅಮಾನವೀಯ ಕ್ರೂರ ಶಿಕ್ಷೆ. ಅದು ನರಕಕ್ಕೂ ಹಿರಿದು.

'ಶೂನ್ಯ' ಪದದಲ್ಲಿ – ತನ್ನ ಮಗನೇ ತನ್ನ ಜೀವ. ಮಗನಿಲ್ಲದ ತನ್ನ ಒಂಟಿತನದ ಬಾಳು ಬರಿದು, ಹೀನ, ಅರ್ಥಹೀನವಾದುದು, ತಿರುಳಿಲ್ಲದ್ದು ಎಂಬ ನೋವಿನ ದನಿಯಿದೆ.

ಶ್ರೀರಾಮನ ಪವಿತ್ರತೆಯ ಅರಿವಿನಲ್ಲಿ ಅವಳ ವಿಷಾದವನ್ನು ಕವಿ ವ್ಯಕ್ತಪಡಿಸಿರುವ ರೀತಿ ಅನನ್ಯವಾದ ಮನೋವೈಜ್ಞಾನಿಕ ವಿಶ್ಲೇಷಣೆಯಾಗಿದೆ. ಬುದ್ಧಿಯ ಲೌಕಿಕ ಬದುಕಿನ ಜ್ಞಾನ ಬೇರೆ, ಹೃದಯಾಂತರ್ಯದ ಪ್ರೀತಿ,

ವಿಶ್ವಾಸ, ನಂಬಿಕೆ, ಶಾಂತಿಯ ಬದುಕು ಬೇರೆ. ಹಾಗಾಗಿ ಕೈಕೆಯು – ಕಲ್ಲುಬಂಡೆ ಅಹಲ್ಯೆಯನ್ನು ಜೀವಂತವಾಗಿಸಿದ ಆ ರಾಮನ ಪಾದ ಸ್ಪರ್ಶಕ್ಕೂ ತನ್ನ ಕಲ್ಲುತನ ನಾಶವಾಗದು–ಎಂದು ಪರಿತಪಿಸಿ ಗೋಳಿಡುತ್ತಾಳೆ. ಮಗನ ಪಾದಕ್ಕೆ ಮುಡಿ ಚಾಚುತ್ತಾಳೆ.

ತಾಯಿಯನ್ನು ಭರತ ತನ್ನ ಕ್ಷಮಾ ಕಲ್ಪವೃಕ್ಷದ ಮೃದು ಬಾಹುಗಳಿಂದ ಎತ್ತಿ ಬಿಗಿದಪ್ಪಿಕೊಳ್ಳುತ್ತಾನೆ. ಆಗ ಆ ತಾಯಿ ಭಾವಪರವಶಳಾಗಿ ರಸಾನಂದದಲ್ಲಿ ಮೀಯುತ್ತಾಳೆ.

ಆಗ ಕವಿ ಕುವೆಂಪು ಕೈಕೆ ಪಾತ್ರದ ಮೂಲಕ ತಮ್ಮ ದರ್ಶನ ದೀಪ್ತಿಯನ್ನು ಹೀಗೆ ಪ್ರಕಾಶಿಸಿದ್ದಾರೆ.

'ಬಗೆಯ ಮೈಲಿಗೆ ಮರುಗುವೆದೆಯ ಕುದಿಬೇನೆಯಿಂ
ಮಡಿಯಪ್ಪುದೊಳಸೋರದಿರ್, ಕೈಕೆ, ಕೇಡುಂಟೆ ಪೇಳ್
ತಿರೆಯೊಳ್ಪಿಗಿಂಬಾದ ರಾಮನನುಜನ ತಾಯ್ಗೆ?
ಕಣ್ಗೆಡದಿರಂಜದಿರ್, ಪಾಪಿಗುದ್ಧಾರಮಿಹುದೌ
ಸೃಷ್ಟಿಯ ಮಹದ್‌ವ್ಯೂಹ ರಚನೆಯೊಳ್, ಕೇಳ್, ತಾಯಿ:
ಬೆರಳಿಚದ ಕೂರ್ಮೊನೆಯ ಮಿಡಿವ ಹಿಂಸೆಗೆ ತಂತಿ ತಾಂ
ಬೀಣೆಯಿಂಚರ ವೀಯುವಂತೆ, ನೀನುಗುರಾಗಲಾ
ವೈಣಿಕ ವಿಧಿಯ ಕೈಗೆ, ಪೊಣ್ಮೆದತ್ತಿಂಪಾಯ್ತು ಮೇಣ್
ಭಗವದ್ ರಸಧಿಯಾಯ್ತು ರಾಮಾಯಣ ಬೃಹದ್‌ಗೀತೆ! (1.5–300–308)

ಓ ಕೈಕೆ ನಿನ್ನ ಮರುಗುವ ಎದೆಯ ಕುದಿಬೇನೆ, ತೀವ್ರವಾದ ವಿಪತ್ತಿನ ಯಾತನೆಯಿಂದ ಮನಸ್ಸಿನ ಮೈಲಿಗೆ ಮಡಿಯಾಗುತ್ತದೆ. ನೀನು ಆಂತರ್ಯದಲ್ಲಿ ಕೊರಗಿ ಸತ್ತ್ವರಹಿತಳಾಗಬೇಡ–ಒಳಸೋರದಿರ್. ವ್ಯಕ್ತಿಯು ಚಿಂತೆ ಕಳವಳದಿಂದ ಬತ್ತಿ ಹೋಗುವುದನ್ನು ಕವಿಯು 'ಒಳಸೋರ್' ಪದದಲ್ಲಿ ಧ್ವನಿಸಿದ್ದಾರೆ. ರಾಮನ ತಮ್ಮನ ತಾಯಿಗೆ ಕೇಡು ಆಗುವುದೆ? ಕೆಂಗಡ ಬೇಡ, ಭಯ ಪಡಬೇಡ. ಈ ಸೃಷ್ಟಿಯ ಮಹತ್‌ವ್ಯೂಹ ರಚನೆಯಲ್ಲಿ ಪಾಪಿಗೂ ಉದ್ಧಾರ ಸಾಧ್ಯ. ಬೆರಳಿನ ಉಗುರು ಮೊನೆಯ ಹಿಂಸೆಗೆ ತಂತಿಯು ಮಿಡಿದು ವೀಣಾ ನಾದ ನೀಡುವಂತೆ, ವಿಧಿ ವೈಣಿಕನ ಕೈಗೆ ನೀನು ಉಗುರಾಗಿ ರಾಮಾಯಣದ ಬೃಹತ್ ಗೀತೆ ಧರೆಗೆ ಇಂಪಾಗಿ ಬಂದಿದೆ. ಭಗವಂತನ ರಸ ಸಾಗರವಾಗಿದೆ.

ಕವಿ ಕುವೆಂಪು ಅವರು ಈ ಲೋಕದ ಜೀವಿ ವಿಧಿಯ ಕೈಯ ಉಪಕರಣ ಎಂಬ ತತ್ವವನ್ನು ಕೈಕೆಯ ಪಾತ್ರ ಚಿತ್ರಣದಲ್ಲಿ ಪ್ರಕಟಪಡಿಸಿದ್ದಾರೆ.

ವಿಕೃತಿಯಿದಿರೊಳ್ ಪ್ರಕೃತಿಯೊರ್ ಚೆಲ್ವುಬರ್ಪಂತೆ

ದಶರಥನು ಅತಿದುಃಖ, ವ್ಯಥೆ ಮತ್ತು ನಿರಾಶೆಯಿಂದ ತನ್ನ ನಯನಗಳನ್ನು ಕಿತ್ತುಕೊಂಡು ಅಂಗೈಯಲ್ಲಿಟ್ಟುಕೊಂಡು ಕೈಕೆಗೆ ತೋರಿಸುತ್ತ ಹೇಳುತ್ತಾನೆ: 'ಪ್ರಿಯತಮಾ ಪಿಶಾಚಿ ಕೈಕೆಯೆ, ಇದನ್ನು ತೆಗೆದುಕೊ. ನನ್ನ ಕುವರ ನಯನಾಭಿರಾಮನನ್ನು ನನಗೆ ಕೊಡು! ಕಣ್ಣಿಗೆ ತೃಪ್ತಿಯಾಗುವವರೆಗೂ ನೋಡಿ ಪ್ರಾಣಬಿಡುತ್ತೇನೆ! ರಾಣಿಯೆ, ಎಲ್ಲಕ್ಕೂ ಕಾರಣ ನಿನ್ನ ರೂಪು ಅಲ್ಲ, ಹಾಳಾದ ಈ ಕಣ್ಣುಗಳೇ ಕಾರಣ! ಈಗೆಲ್ಲಿ ಹೇಳು, ನಿನ್ನ ರೂಪ ಪಾಪ?'

ಅರಸನು ಮಗ ರಾಮನನ್ನು ನೆನೆಯುತ್ತ ಭೀಭತ್ಸವಾಗಿ ವರ್ತಿಸುತ್ತಾನೆ. ಯಾರೂ ಎದುರಿಸಲಾಗದ ಆ ಸಂದರ್ಭವನ್ನು ಕುವೆಂಪು ಅವರು 'ಓಡಿದಳ್ ನೆರವೀಯಲಾಗೂನಿ ಮಂಥರೆಯೊರ್ವಳಾ ವಿಕೃತಿಗೆತ್ತಣಂ ಭೀಭತ್ಸ ಭೀತಿ?' (1.5–73–75) ಎಂದು ಬಣ್ಣಿಸಿದ್ದಾರೆ. ಅವಳನ್ನು ವಿಕೃತಿ ಎಂದು ಕರೆದು ಅದಕ್ಕೆ ಯಾವ ರೀತಿಯ ಭೀತಿ ಎಂದು ಪ್ರಶ್ನಿಸಿದ್ದಾರೆ.

ದೈವ ಸೃಷ್ಟಿಯ ಸುಂದರ ಕಲೆ ಮನುಷ್ಯ ಕೃತಿ. ಮಾನವನಿಂದ ನಿರ್ಮಿತವಾಗದ ಸೃಷ್ಟಿ– ನೈಸರ್ಗಿಕ ಸೃಷ್ಟಿ, ಪ್ರಕೃತಿಗೆ ನಿಜ ಎಂಬ ಅರ್ಥವಿದೆ. ಪ್ರತಿಯೊಬ್ಬ ವ್ಯಕ್ತಿಯ ಸಹಜ ಗುಣ, ಸ್ವಭಾವವೇ ಪ್ರಕೃತಿ. ಪುರುಷನ ಪ್ರಕೃತಿಯನ್ನು ತನ್ನಿಚ್ಛೆಗೆ ತಕ್ಕಂತೆ ಸಾವಾಗಿ ಕರೆದೊಯ್ಯುವುದು ಈ ಸೃಷ್ಟಿಯ ಸತ್ಯ. ಈ ಲೋಕದ ಜಂಜಾಟದಲ್ಲಿ, ಸಂಸಾರದ ಸುಖ ದುಃಖ ಅನುಭವಿಸಿ ದೇಹಧರ್ಮದಂತೆ ಸಾವೆಂಬ ಪ್ರಕೃತಿಯ ಸಾನ್ನಿಧ್ಯದಲ್ಲಿ ಸುಖಿಯಾದುದನ್ನು ಕವಿ 'ಚೆಲುವು ಬರ್ಪಂತೆ' ಎಂದು ಅದರ ಆಂತರ್ಯದ ಸೊಬಗನ್ನು ಪ್ರಕಟ ಪಡಿಸಿದ್ದಾರೆ.

ಶರೀರ, ಮನಸ್ಸು, ಉದ್ದೇಶ ಮೊದಲಾದುವು ಕುರೂಪವಾಗಿ, ವಿಕಾರವಾಗಿ ಮಾರ್ಪಾಡುಗೊಂಡಿರುವುದು ವಿಕೃತಿ. ಅದು ಒಂದು ರೋಗ. ಪ್ರಕೃತಿಯಿಂದ ಉದ್ಭವಿಸಿದ ಇನ್ನೊಂದು ರೂಪ–ವಿಕೃತಿ. ಅದು ಪ್ರಕೃತಿಗೆ ವಿಮುಖವಾದುದು.

ಅದು ಕೆಟ್ಟ ಜಿಗುಪ್ಸೆಯನ್ನುಂಟು ಮಾಡುವ ವಿಚಿತ್ರ ಮನೋವಿಕಾರ, ಅಸಮಂಜಸ ವರ್ತನೆ.

'ಕುಬ್ಜೆ ತನ್ನೆಡೆಗೆ ಬರ್ಪನಿತರೊಳ್ ಬಂದುದೈ ಮೃತ್ಯು ದಶರಥಗೆ, ವಿಕೃತಿಯಿದಿರೊಳ್ ಪ್ರಕತಿಯೊರ್ ಚೆಲ್ವು ಬರ್ಪಂತೆ.' (1.5–75–77)

ಕೈಕೆಯ ಕುಬ್ಜೆಯನ್ನು ವಿಕೃತಿ ಎಂದು ಕರೆದ ಕುವೆಂಪು ಅವರು ವಿಕೃತ ಮಂಥರೆಯು ದಶರಥನ ಬಳಿಗೆ ಬರುವಷ್ಟರಲ್ಲಿ ಸಾವು ಎಂಬ 'ಪ್ರಕೃತಿಯ ಒಂದು ಚೆಲುವು' ಅವನನ್ನು ಸೆಳೆದೊಯ್ದಿತು ಎಂದು ಮೇಲಿನ ಸಾಲುಗಳಲ್ಲಿ ಚಿತ್ರಸಿದ್ದಾರೆ.

ಇದು ಕವಿಯು ನೈಸರ್ಗಿಕ ಸೃಷ್ಟಿಯಾದ ಮಾನವ ಜೀವಿ ವಿಕೃತಗೊಂಡ ಕ್ರೌರ್ಯವನ್ನು ಎದುರಿಸಲಾಗದ–ಪ್ರಕೃತಿ ಸಹಜ ಸಾವನ್ನು ಮುಖಾಮುಖಿಯಾಗಿಸಿ ಸಾವಿನ ಚೆಲುವನ್ನು ತಿಳಿಯ ಪಡಿಸಿರುವ ಅನನ್ಯ ರೀತಿಯಾಗಿದೆ.

ಇದು ಈ ಕಾವ್ಯದಲ್ಲಿ ರೂಪುಗೊಂಡ ಮನೋವಿಶ್ಲೇಷಣೆಯ ಸೂಕ್ಷ್ಮತೆಯನ್ನು ಹೊಂದಿದ ಬೀಭತ್ಸ ರಸವಾಗಿದೆ.

❖❖❖

ಹಾಸ್ಯ ರಸದಲ್ಲಿ ಮಿಂದ ರಾಮಚಂದ್ರ

ಒಂದು ದಿನ ಸೂರ್ಯೋದಯದಲ್ಲಿ ಚಿತ್ರಕೂಟ ಬೆಟ್ಟದ ತುದಿಯ ಪರ್ಣಕುಟಿಯಿಂದ ಸೀತೆ ರವಿಯ ಕಿರಣಗಳಿಂದ ಹೊಳೆಯುತ್ತಿದ್ದ ಕಾಡಿನಲ್ಲಿ ನಲಿವಿನಿಂದ ಇಳಿದು ಬಂದಳು. ತುಂಬಿ ಹರಿಯುತ್ತಿದ್ದ ಮಾಲ್ಯವತಿ ನದಿಯಲ್ಲಿ ಋಷಿಸತಿಯರನ್ನು ಕಂಡಳು. ಅವರಿಗೆ ವಂದಿಸಿ ಮಾತಾಡಿದಳು. ಸಂತೋಷದಿಂದ ಸ್ನಾನ ಮಾಡಿದಳು. ಬಿಳಿ ನಾರು ಬಟ್ಟೆಯ ಮಡಿಯನ್ನುಟ್ಟಳು. ಅವಳನ್ನು ಕಂಡ ಅಡವಿಯು – 'ಮುಗುಳಲರ್ (ಹೂ ಮೊಗ್ಗು) ಹೆಣ್ಣಾಯಿತೊ, ಹೆಣ್ಣೆ ಮುಗುಳಲರ್ ಆಯಿತೊ' ಎಂದು ವಿಸ್ಮಯ ಪಟ್ಟಿತು!

ಪರ್ಣಕುಟಿಗೆ ಮರಳಿದ ಸೀತೆ ಅಡುಗೆ ಮಾಡಲು ತೊಡಗಿದಳು. ಹಸಿ ಸೌದೆಯಿಂದ ಹೊಗೆ ಹೊಮ್ಮಿತಲ್ಲದೆ, ಉರಿ ಕಾಣಲಿಲ್ಲ. ಸಿಟ್ಟೇರಿದ ಧರಣಿಸುತೆ ಒಲೆಯ ಮೋರೆಯನ್ನು ಕಟ್ಟಿಗೆಯಿಂದ ತಿವಿದಳು. ಕಣ್ಣೊರಸಿಕೊಂಡಳು. ಮೂಗೊರಸಿಕೊಂಡಳು. ಮುಖವೆಲ್ಲ ಮಸಿಯಾಯಿತು. ಸ್ನಾನಮಾಡಿ ಉಟ್ಟಿದ್ದ ಮಡಿ ಮಾಸಿತು. ಕೋಪದಿಂದ ಸಿಡುಕುತ್ತಿದ್ದಳು.

ವಜ್ರರೋಮಾಶ್ರಮದಲ್ಲಿ ಅಧ್ಯಯನ ಮುಗಿಸಿ ರಾಮಚಂದ್ರನು ಬಂದನು. ಪತ್ನಿ ಕಾಣದಿರಲು ಹೆಸರಿಡಿದು ಕರೆದನು. ಹೊಗೆಯ ಹೊಟ್ಟೆಯೊಳಗಿದ್ದ ಅವಳು 'ಓ' ಎಂದಳು. ಅವಳೊಂದಿಗೆ ತಮಾಷೆಯಾಡಬೇಕೆಂದು ಅವನು ಹೀಗೆ ಹೇಳಿದನು:

'ಹಸಿವಾಗುತ್ತಿದೆ, ನಾನು ಊಟಮಾಡಬೇಕು.'
'ಊಟ, ಆಗಲಿ, ಮಾಡಿ... ಮಾಡಿ' ಎಂದು

ಕೋಪದಿಂದ ನುಡಿದು ಕೆಮ್ಮುತ್ತ 'ಹಸಿಸೌದೆ' ಎಂದು ಒಲೆಯನ್ನು ಗಟ್ಟಿಯಾಗಿ ಊದಿದಳು.

'ನನಗೆ ಹಸಿವು ಹೆಚ್ಚಾಗಿದೆ.'

'ಹೊಗೆಯನ್ನೆ ಊಟಮಾಡಿ. ಹಸಿಸೌದೆಯಿಂದ ಅಡುಗೆ ಸಾಧ್ಯವೆ?'

ಆ ಮಾತು ಹೊಮ್ಮುವಷ್ಟರಲ್ಲಿ ರಾಮಚಂದ್ರನು ಅಡುಗೆ ಮನೆ ಒಳಗೆ ಹೋಗಿ ನೋಡಿದನು. ಅವಳ ನಲ್ ಮುಖವು ಮಸಿಯಿಡಿದ ಮುಸುಡಿಯಾಗಿತ್ತು! ನಗೆ ತಡೆಯಲಾರದೆ ಹೊರಗೆ ಬಂದು ಅಳ್ಳೆ ಬಿರಿಯುವಂತೆ ನಗತೊಡಗಿದನು.

ಆಗ ಅಲ್ಲಿಗೆ ಬಂದ ಲಕ್ಷ್ಮಣನು ಅಣ್ಣನ ನಗುವಿನ ಪರಿಗೆ ಬೆರಗಾದನು. ರಾಮನು,

'ನೋಡು, ನಡೆ ಒಳಗೆ, ಅತ್ತಿಗೆಗೆ ಬದಲು ಇರುವ ಹೆಣ್ಣು ಕೋತಿಯನ್ನು...' ಎಂದು ಮಾತು ಮುಗಿಸಲಾಗದೆ ಗಹಗಹಿಸಿ ನಗುತ್ತಿದ್ದನು.

ಲಕ್ಷ್ಮಣನು ಒಳಗೆ ಹೋಗಿ ನೋಡಿದನು. ಅವನು ನಗಲಿಲ್ಲ! ನಗೆಗೆ ಮೀರಿತ್ತು ಆ ಧೂಮದೃಶ್ಯ!

'ಕ್ಷಮಿಸಿ ನನ್ನನ್ನು, ಹಸಿಸೌದೆಯನ್ನು ತಂದ ಅಪರಾಧಿಯನ್ನು' ಎಂದು ಹೇಳಿ ಒಣಗಿದ ಪುಳ್ಳೆಗಳನ್ನು ತಂದು ಒಲೆಗೆ ಅಡಕಿದನು. ತನ್ನ ಸತಿ ಊರ್ಮಿಳೆಯನ್ನು ನೆನೆಯುತ್ತ ಊದಿದನು. ಧೂಮತನುವಿನಿಂದ ಅಗ್ನಿ ಧಗ್ಗನೆ ಚಿಮ್ಮಿತು. ಚಿಂತೆಯಿಂದ ಕಳೆಗುಂದಿದ್ದ ಮೈಥಿಲಿಯ ಮುಖ ಕಮಲದಿಂದ ಸಂತೋಷಕಾಂತಿ ಚಿಮ್ಮಿತು!

(ಸಿಹಿಗಾಳಿ, ಅಕ್ಟೋಬರ್ 2018)

❖❖❖

ನೆಳಲಿಗೇನ್ ನಡೆವವನ ತೊಂದರೆಯೆ?

ರಾಮಸೀತೆಯರು ಚಿತ್ರಕೂಟದಲ್ಲಿರುವಾಗ ಒಂದು ಬೆಳಿಗ್ಗೆ ಸೊಗಸಾದ ಸ್ನಾನದ ಆನಂದವನ್ನು ಸವಿಯಲು ನೀರಿಗೆ ಇಳಿದರು. ಪರ್ವತ ಅರಣ್ಯ ಪೃಥ್ವಿಯು ಆ ಸ್ನಾನ ದರ್ಶನಕ್ಕೆ ಕಣ್ಣಾದವು. ಮಹಿಮೆ ತಾನು ಮಾಡುವುದೆಲ್ಲವೂ ಮಹತ್ ಕಲೆಯಲ್ಲವೆ? ಮುಳುಗಿದರು ಮೂಡಿದರು; ಸರಸಕ್ಕಾಗಿ ಕಾಡಿದರು; ಸುಖಗಣಿಯನ್ನು ತೋಡಿದರು. ಬಯಸಿ ಒಂದೇ ಸಮನೆ ನೋಡಿದರು. ಹೃದಯ ಮಧುವನದಲ್ಲಿ ಸುಧೆ ಹರಿಯುವಂತೆ ಮಾಡಿದರು. ಸಂಯಮಿಗಳಾದ ಆ ದೇವ ದಂಪತಿಗಳು ಪ್ರೇಮಾನುರಾಗದ ಹಂಬಲು ತೊರೆದ ಮಾನಸ ಭೋಗಯೋಗಿಗಳು. ಅವರು ಬೆಟ್ಟದ ತಪ್ಪಲಿನ ಹೊಳೆಯ ತಣ್ಣನೆಯ ನೀರಿನಲ್ಲಿ ಮನ ತಣಿಯುವಂತೆ ಸ್ನಾನ ಮಾಡಿದರು!

ಘೋರ ಕಾನನದ ದೂರದಲ್ಲಿಯ ಗಿರಿಭುಜಎಲ್ಲೆಯಿಂದ ಲಕ್ಷ್ಮಣನು ಕರೆದನು. ಅವನ ಕೊರಳದನಿಯನ್ನು ಆಲಿಸಿದ ಅನಂತರ ಅವರು, ನಡುಬಾನಿಗೆ ಹಗಲೇರಿರುವುದನ್ನು ನೋಡಿ ತಟ್ಟನೆ ಎಚ್ಚೆತ್ತರು. ನೀರಾಟದಲ್ಲಿ ತಲ್ಲೀನರಾಗಿದ್ದ ಅವರೀರ್ವರು ಬೇಗನೆ ದಡಕ್ಕೆ ಬಂದರು. ನಾರುಡೆಯನ್ನು ಉಟ್ಟರು. ತನುವಿನ ಆಯಾಸವನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಬೆಟ್ಟವನ್ನು ಏರಿದರು.

ರಾಮ ಮುಂದೆ ಏರಿಹೋಗುತ್ತಿರುವುದನ್ನು ಕಂಡು ಸುಮಿತ್ರಾತ್ಮಜನು,

'ಅತ್ತಿಗೆಯನ್ನು ಏಕೆ ಈ ರೀತಿ ದಣಿಸುವಿರಿ? ಅಣ್ಣಯ್ಯ ಕಾಡುಕೊರಕಲಿನಲ್ಲಿ ಏಕೆ ಅಲೆದಾಡಿಸುವಿರಿ?' ಎಂದನು. ಆಗ ಸೀತೆಯು,

'ಮೈದುನನೆ ನೆಳಲಿಗೇನು ನಡೆವವನ ತೊಂದರೆಯೆ?' ಎಂದು ನುಡಿದಳು.

ಈ ನುಡಿಯನ್ನು ಸೀತೆಯಿಂದ ಹೇಳಿಸಿರುವ ಕುವೆಂಪು ಅವರು ದಾಂಪತ್ಯದ ದೀಪ್ತಿಯಲ್ಲಿ ಹೊಸ ಹೊಳಪನ್ನು ನೀಡಿದ್ದಾರೆ ಎನಿಸುತ್ತದೆ. ಇದುವರೆಗೆ ನಾವು

ಹೆಂಡತಿ ಗಂಡನ ನೆರಳು ಎಂಬುದಷ್ಟನ್ನೆ ಓದಿ ತಿಳಿದಿದ್ದೇವೆ. ಆದರೆ ಕುವೆಂಪು ಅವರು ಪತಿಯಾದವನು ಎಲ್ಲ ಕಷ್ಟ ಸುಖಗಳನ್ನು ಹೊರುವ ಜವಾಬ್ದಾರಿ ವ್ಯಕ್ತಿ. ಅವನನ್ನು ಅನುಸರಿಸುವ ಪತ್ನಿಗೆ ಆ ಹೊರೆ ಎಲ್ಲಿ? ಎಂಬ ಭಾವ ವ್ಯಕ್ತ ಪಡಿಸಿದ್ದಾರೆ. ಇದೊಂದು ವಿಶಿಷ್ಟ ರೀತಿಯ ದಾಂಪತ್ಯದ ಮಧುರಾಭಿವ್ಯಕ್ತಿ.

❖❖❖

ಭರತನ ಭ್ರಾತೃ ಭಕ್ತಿ

ಭ್ರಾತೃವತ್ಸಲನಾದ ಭರತನು ರಾಜ್ಯದ ಪಟ್ಟವನ್ನೊಲ್ಲದೆ ಅಣ್ಣ ರಾಮನನ್ನು ಕರೆತರಲು ಅರಣ್ಯಕ್ಕೆ ಹೊರಡಲು ಸಿದ್ಧನಾದನು. ಆ ಶುಭ ಸಮಾಚಾರ ಅಯೋಧ್ಯಾ ಪಟ್ಟಣದಲ್ಲಿ ಹರಡಿತು. ಆ ನಗರದ ಜನರು ನಾ ಮುಂದು ತಾ ಮುಂದು ಎಂದು ಭರತನ ಹಿಂದೆ ಸೈನ್ಯದಂತೆ ಸೇರಿದರು. ಅವರು ರಾಮಚಂದ್ರೋನ್ಮಾದದಿಂದ ದುಃಖಿ ಭರತನನ್ನು ಹಿಂದೆ ನೂಕಿ ಮುಂದೆ ಸಾಗಿದರು. ಅವರು ಸಾಗಿದ ರೀತಿ ರವಿಕುಲದ ನಾಗರಿಕತೆ ವಿಪಿನ ದೇಶವನ್ನು ಆಕ್ರಮಿಸಿದಂತಿತ್ತು.

ಭರತನು ಶತ್ರುಘ್ನ ಮತ್ತು ಮಂತ್ರಿ ಸುಮಂತ್ರರೊಡನೆ ಸೈನ್ಯ ಸಮೇತನಾಗಿ ಅಣ್ಣನನ್ನು ಕರೆದುಕೊಂಡು ಬರಲು ಹೊರಟನು. ಅವರು ಗುಹನ ಜೊತೆ ಜಾಹ್ನವಿ ನದಿಯನ್ನು ದಾಟಿದರು. ಋಷಿ ಭರದ್ವಾಜನ ಆತಿಥ್ಯವನ್ನು ಸ್ವೀಕರಿಸಿದರು. ಅವರಿಂದ ಬೀಳ್ಕೊಂಡು ನಡೆದು ಚಿತ್ರಕೂಟವನ್ನು ತಲುಪಿದರು. ಆ ಪರ್ವತವು ನೀಲಮೇಘಶ್ಯಾಮ ರಘುರಾಮನ ಸಂಗದಿಂದ ನೀಲಿಯೇ ಮೈವೆತ್ತು ನಿಂತಂತಿತ್ತು. ದೊರೆ ಭರತನ ಮನವರಿತ ಜನಸೇನೆಯು–ಮಂತ್ರಾಜ್ಞೆಯಿಂದ ಭೋರ್ಗರೆವ ಸಮುದ್ರ ಮೌನವಾಗುವಂತೆ ನಿಶ್ಯಬ್ದವಾಯಿತು. 'ಪೂಜ್ಯ ಸಾನಿಧ್ಯಮಿರೆ ಚಂಚಲತೆಯುಂ ಸುಸ್ಥಿರ ಮಪ್ಪುದಚ್ಚರಿಯೆ?'

ಭಾವಾವೇಶಕ್ಕೆ ಒಳಗಾದ ಭರತನಿಗೆ ಮಾತು ತೊದಲಾಯಿತು. ಒಡಲು ನಡುಗಿತು. ಕೊರಳು ಗದ್ಗದಿಸಿತು. ನಾರುಮಡಿಯುಟ್ಟ ಜಡೆ ಮುಡಿಯ ಬಾಲಋಷಿ ಎಲ್ಲರನ್ನೂ ಅಲ್ಲಿಯೆ ನಿಲ್ಲಿಸಿದನು. ಗುಹ, ಶತ್ರುಘ್ನ ಮತ್ತು ಸುಮಂತ್ರರೊಡನೆ ರಾಮಾಶ್ರಮದ ಕಾಡನ್ನು ಏರಿದನು. ತಾಯಿಯ ವಕ್ಷವನ್ನರಸುವ ಮಗುವಿನಂತೆ ಅವನ ನಡೆಯಿತ್ತು.

ಅವನು ಬೆಟ್ಟದ ತಪ್ಪಲಿನ ಅರಣ್ಯದಲ್ಲಿ ಬೆಳ್ಮುಗಿಲಿಗೆ ಎದುರಾಗಿ ಹೊಗೆ ಬೆರೆತ ಅಗ್ನಿ ಧ್ವಜವನ್ನು ಕಂಡನು. ಅದು ಅವನ ಬಯಕೆಯ ಬಾವುಟವನ್ನು ಎತ್ತಿ ಕರೆಯುತ್ತಿದೆಯೊ? ಹಿರಿದಾದ ಪಿತೃವಿನ ಕೃಪೆಯು ಹರಸಲು ಕೈ

ಬೀಸುತ್ತಿದೆಯೊ? ರಾಮನನ್ನು ಹುಡುಕುತ್ತ ಬಂದು ತನ್ನ ದೇಹವನ್ನೆ ಬೆಂಕಿಗೆ ಆಹುತಿಯಾಗಿ ಅರ್ಪಿಸಿದ ಮಂಥರೆಯ ಅಂತರಾತ್ಮದ ಪುಣ್ಯಲಕ್ಷ್ಮಿಯೆ–ಅಣ್ಣನು ಇರುವ ತಾಣವನ್ನು ಹೊಗೆಯ ಬೆರಳಿನಿಂದ ತೋರುತ್ತಿರುವಳೊ–ಎಂಬಂತೆ ಕಾಣುತ್ತಿತ್ತು. ಪ್ರೀತಿಯಿಂದ ಮುಂದುವರೆಯಲು ತುಂಬಿ ಹರಿಯುತ್ತಿರುವ ಮಂದಾಕಿನಿ ನದಿಯು ಎದುರಾಯಿತು. ಆಳುಗಳು ಕಟ್ಟಿಗೆಯಿಂದ ತೇಲುವ ತೆಪ್ಪವನ್ನು ಕಟ್ಟಿದರು. ಅದರ ಮೇಲೆ ನಿಂತ ಭರತನು ಆ ಧೂಮಲೇಖೆಯನ್ನೆ ನೋಡುತ್ತ ತನ್ನಲ್ಲಿ ತಾನು ಹೀಗೆಂದುಕೊಂಡನು.

'ಯಾರ ಮುಖಕಮಲವನ್ನು ನೋಡಿ, ಮಕರಂದವನ್ನು ಹೀರಿ ಜನಗಳ ಕಣ್ಣುಗಳೆಂಬ ದುಂಬಿಗಳು ತೃಪ್ತಿಯನ್ನು ಹೊಂದಲಾರವೊ–ಅದನ್ನು ಒಲಿದು ನೋಡುವ ತನಕ ನನಗೆ ಶಾಂತಿಯಿಲ್ಲ. ಯಾರ ಮಧುರಕಂಠದ ವೀಣಾನಾದವನ್ನು ಸವಿಸವಿದು ಕಿವಿಗಳು ತೃಪ್ತಿಯನ್ನು ಹೊಂದಲಾರವೊ–ಅಂತಹ ವಾಣಿಯನ್ನು ಆಲಿಸುವವರೆಗೂ ನನಗೆ ಶಾಂತಿಯಿಲ್ಲ. ಯಾರ ಪಾದಗಳೆಂಬ ನೈದಿಲೆಯ ನೀಲ ಸಾನ್ನಿಧ್ಯದಲ್ಲಿ ತೇಲಿ ಮೈ ಮರೆಯುವ ಸೊಗಸಿಗಾಗಿ, ಉಳಿದೆಲ್ಲ ಸುಖವನ್ನು ತೊರೆದು ವಸುಂಧರಾನಂದನೆ ಸೀತೆಯು ಬಂದಿರುವಳೊ–ಆ ಪಾದಗಳಿಗೆ ಮುಡಿಯೊತ್ತುವ ತನಕ ನನಗೆ ಶಾಂತಿಯಿಲ್ಲ. ದೊರೆ ಅಣ್ಣನಿಗೆ ಈ ಭೂಮಿಯನ್ನು ಒಪ್ಪಿಸಿ ಹೊರೆಯನ್ನು ಇಳಿಸಿಕೊಳ್ಳುವವರೆಗೂ–ಕುಸಿದು ಕುಗ್ಗಿರುವ ನನ್ನ ಬಾಳಿಗೆ ಶಾಂತಿಯಿಲ್ಲ.'

ಭರತನು ತೆಪ್ಪ ದಡವನ್ನು ಸೇರಲು–ರಾಮಚರಣ ಸ್ಪರ್ಶದಿಂದ ಪೂಜ್ಯವಾದ ಆ ಮಣ್ಣನ್ನು ಮುಟ್ಟಿ ನಮಸ್ಕರಿಸಿದನು. ಗುಹನು ತೋರಿದ ಮಾರ್ಗದಲ್ಲಿ ನಡೆದು ಆಶ್ರಮ ಸಮೀಪಿಸಿದನು. ಅಲ್ಲಿ ರಾಮಚಂದ್ರ, ದೇವಿ ಸೀತಾಮಾತೆ, ಸೌಮಿತ್ರಿಯನ್ನು ಕಂಡನು.

ಅವನು ಉನ್ಮಾದಕ್ಕೊಳಗಾದವನಂತೆ–ಬೆಟ್ಟ ತಲೆ ಕೆಳಗಾಗಿ ಉರುಳುವಂತೆ–ಪರ್ವತದ ಶೃಂಗದ ಕಡೆಗೆ ನುಗ್ಗಿ ಓಡಿದನು. "ಅಣ್ಣಯ್ಯ ಓ" ಎಂದು ಹೇಳಿ ಹೆಜ್ಜೆ ಮುಂದಿಡುವ ಮೊದಲೆ, ತನ್ನ ಭಾರಕ್ಕೆ ತಾನೇ, ಬೇರು ಬಳಲಿದ ತರುಣತರು ಬೀಳುವಂತೆ ದೊಪ್ಪನೆ ಬಿದ್ದನು. ಪ್ರಿಯರ ಅಗಲಿಕೆಯ ನೋವಿಗೆ ಸಮನಾದುದು ಮತ್ತೊಂದಿಲ್ಲ. ಅದಕ್ಕೆ ಕಬ್ಬಿಣ ಕರಗುತ್ತದೆ; ವಜ್ರ ಬಾಡುತ್ತದೆ. ನರಕದ ಶಿಕ್ಷಾಚಾರ್ಯನೂ ಸಹ ಇಷ್ಟದವರ ವಿರಹಕ್ಕಿಂತ ಮಿಗಿಲಾದ ಸಂಕಟದ ಶಿಕ್ಷೆಯನ್ನು ಸೃಷ್ಟಿಸಲಾರ.

ಯುಗದ ಅಂತ್ಯದ ಸೂರ್ಯನಂತೆ ದೀನನು, ಮ್ಲಾನವದನನು ಆದ ಭರತನು ಹಿರಿಯನಾದ ರಾಮನಿಗೆ, ಕಿರಿಯರಾದ ಲಕ್ಷ್ಮಣ, ಸೀತೆಯರಿಗೆ ದೂರದಿಂದಲೇ ಮಣಿದನೆನ್ನುವಂತೆ ದಿಂಡುರುಳಿದನು.

ಜೀರ್ಣವಾದ ನಾರು ಬಟ್ಟೆಯನ್ನು ತೊಟ್ಟು, ಜಡೆಗಟ್ಟಿದ ತಲೆಗೂದಲಿನ ಭರತನನ್ನು ಕಷ್ಟದಿಂದ ಗುರುತಿಸಿದ–ಮಹಾಕಾಶಕ್ಕೆ ಸಮನಾದ, ನೀಲ ಕಮಲದಂತೆ ಪ್ರಕಾಶಿಸುತ್ತಿದ್ದ ರಾಮಚಂದ್ರನು–ಕೂಡಲೆ ಓಡೋಡಿ ಬಂದನು. ಮೇಲಕ್ಕೆತ್ತಿದನು. ನೊಂದ ಎದೆಗೆ ತಮ್ಮನನ್ನು ಬಿಗಿದಪ್ಪಿಕೊಂಡನು. ತಲೆಯನ್ನು ಮೂಸಿದನು. ಮುದ್ದಾಡಿ ಹಣೆಗೆ ಮುತ್ತಿಕ್ಕಿದನು. ಗದ್ಗದಿತನಾದನು. ತನ್ನ ಕಣ್ಣಿನ ಗಂಗೆ ತಮ್ಮನ ಕಣ್ಣ ಯಮುನೆಯನ್ನು ಸಂಗಮಿಸಲು ಹೀಗೆ ಕೇಳಿದನು:

'ತಮ್ಮನೆ ಇದೇನು? ತಂದೆಗೆ ಅಸುಖವೆ? ರಾಜ್ಯಕ್ಕೆ ವಿಪತ್ತೆ? ತಾಯಂದಿರಿಗೆ ಅನಾರೋಗ್ಯವೆ? ಕೋಸಲ ಪ್ರಜೆಗಳಿಗೆ ತೊಂದರೆಯೆ? ಈ ನಾರುಬಟ್ಟೆಯೇಕೆ? ಜಟೆಯೇಕೆ? ಮುಖವೇಕೆ ಕಳೆಗುಂದಿದೆ? ಮೈಯೇಕೆ ಸೊರಗಿದೆ? ಈ ದುರ್ದಶೆಯ ಸಂಕಟ ನಿನಗೇಕೆ? ಏಕೆ ಹೇಳಯ್ಯ, ಓ ನನ್ನುಸಿರಿನ ಸೋದರನೆ ಹೇಳು.'

ಭರತನಿಗೆ ಅಣ್ಣನ ತೋಳ್ತೆಕ್ಕೆಯೆ ತಾಯಿಯ ಮಡಿಲಾಗಿತ್ತು. ಬಳಲಿದ ಶಿಶು ನೋವನ್ನು ಮರೆತು ನೆಮ್ಮದಿಯನ್ನು ಅನುಭವಿಸಿ ಮುಗ್ಧ ನಿದ್ರೆಗೆ ಜಾರುವಂತೆ, ಸೀತಾಪತಿಯ ಧೀರೋದಾತ್ತ ವಕ್ಷ ಸಮುದ್ರದ ನೀಲನಾವೆಯಲ್ಲಿ ಶಾಂತಿಯ ತುರಿಯಾವಸ್ಥೆಯಲ್ಲಿ ತೇಲಾಡಿದನು. ಮೈ ಮರೆತ ತಮ್ಮನನ್ನು ಕರುಣಾ ಸಿಂಧು ರಾಮನು ಸೀತೆ, ಸೌಮಿತ್ರಿ, ಗುಹರ ಸಹಾಯದಿಂದ ಪರ್ಣಕುಟಿಗೆ ಎತ್ತಿಕೊಂಡು ಹೋದನು.

ಕುವೆಂಪು ಅವರು ಭರತನ ಆ ಸ್ಥಿತಿಯನ್ನು ಒಂದು ದ್ವೀಪಕ್ಕೆ ಹೋಲಿಸಿ ಮಹೋಪಮೆಯನ್ನು ಸೃಷ್ಟಿಸಿದ್ದಾರೆ. ಅದು ಅವರ ವೈಜ್ಞಾನಿಕ ಅರಿವಿನ ಕಲಾರೂಪವಾಗಿದೆ.

ದೇವತೆಗಳು ಮತ್ತು ಅಸುರರು ಮಂದರ ಪರ್ವತಕ್ಕೆ ಆದಿಶೇಷನನ್ನು ಕಟ್ಟಿ ಸಮುದ್ರವನ್ನು ಕಡೆದಾಗ ಅದು ಉಕ್ಕಿತು. ಅದೇ ರೀತಿ ಭೂಗರ್ಭದಲ್ಲಿ ಒಂದು ಶಿಥಿಲ ಭಾಗದ ಪಲ್ಲಟದ ಕಾರಣದಿಂದ ಉದ್ರಿಕ್ತವಾದ ಅಟ್ಲಾಂಟಿಕ್ ಸಮುದ್ರವು ಪೆಸಿಫಿಕ್ ಸಮುದ್ರಕ್ಕೆ ಡಿಕ್ಕಿ ಹೊಡೆಯಿತು. ಅವುಗಳ ಪರಸ್ಪರ ಅಪ್ಪಳಿಕೆಯಿಂದ ಅಡಿಯೇ ಮೇಲಾದಂತೆ ಅಲೆಗಳು ಹೊಮ್ಮಿದವು. ತಿಮಿಂಗಲಗಳು ತೃಣಸಮಾನದಂತೆ ಹೊರಗೆ ಎಸೆಯಲ್ಪಟ್ಟವು. ಆ ಸಂದರ್ಭದಲ್ಲಿ ಒಂದು ಅದ್ಭುತ

ದ್ವೀಪ ಖಂಡವು ಹೊರಹೊಮ್ಮಿ ಬಂದಿತು. ಅದು ಸಸ್ಯ ಹೀನವು ಪ್ರಾಣರಹಿತವು ಆಗಿತ್ತು.

ಅದನ್ನು ಹೆತ್ತ ಸಮುದ್ರ ಮಾತೆಯು ಪ್ರಸವ ವೇದನೆಯಿಂದ ಚೇತರಿಸಿಕೊಂಡು ತಾನು ಹೆತ್ತ ಆ ಶಿಶುದ್ವೀಪವನ್ನು ನೋಡಿದಳು. ಅದು ಬರಿ ನೆಲದ, ಬತ್ತಲೆಯ ಬೇಸರದ, ನಿರ್ಜೀವಿಯಾಗಿತ್ತು. ಅವಳ ಅಲೆಯೆಂಬ ಅಳ್ಳೆ ತಿದಿ ಒತ್ತಿದಂತೆ ನಿಡುಸುಯ್ದಳು. ಮೋಹವಶಳಾಗಿ ಆ ದ್ವೀಪವನ್ನು ತನ್ನ ತರಂಗಬಾಹುಗಳಿಂದ ಮುದ್ದಾಡಿದಳು. ನೊರೆಯ ಮೃದು ಚುಂಬನದ ಉಚ್ಛ್ವಾಸದಿಂದ ತನ್ನ ಉಸಿರ ಚೇತನವನ್ನು ಆ ದ್ವೀಪ ವತ್ಸನ ದೇಹಕ್ಕೆ ನೀಡುವ ವ್ರತದಲ್ಲಿ ತೊಡಗಿದಳು.

ಆ ತಪೋದ್ವೀಪಕ್ಕೆ ಸಂವತ್ಸರಗಳು ತಮ್ಮ ಜೀವನ ತೈಲವನ್ನು ಧಾರೆಯೆರೆಯುತ್ತ, ಕಾಲದಾಚೆಯ ನಿತ್ಯತೆಯ ನಿಧಿಗೆ ಬ್ರಹ್ಮ ಸನ್ನಿಧಿಗೆ ಸಾಗುತ್ತಿದ್ದವು. ಹೀಗೆ ನೂರಾರು ಯುಗಗಳು ಕಳೆದವು. ಕಡಲ ತಾಯಿಯ ವ್ರತ ಫಲ ನೀಡಿತು. ಆ ದ್ವೀಪದ ಒಡಲಿನಲ್ಲಿ ಉಸಿರ ಮಿಂಚು ಸಂಚರಿಸಿತು! ತನ್ನ ಸೃಷ್ಟಿಗೆ ತಾನೆ ಬೆರಗಾಗಿ ಸಸ್ಯ ಸಂಪತ್ತಿನ ಹಸಿರು ಚಿಮ್ಮಿತು! ಆ ದ್ವೀಪದ ಒಡಲನ್ನು ಮುಚ್ಚಿ ಶೃಂಗರಿಸಿ ಕಾಡು ಕಳಕಳಿಸಿ ಮೆರೆಯಿತು! ಅದು ಕಣ್ದೆರೆದಂತಾಯಿತು. ಆದರೆ ಆ ಜೀವಕ್ಕೆ ಬಾಯ್ದೆರೆದಿಲ್ಲ. ಕಾರಣ ಅಲ್ಲಿ ಇನ್ನೂ ಹಕ್ಕಿಗಳು, ಪ್ರಾಣಿಗಳು ಹುಟ್ಟಿಲ್ಲ.

ಭರತನು ಆ ದ್ವೀಪದ ಹಾಗೆ ಅಣ್ಣ ರಾಮಚಂದ್ರನ ನೀಲಿ ತೋಳುಗಳ ಆಲಿಂಗನದಲ್ಲಿ ನುಡಿ ಮೊಳೆಯದ ಹಸುಳೆಯ ರೀತಿ ಇದ್ದ. ಶೈತ್ಯೋಪಚಾರದಿಂದ ಕಣ್ಣು ತೆರೆದ. ಏನೇ ಕೇಳಿದರು ನುಡಿಯಲಾರದೆ ಅಳುವ ಪ್ರೀತಿಯ ತಮ್ಮನ ಮೌನ ಮುಖವನ್ನು ಅಣ್ಣ ನೋಡಿದ. ಆ ದೈನ್ಯ ಮುಖದಲ್ಲಿ ಕಂಡ ಮೃತ್ಯು ಛಾಯೆಯನ್ನು ನೋಡಿ ನಡುಗಿ ಹೋದ. ಶತ್ರುಘ್ನನ ಕಡೆ ನೋಡಲು, ಅವನು ಮುಖವನ್ನು ಕೆಳಗೆ ಮಾಡಿಕೊಂಡು ಕುಳಿತ. ಮಂತ್ರಿಯ ಕಡೆ ನೋಡಲು ಅವನು ಗದ್ಗದಿಸಿದ. ರಾಮನ ಇಂಗಿತವನ್ನು ಅರಿತ ಗುಹನು ಕಠೋರ ವಾರ್ತೆ– ಪಿತೃದೇವ ದಶರಥನ ಮರಣವನ್ನು, ಭರತನ ಸಂತಾಪವನ್ನು ಹೇಳಿದ. ಮತ್ತು ಅಣ್ಣನನ್ನು ಕರೆದು ತರುವ ಪ್ರತಿಜ್ಞೆ ಮಾಡಿ ವ್ರತಧಾರಿಯಾಗಿರುವುದನ್ನು ತಿಳಿಸಿದ.

ಧೀರನಾದ ರಾಮನ ಎದೆ ದಿಗಿಲುಗೊಂಡಿತು. ಸೀತೆಯ ಕಣ್ಣಿಗೆ ಕತ್ತಲು ಆವರಿಸಿತು. ಅವನಿಗೆ ಮೈ ಬೆವತು ಆ ಸೆಕೆಗೆ ಮನಸ್ಸು ಕದಡಿತು. ಆತ್ಮ ಬೆದರಿತು. ನಿಟ್ಟುಸಿರು ಬಿಡುತ್ತ ಗುಹನ ತೋಳುಗಳಿಗೆ ಒರಗಿದನು. ಬಂಡೆಯಿಂದ ಬನದ ತೊರೆ ಸೋರುವಂತೆ ಮುಚ್ಚಿದ ಕಣ್ಣುಗಳಿಂದ ಕಣ್ಣೀರು ಸುರಿಯಿತು. ಎಚ್ಚರಗೊಂಡು 'ತಂದೆ ಹೋದನೆ, ತಮ್ಮ ಸೌಮಿತ್ರಿ?' ಎಂದು ಹೇಳುತ್ತ ಮೈಥಿಲಿಯ ಮುಖನೋಡಿ ನಿಟ್ಟುಸಿರು ಬಿಟ್ಟು ಮತ್ತೆ ಮೈಮರೆವಿಗೆ ಒಳಗಾದನು.

ಶೋಕಾಗ್ನಿಗೆ ಒಳಗಾಗಿ ತೊಳಲಾಡುತ್ತಿದ್ದ ಅಣ್ಣನನ್ನು ಭರತನು ಅಪ್ಪಿಕೊಂಡನು. ಸಮಾಧಾನದ ನುಡಿಗಳನ್ನು ಹೇಳಿದನು. ಅವನ ಮಾತಿನ ಅರ್ಥಕ್ಕೆ ಅಲ್ಲದಿದ್ದರೂ–ಒಲ್ಮೆಯ ದನಿಯ ಆರ್ದ್ರ ಸಂಪ್ರೀತಿಗೆ ಎದೆಯ ಕುದಿ ತಣ್ಣಗಾಯಿತು. 'ಅಣ್ಣ ದೇವನೆ ಏಳು. ತಂದೆಗೆ ಎಳ್ಳುನೀರು ಬಿಡಲು ಏಳು' ಎಂದನು. ಆ ನುಡಿ ಕೇಳಿ ಮಂತ್ರದಿಂದ ಶಾಂತನಾದ ರೀತಿಯಲ್ಲಿ ಅಮೃತತ್ವದ ಅರಿವಿಗೊಳಗಾದಂತೆ ಮೇಲೆದ್ದನು.

ಮಂತ್ರಿಯು ಸಹೋದರರನ್ನು ಮಂದಾಕಿನಿಯ ಪುಣ್ಯತೀರ್ಥಕ್ಕೆ ಕರೆದೊಯ್ದನು. ಅವರು ತಂದೆಗೆ ತರ್ಪಣ ನೀಡಿದರು. ಅನಂತರ ಪರ್ಣಕುಟಿಗೆ ನಡೆದರು. ಅಷ್ಟರಲ್ಲಿ ಅಲ್ಲಿಗೆ ವಸಿಷ್ಠರೊಡಗೂಡಿ ಪುರಜನ, ಪರಿಜನರು, ಗುರುಜನರು; ತಾಯಿಯರಾದ ಕೌಸಲ್ಯೆ, ಸುಮಿತ್ರೆ, ಕೈಕೆಯರು ಕಾಲ್ ನಡಿಗೆಯಿಂದ ಬಂದು ಸೇರಿದ್ದರು.

ಶ್ರೀರಾಮನು ಅಯೋಧ್ಯೆ ಬಿಟ್ಟಾಗಿನಿಂದ ಪ್ರಾರಂಭಿಸಿ ತಾನು ಚಿತ್ರಕೂಟಕ್ಕೆ ಬಂದ ತನಕದ ದಾರುಣ ಕತೆಯನ್ನು ಭರತ ಹೇಳಿದನು. ಕಮಲಲೋಚನನು ಕಣ್ಣೀರು ಸುರಿಸುತ್ತ ಅದನ್ನು ಕೇಳಿದನು. ಭರತನು ಅಣ್ಣನನ್ನು ಅಯೋಧ್ಯೆಗೆ ಮರಳಿ ಬರಲು ಪ್ರಾರ್ಥಿಸಿ ಅಭಿವ್ಯಕ್ತಿಸಿದ ಭಾವಾಭಿಲಾಷೆಯ ನುಡಿ ಕೇಳಿ ತಪಸ್ವಿಗಳ ಎದೆ ಮರುಗಿತು, ಅಂತೇ ನಲಿಯಿತು.

ಮಾರುತ್ತರದ ಹನಿಮಳೆಗೆ ಜನರ ಮನಸ್ಸು ಚಾತಕ ಪಕ್ಷಿಯಂತೆ ಕಾತರಿಸಿತ್ತು. ರಾಮನ ಮನಸ್ಸು ಚಿಂತಾಬ್ಧಿಯ ತಳದಲ್ಲಿ ಮುಳುಗಿತು. ಪಿತೃವಾಕ್ಯ ಪರಿಪಾಲನೆಯ ಸಂಕೋಲೆಯಿಂದ ಧರ್ಮವೆಂಬ ಸ್ತಂಭಕ್ಕೆ ಕಟ್ಟಿಹಾಕಲ್ಪಟ್ಟಿದ್ದ ಅವನ ಧೈರ್ಯವೆಂಬ ಐರಾವತವು ಹೊಯ್ದಾಡುತ್ತಿತ್ತು. ಅದನ್ನು ಗಮನಿಸಿದ ವಸಿಷ್ಠರು ಮಾವುತನು ಆನೆಯನ್ನು ಅಂಕುಶದಿಂದ ತಿವಿಯುವಂತೆ ಹೀಗೆ ನುಡಿದರು:

'ಸೂರ್ಯವಂಶದ ರಾಜಕುಮಾರನೇ, ನಿನ್ನ ನೈಜ ಧರ್ಮವನ್ನು, ಜನದ ಉದ್ದೇಶವನ್ನು ನೆನೆ. ಆಯಸ್ಸಿನ ಪ್ರಮಾಣವನ್ನು ಕಾಡು ಅಲೆದು ಹಾಳು ಮಾಡಿಕೊಳ್ಳುತ್ತಿಯೊ ಅಥವಾ ಲೋಕದ ಉದ್ಧಾರಕ್ಕೂ ಆತ್ಮ ಸಂಸ್ಕೃತಿಗೂ ಮೀಸಲಾಗಿಡುವೆಯೊ, ನೆನೆ.'

ಗುರುಗಳ ಮಾತಿನಿಂದ ರಾಮನ ಮನದ ಅಸ್ಥಿರತೆ ಕೊನೆಗೊಂಡಿತು. ಸ್ವಪ್ರಜ್ಞೆ ಜಾಗೃತಗೊಂಡು ಅದ್ಭುತವಾದ ವಜ್ರ ಸುಸ್ಥಿರ ದೃಢತೆ ಮೂಡಿತು. ಋತದರ್ಶಿಯಾದ ಆತನು ಭರತ, ಗುರುಗಳು, ತಾಯಂದಿರು, ಪ್ರಜೆಗಳನ್ನು ಕುರಿತು ತನ್ನ ಅಪ್ರತಿವಾದ ವೇದವನ್ನು ಶಾಂತವಾಗಿ ಹೀಗೆ ವ್ಯಕ್ತಪಡಿಸಿದನು.

'ನಿಮ್ಮ ಕರುಣೆಯ ಶಿಶುವಾದ ನಾನು ಧನ್ಯ. ಪೂಜ್ಯರ ಆಶೀರ್ವಾದ ಹಸ್ತದಿಂದ ಸದಾ ಸುಕ್ಷೇಮಿ. ನಿರಂತರ ಕಲಿ, ಬಲಿ, ಸುಖಿಯಾಗಿದ್ದು ಧರ್ಮ ಸಂಪ್ರೇಮಿ. ಪಿತೃದೇವನ ನಿಧನವನ್ನು ಕೇಳಿ ನನ್ನ ಬರಿದಾದ ಮತಿಯು ತತ್ತರಿಸಿತು. ತಾಯಿಯ ಶೋಕಾಗ್ನಿಯನ್ನು ಮುಟ್ಟಿದ ಎದೆ ಬೇಯುತ್ತಿದೆ. ಪ್ರಜೆಗಳ ಪ್ರೀತಿಗೆ ಆತ್ಮವು ಅಯೋಧ್ಯೆ ನಗರದತ್ತ ತೇಲುತ್ತಿದೆ. ಭರತನ ಬಂಧು ಪ್ರೇಮವೆಂಬ ಸರ್ಪವು ನನ್ನ ಸರ್ವಸ್ವವನ್ನು ಬಿಗಿದೊತ್ತಿ ಸುತ್ತಿ ನುಂಗುತ್ತಿದೆ. ಆದರೂ ಪಿತೃ ವಾಕ್ಯ ಪರಿಪಾಲನಾರ್ಥವಾಗಿ ನಾನು ಹದಿನಾಲ್ಕು ವರ್ಷ ವನವಾಸಿಯಾಗಿರುತ್ತೇನೆ. ತಂದೆ ತೀರಿದರೂ ತಂದೆಯಾಜ್ಞೆ ತೀರಿಲ್ಲ. ಧರ್ಮವೆಂಬುದು ತಂದೆಗಿಂತ ಹಿರಿದಾದ ತಂದೆ. ಅದು ಚಿರಂಜೀವಿ.

'ಯಾವ ಕಾರ್ಯಕ್ಕಾಗಿ ತಂದೆ ಪ್ರಾಣವನ್ನು ಬಿಟ್ಟನೋ, ತಾಯಿ ತನ್ನ ತೇಜಸ್ಸನ್ನು ಈಡಾಡಿದಳೋ–ಆ ದೇವದೇವತೆಗಳ ಸಂಕಲ್ಪಕ್ಕೆ ನನ್ನಿಂದ ಭಂಗ ಬರದು. ರಾಮನ ಈ ಪ್ರತಿಜ್ಞೆ ಮೇರು ಪರ್ವತದಂತೆ ಸುಸ್ಥಿರ.'

ಸೀತಾನಾಥನ ಗಂಭೀರ ಮಾತುಗಳನ್ನು ಕೇಳಿ ಜನ ಸಮೂಹ ಮೌನವನ್ನು ತಾಳಿತು. ಅದನ್ನು ಕದಡುವಂತೆ ಭರತನ ಅಳುವ ನಿಟ್ಟಿಸಿರು ಹೊಮ್ಮುತ್ತಿತ್ತು. ಆಗ ವಸಿಷ್ಠ ಮುನಿಗಳು,

'ಭರತೇಂದ್ರ, ಮೊದಲೇ ನಿನಗೆ ಜಾಬಾಲಿ ಹೇಳಲಿಲ್ಲವೆ? ರವಿಯನ್ನು ಪಶ್ಚಿಮದಲ್ಲಿ ಹುಟ್ಟು ಎಂದು ಕಾಡಿಸುವಂತೆ ನೀನು ರಾಮಚಂದ್ರನನ್ನು ಕಾಡಿಸುತ್ತಿರುವೆ. ವಿಶ್ವ ಶಕ್ತಿಗೆ ಸ್ಫೂರ್ತಿಯಾದ ಈತನು ವಿಶ್ವವ್ಯಕ್ತಿ. ಕಪ್ಪೆಚಿಪ್ಪು ಸಮುದ್ರವನ್ನು ತುಂಬಿಕೊಳ್ಳಲು ಸಾಧ್ಯವೆ? ಈ ರಾಮನ ಆತ್ಮದ ವಿರಾಟ್ ರೆಕ್ಕೆಗಳ ಬಡಿತಕ್ಕೆ ಕೋಸಲ ದೇಶದ ಆಕಾಶ ವಿಸ್ತಾರವು ಅಲ್ಪ. ರಾಮನ ಇಚ್ಛಾ ಗರುಡನು ಅನಂತ ಆಕಾಶ ಯಾತ್ರಿ. ಅನಂತವನ್ನು ಅಲ್ಪಕ್ಕೆ ಎಳೆಯುವ ಸಾಹಸವನ್ನು ಬಿಡು. ಏಳು, ಶೋಕವನ್ನು ಬಿಡು. ನಾನು ಹೇಳುವಂತೆ ಮಾಡು. ಲೋಕಕ್ಕೆ, ನಿನಗೆ, ಕೋಸಲಕ್ಕೆ ಒಳಿತಾಗುವುದು.' ಎಂದು ಹೇಳಿ ಸಂತೈಸಿದರು.

ಆನೆಯು ದಂತದಿಂದ ತಿವಿದರೂ ಸೊಂಡಿಲಿನಿಂದ ಅಪ್ಪಿಕೊಂಡಿತು ಎಂಬಂತೆ ರಾಮನ ನುಡಿಮೊನೆ ಭರತನನ್ನು ಇರಿದಿದ್ದರೂ – ತಾವಿಬ್ಬರೂ ಒಂದೇ ಎಂದು ಪ್ರಕಟ ಪಡಿಸಲು ಮತ್ತು ಗುರುವಾಕ್ಯದಲ್ಲಿ ಸೋದರನಿಗೆ ಶ್ರದ್ಧೆಯುಂಟಾಗುವಂತೆ ಮಾಡಲು – ರಾಮನು ತಮ್ಮನನ್ನು ತಬ್ಬಿಕೊಂಡನು.

ಭರತನು ಮುನಿಯ ಆದೇಶದಂತೆ ರಾಮಪಾದ ಸ್ಪರ್ಶದಿಂದ ಮಹಿಮಾನ್ವಿತವಾದ ದಿವ್ಯ ಪಾದುಕೆಗಳನ್ನು 'ದೇವನಡಿ ದೇವಂಗೆಪಡಿ' (ಪಡಿ = ಸಮಾನವಾದುದು) ಎನ್ನುತ್ತ ತಲೆಯ ಮೇಲಿರಿಸಿಕೊಂಡು ಹೀಗೆ ಹೇಳಿದನು:

'ದೇವತೆಗಳೇ, ಗಗನ ಗಿರಿ ನದಿ ವನಸ್ಥಳಗಳೇ, ಮುನಿಗಳೇ, ಆಚಾರ್ಯರೇ, ಧರ್ಮದೇವತೆಗಳೇ, ಮಾತೃದೇವತೆಗಳೇ, ಪರಿಜನ ಪ್ರಜೆಗಳೇ, ಆಲಿಸಿರಿ. ಈ ಪೂಜ್ಯ ಪಾದುಕೆಗಳನ್ನು ಪೂಜ್ಯ ಪಾದವೆಂದು ಭಾವಿಸಿ ಸಿಂಹಾಸನದೊಳಿಟ್ಟು ಪೂಜಿಸುವೆನು. ಭ್ರಾತೃದೇವನಿಗೆ ಸಲ್ಲಿಸುವ ಸೇವೆ ಇದೆಂದು ತಿಳಿದು ಹದಿನಾಲ್ಕು ವರ್ಷಗಳು ರಾಜ್ಯವನ್ನು ಕಾಪಾಡುತ್ತೇನೆ. ಅವಧಿ ಮುಗಿದ ಮರುದಿನ ನನಗೆ ಶ್ರೀರಾಮದರ್ಶನ ಆಗದಿದ್ದರೆ ಆತ್ಮಲೋಕದಲ್ಲಿ ಅವನನ್ನು ಸಂದರ್ಶಿಸಲು ದೇಹವನ್ನು ಬೆಂಕಿಗೆ ಅರ್ಪಿಸುತ್ತೇನೆ. ಅಲ್ಲಿಯ ತನಕ ನಾನು ಜಟಾವಲ್ಕಲ ಧಾರಿಯಾದ ವ್ರತಿ. ರಾಮಾಭ್ಯುದಯಕ್ಕಾಗಿ ತಪೋಮಗ್ನನಾಗುವ ನನಗೆ ನೀವು ಕರುಣಿಸಿ, ಹರಸಿ.'

ಭರತನು ಪೂಜ್ಯಪಾದನ ಪೂಜ್ಯಪಾದುಕಾ ಕಿರೀಟದ ತೇಜಸ್ಸಿನಿಂದ ಸಾಮ್ರಾಟನಾಗಿ ಚಿತ್ರಕೂಟದಿಂದ ಅಯೋಧ್ಯಾಭಿಮುಖವಾಗಿ ನಡೆದನು.

❖❖❖

ಕೃಪಾಕೇತು ಶ್ರೀರಾಮಚಂದ್ರ

ಭರತನು ಅಣ್ಣ ರಾಮಚಂದ್ರನನ್ನು ಮರಳಿ ಅಯೋಧ್ಯೆಗೆ ಕರೆತರಲು ಶತ್ರುಘ್ನ, ಮಂತ್ರಿ ಸುಮಂತರೊಡಗೂಡಿ ಸೈನ್ಯ ಸಮೇತ ಚಿತ್ರಕೂಟಕ್ಕೆ ಹೋದನು. ಅಲ್ಲಿ ರಾಮ, ಸೀತೆ, ಲಕ್ಷ್ಮಣರನ್ನು ಕಂಡನು. ಗುಹನು ರಾಜ ದಶರಥನ ಮರಣವಾರ್ತೆ ತಿಳಿಸಿದನು. ದುಃಖಿತರಾದ ಆ ಸಹೋದರರು ತಂದೆಗೆ ಮಂದಾಕಿನಿ ದಿವ್ಯ ತೀರ್ಥದಿಂದ ತರ್ಪಣ ನೀಡಿದರು. ಪರ್ಣಕುಟಿಗೆ ಹಿಂದಿರುಗಿದರು.

ಅನಂತರದಲ್ಲಿ ಕಾಲುನಡಿಗೆಯಿಂದ ವಸಿಷ್ಠರ ಜೊತೆ ತಾಯಿಯರಾದ ಕೌಸಲ್ಯೆ, ಸುಮಿತ್ರೆ, ಕೈಕೆಯರು ಪುರಜನ ಪರಿಜನರೊಡನೆ ಅಲ್ಲಿಗೆ ಬಂದು ಸೇರಿದರು. ಅಲ್ಲಿ ರಾಮನನ್ನು ಕಂಡು ಇನ್ನೊಂದು ಮಂದಾಕಿನಿಯೆ ಹರಿಯಿತೇನೊ ಎಂಬಂತೆ ಗೋಳಿಟ್ಟರು. ಹೃದಯದಿಂದ ಹೊಮ್ಮಿ ಹರಿದ ಕಣ್ಣ ಹೊಳೆಯಲ್ಲಿ ಮತ್ತೊಮ್ಮೆ ರಾಮಚಂದ್ರನು ಮಿಂದನು.

ಅವನು ಶೋಕಿಸುತ್ತ ಕೌಸಲ್ಯೆಯ ಅಡಿಗೆ ಎರಗಿದನು. ಆ ಬೆಂದೆದೆಯ ತಾಯಿಯು – ಮಲಿನ ವಸನದ, ಮುಖ ಬಾಡಿದ ಕರುಣ ಮೂರ್ತಿ ಮಗನನ್ನು ಕಂಡು ಬಿಕ್ಕಿ ಬಿಕ್ಕಿ ಅತ್ತಳು. ಹೋದ ಆಸೆಯು ಬರುವ ಆಸೆಯನ್ನು ತಬ್ಬುವಂತೆ ತಬ್ಬಿಕೊಂಡಳು. ಲಕ್ಷ್ಮಣ, ಸೀತೆಯರು ನಮಿಸಿದರು. ಹಿರಿಯ ತಾಯಿ ಅವರನ್ನು ಹರಸಿದಳು. ಸೊಸೆಯನ್ನು ನೋಡಿ ಮುದ್ದಾಡುತ್ತ ಅರಸು ಕುವರಿಗೆ ಬಂದ ಗತಿಗೆ ಗೋಳಾಡಿದಳು.

ರಾಮನು ಸುಮಿತ್ರೆಗೆ ನಮಸ್ಕರಿಸಿದನು. ತಾಯಿ ಕೈಕೆಯನ್ನು ಹುಡುಕಿ ನೋಡಿದನು. ದೂರದಲ್ಲಿ ಪಶ್ಚಾತ್ತಾಪದ ಶೋಕಭಾರದಿಂದ ತಲೆಬಾಗಿ ನಿಂತಿದ್ದ ಭರತನ ತಾಯಿ ಕಿರಿಯಮ್ಮನನ್ನು ಕಂಡನು. ಕರುಣಿ ರಾಮಚಂದ್ರ ತಕ್ಷಣ ಆಕೆಯ ಬಳಿಗೆ ಧಾವಿಸಿದನು. ಪಾಪಿಯನ್ನು ಬೆಂಬಿಡದೆ ಹಿಂಬಾಲಿಸಿ ಅಟ್ಟಿ ಹಿಡಿಯುವ ಕೃಪಾಕೇತು (ಕೃಪೆಯ ಬೆಳಕಿನ ಕಿರಣ) ಏನಂತೆ ಆ ತಾಯಿಯ ಪಾದಗಳನ್ನು ಮುಟ್ಟಿ ಹಿಡಿದು ನಮಸ್ಕರಿಸಿದನು. ಸಿಡಿಲಿನ ಹೊಡೆತಕ್ಕೆ ಮರವು

ಉರುಳಿ ಬೀಳುವಂತೆ ಕೇಕಯ ರಾಜಕುಮಾರಿ ರಾಮನ ಪಾದಗಳಿಗೆ ಉರುಳಿ ಬಿದ್ದಳು. ಭಗವತ್ ಪ್ರೀತಿಯು ಭಕ್ತನ ಆತ್ಮವನ್ನು ಎತ್ತುವಂತೆ ರಾಮನು ಆ ತಾಯಿಯನ್ನು ಹಿಡಿದೆತ್ತಿದನು. ಆ ದಿವ್ಯ ಪ್ರೇಮಹಸ್ತ ಸ್ಪರ್ಶದಲ್ಲಿ ಕೈಕೆ ಏನು ಕಂಡಳೊ? ಶಾಂತವಾದಳು!

ಸನ್ನೆಗಣ್ಣಿನಿಂದ ಮಗ ಭರತನನ್ನು ಏಕಾಂತಕ್ಕೆ ಕರೆದಳು. ರಾಮನ ಯತಿರೂಪವನ್ನು ಒಂದೇ ಸಮನೆ ನೋಡುತ್ತ ಕೈ ಮುಗಿದಳು. ಅದನ್ನು ಕಂಡವರೆಲ್ಲ ಆಶ್ಚರ್ಯ ಚಕಿತರಾದರು!

❖❖❖

ಸೃಷ್ಟಿಗೌರಿ

ಕುವೆಂಪು ಅವರು ಅತ್ರಿಮುನಿಯ ಪತ್ನಿ ಅನಸೂಯೆಯನ್ನು ಈ ರೀತಿ ಬಣ್ಣಿಸಿದ್ದಾರೆ:

ಪವಿತ್ರ ಸತಿ,
ಅನಸೂಯೆ, ಸೃಷ್ಟಿಗೌರಿಯ ಕಲಾಪೂಜೆಯಂ
ಧ್ಯಾನಿಸುತ್ತಾನಂದ ಶಾಂತಿಯಿಂದಿರೆ. (1.10–5–7)

'ಈಕೆಯ ಪಾತಿವ್ರತ್ಯದ ಪರೀಕ್ಷೆಗೆ ಬಂದ ತ್ರಿಮೂರ್ತಿಗಳನ್ನು ಈಕೆ ಮೆಚ್ಚಿಸಿ ಅವರಿಂದಲೇ ದತ್ತಾತ್ರೇಯ, ಚಂದ್ರ ಮತ್ತು ದೂರ್ವಾಸರೆಂಬ ಮೂವರು ಮಕ್ಕಳನ್ನು ಪಡೆದಳು' ಎಂಬ ವಿವರ ಪುರಾಣ ಭಾರತಕೋಶದಲ್ಲಿದೆ.

ಅನಸೂಯೆಯು ಪಂಚಭೂತ (ಪೃಥ್ವಿ, ಅಪ್ಪು, ತೇಜಸ್ಸು, ವಾಯು ಮತ್ತು ಆಕಾಶ)ಗಳ ಪ್ರಕೃತಿ ಆರಾಧನೆಯಲ್ಲಿ ಪಂಚಭೂತ ಸ್ವರೂಪನಾದ ಶಿವನನ್ನು ಧ್ಯಾನಿಸುತ್ತಿದ್ದವಳು. ಆ ಬಗೆಯ ತಪೋಮಹಿಮೆಯಿಂದ ಹಿಂದೊಮ್ಮೆ ಬರಗಾಲವನ್ನು ತಡೆಗಟ್ಟಿ ಪಂಚಭೂತದ ಜಲವು ಗಂಗೆಯಾಗಿ ಹರಿಯುವಂತೆ ಮಾಡಿ, ಬತ್ತಿದ ಜಾಹ್ನವಿಗೆ ಜಲದ ಸಂಪೂರ್ಣತೆ ಉಂಟುಮಾಡಿದವಳು. ಆ ತಪಸ್ವಿನಿಯು ಸೃಷ್ಟಿಗೌರಿಯ ಕಲಾಪೂಜೆಯ ಧ್ಯಾನ ಮಾಡುತ್ತ ಶಾಂತಿಯಿಂದಿದ್ದಳು ಎಂದು ಕವಿ ಈ ಮಹಾಕಾವ್ಯದಲ್ಲಿ ತಿಳಿಸಿದ್ದಾರೆ.

ಸೃಷ್ಟಿಯೆಂದರೆ ನಿಸರ್ಗ; ಪ್ರಕೃತಿ. ಗೌರಿ ಶಿವನ ಪತ್ನಿ ಪಾರ್ವತಿ. ಪುರುಷ ಪ್ರಕೃತಿಯ ಸಂಕೇತ ಶಿವ ಮತ್ತು ಗೌರಿ, ಆ ಪ್ರಕೃತಿ ಮಾತೆ ಗೌರಿಯನ್ನು ಭಾದ್ರಪದ ಶುದ್ಧ ತದಿಗೆಯಂದು ಗೌರಿಹಬ್ಬದಲ್ಲಿ ಪೂಜಿಸಿ ಸಂಭ್ರಮಿಸುತ್ತೇವೆ. ಗೌರಿ ಪದ ಜನರ ನಾಲಗೆಯಲ್ಲಿ ನಿಸರ್ಗದ ಹಲವು ರೂಪವಾಗಿ ನಲಿದಾಡುತ್ತಿದೆ.

ಬೆಳ್ಳನೆಯ ದೇಹಕಾಂತಿಯುಳ್ಳವಳು ಗೌರಿ, ಅವಳು ಗೌರಿಣಿ. ಆ ಬಿಳಿಯ ಶುಭ್ರ ಭಾವದಲ್ಲಿ ಒಂದು ಬಗೆಯ ಬಿಳಿಯ ಬಣ್ಣದ ಹಂಸವನ್ನು 'ಗೌರಿಹಂಸ,'

ಒಂದು ಬಗೆಯ ಜೋಳವನ್ನು 'ಗೌರಿಕುಲ', ಒಂದು ಬಗೆಯ ಗಿಡವನ್ನು 'ಗೌರಿಜಡೆ,' ಒಂದು ಬಗೆಯ ಬಳ್ಳಿಯನ್ನು 'ಗೌರಿಬಳ್ಳಿ', ಒಂದು ಬಗೆಯ ಮರವನ್ನು 'ಗೌರಿಮರ' ಎಂದು ಜನಪದರು ಕರೆಯುತ್ತಾರೆ. ಕನ್ನಡಿಗರಾದ ನಾವು ಸವಿಯುವ ನೆಲ್ಲು ಬೀಜದಲ್ಲಿ ಬಹಳ ಉತ್ತಮ ಪ್ರತಿಯಾದ ಸೂಜಿಯ ಹಾಗೆ ಸಣ್ಣಾದ, ಗಂಧವುಳ್ಳದ್ದನ್ನು 'ಗೌರಿಸಣ್ಣಕ್ಕಿ' ಎಂದು, ಒಂದು ಬಗೆಯ ಹೂವನ್ನು 'ಗೌರಿಹೂ' ಎಂದು ಕರೆದು ಜೀವದ ಆನಂದವಾಗಿಸಿಕೊಂಡಿದ್ದೇವೆ. ಸಂಗೀತದಲ್ಲಿ ಒಂದು ರಾಗದ ಹೆಸರು 'ಗೌರೀ ಮನೋಹರಿ', ಒಂದು ಬಗೆಯ ವೀಣೆಯ ಹೆಸರು 'ಗೌರೀವೀಣೆ'.

ಅಂತಹ 'ಸೃಷ್ಟಿಗೌರಿ'ಯ ಕಲಾ ಪೂಜೆಯಲ್ಲಿದ್ದವಳು ಅನಸೂಯ ತಪಸ್ವಿನಿ ಎಂದು ಕುವೆಂಪು ವರ್ಣಿಸಿರುವುದರಲ್ಲಿ 'ಪ್ರಕೃತಿಯಾರಾಧನೆಯೆ ಪರಮನಾರಾಧನೆ' ಎಂಬ ಅವರ ಚಿಂತನೆ ಅನುರಣಿಸಿದೆ. ನಿಸರ್ಗಾರಾಧಕರಾದ ಕವಿಯ ಕಲ್ಪನೆಯ 'ಸೃಷ್ಟಿಗೌರಿ' ಕನ್ನಡ ಶಬ್ದ ಸಂಪತ್ತಿನ ಗೌರಿಬಳ್ಳಿಗೆ ಹೊಸ ಸೇರ್ಪಡೆ.

❖❖❖

ದಂಡಕಾರಣ್ಯದ ರಾಕ್ಷಸ ವಿರಾಧ

'ದಂಡಕಾರಣ್ಯಮಿದು ಭೀರುಗೆ ಭಯಂಕರಂ;
ರಸಿಕ ಧೀರಗೆ ಕಲಾಶಂಕರಂ.'(1.10–181,82)

ಶ್ರೀರಾಮ, ಸೀತೆ, ಲಕ್ಷ್ಮಣರು ಅನಸೂಯ ಮತ್ತು ಅತ್ರಿಮುನಿಗಳ ಪವಿತ್ರ ಸನ್ನಿಧಿಯಲ್ಲಿದ್ದು ಅವರ ಆಶೀರ್ವಾದವನ್ನು ಪಡೆದರು. ಅವರಿಂದ ಬೀಳ್ಕೊಂಡು ರವಿಯು ಕಾರ್ಮುಗಿಲ ಗುಹೆಯನ್ನು ಹೊಕ್ಕಂತೆ ದಂಡಕಾರಣ್ಯವನ್ನು ಪ್ರವೇಶಿಸಿದರು. ಅದರ ಭೀಕರತೆಯನ್ನು ನೋಡಿ ಭೂಸುತೆ ಸೀತೆಯ ಬಳ್ಳಿದೇಹವು ಕಂಪಿಸಿತು. ಭಯಂಕರವಾಗಿ ಹುಬ್ಬುಗಂಟಿಕ್ಕಿ ಪ್ರತಿಭಟಿಸುವಂತಿರುವ ಕಾಡನ್ನು ನೋಡಿ ಲಕ್ಷ್ಮಣ ಬೆದರಿದನು. ಧೈರ್ಯ ಭೀಮನಾದ ಅಣ್ಣನನ್ನು ನೋಡಿದನು. ದೃಢತೆಯೇ ಮೈವೆತ್ತಂತಿದ್ದ ಕೋದಂಡಧರ ರಾಮಚಂದ್ರನು ಧೀರಗಂಭೀರವಾಗಿ ನಡೆಯುತ್ತಿದ್ದನು.

ದಂಡಕ ಅರಣ್ಯ ನಿಶ್ಯಬ್ದವಾಗಿತ್ತು. ಅಲ್ಲಿ ಪಕ್ಷಿಗಳ ದನಿ ಇರಲಿಲ್ಲ. ಜೀರುಂಡೆಯ ಘೋರ ಕರ್ಕಶ ಶಬ್ದ ಮಾತ್ರ ಮಾರ್ದನಿಸುತ್ತಿತ್ತು. ಮರಗಳ ಬೃಹತ್ ಬಾಹು ಕೃಷ್ಣನು ಬಿಸಿಲ ಕಂಸನ ಕೊರಳು ಒತ್ತಿ ಗೋಣನ್ನು ಮುರಿಯಲು – ಗತಿಸಿದ ಕಂಸನ ಶವವು ನೆರಳಾಗಿ ಉರುಳಿದಂತಿತ್ತು! ಆ ಕಾಡುಗತ್ತಲೆ ಭಯ ಭೈರವನಂತಿತ್ತು! ಅದರ ಮಧ್ಯೆ ಸಾಗುತ್ತಿರಲು ಸಿಡಿಲು ಹೊಡೆದಂತೆ ಒಂದು ಅದ್ಭುತ ಧ್ವನಿ ಹೊಮ್ಮಿ ಬಂದಿತು. ಅದಕ್ಕೆ ಕಾಡು ಬೆಟ್ಟ ಭೂಮಿ ನಡುಗಲು, ಬೆದರಿದ ಸೀತೆ ಪತಿಯನ್ನು ಹಿಡಿದುಕೊಂಡಳು. ಮರಗಳ ಬುಡ ಅಲ್ಲಾಡಿತು. ಕಾಡು ಬಳಲಿತು. ಆ ಬಿರುಗಾಳಿಗೆ ಆಲಿಕಲ್ಲು ಮಳೆಯಾದಂತೆ ಕಸುಗಾಯಿ, ಹಸಿಯೆಲೆಗಳು ಉದುರಿದವು.

ನೋಡಿದರೆ, ಗಿರಿಯ ಶೃಂಗವೆ ನಡೆದು ಬಂದಂತೆ, ದಂಡಕಾರಣ್ಯದ ವಿಪತ್ತೆ ದೇಹವೆತ್ತಂತೆ – ಹೆಗ್ಗಣ್ಣಿನ, ಹೆಬ್ಬಾಯಿಯ, ಹೇರೊಡಲ ರಾಕ್ಷಸ ಎದುರು ಬಂದನು. ಅವನ ಭೀಭತ್ಸ ಛಾಯೆ ಭೀಕರ ಭೀತಿಯನ್ನುಂಟು ಮಾಡಿತು! ಕಾರ್ಗಪ್ಪು ಮೈಯ ಅವನು ಹತ್ತೆಂಟು ಸಿಂಹ, ಕಾಡುಕೋಣ, ಹೆಬ್ಬುಲಿ, ಜಿಂಕೆ,

ಮದ್ದಾನೆಗಳ ಚರ್ಮದಿಂದ ಮಾಡಿದ ಚಿತ್ರ ವಿಚಿತ್ರ ಉಡುಗೆ ಹೊದ್ದಿದ್ದನು. ತೆಂಗಿನಮರದಂತಹ ನೀಳ ತೋಳುಗಳನ್ನು ಹೊಂದಿದ್ದು, ಕೈಯಲ್ಲಿ ಅಡಕೆಮರದಂತಹ ಶೂಲವನ್ನು ಹಿಡಿದಿದ್ದನು. ಅದರ ತುದಿಯಲ್ಲಿ ಚುಚ್ಚಿ ಸಿಕ್ಕಿಸಿದ್ದ ಎರಡು ಕಾಡುಹಂದಿಗಳು ಬಿಸಿಯ ರಕ್ತವನ್ನು ಸುರಿಸುತ್ತ ಕೂಗುತ್ತಿದ್ದವು.

ವಿಷಮ ವಿಷ ಮೃತ್ಯುವಿನಂತೆ ಧಾವಿಸಿ ಬಂದ ವಿರಾಧನೆಂಬ ಆ ರಾಕ್ಷಸನು ಸೀತೆಯನ್ನು ತುಡುಕಿ ಹಿಡಿದನು. ಅವಳನ್ನು ತನ್ನ ಸೀಗೆಮುಳ್ಳು ಮೆಳೆಯಂತೆ ಹೊದೆ ಹೊದೆಯಾಗಿ ಕೆದರಿದ್ದ ಮುಳ್ಳು ತಲೆಯಲ್ಲಿಟ್ಟುಕೊಂಡನು. ಅದು ಶಾಪಗ್ರಸ್ತನಾದ ಅವನು ಪಾಪನಾಶಿನಿ, ಚೈತನ್ಯ ರೂಪಿಣಿ ಶಕ್ತಿಮಾತೆಗೆ ನಮಿಸುವಂತಿತ್ತು!

ವಿರಾಧನು ರಾಮಲಕ್ಷ್ಮಣರನ್ನು ನೋಡಿ,

'ಓಹ್! ಯೌವನದೊಡನೆ ಜಟೆ ಧರಿಸಿರುವಿರಿ, ಕಪಟ ನಾರುಬಟ್ಟೆ ತೊಟ್ಟು ತರುಣಿ ಜೊತೆಯಾಗಿರುವಿರಿ. ಆಯಸ್ಸು ತೀರಿದ್ದು ನನಗೆ ಆಹಾರವಾಗಲು ಬಂದಿರುವಿರಿ! ಯೌವನಕ್ಕೆ ಜಟೆಯೇಕೆ? ನಾರುಡೆಗೆ ನಾರಿಯೇಕೆ? ಈ ಸುಂದರ ಯುವತಿ ನನಗೆ ಹೆಂಡತಿಯಾಗುವಳು! ನಿಮಗೆ ಬಾಳುವ ಆಸೆ ಇದ್ದರೆ ಓಡಿ ಬದುಕಿಕೊಳ್ಳಿ!'

ಎಂದು ಅಬ್ಬರಿಸುತ್ತ, ಶೂಲದಿಂದ ಗುರಿಯಿಡಲು ತೊಡಗಿದನು. ಆಗ ಮೂರ್ಛೆಹೋದ ಅತ್ತಿಗೆಯನ್ನು ನೋಡಿ ಲಕ್ಷ್ಮಣನು–ತಮಗೆ ಈ ಘೋರ ಸ್ಥಿತಿ ಉಂಟಾಗುವುದನ್ನು ಕೈಕೆ ಅರಿತಿದ್ದಳು; ಈ ದುರ್ದೆಶೆಗೆ ಆಕೆಯೆ ಕಾರಣವೆಂದು ಕೋಪಗೊಂಡನು. 'ಅಣ್ಣನೆ, ಆ ಕೈಕೆ ದಿಟವಾಗಿ ದೂರದರ್ಶಿನಿ' ಎಂದು ಹೇಳಿ ಆರ್ಭಟಿಸುತ್ತ ರಾಕ್ಷಸನಿಗೆ ಬಾಣ ಹೂಡಿದನು.

ಅದರ ತಿವಿತಕ್ಕೆ ತುಸು ಘಾಸಿಗೊಂಡ ಮಾಂಸಾಭಿಲಾಷಿ ರಾಕ್ಷಸ ಉರಿದೆದ್ದನು. ತಲೆಯಲ್ಲಿ ಧರಿಸಿದ್ದ ಸೀತೆಯನ್ನು ಧರೆಗಿಳಿಸಿದನು. ಮೃತ್ಯುಮಯವಾದ ಶೂಲವನ್ನೆತ್ತಿ – ಬೆಟ್ಟ ನಡೆದು ಬಂದಂತೆ ಯಮ ದೃಢ ಗಮನದಿಂದ – ರಾಮಲಕ್ಷ್ಮಣರ ಕಡೆಗೆ ಧಾವಿಸಿ ಬಂದನು.

ಆಗ ರಾಮನು ಸೌಮಿತ್ರಿಗೆ ಹೀಗೆ ಎಚ್ಚರಿಸಿದನು; 'ಈ ರಾಕ್ಷಸನ ಮೈ ಆಮೆ ಚಿಪ್ಪಿನಂತಹದು. ಅವನ ಕಣ್ಣಿಗಲ್ಲದೆ ಬೇರೆ ಗುರಿಯಿಡಬೇಡ.' ಆ ನುಡಿ ಕಿವಿಗೆ ಬೀಳುವುದೇ ತಡ ಲಕ್ಷ್ಮಣನು ಗರುಡ ವೇಗದ ಬಾಣಗಳನ್ನು ಹೂಡಿದನು. ಅವು ವಿರಾಧನ ಕಣ್ಣುಗಳನ್ನು ಚುಚ್ಚಿ ಕುರುಡುಗೈದವು.

ಕಣ್ಣು ಕಳೆದುಕೊಂಡು ಹತಾಶನಾದ ರಾಕ್ಷಸನು ಅಂಧರೋಷದಿಂದ ತೋಳುಗಳನ್ನು ಬೀಸಿದನು. ಕಾಡನ್ನು ಸೋಸಿ ಇಬ್ಬರನ್ನೂ ತನ್ನ ಮೃತ್ಯುಮಯ ಮುಷ್ಟಿಯಲ್ಲಿ ಹಿಡಿದುಕೊಂಡನು. ಜಿಂಕೆಗಳನ್ನು ಕಚ್ಚಿಕೊಂಡು ಓಡುವ ಹುಲಿಯಂತೆ ಅವರನ್ನು ಕೊಂಡೊಯ್ದನು. ಅದನ್ನು ನೋಡಿದ ಸೀತಾ ಕಾಂತೆಯು ನಡ ನಡ ನಡುಗಿ ಹಿಂಬಾಲಿಸುತ್ತಾ ಓಡಿ ಹೀಗೆ ಕೇಳಿಕೊಂಡಳು:

'ಓ ವಿಧಿಯೆ, ರಕ್ಷಿಸಯ್ಯ! ದಶರಥೇಂದ್ರ ಕುಮಾರನನ್ನು ರಕ್ಷಿಸೋ ರಕ್ಷಿಸು! ರಾಕ್ಷಸೋತ್ತಮನೆ ಕೈ ಮುಗಿದು ಬೇಡುತ್ತೇನೆ. ನನ್ನನ್ನಾದರೂ ನೀಡುತ್ತೇನೆ. ರಾಮಚಂದ್ರನನ್ನು ಬಿಡು. ಊರ್ಮಿಳೆಯ ಪ್ರಾಣೇಶನನ್ನು ಕಾಪಾಡು!'

ರಾಮನ ಖಡ್ಗಕ್ಕೆ ಮತ್ತು ಲಕ್ಷ್ಮಣನ ಕತ್ತಿಗೆ ಆ ರಾಕ್ಷಸನ ಎರಡು ಬಾಹುಗಳು ದೊಪ್ಪದೊಪ್ಪನೆ ಬಿದ್ದವು. ತಕ್ಷಣ ಅರಣ್ಯವೆ ಅರಚಿಕೊಂಡಂತೆ ಕೂಗುತ್ತ ಅವನ ದೊಡ್ಡ ಗುಡ್ಡದಂತಹ ಶರೀರ ಬಿದ್ದಿತು. ಕಾಡು ಕೆಸರಾಗುವಂತೆ ರಕ್ತದ ಕೋಡಿಹರಿದು ಹೆಪ್ಪುಗಟ್ಟಿತು.

ಭೀಭತ್ಸದಿಂದ ಸೌಂದರ್ಯವು ಉದ್ಭವಿಸುವಂತೆ ಆ ಮೃತದೇಹದಿಂದ ಗಂಧರ್ವನೊಬ್ಬನು ಮೇದೋರಿದನು. ಅವನು ತುಂಬು ಹೃದಯದಿಂದ ಶ್ರೀರಾಮನನ್ನುದ್ದೇಶಿಸಿ ಹೀಗೆ ಹೇಳಿದನು:

'ಜಯ ಜಯಹೇ ಮಹಾಪುರುಷ! ನನ್ನನ್ನು ಕ್ಷಮಿಸು. ನಾನು ಕುಬೇರನ ಆಳು ತುಂಬುರ. ರಂಬೆಯ ಕಾರಣವಾಗಿ ಈ ಶಾಪಕ್ಕೆ ಗುರಿಯಾಗಿದ್ದೆ. ತಾವು ನನಗೆ ಶಾಪ ವಿಮೋಚನೆಯನ್ನುಂಟು ಮಾಡಿದಿರಿ. ತಮಗೆ ವಂದನೆ. ಈ ದಂಡಕಾರಣ್ಯವು ಭೀರುವಿಗೆ (ಅಂಜಿಕೆಯುಳ್ಳ ವ್ಯಕ್ತಿ) ಭಯಂಕರ; ರಸಿಕ ಧೀರನಿಗೆ ಕಲಾಶಂಕರ. ಇಲ್ಲಿಂದ ಎರಡು ಗಾವುದ ದೂರ ಕ್ರಮಿಸಿದರೆ ಶರಭಂಗ ಋಷ್ಯಾಶ್ರಮವಿದೆ. ನನ್ನ ನಮಸ್ಕಾರ ಸ್ವೀಕರಿಸಿ. ನಾನು ಹೋಗುತ್ತೇನೆ. ತಮಗೆ ಸುಖವಾಗಲಿ, ಗೆಲುವಾಗಲಿ, ಕೊನೆಗೆ ಮಂಗಳವಾಗಲಿ!'

❖❖❖

ಕೊಂಚೆಗಳುಲಿಯ ಮತ್ತೆ ಸಾರಸರುತಿಯ ಕೈಮರವನಾಲಿಸುತ

ಯಾವುದಾದರೂ ಹೊಸ ಊರಿಗೆ, ಪಟ್ಟಣಕ್ಕೆ ಹೋದಾಗ ಅಲ್ಲಿ ದಾರಿಯನ್ನು ತೋರಿಸಲು ಕೈಯ ಆಕಾರದ ಮರ; ಮಾರ್ಗದರ್ಶಕ ಸ್ಥಂಭವನ್ನು ನಾಲ್ಕು ದಾರಿ ಕೂಡುವ ಸ್ಥಳದಲ್ಲಿ ನೆಟ್ಟಿರುತ್ತಾರೆ. ಅದರ ಮೇಲೆ ಆ ಹಾದಿ ತಲುಪುವ ಊರಿನ ಹೆಸರನ್ನು ಬರೆದಿರುತ್ತಾರೆ. ಅದು ಕೈಮರ.

ಹೇಮಂತ ಋತುವಿನ ಕಟ್ಟಿ ಆಡಿಸುವ ಚಳಿಯಲ್ಲಿ ಲಕ್ಷ್ಮಣನು ಸೂರ್ಯೋದಯಕ್ಕೆ ಮೊದಲು ಎದ್ದು, ಕತ್ತಲಿನಲ್ಲಿ ಸ್ನಾನಕ್ಕೆ ಹೋಗಿರುತ್ತಾನೆ. ಅವನು ಗವ್ ಗತ್ತಲಿನ ಕೊರೆಯುವ ಚಳಿಯಲ್ಲಿ ಗೋದಾವರಿ ನದಿ ಹುಡುಕುತ್ತಾ ಸಾಗಿರುತ್ತಾನೆ. ಕಾಡಿನ ಕೂಸಾದ ಕುವೆಂಪು ಅವರು ತಮ್ಮ ಬಾಲ್ಯದ ಬೇಟೆಯ ನೆನಪಿನೊಂದಿಗೆ ಲಕ್ಷ್ಮಣನ ಆ ಘಟನೆಯನ್ನು ಅತಿ ಸಹಜ ಅನುಭವವಾಗಿ ನೇಯ್ದಿರುವುದು ಕಂಡುಬರುತ್ತದೆ. ಅವರ ಬೆಳಗಿನ ಕಾಡಿನ ನಡಿಗೆಯಲ್ಲಿ ಪಕ್ಷಿಗಳ ಧ್ವನಿಯು ಶ್ರವ್ಯಾನುಭವ ಕೈಮರವಾಗಿದ್ದು ಅದನ್ನು ಇಲ್ಲಿ ಕಾವ್ಯಾನುಭವವಾಗಿಸಿದ್ದಾರೆ. ಆ ಚಳಿಯ ತೀವ್ರತೆ ಎಷ್ಟಿತ್ತು ಎಂದರೆ ಆ ಕತ್ತಲೆಯಲ್ಲಿ ಹೊಳೆಯ ಹೊನಲು ಹಾದಿ ತಪ್ಪುವುದು ದಿಟ ಎಂದು ಕಾವ್ಯ ಕಲ್ಪನೆಗೆ ಗರಿ ಮೂಡಿಸಿದ್ದಾರೆ!

ಲಕ್ಷ್ಮಣನಿಗೆ ಕೈಮರದಂತೆ ಮಾರ್ಗದರ್ಶಿಯಾದುದು ಕ್ರೌಂಚ, ಸಾರಸ ಪಕ್ಷಿಗಳ ಮಧುರ ದನಿ! ಅವನು ತೊರೆಯ ದಡಕ್ಕೆ ಹೋದರೂ ಮರಳಿನ ಶೈತ್ಯದಿಂದ ನೀರಿನ ತೀವ್ರ ತಣ್ಣನೆಯ ಅನುಭವಕ್ಕೆ ಒಳಗಾದನು. ಚಳಿಗೆ ಸೆಡೆದು ಮೀಯಲಿಲ್ಲ. ಕವಿಯು ಲಕ್ಷ್ಮಣನ ಚಳಿಯ ತೀಕ್ಷ್ಣತೆಯನ್ನು 'ಹುಹುಹು!' ಪದಗಳಲ್ಲಿ ಧ್ವನಿಸಿ, 'ನಡು ನಡುಗಿ ನಡೆದ ನೊಲೆಯೆಡೆಗೆ ಮುದುಗಿದ ಮೆಯ್ಯ ಲಕ್ಷ್ಮಣಂ.' ಎಂದು ಚಿತ್ರಿಸಿದ್ದಾರೆ.

ಕಡೆಗೆ, ಕೊಂಚೆಗಳುಲಿಯ
ಮತ್ತೆ ಸಾರಸ ರುತಿಯ ಕೈಮರವನಾಲಿಸುತೆ
ತೊರೆಯ ದಡಕೈದಿದೆನ್ ಕಾಲೂಹೆಯಿಂ! ಪುಳಿನ

ಶೈತ್ಯದಿಂದಮೆ ಸಲಿಲ ಶಿಶಿರತೆಯನನುಭವಿಸಿ
ಮಿಂದೆನಿಲ್ಲಾ ಚಳಿಗೆ ಸೆಡೆತು! ಈ ಮರ್ಬಿನೊಳ್
ಬಟ್ಟೆಗೆಡುವುದೆದಿಟಂ ಪೊಳೆವೊನಲ್‌ಗುಂ! ಹು ಹು ಹು !'
ನಡು ನಡುಗಿ ನಡೆದ ನೊಲೆಯೆಡೆಗೆ, ಮುದುಗಿದ ಮೆಯ್ಯ
ಲಕ್ಷ್ಮಣಂ. (1.11–156–162)

❖❖❖

ಸೀತಾಕಾಂತನ ಮನಃಕ್ರಾಂತಿ

ಕುವೆಂಪು ಅವರು 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದ ಅಯೋಧ್ಯಾ ಸಂಪುಟದ ಕೊನೆಯ 11ನೇ ಸಂಚಿಕೆಯ 'ಪಂಚವಟಿಯ ಪರ್ಣಕುಟಿ'ಯನ್ನು ಈ ನುಡಿಯಿಂದ ಮುಕ್ತಾಯಗೊಳಿಸಿದ್ದಾರೆ.

'ತುಂಬಿದತ್ತೊಯ್ಯನೆಯೆ
ಪಂಚವಟಿಧಾತ್ರಿಯಂ ಹೇಮಂತರಾತ್ರಿಯಾ
ಶ್ರೀಮಂತ ಶಾಂತಿ, ಸೀತಾಕಾಂತನಂತರದಿ
ಘೂರ್ಣಿಸಿತ್ತೊಂದನತಿದೂರಂ ಮನಃಕ್ರಾಂತಿ.' (1.11–408–411)

ಇದರಲ್ಲಿ ಎರಡು ವಾಕ್ಯಗಳಿವೆ. ಒಂದು ವಾಕ್ಯ 'ಶಾಂತಿ'ಯೊಂದಿಗೆ ಅಂತ್ಯವಾದರೆ ಇನ್ನೊಂದು 'ಕ್ರಾಂತಿ'ಯೊಂದಿಗೆ ಮುಕ್ತಾಯವಾಗಿದೆ. ಶೂರ್ಪನಖಿಯ ಮೇಲೆ ಲಕ್ಷ್ಮಣ ಆಕ್ರಮಣ ಮಾಡಿದಾಗ ಪ್ರಕೃತಿ ಏನು ಆಗಿಲ್ಲ ಎಂಬಂತೆ ಶಾಂತವಾಗಿತ್ತು. ಆದರೆ ರಾಮನ ಮನಃ ಪ್ರಕೃತಿಯಲ್ಲಿ ಕ್ರಾಂತಿಯುಂಟಾಯಿತು.

ಎರಡನೆಯ ವಾಕ್ಯದಲ್ಲಿ ಅಭಿನವಗುಪ್ತನ ಶ್ಲೇಷಾಲಂಕಾರ ಲಕ್ಷಣದಂತೆ ಪದಗಳು ಒಂದರೊಡನೊಂದು ಮಿಳಿತವಾಗಿ ಆ ಹೊಂದಿಕೆಯ ಪರಂಪರೆಯಿಂದ ಕವಿಯ ಉದ್ದೇಶಿತ ಅರ್ಥ ಅಭಿವ್ಯಕ್ತವಾಗಿದೆ. ಇದೊಂದು ಅಭಂಗ ಶ್ಲೇಷೆಯ ವಾಕ್ಯರಚನೆ. ಮುಂದಿನ ಕಥಾಂತರವನ್ನು ಭಂಗಪಡಿಸದೆ ಗುಪ್ತವಾಗಿ ಅಡಗಿಸಿಡುವುದು ಅಭಂಗ ಶ್ಲೇಷೆ. ಕಥೆಯ ಪೂರ್ವ ಸೂಚನಾ ಧ್ವನಿ ಹೊಮ್ಮಿಸುವ ಕುಶಲ ಕಾವ್ಯಕಲೆ.

ಘೂರ್ಣಿಸು ಯೆಂದರೆ ಘೋಷಿಸು; ಶಬ್ದ ಮಾಡು. ಅದರ ಇನ್ನೊಂದು ಅರ್ಥ ಚಡಪಡಿಕೆ.

'ಮನಃಕ್ರಾಂತಿ' ಪದದ ಕ್ರಾಂತಿ ರಾಮನ ಮನಸ್ಸಿನಲ್ಲಿ ಉಂಟಾದ ವಿಪ್ಲವ; ಕ್ಷೋಭೆಯನ್ನು ತಿಳಿಸುವಂತೆ 'ಮನಸ್ಸಿಗೆ ಹಿಡಿದ ಗ್ರಹಣ' ಎಂಬ ಅರ್ಥವನ್ನು ತನ್ನಲ್ಲಿ ಹುದುಗಿಸಿಕೊಂಡಿದೆ.

ಶಂಕರ ಮೊಕಾಶಿ ಪುಣೇಕರ ಅವರು ಮೈಸೂರಿನಲ್ಲಿ ವಾಸ್ತವ್ಯವಿದ್ದು ಕುವೆಂಪು ಅವರೊಡನೆ ಚರ್ಚಿಸುತ್ತ 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯವನ್ನು ಇಂಗ್ಲೀಷಿಗೆ ತರ್ಜುಮೆ ಮಾಡಿದ್ದಾರೆ. ಅದು ಅತ್ಯುತ್ತಮ ಭಾವಾನುಸಂಧಾನವಾಗಿದೆ. ಈ ಮೇಲಿನ ಉದ್ಧೃತ ನುಡಿಯ ಪ್ರತಿಪದದ ಆಂತರ್ಯವನ್ನು ಮಿಡಿದು ಅವರು ಹೀಗೆ ಅನುವಾದಿಸಿದ್ದಾರೆ. ಇದು ಅನುವಾದ ದೃಷ್ಟಿಯಿಂದ ಅಧ್ಯಯನ ಶೀಲವಾಗಿದೆ.

Panchavati Resumed becalmed silence of motherly sustenance Gradually, Wrapped in autumnal night. But Rama's mind was trammelled from within with convulsive premonitions. Not far-off lay another radical transversal of mind![1]

ಮಹಾಕವಿಯು ರಾಮಚಂದ್ರನನ್ನು 'ಸೀತಾಕಾಂತ' ಎಂದು ಈ ವಾಕ್ಯದಲ್ಲಿ ಕರೆದಿರುವುದು–ಅವನು ಸೀತೆಯ ಪತಿಯಾಗಿ ಕಾಡಿನಲ್ಲಿ ಅವಳ ರಕ್ಷಣೆ ಕುರಿತು ಆತಂಕಕ್ಕೆ ಒಳಗಾಗುವ ಧ್ವನಿಗೆ ಪೂರಕವಾಗಿದೆ. ರಾವಣನ ಮನೆಯ ಹೆಣ್ಣಿನ ಮೇಲೆ ದಾಳಿ ಮಾಡಿದ್ದೇವೆ, ಈಗ ನಮ್ಮ ಮನೆಯ ಹೆಂಗಸಿನ ಮೇಲೆಯೂ ಸದ್ಯದ ಭವಿಷ್ಯದಲ್ಲಿ ದಾಳಿ ಆಗಬಹುದು ಎಂಬ ಅವನ ಮನಸ್ಸಿನ ವಿವಿಧ ಭಾವವನ್ನು 'ಮನಃಕ್ರಾಂತಿ' ಪದ ವ್ಯಂಜಿಸಿದೆ. ರಾವಣ ಸೀತೆಯನ್ನು ಅವಳ ರೂಪು ಲಾವಣ್ಯಕ್ಕಿಂತ ಪ್ರತೀಕಾರಕ್ಕಾಗಿ ತೊಂದರೆಯನ್ನುಂಟು ಮಾಡಬಹುದು ಎಂಬ ಚಡಪಡಿಕೆಗೆ ಸೀತಾಕಾಂತ ಒಳಗಾಗಿದ್ದಾನೆ.

ಒಂದು ಅಧ್ಯಾಯದಿಂದ ಇನ್ನೊಂದು ಅಧ್ಯಾಯಕ್ಕೆ ಕಥೆಯನ್ನು ಕೊಂಡೊಯ್ಯುವಾಗ ಆ ಹಿಂದಿನ ಅಧ್ಯಾಯದ ಸಾರವು ಸಂಕ್ಷಿಪ್ತವಾಗಿ 'ಶಾಂತಿ' ಪದದಿಂದ ಸೂಚಿತವಾಗಿ, ಮುಂದಿನ ಅಧ್ಯಾಯದ ಕಷ್ಟ ಸೂಚನೆ, ಆತಂಕ, ಹೋರಾಟಗಳಲ್ಲಿ 'ಕ್ರಾಂತಿ' ಪದದಲ್ಲಿ ಘೋಷಿತವಾದಂತಿದೆ.

---

1. K. V. puttappa 'Kuvempu' Shri Ramayana Darshanam translated into English by Shankar Mokashi Punekar, Sahitya Akademi New Delhi, 2004, page 171.

ಈ ಪ್ರಕೃತಿ ಸೌಂದರ್ಯಮೆಮಗೆ ಪೇಸುವುದಲ್ತೆ ನಿಂದಾರತರ್ಗೆ!

ಕುವೆಂಪು ಅವರ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದ 'ಪಂಚವಟಿಯ ಪರ್ಣಕುಟಿ' ಸಂಚಿಕೆಯಲ್ಲಿ ಲಕ್ಷ್ಮಣನು ಹೇಮಂತ ಋತುವಿನಲ್ಲಿ ಮುಂಜಾನೆ ಗೋದಾವರಿ ನದಿಗೆ ಸ್ನಾನಕ್ಕೆ ಹೋಗಿರುತ್ತಾನೆ. ಆ ಶೈತ್ಯಕ್ಕೆ ಸೆಡೆತು ಸ್ನಾನಮಾಡದೆ ಪಂಚವಟಿಗೆ ಹಿಂದಿರುಗುತ್ತಾನೆ. ಒಲೆಯ ಬಳಿ ಹೋಗಿ ಮೈಕಾಯಿಸಿಕೊಳ್ಳುತ್ತಾನೆ.

ಸ್ವಲ್ಪ ಸಮಯದ ಅನಂತರ ಸೂರ್ಯಕಿರಣಗಳಿಗೆ ಮಂಜು ಹಿಮ್ಮೆಟ್ಟುತ್ತದೆ. ಆಗ ರಾಮಚಂದ್ರನು ಸೀತಾ ಸಮೇತನಾಗಿ ಆಶ್ರಮದಿಂದ ಹೊಳೆಯೆಡೆಗೆ ಹೊರಡಲು ಅವರ ಜೊತೆ ಲಕ್ಷ್ಮಣನು ಹೋಗುತ್ತಾನೆ. ಆಗ ಅವರು ನಡೆಸುವ ಸಂಭಾಷಣೆಯಲ್ಲಿ ಅಯೋಧ್ಯೆಯ ನೆನಪು ಮತ್ತೆ ಮತ್ತೆ ಬರುತ್ತದೆ. ಲಕ್ಷ್ಮಣನು ಅಣ್ಣ ಭರತನನ್ನು ಕುರಿತು 'ಧರ್ಮಜ್ಞನಾದ ಅವನು ಕೈಕಯೀ ಕ್ರೂರದರ್ಶಿನಿಯ ಗರ್ಭದಿಂದ ಹೇಗೆ ಜನಿಸಿದ ಎಂಬುದೊಂದು ಸೋಜಿಗ' ಎಂದು ಹೇಳುವನು. ಆಗ ತಕ್ಷಣ ರಾಮನು,

'ಸೌಮಿತ್ರಿ, ತಾಯಿಯನ್ನು ನಿಂದಿಸಬೇಡ. ನುಡಿಯುವುದಾದರೆ ತಮ್ಮನ ಗುಣಗಳನ್ನು ಹೊಗಳು. ಈ ಪ್ರಕೃತಿ ಸೌಂದರ್ಯವು ನಿಂದಕರಾದ ನಮ್ಮನ್ನು ಕಂಡು ಅಸಹ್ಯಪಡುತ್ತದೆ.'

ಎಂದು ತಮ್ಮನ ಆರೋಪದ ಮಾತುಗಳು ಸರಿಯಲ್ಲವೆಂದು ತಿಳಿಸುತ್ತಾನೆ.

* * *

ಕುವೆಂಪು ಅವರು ಪ್ರಕೃತಿಯ ರಸಾಭಿಜ್ಞತೆ ವ್ಯಕ್ತಿಗಳ ವ್ಯಕ್ತಿತ್ವದಲ್ಲಿ ಅದರ ಸೌಂದರ್ಯವಾಗಿ ವಿಕಸನಗೊಂಡು ಕಂಪು ಬೀರಬೇಕು ಎಂಬ ಚಿಂತನೆಯನ್ನು ಹೊಂದಿದ್ದರು. ಹಾಗೆ ಸೌಂದರ್ಯ ವ್ಯಕ್ತಿಯ ಭಾಗವಾಗಲು ಅವನು ಯಾರನ್ನೂ ನಿಂದಿಸಬಾರದು, ಅವಹೇಳನ ಮಾಡಬಾರದು ಎಂಬುದು ಅವರ ಪ್ರಮುಖ ತತ್ವವಾಗಿತ್ತು. ಅದು ಅವರ ಜೀವನ ನಡವಳಿಕೆಯ ಸಂಹಿತೆಯಾಗಿತ್ತು.

ಅವರು ತಮ್ಮ ಸಾಹಿತ್ಯವನ್ನು ಕಟುವಾಗಿ ಟೀಕಿಸುತ್ತಿದ್ದ ನವ್ಯರೊಂದಿಗೆ ಮಗ ತೇಜಸ್ವಿಯು ಸ್ನೇಹದಿಂದಿದ್ದುದನ್ನು ಎಂದೂ ವಿರೋಧಿಸುವುದಿರಲಿ, ಪ್ರಶ್ನಿಸಿಯೂ ಇರಲಿಲ್ಲ. ಪ್ರತಿಯೊಬ್ಬ ವ್ಯಕ್ತಿಯು ಮುಕ್ತವಾಗಿ ತನ್ನ ಆಲೋಚನೆಗಳನ್ನು ರೂಪಿಸಿಕೊಳ್ಳಬೇಕು. ಭಿನ್ನಾಭಿಪ್ರಾಯಗಳನ್ನು ಗೌರವಿಸಬೇಕು ಎಂಬ ನಿಲುವಿನಲ್ಲಿದ್ದರು. ಅದನ್ನು 'ಅಣ್ಣನ ನೆನಪು' (ಪುಟ 124, 125) ಕೃತಿಯಲ್ಲಿ ತೇಜಸ್ವಿ ಹೀಗೆ ದಾಖಲಿಸಿದ್ದಾರೆ:

'ನಾವೆಲ್ಲ ಆಗತಾನೆ ಸಾಹಿತ್ಯ ಕ್ಷೇತ್ರಕ್ಕೆ ಪದಾರ್ಪಣೆ ಮಾಡಿದ ಕಿಶೋರ ಸಾಹಿತಿಗಳಾಗಿದ್ದೆವು. ಆಗ ನವ್ಯ ಸಾಹಿತ್ಯ ವಿರೋಧಿಸುತ್ತಿದ್ದ ಸಮುದಾಯದೊಡನೆ ನಮ್ಮನ್ನು ನಾವು ಗುರುತಿಸಿಕೊಳ್ಳುವುದು ಸಾಧ್ಯವಿರಲಿಲ್ಲ... ನಮ್ಮನ್ನೆಲ್ಲಾ ಹಾರುವರ ಹಿಂಬಾಲಕರೆಂದು ಅನೇಕರು ಹಿಂದಿನಿಂದ ಬಯ್ಯುತ್ತಿದ್ದರು. ಅಣ್ಣನ ಹತ್ತಿರವೂ ಬಂದು ಈ ಕುರಿತು ಹಲವರು ಹೇಳಿದ್ದರೂ ಇರಬಹುದು. ಆದರೆ ಅಣ್ಣ ಈ ಬಗ್ಗೆ ನನ್ನ ಬಳಿ ಎಂದೂ ಮಾತಾಡಿಲ್ಲ, ಆಕ್ಷೇಪಿಸಿಯೂ ಇಲ್ಲ.'

ಸಾಹಿತಿ ಚದುರಂಗ ಅವರು ಕುವೆಂಪು ಅವರೊಡನೆ ವಾಯು ವಿಹಾರಕ್ಕೆ ಹೋಗುತ್ತಿದ್ದರು. ಆಗ ಅವರು ಗಮನಿಸಿದ ಕುವೆಂಪು ಅವರ ಅಮೂಲ್ಯ ಗುಣವನ್ನು 'ಮಗಳು ಕಂಡ ಕುವೆಂಪು' (ಪುಟ 414, 415) ವಿನಲ್ಲಿ ತಾರಿಣಿಯವರು ಹೀಗೆ ದಾಖಲಿಸಿದ್ದಾರೆ:

'ಕೆಲವೊಮ್ಮೆ ಶ್ರೀಮಾನ್ ಚದುರಂಗ (ಸುಬ್ರಹ್ಮಣ್ಯರಾಜ ಅರಸು) ಅವರು ತಂದೆಯವರ ಸಂಚಾರದಲ್ಲಿ ಪಾಲುಗೊಳ್ಳುತ್ತಿದ್ದರು. ಸಂಜೆಯ ಸಮಯ ತಂದೆಯವರನ್ನು ನೋಡಲು ಬಂದಾಗ ಇಬ್ಬರೂ ಸಂಚಾರ ಹೋಗುತ್ತಿದ್ದರು. ಚದುರಂಗರು ಹೇಳುತ್ತಿದ್ದರು. "ಕುವೆಂಪು ಅವರೊಡನೆ ಸಂಚಾರ ಹೋಗುವಾಗ ನಮ್ಮ ಚರ್ಚೆಯಲ್ಲಿ ಸಾಹಿತ್ಯ, ರಾಜಕೀಯ, ಸಾಮಾಜಿಕ, ಅಧ್ಯಾತ್ಮಿಕ ಎಲ್ಲ ಸೇರುತ್ತಿತ್ತು. ಎಷ್ಟೋ ಬಾರಿ ಅವರೊಡನೆ ಸಂಚಾರ ಹೋಗಿರುವೆ. ಒಂದು ದಿನವೂ ಅವರು ಬೇರೆಯವರ ಬಗ್ಗೆ ದೂಷಣೆ ಮಾಡಿರುವುದನ್ನು ನಾನು ಎಂದೂ ಕೇಳಿಲ್ಲ" ಎಂದು'.

ಕುವೆಂಪು ಅವರು ತಮ್ಮ ಯಾವುದೆ ವೈಜ್ಞಾನಿಕ ಆಧಾರಿತ ಸಮಾಜಮುಖಿ ವೈಚಾರಿಕ ಚಿಂತನೆಗಳನ್ನು ಸ್ಪಷ್ಟವಾಗಿ ನೇರವಾಗಿ ವ್ಯಕ್ತಪಡಿಸುತ್ತಿದ್ದರು. ಅವರದು ಪಾರದರ್ಶಕವಾದ ಗಂಭೀರ ವ್ಯಕ್ತಿತ್ವ. ಅವರು ಒಂದು ಸಂದರ್ಶನದಲ್ಲಿ 'ಯಾರೊಡನೆಯಾಗಲಿ ಮಾತಾಡುವಾಗ ನನ್ನ ಅಭಿಪ್ರಾಯವನ್ನು ನಿರ್ದಾಕ್ಷಿಣ್ಯವಾಗಿ

ವ್ಯಕ್ತಪಡಿಸಲೇ ಬೇಕು. ಕ್ರಾಂತಿಕಾರಕ ಭಾವನೆಗಳು ಸಾಮಾನ್ಯವಾಗಿ ಸಂಪ್ರದಾಯ ಶರಣರಿಗೆ ಹಿಡಿಸದಿರಬಹುದು. ಅವರ ಮನಸ್ಸಿಗೆ ನೋವಾಗಬಹುದು. ವಿವಾದಾಸ್ಪದವೂ ಆಗಬಹುದು. ಮೇಲಾಗಿ ನನಗೆ ಗುಂಪುಗಾರಿಕೆಯೆಂದರಾಗದು, ಕಾಡುಹರಟೆಯಾಗಲಿ ಲಾಘವ ಜೀವನವಾಗಲಿ ನನಗೆ ಹೇಳಿಸಿದ್ದಲ್ಲ.' (ಕುವೆಂಪು ಸಮಗ್ರ ಗದ್ಯ ಸಂಪುಟ 2. ಪುಟ 856)

* * *

ದ. ರಾ. ಬೇಂದ್ರೆಯವರು ಕುವೆಂಪು ಅವರ ರೂಪು ಮತ್ತು ವ್ಯಕ್ತಿತ್ವನ್ನು ನಾಲ್ಕು ಪದಗಳಲ್ಲಿ ಹೀಗೆ ಕಡೆದಿಟ್ಟಿದ್ದಾರೆ:

'ಚಾರುತ್ವದ ಕುಂದಣದಲ್ಲಿ
ಚಾರಿತ್ರ್ಯದ ರತ್ನ'

ಚಾರುತ್ವ ಪದ ಸೌಂದರ್ಯಾಂಶವನ್ನು ಪ್ರಕಟಿಸುವುದರ ಜೊತೆಗೆ ಅದರ ಆನಂದದ ಅಭಿವ್ಯಕ್ತಿಯೂ ಆಗಿದೆ.

ಕುವೆಂಪು ಅವರು ಸದಾ ಜನರ ಬದುಕಿಗೆ ಉಪಯುಕ್ತವಾಗುವ ಎಚ್ಚರದ ಜಾಣತನದ ಆಲೋಚನೆ ಮಾಡುತ್ತ ಅಂತಹವರ ಸಹವಾಸದಲ್ಲಿ ಸದಾ ಇದ್ದು ಬಾಳಿದವರು. ಅಂತಹ ವ್ಯಕ್ತಿತ್ವದ ಕುವೆಂಪು ನಮ್ಮ ಸಮಕಾಲೀನ ಎಂಬುದೇ ನಮಗೆ ತೃಪ್ತಿ ಎಂದು ಬೇಂದ್ರೆ ಸುಖಿಸಿದ್ದಾರೆ:

'ಚಾತುರ್ಯದ ಮಂತಣದಲಿ
ಸತ್ಸಂಗದ ಯತ್ನ
ಇದೇ ತೃಪ್ತಿಯು ನಮಗೆ,' (ಯುಗದ ಕವಿಗೆ)

ವ್ಯಕ್ತಿಯ ಶೀಲ, ನಡತೆ, ಆಚಾರವೆ ಚಾರಿತ್ರ್ಯ, ಸದಾಚಾರದ ಮುಖ್ಯಲಕ್ಷಣ ಇನ್ನೊಬ್ಬರನ್ನು ನಿಂದಿಸದಿರುವುದು. ಬಸವಣ್ಣನವರು ಮನುಷ್ಯನು ಅನುಸರಿಸ ಬೇಕಾದ ಸಪ್ತ ಸೂತ್ರಗಳಲ್ಲಿ 'ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ' ಎಂಬ ಎರಡು ಮಹತ್ವಪೂರ್ಣ ತತ್ವಗಳನ್ನು ಸೂತ್ರ ಪ್ರಾಯವಾಗಿ ತಿಳಿಸಿದ್ದಾರೆ. ಅದರಂತೆ ನಡೆದುಕೊಂಡವರು ಕುವೆಂಪು.

❖❖❖

ಮಾಯೆಯನೆಂತು ಸಂಹರಿಸದೆಯೆ ಪಿಡಿದಪುದಯ್ ನನ್ನಿ?

ಮಾಯಾ ಜಿಂಕೆಯ ರೂಪವನ್ನು ಧರಿಸಿದ ಮಾರೀಚನನ್ನು ರಾಮನು ಸಂಹರಿಸುತ್ತಾನೆ. ಆಗ ಕವಿಯು 'ಮಾಯೆಯನೆಂತು ಸಂಹರಿಸದೆಯೆ ಪಿಡಿದಪುದಯ್ ನನ್ನಿ?' ಎಂದು ಮಿಥ್ಯೆ–ಮಾಯೆ, ಸತ್ಯ – ನನ್ನಿಯ ಕತ್ತಲು ಬೆಳಕನ್ನು ಅರ್ಥಪೂರ್ಣವಾಗಿ ತಿಳಿಸಿದ್ದಾರೆ.

'ನಿಂತುದಾ
ಜೀಮೂತ ಛದ್ಮನೆಯನಾಂತ ರಾವಣರಥಂ
ನಿಶ್ಚಲಂ, ಕೆರೆಯ ಮೇಲ್ಗಡೆ ನಭದಿ ಹಾರಿಯುಂ
ಮೀನಿಗೆರಗುವ ಮುನ್ನ ನಿಲ್ಲುವ ಕುರರಿಯಂತೆ!'(2, 2. ಸಾಲು 65–68)

ಎಂದು ಕುವೆಂಪು ಅವರು ಮುಗಿಲ ವೇಷವನ್ನು ಹೊಂದಿದ ರಾವಣರಥ ನಿಶ್ಚಲವಾಗಿ ನಿಂತಿದ್ದನ್ನು ರೂಪಕವಾಗಿ ಚಿತ್ರಿಸಿದ್ದಾರೆ. ಅದು ಆಗಸದಿಂದ ಕೆರೆಯ ಮೇಲೆ ಹಾರಿ ಮೀನಿನ ಮೇಲೆ ಎರಗುವ ಜಲಚರಪಕ್ಷಿ (ಕುರರಿ)ಯಂತೆ ನಿಂತಿತ್ತು ಎಂಬ ವರ್ಣನೆಯಲ್ಲಿ ಮುಂದಿನ ಸೀತಾಪಹರಣ ಸೂಚನೆಯನ್ನು ಸಂಕೇತಿಸಿದ್ದಾರೆ.

ಈ ನೆರಳಿನ ರೂಪಕವು ರಾವಣನು ಪಂಚವಟಿಯ ರಾಮ ಸೀತೆ ಲಕ್ಷ್ಮಣರ ಸಾಂಸಾರಿಕ, ಧಾರ್ಮಿಕ, ನೈತಿಕ ಜೀವನದ ಮೇಲೆ ಹರಡಿದ ಕರಿಗತ್ತಲನ್ನು ಪ್ರತಿಮಿಸುತ್ತದೆ. ಅದು ಅವನ ದೌರ್ಜನ್ಯಕಾರಕ ಯೋಜನೆ, ವಿಕೃತ ಮನೋವ್ಯಾಪಾರ, ಅಕ್ರಮನಡೆಗೆ ಪೂರಕವಾಗಿದೆ. ಪ್ರಕೃತಿಯ ಸಹಜ ಬೆಳಕು ದೇವತಾಸತ್ವ, ಅಲ್ಲಿ ಎಲ್ಲವೂ ಸ್ಪಷ್ಟ ಗೋಚರ. ಅದನ್ನು ತಡೆಯುವ ಅಸುರ ಶಕ್ತಿ ಕತ್ತಲು. ಅದನ್ನು ಕುವೆಂಪು ಅವರು ಪುಷ್ಪಕ ವಿಮಾನದ ಛಾಯೆಯಲ್ಲಿ ಪ್ರತಿಭಾ ಪೂರ್ಣವಾಗಿ ಧ್ವನಿಸಿದ್ದಾರೆ.

ಮಾಯದ ಜಿಂಕೆಯು ಮುಷ್ಟಿಗೆ ಸಿಕ್ಕಂತೆ ತೋರಿ, ಜಾರಿ ಹೋಗಿ ರಾಮನನ್ನು ಕಾಡಿಸಿತು. ಅದನ್ನು ಬೆನ್ನಟ್ಟಿ ತಗ್ಗನ್ನು ಇಳಿದು, ದಿಣ್ಣೆ ಹತ್ತಿದನು. ಅದು ಕಂದರವನ್ನು

ಜಿಗಿಯಲು ತಾನೂ ಜಿಗಿದನು. ಅದನ್ನು ಜೀವಸಹಿತ ಹಿಡಿಯುವ ಆಸೆ ಬಿಟ್ಟನು. ಬಿಲ್ಲನ್ನು ಎದೆ ಏರಿಸಿದನು. ಅಷ್ಟರಲ್ಲಿ ಗೋದಾವರಿ ನದಿ ಅಡ್ಡ ಬಂದಿತು. ಈ ಜಂತು ನದಿಯನ್ನು ದಾಟುವ ಮೊದಲೆ ಹಿಡಿಯುವೆ ಎಂದು ಬಿಲ್ಲನ್ನು ಇಳಿಸಿದನು. ಜಿಂಕೆ ನದಿಗೆ ದುಘುಮ್ಮನೆ ದುಮುಕಿತು. ಅದರ ಹಿಂದೆ ತಾನು ದುಮುಕಿದನು. ಮೊಗ ಕೊಂಬೆಗಳು ಮಾತ್ರ ಕಾಣುತ್ತಿದ್ದ ಮೃಗವನ್ನು ಹಿಡಿಯಲಾಗಲಿಲ್ಲ. ಅದು ದಡವನ್ನೇರಿ ಕಾಡಿಗೆ ಓಡಿತು. ಒದ್ದೆ ಮೈಯಾದ ರಾಮ ಪೌರುಷ ರೋಷದಿಂದ ಅಟ್ಟಿಕೊಂಡು ಹೋದನು.

ಅವರು ಮುಗಿಲಿನಂತೆ ಆವರಿಸಿದ್ದ ಪುಷ್ಪಕ ವಿಮಾನದ ಛಾಯಾ ವಲಯವನ್ನು ಮೀರಿ ದಾಟಿದರು. ತಕ್ಷಣ ಸೂರ್ಯಕಾಂತಿ ಮಾರೀಚನ ಮೇಲೆ ಸುಳಿದಾಡಿತು! ರಕ್ಕಸ ಬೆಚ್ಚಿದನು! ಅವನು ಮತ್ತೆ ನೆರಳಿಗೆ ಸರಿಯುವಷ್ಟರಲ್ಲಿ ರಾಮನು ಜಿಂಕೆ ಕುತ್ತಿಗೆ ಮುರಿಯುವಂತೆ ಬಾಣ ಪ್ರಯೋಗಿಸಿದನು. 'ಮಿಥ್ಯೆ ಬಿರಿಯಲ್ಕೆ ಸತ್ಯಂ ಪ್ರತ್ಯಕ್ಷ ಮಪ್ಪಂತೆ ವೋಲ್' ಆ ಪಶು ಕಳೇಬರದಿಂದ ರಾಕ್ಷಸ ಆಕೃತಿ ಹೊಮ್ಮಿತು.

❖❖❖

ಪತಿವ್ರತಾಧರ್ಮ ಸಂಕೇತ ಅನಸೂಯ ಸುಮ

ರಾವಣನು ಸೀತೆಯನ್ನು ಸಾಗರ ತೀರದ ಬೆಟ್ಟದ ತುದಿಯ ಅಶೋಕವನದಲ್ಲಿ ಹುಲ್ಲು ಮನೆಯಲ್ಲಿಟ್ಟಿದ್ದನು. ಒಂದಿರುಳು ಬೆಳದಿಂಗಳಿನಲ್ಲಿ ಪೃಥ್ವಿಯು ವಿಶ್ವನಿದ್ರೆಯ ಕನಸಿನಂತಿತ್ತು. ನಿಶ್ಯಬ್ದತೆಯ ಪಕ್ಷಿಯ ರೆಕ್ಕೆಬಡಿತವೆಂಬಂತೆ ಕಡಲತೀರದ ತೆಂಗಿನ ಮರಗಳಲ್ಲಿ ಗರಿಗಳ ಮರ್ಮರ ನರ್ತಿಸುತ್ತಿತ್ತು. ಚಂದ್ರ ಸುಂದರ ವಿಶಾಲ ಸಾಗರವು ಸೀತೆಯ ಸಂಕಷ್ಟಕ್ಕೆ ಅನುಕಂಪಿಸುವ ರೀತಿ ನರಳಿ ಹೊರಳಿ ನಿಟ್ಟುಸಿರು ಬಿಡುತ್ತಿತ್ತು. ಆಗ ಸೀತೆಯ ಕಿವಿಗೆ ಬಂಗಾರ ನೂಪುರದ ಕಿಂಕಿಣಿ ಕೇಳಿಸಿತು. ಚಕಿತಳಾಗಿ ನೋಡುತ್ತಿರಲು ಆ ಅಮೃತ ರಾತ್ರಿಯೇ ಲಲನೆಯ ಆಕೃತಿ ಪಡೆದು ಬಂದಂತೆ ಕಂಡಿತು. ಹಾಲು ಬಿಳಿಯ ಸೀರೆಯುಟ್ಟು, ಭಯಭಕ್ತಿಯ ಗಂಭೀರ ನಡೆಯೊಡನೆ – ಭೂದೇವಿಯೆ ಕುಮಾರಿ ಸೀತೆಯನ್ನು ಸಂತೈಸಲು ಬಂದಂತಿತ್ತು!

ಬಳಿಗೆ ಬಾರದೆ ದೂರದಿಂದಲೇ ಕೈ ಎತ್ತಿದಳು. ಆಶ್ಚರ್ಯವೆಂದರೆ ಅದು ತನಗೆ ಕೈ ಮುಗಿದಂತೆ ತೋರಿತು! ಅಚ್ಚರಿಯಿಂದ ನೋಡುತ್ತಿದ್ದರೆ ಧವಳಾಂಬರ ಧಾರೆಯು ವೀಣೆ ಮಿಡಿದಂತೆ ಅಸ್ಪಷ್ಟವಾಗಿ ಏನೋ ಹೇಳುತ್ತಿದ್ದಳು! ನಿಧಾನವಾಗಿ ರೋದಿಸುತ್ತಿದ್ದಳು. ಹೀಗೆ ಏಳು ರಾತ್ರಿಗಳು ಆ ಅಸ್ಪಷ್ಟ ರೂಪು ಬಂದು ನಮಸ್ಕರಿಸಿ ಹಿಂದಿರುಗಿತು. ಎಂಟನೆಯ ರಾತ್ರಿ ಸೀತೆ ಕನಿಕರದಿಂದ ಹತ್ತಿರ ಹೋಗಿ ಮಾತಾಡಿಸಿದಳು:

ಯಾರ ರಕ್ಷಣೆಗೆ ವ್ರತಧಾರಿಯಾದಂತಿರುವೆ

'ಯಾರಮ್ಮ, ತಂಗಿ ನೀನಾರು? ಏಳು ರಾತ್ರಿಗಳಿಂದ ನೋಡುತ್ತಿದ್ದೇನೆ; ಬಂದು ಗೋಳಾಡುತ್ತಾ ಏನೊ ಸಂಕಟ ಹೇಳುತ್ತಿರುವೆ; ಯಾರನ್ನೋ ಕರೆಯುತ್ತಿರುವೆ, ಯಾರನ್ನೋ ಬೇಡುತ್ತಿರುವೆ; ಯಾರ ರಕ್ಷಣೆಗೋ ವ್ರತಧಾರಿಯಾದಂತಿರುವೆ.'

ಆ ಮಹಿಳೆ ಹತ್ತಿರ ಬಂದು ಮೌನದಿಂದ ಮೃದುವಾಗಿ ಸೀತೆಯ ತಲೆಯನ್ನು ನೇವರಿಸಿದಳು. ಆಗ ಕಣ್ಣೆತ್ತಿ ನೋಡುತ್ತ ಸೀತೆ ಮಾತು ಮುಂದುವರಿಸಿದಳು.

‘ರಾಕ್ಷಸನ ಕಪಟವೆಂದು ಮೊದಲು ಬೆದರಿದೆನು. ಗಮನಿಸುತ್ತ ಸಾಗಿದಂತೆ ನಿನ್ನ ಕೊರಳ ದುಃಖದ ನೈಜತೆ ತಿಳಿದೆನು. ಕರುಣೆಯುಂಟಾಯಿತು. ನೀನೂ ನನ್ನಂತೆ ರಕ್ಕಸನು ಎಳೆತಂದಿರುವ ಗರತಿಯಿರಬೇಕು! ಈ ಲಂಕೆಯಲ್ಲಿ ನಮ್ಮಂತಹ ದುಃಖಿಗಳು ಅದೆಷ್ಟು ಮಂದಿ ಇದ್ದಾರೊ?’

‘ನಿನಗೆ ನಾನು ಅಕ್ಕ, ವಯಸ್ಸಿನಿಂದಷ್ಟೇ ಅಲ್ಲ, ದುಃಖದಿಂದಲೂ! ನನ್ನಂತಹ ಅತಿ ದುಃಖಿ ಲಂಕೆಯಲ್ಲಿ ಮಾತ್ರವಲ್ಲ, ಸೃಷ್ಟಿಯೊಳಗೆ ಇಲ್ಲವೆಂದು ತಿಳಿ.’

‘ದೇಶವನ್ನು ತ್ಯಜಿಸಿ, ವನವಾಸಿಯಾಗಿ, ರಾಕ್ಷಸನ ಪಾಪಕ್ಕೆ ಬಲಿಯಾದ ರಾಮನ ಸತಿಗಿಂತ ನೀನು ದುಃಖಿಯೆ?’

‘ನಿಜ, ಸೀತೆಗಿಂತಲೂ ದುಃಖಿ ನಾನು. ಎಷ್ಟೋ ಸೀತೆಯರ ದುಃಖಾಗ್ನಿಯನ್ನು ಹೊತ್ತಿಸಿರುವವನಿಗೆ ಮಡದಿ ನಾನು.’

‘ಮಂಡೋದರಿಯೇ ನೀನು?’ ಎಂದು ವಿಸ್ಮಯದಿಂದ ಅವನಿಜಾತೆ ಕೇಳಲು ಅದಕ್ಕೆ ಉತ್ತರಿಸಿದಳು:

‘ಹೌದು, ಆ ಹೆಸರಿನ ನಿರ್ಭಾಗ್ಯ ಹೆಣ್ಣು’

‘ಪೂಜ್ಯೆ, ಈ ಮೊದಲೇ ನಿನ್ನ ಶುಭ್ರಕೀರ್ತಿಯನ್ನು ಕೇಳಿದ್ದೆ. ಇಂದು ಕಂಡು ಧನ್ಯಳಾದೆ. ಹಿರಿಯಳಿಗೆ ನಮಸ್ಕರಿಸುತ್ತೇನೆ.’

‘ಆರ್ಯೆ, ನಾನು ಅಸುರಿ, ನಮಿಸಬೇಡ’.

‘ನೀನು ಅಸುರಿಯೆ? ಅಲ್ಲ, ಅಸುರಿಯಲ್ಲ, ದೇವತೆ. ಪತಿವ್ರತೆಯಾಗಿ ನಮಗೆಲ್ಲ ಆದರ್ಶಮಾತೆ. ನಿನಗೆ ನಮಸ್ಕರಿಸಲು ಬೇಗ ಒಳಿತಾಗುವುದೆಂದು ನಾನು ಬಲ್ಲೆ.’

‘ಆ ಒಳಿತು ನಿನಗೆ ಬೇಗ ಒದಗಿ ಬರಲಿ. ನಿನ್ನ ಮಂಗಳವೆ, ನನಗೆ ಮಂಗಳ! ದೇವಿ, ನನ್ನಂತೆ ನೀನೂ ನನ್ನ ಪತಿಯ ಮನಸ್ಸು ಶುದ್ಧವಾಗುವಂತೆ ಪ್ರಾರ್ಥಿಸು. ಇದನ್ನು ಬೇಡಲೆಂದೇ ನಾನು ನಿನ್ನ ಸಾನ್ನಿಧ್ಯಕ್ಕೆ ಬಂದುದು.’

ಮೌನಕ್ಕೆ ಶರಣಾದ ಸೀತೆ

ಆ ನುಡಿ ಕೇಳಿ ಸೀತೆ ಮೌನಿಯಾದಳು. ತುಸು ಹೊತ್ತಿನ ನಂತರ ಮಯನ ಮಗಳು ‘ಎಲೈ ಪುಣ್ಯಚರಿತಳೇ, ನಿನ್ನನ್ನು ಸಂಧಿಸಲು ಲಂಕೇಶನು ಅನುಮತಿ ಕೊಡಲಿಲ್ಲ. ಹಾಗಾಗಿ ಈ ಮೊದಲೆ ನಿನ್ನ ದರ್ಶನದಿಂದ ಧನ್ಯಳಾಗಲು ಆಗಲಿಲ್ಲ.

ನನ್ನ ಪ್ರಾರ್ಥನೆ ಫಲಿಸಿತು. ನೀನು ದರ್ಶನವಿತ್ತೆ; ಮಾತನಾಡಿಸಿದೆ. ನಾನು ಕೃತಾರ್ಥಳಾದೆ. ತಂಗಿ, ಪಾತಿವ್ರತ್ಯವನ್ನು ಮೀರಿದ ಸಾಧನೆ ಇಲ್ಲ. ಕೊಳೆಗೆ ಬೆಂಕಿ ತಗುಲಿದರೆ ಕೊಳೆಯು ಉರಿಯಾಗುವಂತೆ–ನಿನ್ನ ವ್ರತದಿಂದ ನನ್ನ ಪತಿಯ ಹೃದಯದ ಪಾಪದೋಷವು ದಹಿಸಿ ಹೋಗಲಿ. ಅವನಲ್ಲಿ ಸನ್ಮತಿ ಮೂಡಲಿ. ಸರ್ವರಿಗೆ ಸುಖ ಶಾಂತಿ ಲಭಿಸಲಿ!' ಎಂದು ಹೇಳಿದಳು.

ಸೀತೆ ಭಾವಲೋಕದಿಂದ ಎಚ್ಚರಗೊಳ್ಳುವ ಮೊದಲೇ ಅವಳಡಿಗೆ ತಲೆಬಾಗಿಸಿ, ನಮಸ್ಕರಿಸಿ ಪಾದಧೂಳಿಯನ್ನು ಧರಿಸಿಕೊಂಡಳು. ಬೆಳದಿಂಗಳಿಂದ ಮೂಡಿದ ಹೆಣ್ಣು ಬೆಳದಿಂಗಳಲ್ಲಿ ಲೀನವಾದಂತೆ ಹೊರಟು ಹೋದಳು.

ಹರ್ಷಚಿತ್ತಳಾದ ಸೀತೆ

ವ್ರತದ ಗುರಿ ಒಂದೇ ಆಗಿರಲು – ತನ್ನ ವ್ರತಕ್ಕೆ ಬೇರೊಬ್ಬರ ವ್ರತ ನೆರವಾಗುವುದೆಂದು ಸೀತೆ ಹರ್ಷಚಿತ್ತಳಾದಳು. ಮಂಡೋದರಿಯ ದೃಢತೆ ಮೈಥಿಲಿಯ ಚಿತ್ತಕ್ಕೆ ಉಕ್ಕಿನ ಸಾಣೆಯಾಯಿತು. ಸೆರೆಮನೆಯೆ ಆತ್ಮಸಾಧನೆಗೊಂದು ಎಲೆಮನೆಯಾಯಿತು. ರಾವಣನ ಲಂಕೆ ಮಂಡೋದರಿಯ ಲಂಕೆಯಾಯಿತು. ರಾವಣನ ಮೇಲಿದ್ದ ವೈರಭಾವ ಕರಗಿ, ಮಂಡೋದರಿಯ ಲಂಕೆಯಾಯಿತು. ರಾವಣನ ಮೇಲಿದ್ದ ವೈರಭಾವ ಕರಗಿ, ಮಂಡೋದರಿಯ ಪತಿಯ ಮೇಲಿನ ಕರುಣೆಯಾಯಿತು. ಸೂರ್ಯನ ಬಿಸಿಲಿನ ತಾಪಕ್ಕೆ ಕಾಲದ ತಪವೂ ಸೇರಿದರೆ ಇದ್ದಿಲು ವಜ್ರವಾಗುವಂತೆ – ಸೀತೆ ಮಂಡೋದರಿಯರ ತಪಸ್ಸಿನಿಂದ ರಾವಣನ ಮನದ ಬಂಗಾರ ಹೃತ್ತಾಪದ ಮೂಷೆಯಲ್ಲಿ ಕುದಿಕುದಿದು ಕರಗಿ ಕಲ್ಮಶವನ್ನು ಕಳೆದುಕೊಂಡು ಹೊಚ್ಚಹೊನ್ನಾಗಿ ತಳತಳಿಸುವುದಿಲ್ಲವೇ?

ಮಂಡೋದರಿಯಿಂದ ಮುದಗೊಂಡ ಜಾನಕಿ ಆ ಬೆಳದಿಂಗಳಲ್ಲಿ ತನ್ನನ್ನು ತಾನೇ ನೋಡಿಕೊಂಡಳು. ರಾವಣ ಲಂಕೆಗೆ ಹೊತ್ತು ತಂದ ದಿನದಿಂದ ಸ್ನಾನ ಮಾಡದೆ, ಉಟ್ಟಿದ್ದನು ಬಿಟ್ಟು ಬೇರೆ ಉಡದೆ, ಕೊಳೆಮೈಯಲ್ಲಿದ್ದವಳು ಮುಂಗುರುಳುಗಳನ್ನು ಪಕ್ಕಕ್ಕೆ ಸರಿಸಿಕೊಂಡು ತಲೆಯ ಮೇಲೆ ಕೈಯಾಡಿಸಿಕೊಂಡಳು. ವೃದ್ಧ ಪತಿವ್ರತೆ ಅನಸೂಯೆ ನೀಡಿದ್ದ ಹೂ ಕೈಗೆ ತಗುಲಿತು. ಅದನ್ನು ಕೈಯಲ್ಲಿ ಹಿಡಿದು ನೋಡುತ್ತಾಳೆ, ಅದು ಆಗ ತಾನೆ ಅರಳಿದಂತೆ ನಳನಳಿಸುತ್ತಿದೆ! ಹೊಚ್ಚ ಹೊಸತನದಲ್ಲಿ ದಳದಳವು ಪ್ರಕಾಶಿಸುತ್ತಿದೆ! ಅದನ್ನು ನೋಡನೋಡುತ್ತ ತಾನು ಆ ಅಧಿದೇವಿ ಅನಸೂಯೆಯನ್ನು ಕಂಡ ದಿನದತ್ತ ಮನಸ್ಸು ಓಡಿತು.

ಭರತನನ್ನು ಬೀಳ್ಕೊಟ್ಟ ನಂತರ ರಾಮಲಕ್ಷ್ಮಣರೊಡನೆ ಅವಳು ಅತ್ರಿಮುನಿಯ ಆಶ್ರಮಕ್ಕೆ ಹೋದಳು. ಆ ಸನಾತನ ಯೋಗಿ ಮತ್ತು ಆತನ ಪವಿತ್ರಸತಿ ಅನಸೂಯೆಯು ಅತಿಥಿಗಳಾದ ಅವರನ್ನು ಪ್ರೀತಿಯಿಂದ ಕಂಡು ಉಪಚರಿಸಿದರು. ಮಹರ್ಷಿಗಳು ರಾಮ, ಲಕ್ಷ್ಮಣರಿಗೆ ದಂಡಕಾರಣ್ಯದಲ್ಲಿ ಮುಂದೆ ಒದಗಲಿರುವ ರಾಕ್ಷಸರ ಉಪದ್ರವಗಳ ಸೂಚನೆ ನೀಡಿದರು. ಅದನ್ನು ಕೇಳಿ ಅವಳು ನಡುಗಿದಳು. ಆಗ ಬಿಗಿದು ತಬ್ಬಿಕೊಂಡ ಅನಸೂಯೆ ನಡುಕವನ್ನು ನಿವಾರಿಸಿದಳು. ಧೈರ್ಯ ತುಂಬಿದಳು. ಮಂತ್ರಕವಚವನ್ನು ತೊಡಿಸುವಂತೆ ಪತಿವ್ರತಾ ಪ್ರೇಮ ಮಹಿಮಾಶಕ್ತಿಯನ್ನು ಉಪದೇಶಿಸಿದಳು. ರಕ್ಷಾ ಕವಚವಾಗುವಂತಹ ಒಂದು ಹೂವನ್ನು ಮಾನಸಿಕವಾಗಿ ಸೃಷ್ಟಿಸಿ ಅದನ್ನು ಪ್ರೀತಿದಾನವಾಗಿ ನೀಡಿ ಹರಸಿದಳು.

ಅನಸೂಯೆ ಮಹಾಪತಿವ್ರತೆ. ಆ ಸಾಧ್ವಿ ಪಾತಿವ್ರತ್ಯದ ಪರೀಕ್ಷೆಗೆ ಬಂದ ಬ್ರಹ್ಮ, ವಿಷ್ಣು, ಮಹೇಶ್ವರರನ್ನು ಮೆಚ್ಚಿಸಿ ಅವರಿಂದಲೇ ದತ್ತಾತ್ರೇಯ, ಚಂದ್ರ ಮತ್ತು ದೂರ್ವಾಸರೆಂಬ ಮೂವರು ಮಕ್ಕಳನ್ನು ಪಡೆದಿದ್ದಳು.

ಆ ತಾಯಿಯ ಕೃಪಾಶೀರ್ವಾದ ನೆನೆದಷ್ಟು ಮನಸ್ಸು ಹಗುರವಾಯಿತು. ಆ ವೃದ್ಧ ಹದಿಬದೆ ನೀಡಿದ ದಿವ್ಯ ಸುಮವನ್ನು ಕಣ್ತುಂಬಿಕೊಳ್ಳುತ್ತ – ರಾಮನಿಗೆ, ತನಗೆ, ಸತ್ಯಕ್ಕೆ, ಶುಚಿಗೆ, ಧರ್ಮಕ್ಕೆ, ಸರ್ವರಿಗೆ ಮಂಗಳವಾಗುವುದೆಂದು ನಂಬಿ ಆಕೆ ಧೈರ್ಯಗೊಂಡಳು. ಆ ಅನಸೂಯೆ ಹೂವನ್ನು ಹಣೆಗೆ ಒತ್ತಿಕೊಂಡು ನಮಸ್ಕರಿಸಿದಳು. ಪುಣ್ಯ ಪ್ರಸಾದವೆಂದು ಸುಮರಕ್ಷೆಯನ್ನು ಮತ್ತೆ ಮುಡಿದುಕೊಂಡಳು.

(ವಿಜಯಕರ್ನಾಟಕ, ಬೋಧಿವೃಕ್ಷ 17.11.2018)

❖❖❖

ಕೃತ್ತಿಕಾ ರೋಹಿಣಿಯರನುಗಾಮಿ ಮೃಗಶಿರ

ಲಂಕೆಯ ಕೋಟೆಯನ್ನು ನೋಡಿದ ಆಂಜನೇಯನು ತಾನು ನೇರವಾಗಿ ಹೆಬ್ಬಾಗಿಲಿನ ಮಾರ್ಗವಾಗಿಯೇ ಪ್ರವೇಶಿಸಬೇಕೆಂದು ತೀರ್ಮಾನಿಸುತ್ತಿಲ್ಲ. ತಕ್ಷಣ ಕಾಣಿಸದ ಬಾಗಿಲಿನ ಹುಡುಕಾಟದಲ್ಲಿ ದರ್ಪದಿಂದ ಹೆಜ್ಜೆಯಿಡುತ್ತಾ ಕೋಟೆಯ ಸುತ್ತಲೂ ನಡೆಯುತ್ತಾನೆ. ಅದು ಸುರುಳಿ ಸುತ್ತಿಕೊಂಡ ಹಾವಿನ ಹಾಗೆ ಸುತ್ತುಸುತ್ತಾಗಿ ಇತ್ತು.

ಅನಂತರ 'ಯುಕ್ತಿನಾಸ್ತಿಕ್ಯ' ಮತ್ತು 'ದಿವ್ಯ ಸಂಶಯ'ಗಳನ್ನು ಅನುಕ್ರಮವಾಗಿ ಕೋಟೆ ಮತ್ತು ಆಂಜನೇಯರಿಗೆ ಹೋಲಿಕೆಯಾಗಿ ಕೊಡಲಾಗಿದೆ. ಕವಿ ಯಾವುದೇ ಹುಡುಕಾಟಕ್ಕೆ ಸಿದ್ಧವಿಲ್ಲದ ನಾಸ್ತಿಕತೆಯನ್ನು ಒಂದು ಕಡೆ ಇಟ್ಟು ಅದನ್ನು ನಿರಾಕರಿಸುತ್ತಾರೆ. ಆದರೆ ನಂಬಿಕೆಯಿಂದಲೇ ಹೊರಟರೂ ದೈವ ಸಾಕ್ಷಾತ್ಕಾರಕ್ಕಾಗಿ ಜನ್ಮಜನ್ಮಗಳಲ್ಲಿಯೂ ಹುಡುಕಾಟ ನಡೆಸುತ್ತಿರುವ ಚೇತನದ್ದು ದಿವ್ಯಸಂಶಯ. ಈ ದಿವ್ಯಸಂಶಯದ ಫಲವಾಗಿ ದೊರೆಯುವ ತಿಳಿವಳಿಕೆಯು ಯುಕ್ತಿನಾಸ್ತಿಕ್ಯವನ್ನು ಸೋಲಿಸುತ್ತದೆ. ಕುವೆಂಪು ಅಂಥ ಸಂಶಯವನ್ನು ಗೌರವದಿಂದ ಕಾಣುತ್ತಾರೆ. ಛಾಯಾಶಕುನ ಎಂದರೆ, ನೆರಳುಗಳ ಸಹಾಯದಿಂದ ಭವಿಷ್ಯ ಹೇಳುವುದು ಎಂದು ಅರ್ಥ. (ಸಿಯೋಮಾನ್ಸಿ) ಈ ಸಂದರ್ಭದಲ್ಲಿ ಕೋಟೆಗೋಡೆಯ ಮೇಲೆ ಬಿದ್ದ ಹನುಮಂತನ ಕರಿನೆರಳು ಆ ನಗರದ ನಾಶವನ್ನು ಸೂಚಿಸುತ್ತದೆ. (ಛಾಯಾಶಕುನ ಸಂಜ್ಞೆ) ಹೀಗೆ ಅವನು ಕೋಟೆಗೋಡೆಯ ಮೇಲೆ ನೆರಳು ಚೆಲ್ಲುತ್ತಾ ಮುಂದುವರಿಯುತ್ತಾನೆ. ಸಾಕಷ್ಟು ನಡೆದ ಬಳಿಕ ಅವನಿಗೆ 'ಆ...' ಎಂದು ತೆರೆದ ಕೋಟೆ ಬಾಗಿಲು ಕಾಣುತ್ತದೆ. ಬಾಯಾರಿಕೆಯನ್ನು ತೀರಿಸಿಕೊಳ್ಳಲು ಮರೀಚಿಕೆಯನ್ನು ಬೆನ್ನುಹತ್ತುವ ಸುಳ್ಳು ಸಾಹಸ ಮಾಡಿ ಬಳಲಿರುವ ಮಿಥ್ಯೆಯು ಆಯಾಸದಿಂದ, ದಾಹದಿಂದ ಬಾಯಿ ತೆರೆದಿರುವಂತೆ ಆ ಬಾಗಿಲು ಕಾಣುತ್ತದೆ.

ಮೂರ್ತವಾದುದನ್ನು ವರ್ಣಿಸಲು ಅಮೂರ್ತವಾದ ಹೋಲಿಕೆಗಳನ್ನು ಕೊಟ್ಟಿರುವುದು ಇಲ್ಲಿನ ವಿಶೇಷ. ಹನುಮಂತ ಹೀಗೆ ಅಂದುಕೊಂಡು ತಿರುವು ಮುರುವುಗಳಿಂದ, ಕಲ್ಲು ಚಿಪ್ಪುಗಳಿಂದ ಕೂಡಿದ ಆ ಕೋಟೆಯನ್ನು ಅನುಸರಿಸುತ್ತಾ

ಮುಂದುವರಿದ. ಆ ವೈಭವವನ್ನು, ಅಲ್ಲಿಯ ಸಂಸ್ಕೃತಿಯನ್ನು ಅವನು ನಿರೀಕ್ಷಿಸಿರಲಿಲ್ಲ. ಅವನಿಗೆ ಯುಕ್ತಿ ಕೈಕೊಟ್ಟಂತಾಗಿತ್ತು. ನಾವು ನಿಜವಾಗಿಯೂ ಗೆಲ್ಲಬಲ್ಲೆವೇ ಎಂಬ ದಿವ್ಯ ಸಂಶಯ ಅವನಲ್ಲಿ ಮೂಡಿತು. ತನ್ನ ಬೆನ್ನು ಹತ್ತಿದ್ದ ಸಂಶಯದಿಂದ ತಪ್ಪಿಸಿಕೊಳ್ಳಲೋ ಎಂಬಂತೆ ಆ ದುರ್ಗದ ಮಾರ್ಗವಾಗಿ ಬಹುದೂರ ಸಾಗಿದ. ಮಿಥ್ಯೆ ಹುಸಿ ಸಾಹಸದಿಂದ ಬಿಸಿಲ್ಗೊದ್ರೆಯನ್ನು ಬೇಟೆಯಾಡಲು ಹೋಗಿ ಬೇಸತ್ತು ಬಾಯಾರುವಂತೆ ಹನುಮಂತನೂ ತನ್ನ ಯುಕ್ತಿಶೂನ್ಯತೆ ಹಾಗೂ ದಿವ್ಯ ಸಂಶಯಗಳಿಂದ ತಾನೇ ಬೇಸತ್ತ. ಈ ಬೇಸರ ಒಂದು ಕೊನೆಯನ್ನು ತಲುಪಿತೇನೋ ಎಂಬಂತೆ ಲಂಕಾಪುರದ್ವಾರ ಗೋಚರಿಸಿತು.

ಲಂಕೆಯ ವೈಭವವನ್ನು ಕಂಡು ಹನುಮಂತ ದಿಙ್ಮೂಢನಾದ. ಅವನಿಗೆ ಬುದ್ಧಿ ನಾಸ್ತಿಕ್ಯ ಉಂಟಾಯಿತು. ಅವನಿಗೆ ತಲೆ ಓಡಲಿಲ್ಲ ಎಂಬ ಮಾತು ಮೂಲ ವಾಲ್ಮೀಕಿ ರಾಮಾಯಣದಲ್ಲೂ ಬರುತ್ತದೆ.

ವಾನರ ಯೋಧರ ಶೌರ್ಯ ಪರಾಕ್ರಮಗಳನ್ನು ಇಲ್ಲಿ ಪ್ರದರ್ಶಿಸಿ ಏನು ಪ್ರಯೋಜನ? ನಮಗಲ್ಲ, ದೇವತೆಗಳಿಗೂ ಈ ಯುದ್ಧದಲ್ಲಿ ಗೆಲುವು ಸಾಧಿಸುವುದು ಅಸಾಧ್ಯದ ಕೆಲಸ. ಒಂದು ವೇಳೆ ಇಲ್ಲಿಗೆ ರಾಮ ಬಂದರೂ ಏನು ತಾನೆ ಮಾಡಬಲ್ಲ? ಈ ರಾಕ್ಷಸರೊಂದಿಗೆ ಹೋರಾಡುವುದೂ ಒಂದೇ ಬಂಡೆಗೆ ತಲೆ ಚಚ್ಚಿಕೊಳ್ಳುವುದೂ ಒಂದೇ. ಈ ರಾಕ್ಷಸರು ಸಾಮ, ದಾನ ಭೇದ ಇತ್ಯಾದಿ ಯಾವ ಉಪಾಯಗಳಿಗೂ ಜಗ್ಗುವವರಲ್ಲ. ಇವರಲ್ಲಿ ಒಡಕು ಮೂಡಿಸಲಂತೂ ಸಾಧ್ಯವೇ ಇಲ್ಲ. ಇವರು ತಮ್ಮ ಕಡೆಯವರಿಗೆ ದ್ರೋಹ ಮಾಡುವ ಬದಲು ಪ್ರಾಣವನ್ನೇ ಬಲಿದಾನ ಮಾಡುವಂತಹವರು. ನನ್ನ ಈ ಅನುಮಾನಗಳು ಒಂದು ವೇಳೆ ದಿಟವೆಂದು ಸಾಬೀತಾದಲ್ಲಿ ನಮ್ಮ ಸೋಲು ಶತಸ್ಸಿದ್ಧ.

ಇಲ್ಲಿನ ರಾಕ್ಷಸರು ಅದೆಷ್ಟು ಜಾಗರೂಕತೆಯಿಂದ, ಧೈರ್ಯದಿಂದ ತಮ್ಮ ಕಾವಲು ಕೆಲಸ ಮಾಡುತ್ತಾರೆಂದರೆ ಅವರ ಕಣ್ತಪ್ಪಿಸಿ ನನ್ನ ಉದ್ದೇಶ ನೆರವೇರಿಸಿಕೊಳ್ಳುವುದು ಸುಲಭದ ಕೆಲಸವಲ್ಲ. ನಾನು ಅವರಿಗಿಂತಲೂ ಹೆಚ್ಚು ಎಚ್ಚರ ವಹಿಸಬೇಕು. ಒಂದೇ ಒಂದು ಅಚಾತುರ್ಯ ಮಾಡಕೂಡದು. ನಾನಿಲ್ಲಿ ಒಬ್ಬಂಟಿ. ಇಲ್ಲಿ ನನಗೆ ಯಾರೂ ಸಹಾಯಕ್ಕೆ ಬರುವುದಿಲ್ಲ ಎಂಬುದನ್ನು ನಾನು ಮರೆಯಬಾರದು. ಯಾರೂ ಬೇಕಾದರೂ ಸುಲಭವಾಗಿ ನನ್ನನ್ನು ಪತ್ತೆ ಮಾಡಬಹುದು, ಬಂಧಿಸಬಹುದು.

ಪತ್ತೇದಾರನೆಂದು ಅನುಮಾನಿಸಿ ನನ್ನನ್ನು ಕೊಂದು ಹಾಕಲೂ ಬಹುದು. ನನ್ನಂತಹ ಒಬ್ಬ ವ್ಯಕ್ತಿ ಇಲ್ಲಿಯತನಕ ಬಂದಿದ್ದಾನೆ ಎಂದು ಇವರಿಗೇನಾದರೂ

ಗೊತ್ತಾಗಿಬಿಟ್ಟರೆ ನನ್ನ ಸ್ವಾಮಿಯ ಕೆಲಸ ಹದಗೆಡುತ್ತದೆ. ಅವನ ನಂಬಿಕೆ ಉಳಿಸಿಕೊಳ್ಳದೆ ಹೋದರೆ ನನಗಂತೂ ಕ್ಷಮಾಪಣೆ ಇಲ್ಲ. ಆಜ್ಞೆಯನ್ನು ಶಿರಸಾ ವಹಿಸದೆ ಎಡವಟ್ಟು ಮಾಡಿಕೊಳ್ಳುವ ರಾಯಭಾರಿ ತನ್ನ ಸ್ವಾಮಿಗೆ ದ್ರೋಹ ಬಗೆಯುತ್ತಾನೆ. [ಮಹೌಜಸೋ ಮಹಾವೀರ್ಯಾ ಬಲವಂತಶ್ಚ ರಾಕ್ಷಸಾಃ । ವಂಚನೀಯಾ ಮಯಾ ಸರ್ವೇ ಸ್ವಾಮಿಕಾರ್ಯಂ ಪ್ರಕುರ್ವತಾ । ಮಯಿ ದೃಷ್ಟೇ ತು ರಕ್ಷೋಭಿ ರಾಮಸ್ಯ ವಿದಿತಾತ್ಮನಃ । ಭವೇದ್ ವ್ಯರ್ಥಮಿದಂ ಕಾರ್ಯಂ ರಾವಣಾನರ್ಥಮಿಚ್ಛತಃ । ಇಹಾಹಂ ಯದಿ ತಿಷ್ಠಾಮಿ ಸ್ವೇನ ರೂಪೇಣ ಸಂವೃತಃ । ವಿನಾಶಮುಪಯಾಸ್ಯಾಮಿ ಭರ್ತುರರ್ಥಶ್ಚ ಹಾಸ್ಯತಿ । ಭೂತಾರ್ಥಾಶ್ಚವಿನಶ್ಯಂತಿ ದೇಶಕಾಲವಿರೋಧಿತಾಃ । ವಿಕ್ಲವಂ ದೂತಮಾಸಾದ್ಯ ತಮಃ ಸೂರ್ಯೋದಯೇ ಯಥಾ । ಘಾತಯಂತೀಹ ಕಾರ್ಯಾಣಿ ದೂತಾಃ ಪಂಡಿತಮಾನಿನಃ ॥ (ವಾಲ್ಮೀಕಿ ರಾಮಾಯಣ 5.2)]

ಹನುಮಂತ ಲಂಕೆಯ ಕೋಟೆಯನ್ನೆಲ್ಲ ಸುತ್ತಾಡುವ ಸಂದರ್ಭದಲ್ಲಿ ಮೂಲ ರಾಮಾಯಣದಲ್ಲಿ ಚಂದ್ರೋದಯದ ವರ್ಣನೆ ಬರುತ್ತದೆ. ಅದನ್ನೇ ಕುವೆಂಪು ಅವರೂ ತಮ್ಮ ಕಾವ್ಯದಲ್ಲಿ ಅಳವಡಿಸಿಕೊಂಡಿದ್ದಾರೆ. ಚಂದ್ರ ಒಂದು ಸಲಕ್ಕೆ ಮೂರು ನಕ್ಷತ್ರಗಳ ರಾಶಿಯೊಳಗೆ (ಮನೆಯೊಳಗೆ) ಪ್ರವೇಶಿಸುತ್ತಾನೆ. ಇಪ್ಪತ್ತೇಳು ನಕ್ಷತ್ರಗಳ ಪೈಕಿ ಚಂದ್ರನಿಗೆ ರೋಹಿಣಿಯನ್ನು ಒಳಗೊಂಡ ಮನೆ ಅತ್ಯಂತ ಪ್ರಿಯವಾದುದು. ಇಪ್ಪತ್ತೇಳು ನಕ್ಷತ್ರಗಳನ್ನು ನಿರ್ಲಕ್ಷಿಸಿ ಯಾವಾಗಲೂ ರೋಹಿಣಿಯೊಂದಿಗೇ ಇದ್ದುಬಿಡುತ್ತಿದ್ದನಂತೆ. ಇದರಿಂದ ಕೋಪಗೊಂಡ ದಕ್ಷ (ಆ ಇಪ್ಪತ್ತೇಳು ನಕ್ಷತ್ರಗಳ ತಂದೆ) ನೀನು ಹದಿನೈದು ದಿವಸಗಳಿಗೆ ಒಮ್ಮೆ ಕ್ಷೀಣಿಸು ಎಂದು ಚಂದ್ರನಿಗೆ ಶಾಪ ಕೊಟ್ಟಿದ್ದ. ಇಲ್ಲಿ ಕೃತ್ತಿಕಾ ರೋಹಿಣಿ ಮೃಗಶಿರಾ ನಕ್ಷತ್ರಗಳಿರುವ ಮನೆಯೊಳಗೆ ಚಂದ್ರ ಪ್ರವೇಶಿಸಿದ ಎಂಬ ಉಲ್ಲೇಖವಿದೆ. ಅಂದರೆ ಕಾಮಸುಖದ ಉಲ್ಲೇಖವಿದೆ. ಇದು ಮುಂದಿನ ಘಟನಾವಳಿಗೆ ಸೂಚನೆ ಇರಬಹುದು. ಏಕೆಂದರೆ ಮುಂದೆ ಹನುಮಂತ ಲಂಕೆಯೊಳಗೆ ಪ್ರವೇಶಿಸಿದಾಗ ಚಂದಿರನಂತೆಯೇ ರಾವಣನೂ ತನ್ನ ಅಂತಃಪುರದಲ್ಲಿ ಕಾಮಸುಖದೊಳಗೆ ಮುಳುಗಿರುತ್ತಾನೆ. ಮೃಗಶಿರ ಎಂಬ ಪದಕ್ಕೆ ನಕ್ಷತ್ರದ ಹೆಸರಿನ ಜೊತೆಗೆ ಮೃಗದ ತಲೆ ಎಂಬ ಧ್ವನ್ಯರ್ಥವೂ ಉಂಟು. ಇಷ್ಟರಲ್ಲೇ ರಾವಣನ ತಲೆದಂಡ ಆಗುತ್ತದೆ ಎಂಬ ಅರ್ಥವೂ ಇರಬಹುದು.

* * *

ಕೃತ್ತಿಕಾ ರೋಹಿಣಿಯರನುಗಾಮಿ ಮೃಗಶಿರಕೆ ಹೊಂಚುತಿರ್ದುದು ಮೃಗವ್ಯಾಧ ಬಾಣೋಜ್ವಲ ಗಭಸ್ತಿ' (2.12–341–343)

ಈ ಮೇಲಿನ ಉದ್ಧರಣಕ್ಕೆ ಇರುವ ಪೌರಾಣಿಕ ಹಿನ್ನೆಲೆ :

ಚಂದ್ರಮಂಡಲದಲ್ಲಿ ಕೃತ್ತಿಕಾ ರೋಹಿಣಿ ನಕ್ಷತ್ರಗಳನ್ನನುಸರಿಸಿ ಕಾಣುವ ಮಹಾನಕ್ಷತ್ರವೇ ಮೃಗಶಿರ. ಸೃಷ್ಟಿಕರ್ತನಾದ ಚತುರ್ಮುಖ ಬ್ರಹ್ಮ ವಾಗ್ದೇವಿಯನ್ನು ನಿರ್ಮಿಸಿ ಆಕೆಯ ಅಂದಚಂದಗಳಿಗೆ ಮನಸೋತನು. ಇದನ್ನರಿತ ವಾಗ್ದೇವಿ ಜಿಂಕೆಯ ರೂಪತಾಳಿ ಓಡಲು ಬ್ರಹ್ಮನೂ ಗಂಡು ಜಿಂಕೆಯ ರೂಪ ತಾಳಿ ಓಡಿದನು. ಆಕೆಯನ್ನು ಹಿಂಬಾಲಿಸುವುದನ್ನು ನೋಡಿ ದೇವತೆಗಳೆಲ್ಲ ಬ್ರಹ್ಮನನ್ನು ನಿಂದಿಸತೊಡಗಿದರು. ಆಗ ಶಂಕರನು ಪಿನಾಕ ಪಾಣಿಯಾಗಿ ವ್ಯಾಧರೂಪದಿಂದ ಬಂದು ಗಂಡುಜಿಂಕೆಯಾಗಿದ್ದ ಬ್ರಹ್ಮನ ಶಿರವನ್ನೂ ಕತ್ತರಿಸಿದನು. ಜಿಂಕೆ ನೆಲಕ್ಕೆ ಬಿದ್ದಾಗ ಅದರ ದೇಹದಿಂದ ಹೊರಹೊಮ್ಮಿದ ತೇಜೋರಾಶಿ ಅಂತರಿಕ್ಷದಲ್ಲಿ ಮೃಗಶಿರ ನಕ್ಷತ್ರವೆಂದು ಹೆಸರಾಯಿತು. ಶಂಕರ ಆರ್ದ್ರಾ ನಕ್ಷತ್ರ ರೂಪಿಯಾಗಿ ಅದರ ಹಿಂದೆಯೇ ಹೊರಟನು.

ಹಾಗಾಗಿ ಆಕಾಶದಲ್ಲಿ ಮೃಗಶಿರ ನಕ್ಷತ್ರದ ಬಳಿ ತ್ರಿಪುರಾಂತಕ ಮೃಗವ್ಯಾಧಾ ರೂಪದಿಂದ ಕಾಣುತ್ತಾನೆ. (ಆಧಾರ : ಪುರಾಣನಾಮ ಚೂಡಾಮಣಿ)

ಮೃಗವ್ಯಾಧನಾದ ಶಂಕರನ ಬಾಣದ ಉಜ್ವಲ ಕಿರಣ ಪ್ರಕಾಶ ಬಿಡದೆ ಮೃಗವೇಷಧಾರಿ ಬ್ರಹ್ಮನ ಶಿರದ ಬೇಟೆಗಾಗಿ ಹೊಂಚುಹಾಕುತ್ತಿತ್ತು. ಇದು ಲಂಕೆಯಲ್ಲಿ ಸೀತಾದೇವಿಗಾಗಿ 'ಗೋರಿವೇಂಟೆ'ಯಂತೆ ಬಿಡದೆ ಹುಡುಕುವ ಹನುಮನ ಚಿತ್ರಣ.

❖❖❖

ಕುವೆಂಪು ಸೃಜಿಸಿದ ರಾವಣ ಪ್ರಜಾಪ್ರಭುತ್ವದ ಮಾದರಿ

ಕನಕ ಲಂಕೆಯ ಚಕ್ರಾಧಿಪತಿ ದಶಶಿರ ರಾವಣ. ಅವನು ಸೀತಾಪಹರಣ ಮಾಡಿ ನೈತಿಕವಾಗಿ ಸೋಲುತ್ತಾನೆ. ಅಹಂನ ಧಾರ್ಷ್ಟ್ಯದಿಂದ ಹೆಣ್ಣಿನ ಹದಿಬದೆತನವನ್ನು ಗೌರವಿಸದೆ ಪತನ ಮುಖಿಯಾಗುತ್ತಾನೆ. ಪತಿ ಶ್ರೀರಾಮಧ್ಯಾನ ನಿರತ ಧರಣಿಸುತೆಯ ತಪದ ಜ್ವಾಲೆಯಲ್ಲಿ ರಾವಣನು ತನ್ನ ಕಾಳಿಕೆಯನ್ನು ಕಳೆದುಕೊಳ್ಳುವ ದರ್ಶನ ದೀಪ್ತಿ ನೀಡುವ ಮಹಾಕಾವ್ಯ 'ಶ್ರೀರಾಮಾಯಣದರ್ಶನಂ.'

ಅಂತಹ ಸರ್ವಾಧಿಕಾರಿ ರಾವಣನಲ್ಲಿ ಪ್ರಜಾಭಿಪ್ರಾಯವನ್ನು ಗೌರವಿಸುವ ನಡೆಯಿತ್ತು ಎನ್ನುವುದನ್ನು ಕುವೆಂಪು ಚಿತ್ರಿಸಿದ್ದಾರೆ. ನಿರಂಕುಶ ಪ್ರಭುವಾಗಿದ್ದ ಅವನು ತನ್ನ ಮಿತಿ ಅರಿತು ನಡೆವ; ಇತರರ ಭಿನ್ನಮತವನ್ನು ಸಹನೆಯಿಂದ ಕೇಳುವ; ವಿವೇಚನೆಯಿಂದ ಅದನ್ನು ಪರಿಶೀಲಿಸುವ ಹಿರಿಯನಡೆ ಇಂದಿನ ಪ್ರಜಾಪ್ರಭುತ್ವದ ಸರ್ವಾಧಿಕಾರಿ ಮನೋಭಾವದ ನಾಯಕರು ಅನುಸರಿಸಬೇಕಾದ ಪ್ರಜಾಧಿಪತ್ಯತತ್ವವಾಗಿದೆ. ಹೀಗಾಗಿ ಕುವೆಂಪು ಸೃಷ್ಟಿಸಿರುವ ರಾವಣ ಕಾರ್ಯನೀತಿಯು ಇಂದಿನ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಪ್ರಸ್ತುತವಾಗಿದೆ. ಒಂದು ಸ್ವತಂತ್ರ ರಾಷ್ಟ್ರದಲ್ಲಿ ಜನರಿಗಿರುವ ಪರಮಾಧಿಕಾರ ಅಭಿವ್ಯಕ್ತಿ ಸ್ವಾತಂತ್ರ್ಯ. ಅದು ಮೂಲಭೂತವಾದ ಸ್ವಾತಂತ್ರ್ಯ. ಅದನ್ನು ಅರಿತು ಮನ್ನಣೆ ನೀಡಿದ್ದು ರಾವಣನ ಪ್ರಜಾಧರ್ಮನಡೆ.

* * *

ಲಂಕೇಶ್ವರ ರಾವಣನು ಸಮುದ್ರದ ಎಡಬದಿಯಲ್ಲಿ ಕಪಿಧ್ವಜ ರಾಮಸೇನೆಯು ಬೀಡುಬಿಟ್ಟಿರುವುದನ್ನು ಬೇಹುಗಾರರಿಂದ ತಿಳಿದನು. ಅವರನ್ನು ಎದುರಿಸಲು ರಾಕ್ಷಸ ಪ್ರಮುಖರ, ಸಚಿವ ಶ್ರೇಷ್ಠರ, ಸೇನಾ ಪ್ರಮುಖರ ಮತ್ತು ಸತ್ಪ್ರಜೆಗಳ ಸಭೆ ಕರೆದನು. ಅವರನ್ನುದ್ದೇಶಿಸಿ ಮಾತನಾಡುತ್ತ ಮುಂದಿನ ಉಪಾಯವೇನೆಂಬುದನ್ನು ಆಲೋಚಿಸಿ ತಿಳಿಸಿ ಎಂದನು. ಭಾರಿಗಾತ್ರದ ಪ್ರಥಮ ಸೇನಾನಿ ಪ್ರಹಸ್ತನು ವೈರಿಗಳನ್ನು ಎದುರಿಸಲು ತಾನು ಮತ್ತು ಸೈನ್ಯ ಸಿದ್ಧರಿರುವುದಾಗಿ ಶೌರ್ಯದ ನುಡಿಗಳನ್ನು ಆಡಿದನು.

ಅವನ ಅನಂತರ ಮಂತ್ರ ಸಂಗ್ರಾಮ ವಿದ್ಯೆಯ ಮಹಾಗುರು ದೈತ್ಯದಳಪತಿ ಮಹಾಪಾರ್ಶ್ವನು ತಮ್ಮಲ್ಲಿರುವ ಮಹಾವೀರರಾದ ಇಂದ್ರಜಿತು, ಕುಂಭಕರ್ಣ, ಅಕಂಪನ ಮುಂತಾದವರ ಬಗ್ಗೆ ಹೇಳಿ ಹೊಗಳಿದನು. ತಮ್ಮ ವಿಜಯಾಕಾಂಕ್ಷಿ ರಾವಣ ಚಕ್ರವರ್ತಿಯು ವೈರಿಶಕ್ತಿಯನ್ನು ಗೌರವಿಸಿ ಹೇಳಿದ ವಿನಯವಾಣಿಯನ್ನು ಗಮನಿಸಬೇಕು ಎಂದು ತಿಳಿಸಿದನು.

'ನೀವೆಲ್ಲರೂ ಚೆನ್ನಾಗಿ ಆಲೋಚಿಸಿ, ನೀರಿನ ಮೇಲೆ ಕಾಣುವ ಹಡಗಿನ ಭಾಗವನ್ನು ಬಣ್ಣಿಸಿದರೆ ಆಯಿತೆ? ಕಣ್ಣಿಗೆ ಕಾಣದೆಯೇ ನೀರಿನ ಅಡಿಯಲ್ಲಿ ಕಿರಿದಾದ ಬಿರುಕಿದ್ದರೆ ಅಷ್ಟೇ ಸಾಕಲ್ಲವೆ ಬೃಹತ್ ನೌಕೆಯನ್ನು ಮುಳುಗಿಸಲು? ಸುರಕ್ಷಿತವಾಗಿ ಯಾತ್ರೆಯನ್ನು ಮಾಡಬೇಕೆನ್ನುವವರು ಅಂತರಂಗದ ರಂಧ್ರದೋಷಕ್ಕೆ ಕಣ್ಣನ್ನು ಮುಚ್ಚಿಕೊಂಡಿರಬಾರದು. ನಮ್ಮ ದೊರೆಯ ಕಣ್ಣಿಗೆ ಆ ಸರ್ವ ವಿನಾಶ ರಂಧ್ರವು ಕಾಣುತ್ತಿದೆ. ಅಲ್ಲಿಗೆ ಬರಿಯ ಸಾಹಸ ಸಾಲದು.' ಎಂದು ಮನವಿ ಮಾಡಿಕೊಂಡನು.

ಸಭೆಯು ಮಹಾಪಾರ್ಶ್ವನ ಮಾತಿನ ಇಂಗಿತವನ್ನು ಅರಿತು ನಿಶ್ಯಬ್ದವಾಯಿತು. ರಾವಣನು ಅದನ್ನು ಕಣ್ಣರಳಿಸಿ ನೋಡಿ ಗಂಭೀರ ಮುಖಮುದ್ರೆ ತಾಳಿ ನಿಟ್ಟುಸಿರು ಬಿಟ್ಟನು. ತನ್ನೊಳಗೆ ತಾನು ಒಳಹೋಗುವವನಂತೆ ಕಣ್ಣೆವೆಯನ್ನು ಮುಚ್ಚಿಕೊಂಡನು. 'ಪ್ರಿಯವಲ್ಲದಿದ್ದರೂ ಸತ್ಯವನ್ನು ಹೇಳಿದ ಕಟು ತೃಪ್ತಿಯಿಂದ ಮಹಾಪಾರ್ಶ್ವನು – ಅಮೃತವನ್ನು ಕಡೆದುಕೊಟ್ಟ ಬಳಿಕ ವಿಶ್ರಮಿಸಲೆಂದು ದಡ ಸೇರಿದ ಮಂದರ ಪರ್ವತದಂತೆ ಸುಮ್ಮನಾದನು.

ಅನಂತರ ಪ್ರಹಸ್ತನ ತಮ್ಮ ಅಕಂಪನ ರಾಜನ ಇಚ್ಛೆ ಪೂರೈಸುವುದೇ ಕರ್ತವ್ಯ ಎಂದು ಹೇಳಿದನು. ಸಾಮಾನ್ಯನಾದ ಕವಿ ಮನದ ಹಿರಣ್ಯಕೇಶಿ ಯುದ್ಧಕ್ಕಿಂತ ಶಾಂತಿ ಮುಖ್ಯವೆಂದು ತಿಳಿಸಿದನು. ಅವನು 'ಯಾರಿಗಾದರೂ ಸುಖವು ಅಮೂಲ್ಯವಾದುದು. ರಾಜಸುಖದಂತೆಯೇ ಪ್ರಜಾಸುಖ. ರಾಮನಿಗೆ ಯಾವುದು ಸುಖವೊ? ಸೀತೆಗೆ ಯಾವುದು ಸುಖವೊ? ಮತ್ತು ನಮ್ಮ ದೊರೆಗೆ ಯಾವುದು ಸುಖವೊ? ಓರ್ವನ ಸುಖ ಸರ್ವರ ಸುಖವಾಗುತ್ತದೆಯೆ?' ಎಂದು ಪ್ರಶ್ನಿಸಿದನು.

ಮೇಘನಾದನು ದೊರೆಗೆ ಬೇಕಾದದ್ದು ನಮ್ಮ ಪ್ರಾಣ, ಧರ್ಮ ಬೋಧೆಯಲ್ಲ ಎಂದು ಹೇಳಿ, ತಂದೆಗೆ ತನ್ನ ವಿಧೇಯತೆಯನ್ನು ಪ್ರಕಟ ಪಡಿಸಿದನು. ಅವನ ಪರಾಕ್ರಮದ ಸಿಡಿಲನುಡಿಗಳಾದ ಮೇಲೆ ಶಾಂತ ಚಿತ್ತದ ವಿಭೀಷಣನು ಶ್ರೀರಾಮನ ಸತಿ ಪತಿವ್ರತಾ ಶಿರೋಮಣಿ ಸೀತಾದೇವಿಯ ಶಾಪದ ತಾಪ ವಿಧಿಗಿಂತ

ಕ್ರೂರವಾದುದು. ಆ ಪಾಪಕಾರ್ಯ ನಿಲ್ಲಲಿ. ಅನಂತರ ಕಪಿಸೈನ್ಯ ಎದುರಿಸೋಣ ಎಂದು ಸ್ಪಷ್ಟವಾಗಿ ಹೇಳಿದನು. ಅದು ಮಹಾಪಾರ್ಶ್ವನ ಸೂಚ್ಯ ಅಭಿಪ್ರಾಯಕ್ಕೆ ಪೋಷಕವಾಗಿತ್ತು. ಅದನ್ನು ಕೇಳಿ ಸುರವೈರಿ ರಾವಣನ ಮುಖ ಕಳೆಗುಂದಿತು. ಸಿಂಹಾಸನದಿಂದ ತಟಕ್ಕನೆದ್ದು ಆಯಾಸಗೊಂಡು ಹೊರ ಹೋದನು. ವಿಭೀಷಣನು ಸಭೆಯನ್ನು ವಿಸರ್ಜಿಸಿದನು.

* * *

ಯುದ್ಧದ ಎರಡನೆಯ ದಿನವು ಅದ್ವಿತೀಯವೆನ್ನುವಂತೆ ಪ್ರಾರಂಭವಾಯಿತು. ಮೇಘನಾದನ ಭಯಂಕರ ವಿಷಾಸ್ತ್ರವನ್ನು ಗೆದ್ದು ಮೇಲಿದ್ದ ವಾನರರು ಸಿಂಹನಾದ ಮಾಡಿದರು. ಅದನ್ನು ಕೇಳಿ ರಾವಣನು ಆಶ್ಚರ್ಯ ಚಕಿತನಾದನು. ಕೋಪದಿಂದ ತಾನು ಆಯ್ದ ನಾಯಕರಿಗೆ ಮೃತ್ಯುನೇಮ (ಗೆಲ್ಲು ಅಥವಾ ಸಾಯಿ ಎಂಬ ನಿಯಮ)ವನ್ನು ಕೊಟ್ಟು ಕದನಕ್ಕೆ ಕಳುಹಿಸಿದನು.

ಲಂಕೇಶ್ವರನು ಕೋಟೆಯ ಕೊತ್ತಳವನ್ನು ಏರಿ ರಣರಂಗವನ್ನು ವೀಕ್ಷಿಸುತ್ತಿದ್ದನು. ಸಂಜೆಯಾಗುತ್ತಿರಲು ಓಡೋಡಿ ಬಂದ ಚಾರನೊಬ್ಬನು ನೀಲನ ಗದಾಘಾತದಿಂದ ಪ್ರಹಸ್ತನು ಸತ್ತ ಸುದ್ದಿ ಹೇಳಿದನು. ರಾವಣನ ಮನಸ್ಸು ತತ್ತರಿಸಿತು. ಅದರಿಂದ ಚೇತರಿಸಿ ಕೊಳ್ಳುತ್ತಿರುವಾಗಲೇ ಇನ್ನೊಬ್ಬ ಚಾರ ಬಂದು ಕೋದಂಡಪಾಣಿ ರಾಮನ ಬಾಣಕ್ಕೆ ಲಕ್ಷ ಲಕ್ಷ ರಾಕ್ಷಸ ಸೈನ್ಯ ಹೆಣವಾಗಿ ಉರುಳಿದೆ. ಉಳಿದ ಸೈನ್ಯ ಭೀತಿಯಿಂದ ಲಂಕೆಗೆ ಹಿಂತಿರುಗುತ್ತಿದೆ ಎಂದು ತಿಳಿಸಿದನು.

ಸೂರ್ಯ ಮುಳುಗಿದ, ಕತ್ತಲಾಯಿತು. ದಶಶಿರನ ಮತಿಗೆ ಮಂಕು ಕವಿದಂತಾಯಿತು. ಅವನು ಉದ್ವಿಗ್ನನಾಗಿ ಕೊತ್ತಳದಿಂದ ಇಳಿದನು. ಆಲೋಚನೆಗೆ ಸಚಿವ ಮಂದಿರಕ್ಕೆ ನಡೆದನು. ಆ ಸಭೆಯು ಸಚಿವರುಗಳಿಂದ ಕಿಕ್ಕಿರಿದಿತ್ತು. ಅವರೆಲ್ಲರೂ ಚಿಂತನೆಗೊಳಗಾಗಿದ್ದ ದಶಾನನನಿಗೆ ಒಮ್ಮತದಿಂದ ಹೀಗೆ ಹೇಳಿದರು:

'ಭಿನ್ನಮತಕ್ಕೆ ಈಗ ವೇಳೆಯಿಲ್ಲ. ಶಕ್ತಿ ಸಾಧಕ, ಅತುಲ ಪರಾಕ್ರಮಿ ಮಹಾಪಾರ್ಶ್ವ ದಳಪತಿಗೆ ಸೇನಾಪಟ್ಟವನ್ನು ಕಟ್ಟು. ಅಂದು ಸಭೆಯಲ್ಲಿ ವಿಭೀಷಣನ ಪಕ್ಷವಿಡಿದು ಹೇಳಿದುದನ್ನು ಇಂದು ನೆನೆಯಬೇಡ. ಅರ್ಹತೆಗೆ ಮನ್ನಣೆಯನ್ನು ಮಾಡದಿದ್ದರೆ ತಾನೇ ತನ್ನದನ್ನು ಕೊಂದಂತೆ. ಅದು ಹಗೆಗೆ ಉಪಕಾರವಾದಂತೆ! ಇಂದು ರಾತ್ರಿ ಪ್ರಳಯ ವೇಗದಲ್ಲಿ ನುಗ್ಗಿ ಬರುವ ಕಪಿಸೈನ್ಯವನ್ನು ತಡೆಯುವ ಬಲವಿರುವುದು ಸತ್ತ್ವ ಸಂಯಕನಾದ ಮಹಾಪಾರ್ಶ್ವನಿಗೆ, ನಿನಗೆ ಮತ್ತು ಕುಂಭಕರ್ಣನಿಗೆ ಮಾತ್ರ. ಅದು ಬೇರೆಯವರಿಂದ ಅಸಾಧ್ಯ. ಸಹೋದರನು

ನಿದ್ರಾ ಸಮಾಧಿಯಲ್ಲಿದ್ದಾನೆ. ನೀನು ದೊರೆ. ಸಮರ್ಥ ಸೇವಕರು ಇರುವಾಗ ಅಂತಹ ಅರ್ಹರಿಗೆ ಆಜ್ಞೆ ಮಾಡುವುದು ರಾಜನ ಕರ್ತವ್ಯ.

ರಾವಣನು ಸಚಿವರ ಮಾತನ್ನು ಸಮ್ಮತಿಸಿ ಮಹಾಪಾರ್ಶ್ವನಿಗೆ ಬರಲು ಹೇಳಿ ಕಳುಹಿಸಿದನು. ಶಕ್ತಿ ಪೂಜೆಯಲ್ಲಿದ್ದ ಭಾಳನೇತ್ರನಿಗೆ ಸಮನಾದ ದೈತ್ಯ ಸೇನಾಪತಿಯು ಬಂದನು. ನಮಸ್ಕರಿಸಿದ ಅವನಿಗೆ ಸಮಪೀಠವನ್ನು ನೀಡಿ ಗೌರವಿಸಿದನು. ಸಚಿವರ ಇತ್ಯರ್ಥವನ್ನು ಮತ್ತು ತನ್ನ ಆಜ್ಞೆಯನ್ನು ತಿಳಿಸಿದನು. ಆಗ ಮಹಾಪಾರ್ಶ್ವನು ಗಂಭೀರವಾಗಿ ತನ್ನ ಅಂತರ್ಯವನ್ನು ಹೀಗೆ ವ್ಯಕ್ತಪಡಿಸಿದನು:

'ಜೀಯ, ವಿಭೀಷಣನ ಅಂದಿನ ಮಾತನ್ನು ಇಂದೂ ನೆನಪಿಗೆ ತರುತ್ತೇನೆ. ರಾಜೇಂದ್ರನೇ, ನಮ್ಮ ದೌರ್ಬಲ್ಯವಿರುವುದು ನಮ್ಮ ಸೈನ್ಯದಲ್ಲಿ ಅಲ್ಲ. ಆದರೆ ಆ ಮಾತು ಈಗ ನನಗೆ ಅಪ್ರಸ್ತುತ ಮತ್ತು ಸ್ವಾಮಿನಿಷ್ಠೆಗೆ ತಕ್ಕುದಲ್ಲ. ನಿನ್ನ ಆಜ್ಞೆಯ ಸರ್ವಸೇನಾಧಿಪತ್ಯದ ಮಹಾಪಟ್ಟವನ್ನು ಶಿರದಲ್ಲಿ ಧರಿಸಿದ್ದೇನೆ. ನಾಳೆ ಬೆಳಗಾಗುವ ತನಕ ರಾಮ ಸಂಗ್ರಾಮ ಶಕ್ತಿಯನ್ನು ತಡೆಯುತ್ತೇನೆ. ಬಳಿಕ ಅಲ್ಲಿಂದ ಆಯಸ್ಸು ಇರುವವರೆಗೂ ದುಡಿಯುತ್ತೇನೆ. ನಿನ್ನ ತೇರಿನ ನೊಗಕ್ಕೆ ಹೆಗಲು ಕೊಟ್ಟು ಮಡಿಯುತ್ತೇನಲ್ಲದೆ, ಮರಳಿ ಲಂಕೆಗೆ ಪ್ರವೇಶಿಸುವುದಿಲ್ಲ. ತನ್ನ ಮಿತಿ ತಾನು ಅರಿತವನು ಎಂದಿಗೂ ದೊರೆಗೆ ಹುಸಿ ಭರವಸೆಯ ಬಲೆಯನ್ನು ಹರಡುವುದಿಲ್ಲ'

ಅವನ ಹೃದಯದಾಳದ ನುಡಿ ಕೇಳಿ ತಿಳಿದು, ವೀರನು ವೀರನಿಗೆ ಕೊಡುವ ಕಣ್ ಮೆಚ್ಚುಗೆಯ ಕಾಣಿಕೆ ಸಲ್ಲಿಸಿ ರಾವಣನು,

'ನೀನು ಹೇಳಿದುದು ಸತ್ಯವಾದರೂ ಸಾಧಕವರೇಣ್ಯನೇ, ನಮಗೆ ಮೋಕ್ಷಕ್ಕೆ ಯುದ್ಧವಲ್ಲದೆ ಬೇರೆ ಮಾರ್ಗವೆಲ್ಲಿದೆ ಹೇಳು? ನಡೆ, ಹೋಗು. ಈ ರಾತ್ರಿ ರಾಮಶಕ್ತಿಯ ಕಪಿಧ್ವಜಿನಿಯನ್ನು ತಡೆ. ಕೇಳು, ನಾಳೆ ಅಕಾಲದಲ್ಲಿ ಪ್ರಳಯರುದ್ರನನ್ನು ಎಬ್ಬಿಸುವಂತೆ ಕುಂಭಕರ್ಣನನ್ನು ಎಬ್ಬಿಸುತ್ತೇನೆ.'

ಎಂದು ಹೇಳುತ್ತ ಮಹಾ ಪಾರ್ಶ್ವನನ್ನು ರಣಯಜ್ಞದ ರುದ್ರವೇದಿಕೆಗೆ ಬೀಳ್ಕೊಟ್ಟನು. ಧಳಧಳಧಳವೆಂದು ಧರೆ ನಡುಗುವಂತೆ ಸಮರ ಭೇರಿಯ ಭೀಕರ ಶಬ್ದವು ಕಿವಿಗೆ ಅಪ್ಪಳಿಸಿತು!

(ಸುಧಾ 28, ಅಕ್ಟೋಬರ್ 2021)

❖❖❖

ಯುದ್ಧ ವಿರೋಧಿ ಶಾಂತಿಪ್ರಿಯ ಹಿರಣ್ಯಕೇಶಿ

ಲಂಕೇಶ್ವರ ರಾವಣನು ಸಮುದ್ರದ ಎಡಬದಿಯಲ್ಲಿ ಕಪಿಧ್ವಜ ರಾಮಸೇನೆಯು ಬೀಡುಬಿಟ್ಟಿರುವುದನ್ನು ಬೇಹುಗಾರರಿಂದ ತಿಳಿದನು. ಅವರನ್ನು ಎದುರಿಸಲು ರಾಕ್ಷಸ ಪ್ರಮುಖರ, ಸಚಿವ ಶ್ರೇಷ್ಠರ, ಸೇನಾ ಪ್ರಮುಖರ ಮತ್ತು ಸತ್ ಪ್ರಜೆಗಳ ಸಭೆ ಕರೆದನು. ಅವರನ್ನುದ್ದೇಶಿಸಿ ಮಾತನಾಡಿ ಮುಂದಿನ ಉಪಾಯವೇನು ಆಲೋಚಿಸಿ ಎಂದು ಹೇಳಿದನು. ಭಾರೀ ಗಾತ್ರದ ಪ್ರಥಮ ಸೇನಾನಿ ಪ್ರಹಸ್ತನು ವೈರಿಗಳನ್ನು ಎದುರಿಸಲು ತಾನು ಮತ್ತು ಸೈನ್ಯ ಸಿದ್ಧರಿರುವುದಾಗಿ ಶೌರ್ಯದ ನುಡಿಗಳನ್ನು ಆಡಿದನು.

ಅವನ ಅನಂತರ ಮಂತ್ರ ಸಂಗ್ರಾಮ ವಿದ್ಯೆಯ ಮಹಾಗುರು ದೈತ್ಯ ದಳಪತಿ ಮಹಾಪಾರ್ಶ್ವನು. ತಮ್ಮಲ್ಲಿರುವ ಮಹಾವೀರರಾದ ಇಂದ್ರಜಿತು, ಕುಂಭಕರ್ಣ, ಅಕಂಪನ ಮುಂತಾದವರ ಬಗ್ಗೆ ಹೇಳಿ ಹೊಗಳಿದನು. ತಮ್ಮ ವಿಜಯಾಕಾಂಕ್ಷಿ ದೊರೆಯು ವೈರಿಶಕ್ತಿಯನ್ನು ಗೌರವಿಸಿ ಹೇಳಿದ ವಿನಯವಾಣಿ ಗಮನಿಸಬೇಕು ಎಂದು ತಿಳಿಸಿದನು. ನೀರಿನ ಮೇಲಿರುವ ಹಡಗು ಚೆನ್ನಾಗಿದ್ದರೂ ಮುಳುಗಿರುವ ಭಾಗದಲ್ಲಿ ಕಾಣದ ಬಿರುಕಿನ ದೋಷವನ್ನು ನಿರ್ಲಕ್ಷಿಸಬಾರದು. ನಮ್ಮ ದೊರೆಯ ಕಣ್ಣಿಗೆ ಆ ತೂತು ಕಾಣುತ್ತಿದೆ. ಪರಾಕ್ರಮವಷ್ಟೆ ಸಾಲದು. ಧರ್ಮ ದೇವತೆಯ ಕೋಪವನ್ನು ಪ್ರತಿಭಟಿಸಿ ಯಾರೂ ಗೆಲ್ಲಲಾರರು. ಸಾಕ್ಷಿ ಬೇಕಿದ್ದರೆ ಲಂಕಾನಗರ ಲಕ್ಷ್ಮಿಯ ಕೈಯಲ್ಲಿ ಬಾಗಿರುವ ತ್ರಿಶೂಲ ನೋಡಿ ಬನ್ನಿ ಎಂದು ತನ್ನ ನೈತಿಕ ಧರ್ಮಾಧಾರಿತ ಪ್ರಿಯವಲ್ಲದ ಸತ್ಯವನ್ನು ಹೇಳಿದನು.

ಅವನ ಮಾತನ್ನು ಪ್ರತಿಭಟಿಸಲು ಪ್ರಹಸ್ತನ ತಮ್ಮ ಅಕಂಪನು ಎದ್ದು ನಿಂತನು. ಅವನು ರಾಜನು ಪ್ರತ್ಯಕ್ಷ ದೈವ. ರಾಜನ ಸುಖ ಮುಖ್ಯ. ವೈರಿಯ ಹೆಂಡತಿಯನ್ನು ನಾವು ತರಬೇಕಿತ್ತು. ಅದನ್ನು ರಾಜನೇ ಮಾಡಿದ್ದಾನೆ. ರಾಜನು ವೈರಿಗಳನ್ನೆಲ್ಲಾ ನಾಶ ಮಾಡಲು ಉಪಾಯ ಹೂಡಿದ್ದಾನೆ. ಅದರ ಬಗ್ಗೆ ಆಲೋಚಿಸೋಣ ಗುರಿಯ ಹೊರತಾದ ಕುರುಡು ಮಾತು ವ್ಯರ್ಥ ಎಂದು ವಾದಿಸಿದನು.

ಅಖ್ಯಾತರೊಳ್ ವಿಖ್ಯಾತನಕ್ಷಿವನ ಚೈತ್ರನಾದನ್ ಸಕಲ ಸದಸ್ಯರಿಗೆ

ಅಕಂಪನ ಮಾತು ನಿಲ್ಲಿಸಿದನು. ಅನಂತರ ವಸಂತ ಮಾಸದ ಸೂರ್ಯೋದಯದ ಸರೋವರದಲ್ಲಿ ಕೆಂದಾವರೆಯ ಮಗ್ಗು ಅರಳುವಂತೆ ಸಭೆಯ ಅಂಚಿನಿಂದ ಓರ್ವನು ಮೆಲ್ಲಗೆ ಎದ್ದು ನಿಂತನು. ಸುಪ್ರಸಿದ್ಧರು ಬೆರಗಾಗಿರಲು, ಅಪ್ರಸಿದ್ಧರು 'ಉಘೇ' ಎಂಬ ಘೋಷ ಹೊಮ್ಮಿಸಿದರು. ಸುಪ್ರಸಿದ್ಧರಲ್ಲಿ ಅಪ್ರಸಿದ್ಧನು, ಅಖ್ಯಾತರಲ್ಲಿ ವಿಖ್ಯಾತನು ಆದ ಅವನು – ಎಲ್ಲ ಸದಸ್ಯರ ಅಕ್ಷಿವನದ ಚೈತ್ರನಾದನು. ಅವನ ಸುಂದರ ಮುಖದ ಸಂಪತ್ತಿನ ಕಾವ್ಯ ವೈಖರಿಗೆ ಚವರಿ ಬೀಸಿದಂತೆ ಹೊಂಬಣ್ಣದ ಮುಂಗುರುಳುಗಳು ಸುರುಳಿಗೊಂಡಾಡುತ್ತ ಮನೋಹರವಾಗಿದ್ದವು. ಕೌಮಾರ್ಯವನ್ನು ತೊರೆಯಲು ಒಪ್ಪದ ಮುಖದ ಮುಗ್ಧತೆಗೆ ತಾರುಣ್ಯ ಮೂಡಿ ಮೋಹ ಸುಳಿದಾಡುತ್ತಿತ್ತು. ಲಂಕೆಯಲ್ಲಿ ಇವನಿಗಿಂತ ಸುಂದರರು ಇರುವರೆ? ಎಂಬ ಶಂಕೆ, ಸಂತೋಷಕ್ಕೆ ಹಿರಿಯರು ಒಳಗಾದರು. ಅವರುಗಳು–ಅವನು ಏನು ಹೇಳಿದರು ಗುರುತರವಾಗಿರುವುದಿಲ್ಲ ಎಂಬ ಉಪೇಕ್ಷೆಯಿಂದ–ರಸಾಪೇಕ್ಷೆಯ ನಾಟಕ ಪ್ರೇಕ್ಷಕರಂತಿದ್ದರು!

ಹಿರಣ್ಯಕೇಶಿ ಹೆಸರಿನ ಅವನು ಬಿಳಿ ನೈದಿಲೆಯಂಥ ಸಭೆಯ ಕುತೂಹಲಕ್ಕೆ ತನ್ನ ಚಂದ್ರನಗೆಯ ಬೆಳುದಿಂಗಳ ಬೆಳಕನ್ನು ಸಿಂಪಡಿಸಿದನು. ತನ್ನುಸಿರ ಸ್ವರವನ್ನು ಹೀಗೆ ಮಿಡಿಯತೊಡಗಿದನು.

ಕಿರಿಯ ಸಾಮಾನ್ಯ ಜನಮನ ಪ್ರತಿನಿಧಿಯು ಮೆನ್

'ಸಭೆಗೆ ಕೈ ಮುಗಿಯುತ್ತೇನೆ. ಹಿರಿಯರಿಗೆ ನಮಿಸುತ್ತೇನೆ ಸ್ನೇಹಿತರಿಗೆ ವಂದಿಸುತ್ತೇನೆ. ದಾನವೇಂದ್ರನಿಗೆ ಗೌರವವನ್ನು ಅರ್ಪಿಸುತ್ತೇನೆ. ಹಿರಿಯರಿರುವ ಈ ಸಭೆಯ ಮಧ್ಯದಲ್ಲಿ ಎದ್ದು ನಿಲ್ಲುವ ಹಿರಮೆ ನನಗಿಲ್ಲವಾದರೂ, ಇಲ್ಲಿಗೆ ಕಿರಿತನದ ಉತ್ಸಾಹ ಸಲ್ಲುತ್ತದೆ.

'ನಾನು ಕಿರಿಯನು, ನಾನು ಸಾಮಾನ್ಯನು, ನಾನು ಸಾಮಾನ್ಯ ಜನಮನ ಪ್ರತಿನಿಧಿ. ನಮ್ಮ ಹೆಸರಾಂತ ನಾಲ್ವರಿಂದ – ಹಿರಿಯುರು ಹೇಗೇಗೆ ಚಿಂತಿಸುವರೆಂಬುದನ್ನು ಸಭೆಯು ಆಲಿಸಿದೆ. ಕಿರಿಯರ ಮನದಲ್ಲಿ ಹರಿವ ಚಿಂತೆಯ ಹೆಜ್ಜೆ ಗುರುತುಗಳನ್ನು ಈ ಗೋಷ್ಠಿ ತಿಳಿಯುವಂತೆ ಚಿತ್ರಿಸುವುದು ನನ್ನ ಕರ್ತವ್ಯ.'

ಎಂದು ಹೇಳುತ್ತ ಆ ತರುಣ ಮೇಧಾವಿಯು ಅಕಂಪನು ಕುಳಿತಕಡೆ ಕಣ್ಣನ್ನು ಹರಿಸಿ ಸೂಕ್ಷ್ಮವಾಗಿ ವ್ಯಂಗ್ಯಾತ್ಮಕವಾಗಿ ನೋಡುತ್ತ, ಕೊರಳೆತ್ತಿ ಉತ್ತೇಜಿತ ಧ್ವನಿಯಿಂದ ಮಾತು ಮುಂದುವರಿಸಿದನು.

'ಯಾರಿಗಾದರೂ ಸುಖವು ಅಮೂಲ್ಯವಾದುದು. ರಾಜ ಸುಖದಂತೆಯೆ ಪ್ರಜಾಸುಖ. ರಾಮನಿಗೆ ಯಾವುದು ಸುಖವೊ? ಸೀತೆಗೆ ಯಾವುದು ಸುಖವೊ? ಮತ್ತು ನಮ್ಮ ದೊರೆಗೆ ಯಾವುದು ಸುಖವೊ? ಓರ್ವನ ಸುಖ ಸರ್ವರ ಸುಖವಾಗುತ್ತದೆಯೆ? ಓರ್ವನ ಸುಖವು ಬಹುಜನರ ಸುಖಕ್ಕೆ ಬೆಲೆಯಾಗುತ್ತದೆಯೆ? ಹಾಗೆ ಬೆಲೆಯಾದರೆ ಸುಖಕ್ಕೆ ಸುಖವೇ ತಾನು ನಾಣ್ಯವೊ? ಅಥವಾ ಅಳತೆಗೆ ಇನ್ನೂ ಬೇರೆ ಹೊನ್ನಿರುವುದೊ? ಧರ್ಮವೇ ಆ ಹೊನ್ನಾಗುವುದೊ?... ಇಲ್ಲಿರುವ ತತ್ವದರ್ಶಿಗಳು ಅದನ್ನು ನಿಶ್ಚಯಿಸಲಿ... ನನ್ನಂಥವರ ಒಂದು ಅಭಿಪ್ರಾಯ ಹೇಳುತ್ತೇನೆ. ಸುಖವು ಒಬ್ಬನದು ಮಾತ್ರವಾಗಿ ಅದು ಸಖಲರ ದುಃಖಕ್ಕೆ ಕಾರಣವಾದರೆ – ಅದು ನೃಪನದಾದರೂ ನಿಂದನೀಯವೆ.

'ಲಂಕಿಣಿಯ ಭಂಗವಾದಂದಿನಿಂದ ರೂಪವಿಲ್ಲದ ಭೀತಿ ಭೂತದ ಬೃಹಚ್ಛಾಯೆಯು ನಮ್ಮ ನಗರದ ಜನರ ಮನಸ್ಸನ್ನು ಆವರಿಸಿದೆ. ಶಕುನಗಳು ಮತ್ತು ದುಶ್ಯಕುನಗಳು ಮುಂದೆ ಬರಲಿರುವ ದುರಂತವನ್ನು ಸಾರಿ ಹೇಳುತ್ತಿವೆ ಎಂದು ಪುರೋಹಿತರು ಹೇಳುವರು. ನಂಬುವವರು ನಂಬಿ ಮೌಢ್ಯವೆನ್ನುವವರು ಬಿಡಿ. ಆದರೆ, ತಿಳಿದವರು ಜನಮನದ ಮೇಲಾದ ಪರಿಣಾಮವನ್ನು ತಿರಸ್ಕರಿಸುವರೆ? ಭಯವು ವೈರಿಯಿಂದಾದುದಲ್ಲ. ಧರ್ಮದ ಮುನಿಸಿನ ಒಂದು ಸಂಶಯವು ಪುರದ ಧೈರ್ಯವನ್ನು ಕಲಕುತ್ತಿದೆ.

'ಲಂಕೆ, ನಮ್ಮ ಈ ಕನಕಲಂಕೆ, ದೈತ್ಯ ನಾಗರಿಕತೆಯ ನಂದನವನ. ನಮ್ಮ ಅಸುರ ವೀರರು ಅಮರರ ಐಶ್ವರ್ಯವನ್ನು ಸೂರೆಗೊಂಡಿದ್ದಾರೆ. ನಮ್ಮ ಲಲನೆಯರು ದೇವತಾ ಸ್ತ್ರೀಯರ ಸೌಂದರ್ಯವನ್ನು ಸೂರೆ ಮಾಡಿದ್ದಾರೆ. ಶಿಲ್ಪಿಗಳು ನಮ್ಮ ಪುರ ರಚನೆಯಲ್ಲಿ ವಿಶ್ವಕರ್ಮನ ಕೈಯ ಕುಶಲ ಮರ್ಮವನ್ನು ಸೆಳೆದಿದ್ದಾರೆ. ನಮ್ಮ ಮಲೆನಾಡು ಅಲಕಾವತಿಯ ಬೆಟ್ಟ ಕಾಡುಗಳನ್ನು ಮೀರಿಸಿವೆ. ಖಂಡಿತವಾಗಿ ಲಂಕೆಯು ದೈತ್ಯ ಸಂಸ್ಕೃತಿಯ ದೇವಾಲಯವಾಗಿದೆ! ರಾಕ್ಷಸಕುಲದ ಮಕ್ಕಳಾದ ನಮಗೆ ಇದನ್ನು ಹಾಳು ಮಾಡಲು ಧೈರ್ಯ ಇದೆಯೆ? ಮತ್ತು ಬೇರೆಯವರಿಗೆ ಹಾಳು ಮಾಡಲು ಬಿಡುವೆವೆ? ಎಲ್ಲ ಜನರ ಕುಶಲ ಕಾಯಕದಿಂದ ನಮ್ಮ ಹೆಮ್ಮೆಯ ಈ ದಿವ್ಯ ಕನಕ ಲಂಕಾಗೋಪುರವನ್ನು ನಿರ್ಮಿಸಲಾಗಿದೆ. ಇದನ್ನು ಈ ಪ್ರಾಜ್ಞಸಭೆಯು–ಓರ್ವನ ಅನಿಶ್ಚಿತ ಸುಖಕ್ಕೆ ಮಾರಲು ಒಪ್ಪಿಗೆ ನೀಡುವುದೆ?

'ಹೆಣ್ಣಿನ ಮೊಗದ ಚೆಲುವನ್ನು ಮತ್ತು ಮೈಯ ಸೊಗಸನ್ನು ಮೀರಿದ ಸೌಂದರ್ಯ ಈ ಪುಣ್ಯಲಂಕೆ ಹೊಂದಿದೆ. ಬೆಳಗಿನ ಹೊತ್ತು, ಬೆಟ್ಟ ಸಾಲುಗಳಲ್ಲಿ ನಡೆದಾಡುವಾಗ ಮರಮರದ ಕೊಂಬೆಯನ್ನು ಸಿಂಗರಿಸುತ್ತಿದ್ದ ವಸಂತನನ್ನು

ಕಂಡೆ. ಬಳ್ಳಿ ಬಳ್ಳಿಯ ಬಳಿ ಸಾಗಿ ಸುಮ ಸುಮದ ಗಲ್ಲವನ್ನು ಹಿಡಿದು ಕೆನ್ನೆಗೆ ಬಣ್ಣವಿಡುತ್ತಿದ್ದವನನ್ನು ಕಂಡೆ. ಹಕ್ಕಿ ಹಕ್ಕಿಯನ್ನು ಕರೆದು ಅವುಗಳ ಕೊರಳ ಉಲಿತವನ್ನು ಇಂಪುಗೊಳಿಸುತ್ತ ಅವುಗಳ ಗರಿಗಳಿಗೆ ಕಾಮನ ಬಿಲ್ಲಿನ ರಂಗುರಂಗನ್ನು ಹಚ್ಚುತ್ತಿದ್ದವನನ್ನು ಕಂಡೆ!

'ಒಂದೆಡೆ ಹೂಬಿಟ್ಟ ಪನ್ನೇರಿಳೆಯ ನೆರಳಿನಲ್ಲಿ ನಿಂತೆ. ಚವರಿ ಮೃಗದ ಬಿಳಿಯಾದ ನವಿರು (ಕೂದಲು) ಎನ್ನುವಂತೆ ಬಿಳುಪನ್ನೆ ಹೊರಚೆಲ್ಲುವ ತುಂತುರಿನ ಕಾರಂಜಿಗಳ ಹಾಗೆ ಇರುವ; ಕುಚ್ಚು ಕುಚ್ಚಿನ ತುದಿಯ ಕೇಸರದ ಬೊಟ್ಟಿನ ಅರಳುವ ಮೊಗ್ಗುಗಳು – ಆ ತರು ತರುಣಿಯನ್ನು ತುಂಬಿ ಶೃಂಗರಿಸಿದ್ದವು. ಬಿಳಿ ಹೂಗಳಲ್ಲಿ ಮಧುವನ್ನು ಹೀರಲೆಂದು ಬಂದ ಕರಿದುಂಬಿಗಳು ಕುಸುಮ ಕೋಮಲ ಬೆಟ್ಟದ ಮಲ್ಲಿಗೆ (ಕುಟಜ)ಯ ಹೃದಯವನ್ನು ಮಿಡಿದು ಮೊರೆದು ಝೇಂಕರಿಸಿದ್ದವು.

'ಹೊಂಗೆಯು ತನ್ನ ಪದವಲಯವನ್ನು ತಾನೆ ಪೂಜಿಸಿಕೊಂಡಂತೆ – ತನ್ನ ಹೂ ಅಕ್ಕಿಯಿಂದ ರಂಗವಲ್ಲಿಯನ್ನಿಟ್ಟು ಮಂಗಳಾಕ್ಷತೆ (ಸೇಸೆ)ಯನ್ನು ಚೆಲ್ಲಿತು.

'ಬೆಂಕಿಯು ಗೊಂಚಲಾಗಿರುವ; ಹೂವಿನ ಓಕುಳಿಯ ಜೀರ್ಕೋವಿ (ಪಿಚಕಾರಿ)ಯಿಂದ ಅರಣ್ಯರತಿಯು ವಸಂತರಾಜ (ಮಧುನೃಪ) ನಿಗೆ ಸಂತೋಷವನ್ನುಂಟು ಮಾಡಲು ರಚಿಸಿದ ಹಾಗಿರುವ–ಅಶೋಕ ಪುಷ್ಪಗಳನ್ನು ಕಂಡೆ.

[ಅಶೋಕ ಮರದ ಪುಷ್ಪಗಳು ಕೇಸರಿ ಹಳದಿ ಮಿಶ್ರಿತವಾಗಿದ್ದು, ಮೊಗ್ಗುಗಳು ಒತ್ತಾಗಿ ಗೊಂಚಲು ಗೊಂಚಲಾಗಿರುತ್ತವೆ. ಅವುಗಳ ಸೊಬಗು ಕಂಡಾಗ ಮನಸ್ಸು ಅರಳುತ್ತದೆ. ಅವು ಪ್ರೇಮಾಭಿವ್ಯಕ್ತಿಯ ಪ್ರತೀಕ].

'ಇಂತಹ ಪ್ರಕೃತಿ ವೈಭೋಗದ ಸಮೃದ್ಧಿಯನ್ನು ಬರಿಯ ಸೈನ್ಯ ಬಲವನ್ನು ನಂಬಿ ಹಾಳುಗೆಡಿಸುವುದು ಉಚಿತವಲ್ಲ. ಧರ್ಮವನ್ನು ಕೆರಳಿಸುವ ಕಾರ್ಯದಿಂದ ದೂರವಾಗಿರಿ. ಅನಂತರ ಮೂರು ಲೋಕಗಳೆ ಬರಲಿ ನೋಡಿಕೊಳ್ಳೋಣ! ಅವು ನಮಗೆ ಸಮನಾದುವೆ? ನಮ್ಮಲ್ಲಿಯ ಒಬ್ಬನಿಗೆ ಸಮವೆ? ಈ ಲಂಕೆ ಶೌರ್ಯದ ಗಣಿ. ಧರ್ಮದ ರೋಷವನ್ನು ಹೊರತುಪಡಿಸಿ ಅನ್ಯವೈರಿಯ ಶಂಕೆ ನನಗೆ ತೃಣಮಾತ್ರವೂ ಇಲ್ಲ.'

❖❖❖

ರಾವಣಂಗಲ್ಲದಿನ್ನಾರ್ಗೆ, ಹೇಳ್, ಸೀತಾ ಹೃದಯ ಸೂಕ್ಷ್ಮತಾ ಸಿದ್ಧಿ?

ಸಾರಣನು ರಾಮಸೇನಾ ಶಿಬಿರದ ಮೃತ್ಯು ಪಂಜರದಿಂದ ಜಾರಿ ತಪ್ಪಿಸಿಕೊಂಡು ಬಂದನು. ಅವನು ರಾವಣನಿಗೆ ಶುಕನು ಸ್ವ ಇಚ್ಛೆಯಿಂದ ಸೆರೆಹೋದುದನ್ನು, ತಾನು ಕಂಡ ವೈರಿಯ ಬೃಹತ್ ಬಲದ ಭೀಷ್ಮ ಸಾಮರ್ಥ್ಯವನ್ನು ತಿಳಿಸಿದನು. ರಾಮನಿಗೆ ವಿಭೀಷಣನ ಸ್ನೇಹ ದೊರೆತುದುದನ್ನು ಹೇಳಿ, ಕಪಿರಾಜನು ಲಂಕಾದುರ್ಗಕ್ಕೆ ನುಗ್ಗಲು ಪ್ರಚಂಡ ಸಿದ್ಧತೆಯೊಂದಿಗಿರುವುದನ್ನು ಭಯಗೊಂಡ ಬಿಗಿದ ಕಂಠದಿಂದ ಉಸುರಿದನು. ಅದನ್ನು ಕೇಳಿದ ರಾಕ್ಷಸನು,

'ನಿನ್ನ ಭಯವನ್ನು ಇತರರಿಗೆ ಹಂಚಬೇಡ! ಹೋಗು, ಹೊಂಚುಹಾಕಿ ವೈರಿಯ ರಹಸ್ಯಗಳನ್ನು ತಿಳಿದು ಬಂದು ನನಗೆ ಹೇಳುತ್ತಿರು.'

ಎಂದು ಕಣ್ಸನ್ನೆಯಿಂದ ಗದರಿಸಿ ಕಳುಹಿಸಿದನು. ಹತ್ತಿರದಲ್ಲಿ ತೆರೆಯ ಮರೆಯಲ್ಲಿ ಕಾವಲು ಕಾಯುತ್ತಿದ್ದ ಶಾರ್ದೂಲನನ್ನು ಸಂಜ್ಞೆಯಿಂದ ತಕ್ಷಣ ಬರಹೇಳಿದನು. ಅವನು ದುರ್ಮಂತ್ರಸಿದ್ಧನು, ವಂಚನಾ ಪಂಡಿತನು, ಕಠೋರ ಮತಿಯು ಆಗಿ ಮೊಸಳೆಯ ಮುಖದವನಾಗಿದ್ದನು. ಅಂಥಹ ಕ್ರೂರ ನಡವಳಿಕೆಯವನಿಗೆ ದೈತ್ಯದೇವನು ಹೀಗೆ ಹೇಳಿದನು:

'ಶಾರ್ದೂಲನೆ, ಕಪಿಧ್ವಜ ಆನೆಯು ಈ ನಿರ್ಮಲ ಲಂಕಾ ಸರೋವರ ಲಕ್ಷ್ಮಿಯನ್ನು ಕಲಕಲು ಸಮೀಪಿಸುತ್ತಿದೆ. ಮಂತ್ರಯಂತ್ರಗಳನ್ನು ಸೃಷ್ಟಿಸಿ ಆ ಸೈನ್ಯವು ಬರುವ ಕಡೆಯಲೆಲ್ಲ – ಗುಪ್ತವಾಗಿ ಮೃತ್ಯುವನ್ನುಂಟು ಮಾಡುತ್ತ ತಡೆಗಟ್ಟು! ಅಷ್ಟರಲ್ಲಿ ರಾಕ್ಷಸ ಸೈನ್ಯ ಪ್ರವಾಹವು ಮೃತ್ಯು ಪರ್ವತದ ಸಾಲಿನಂತೆ ನಿಂತು ದುರ್ಗವನ್ನು ನೀಚ ನರನಿಷ್ಠ ಕಪಿದುಷ್ಟರಿಂದ ರಕ್ಷಿಸಲು ಸಜ್ಜಾಗುವುದು!'

ವಾನರರ ಸರ್ವ ಸೈನ್ಯಕೆ ಮಿಗಿಲ್ ಗುರುವೈರಿ ನಮಗೆ ಸೀತಾವ್ರತಂ!

'ದೊರೆಯೆ, ತಮ್ಮ ಆಜ್ಞೆಯಂತೆ ನಡೆಯುವುದಲ್ಲದೆ, ಸಲಹೆಯನ್ನು ಕೊಡುವುದು ನನ್ನ ಧರ್ಮವಲ್ಲ. ಆದರೂ ಸ್ವಾಮಿಭಕ್ತಿಯಿಂದ ನನ್ನ

ಮನದಲ್ಲಿರುವುದನ್ನು ಬಿನ್ನವಿಸುತ್ತೇನೆ. ಸುವ್ರತಧಾರಿಗಳು ಪ್ರತಿಭಟಿಸಿದರೆ– ಮಂತ್ರಯಂತ್ರಗಳು ತಮ್ಮ ಶಕ್ತಿಯ ಅಂಶಗಳನ್ನು ಕಳೆದುಕೊಳ್ಳುತ್ತವೆ. ಅವು ಪೂರ್ಣಫಲ ಕೊಡಲಾರವು. ವ್ರತ ಪ್ರತೀಕಾರವನ್ನು ಮೊದಲು ಕೆಡಿಸಬೇಕು. ನಮಗೆ ಸೀತಾವ್ರತವು ವಾನರ ಸರ್ವ ಸೈನ್ಯಕ್ಕೂ ಮಿಗಿಲಾದ ಅಜೇಯ ವೈರಿಯಾಗಿದೆ. ಆ ರಘುವರನ ಬತ್ತಳಿಕೆಯ ಬಾಣಗಳಿಗಿಂತ–ನಮಗೆ ಸತಿ ಪತಿವ್ರತೆಯೆನ್ನುವ ಧರ್ಮಧೈರ್ಯವೇ ಭಯಂಕರವಾಗಿದೆ. ಹಾಗಾಗಿ ಈ ಯುದ್ಧದಲ್ಲಿ ನಮ್ಮ ಮೊದಲ ಕೆಲಸ ಪತಿವ್ರತೆಯ ನೋಂಪಿಯನ್ನು ಭಂಗಪಡಿಸುವುದೇ ಆಗಿದೆ.'

ರಾಕ್ಷಸನು ಚಿಂತಾಸಾಗರದಲ್ಲಿ ಮುಳುಗಿದನು. ಬಿಟ್ಟ ಕಣ್ಣು ಬಿಟ್ಟ ಹಾಗೆ ಶಾರ್ದೂಲನನ್ನು ಹೆಚ್ಚು ಹೊತ್ತು ನೋಡಿದನು. ಹಲವು ದಿನಗಳಿಂದ ಕಾಂತಿ ಕುಂದಿದ ಮುಖದಲ್ಲಿ ಶಾಂತಿಯ ತೇಜ ಅಂಕುರಿಸಿದಂತೆ ಮುದಗೊಂಡನು. ನಕ್ಕನು. ನಿಟ್ಟುಸಿರು ಬಿಡುತ್ತ ಆತ್ಮ ಸೌಮ್ಯತೆಗೊಳಗಾಗಿ ವ್ಯಂಗ್ಯವಾಕ್ಯಗಳನ್ನು ಉಸುರಿದನು:

'ಶಾರ್ದೂಲನೇ, ನೀನು ಹೇಳುತ್ತಿರುವುದು ನಿಜ. ನಾನು ಕೊಂಬೆಯನ್ನು ಕತ್ತರಿಸಲು ಆಜ್ಞೆ ಮಾಡಿದೆ. ನೀನು ಬೇರು ಕೊಯ್ಯುವ ವ್ಯವಹಾರವನ್ನು ಹೇಳಿದೆ! ವಾನರರ ಪಡೆಯಲ್ಲಿ ಒಬ್ಬನೂ ಉಳಿಯದಂತೆ ಕೊಲ್ಲುವ ಕಷ್ಟವು ನನಗೆ ತೃಣ ಸಮಾನ. ಆದರೆ ಕೇಳು, ಸೀತಾವ್ರತ ಪರ್ವತ! ಅದು ಪರ್ವತ!!

'ಶಿವ ಪಾರ್ವತಿಯರ ಬೆಳ್ಳಿಬೆಟ್ಟವನ್ನು ಬೇರು ಸಹಿತ ಅಳ್ಳಾಡಿಸಿ ಎತ್ತಿತ್ತು ದೈತ್ಯ ದೊರೆಯ ಈ ತೋಳು. ಅಂತಹದು ಭೂಜಾತೆಯ ಹೃದಯ ಉದ್ಯಾನದಲ್ಲಿ ಉದುರಿದ ಒಂದು ಹೂ ಎಸಳ ಭಾರಕ್ಕೆ ಸೋತು ಉರುಳುತ್ತಿದೆ. ಹಿಂದೆ ಶಿವಧನಸ್ಸನ್ನು ಎತ್ತಿ ಬಿದ್ದಂತೆ ಆಗಿದೆ! ಕಿಂಕರನೆ, ರಾವಣನ ಬಾಳದೋಣಿಯು ವ್ರತದ ಹಿಮ ಬಂಡೆಗೆ ಬಡಿದು ಒಡೆಯುತ್ತದೆಯೆ? ಹೇಳು, ಹೆಣ್ಣೋರ್ವಳಾ?...'

'ಲಂಕೇಶ್ವರನೆ, ಶಂಕೆಯನ್ನು ಬಿಡು. ನಾನು ಒಂದು ಕುಟಿಲ ನೀತಿಯನ್ನು ಹೇಳುತ್ತೇನೆ, ಆಲಿಸು. ನಾನು ಮಾಯೆಯಿಂದ ರಕ್ತದಿಂದ ಒದ್ದೆಯಾದ ರಾಮಶಿರವನ್ನು ಸೃಷ್ಟಿಸುತ್ತೇನೆ! ಅದನ್ನು ಸೀತಾದೇವಿಗೆ ತೋರಿಸು! ರಣದಲ್ಲಿ ರಘುರಾಮನು ಪೂರ್ತಿಯಾಗಿ ಕೆಳಕ್ಕೆ ಬಿದ್ದನೆಂದರೆ...'

ದುಃಖದಿಂದ ಉದ್ವಿಗ್ನಗೊಂಡ ರಾವಣನು ಶಾರ್ದೂಲನ ಮಾತುಗಳನ್ನು ತಡೆಯುತ್ತ, ಉಗ್ರಧ್ವನಿಯಲ್ಲಿ ಗುಡುಗಿದನು:

'ಏನು ಹೇಳಿದೆ, ಶಾರ್ದೂಲ? ಹೇಳಿದ್ದೇನು? ಇನ್ನೊಮ್ಮೆ ಹೇಳು.'

'ಪತಿ ಸತ್ತನೆಂದಾದರೂ ನಿನ್ನ ವಶವಾಗುವಳು!'

'ನಿಜ, ವಶವಾಗುತ್ತಾಳೆ ನಿಜ! ಅವಳ ಕಳೆಬರವು ವಶವಾಗುತ್ತದೆ. ಶಾರ್ದೂಲ, ನೀನು ಮಂದಮತಿ, ಮೂರ್ಖ ನುಡಿಗಳನ್ನು ಆಡಬೇಡ! ಹೋಗು, ನನ್ನಾಜ್ಞೆಯಂತೆ ನಡೆ! ರಾವಣನಿಗಲ್ಲದೆ ಇನ್ನು ಯಾರಿಗೆ ಸೀತಾ ಹೃದಯ ಸೂಕ್ಷ್ಮಗಳು ತಿಳಿದಿವೆ? ನಡೆ, ಹೋಗು. ಸೇನಾನಿ ಪ್ರಹಸ್ತನನ್ನು ಬರಹೇಳು!'

ಅಲೆಯತೊಡಗಿದನ್, ಪಂಜರದ ವೇದಿಕೆಯನಲೆವ ಕೇಸರಿಯವೋಲ್

ಪ್ರಭುವಿನ ಉಗ್ರರೀತಿಗೆ ಮತ್ತು ಹೊಸ ನೀತಿಗೆ ಸೇವಕನು ಬೆಚ್ಚಿ ಬೆರಗಾಗಿ ಹೋದನು. ಅವನು ಹೋದದ್ದನ್ನು ನೋಡಿದ ಮಹೇಂದ್ರ ವೈರಿಯು ಪೀಠದಿಂದ ಎದ್ದನು. ಪಂಜರದ ಒಳಗಿನ ಸಿಂಹದಂತೆ ಅಲೆದಾಡ ತೊಡಗಿದನು. ಚಿಂತೆಗಳು, ಭಾವಗಳು, ಮನಸ್ಸಿನ ಹೋರಾಟಗಳು; ನೆನಪುಗಳು, ತಾಪಗಳು ಮತ್ತು ಪಶ್ಚಾತ್ತಾಪಗಳು; ಆಶೆ ನಿರಾಶೆಗಳು, ಪುಣ್ಯಪಾಪಗಳು; ಕ್ಷಾತ್ರ ಪ್ರತಿಜ್ಞೆಗಳು, ಧರ್ಮ, ನೀತಿ, ಪ್ರೀತಿಗಳು ಮತ್ತು ಧೀರೋದಾತ್ತ ಭೀತಿಗಳು ಅವನ ಆತ್ಮವನ್ನು – ಲಂಕೆಯನ್ನು ಮುತ್ತಲು ಬಂದವರ ಸಂಖ್ಯೆಯನ್ನು ಮೀರಿ ಮುತ್ತಿ ಅಲುಗಾಡಿಸಿದವು.

'ಯಾರು? ಈಕೆ ಯಾರು? ಈ ಸೀತೆ ಯಾರು? ಈಕೆಯನ್ನು ಪಡೆಯಲು ನಡೆಸಿದ ತಪ ಸಫಲವಾಗುವುದೆ? ಮಾವ, ನೀನು ಅಂದು ಪಂಚವಟಿಗೆ ನನ್ನ ಪುಷ್ಪಕವನ್ನು ಏರುವ ಮೊದಲು ಹೇಳಿದ ಮಾತು ಸುಳ್ಳಲ್ಲ! ಅದನ್ನು ಸುಳ್ಳಾಗಿಸಲು ನನ್ನ ಉಸಿರಿರುವ ತನಕ ಪ್ರಯತ್ನಿಸುವೆ. ಆ ಪ್ರಯತ್ನವೆ ತಪಸ್ಸಾಧನೆ! ತಪವು ಯಾವಾಗಲೂ ವ್ಯರ್ಥವಾಗುವುದಿಲ್ಲ!' ಎಂದು ಮನದಲ್ಲಿ ಆಲೋಚಿಸಿದನು.

ಹಾವು ಒಳಹೊಕ್ಕು ಅಡಗಿ ಕುಳಿತಿರುವ ಹಿರಿದಾದ ಹುತ್ತವೆಂಬಂತೆ ತಕ್ಷಣ ತಾಟಸ್ಥ್ಯವನ್ನು ನಟಿಸುತ್ತಾ ನಿಶಾಚರ ನೃಪನು ನಿಂತನು. ಪ್ರಧಾನ ಸೇನಾನಿ ಪ್ರಹಸ್ತನು ಬರಲು ಪ್ರಸನ್ನ ವದನನಾಗಿ, ನಿಶ್ಶಂಕೆಯ ಧೈರ್ಯವನ್ನು ಪ್ರದರ್ಶಿಸಿದನು.

❖❖❖

ಕುಂಭಕರ್ಣನೆಂಬ ಕದನಕಲಿ ರಣರಂಗದಲ್ಲಿ ಹಾಸ್ಯದೋಕುಳಿ

ಕುಂಭಕರ್ಣನು ರಣರಂಗಕ್ಕೆ ನುಗ್ಗಿ ಬರುವಾಗ ಅವನ ಮಹತ್ ರುದ್ರ ಪರ್ವತಗಾತ್ರದ ಶರೀರವನ್ನು ಕಪಿಸೇನೆ ಆಶ್ಚರ್ಯದಿಂದ ಮೂಗಿನ ಮೇಲೆ ಬೆರಳಿಟ್ಟು ನೋಡಿತು. ಅವನು ತನ್ನ ಮುದ್ಗರವೆಂಬ ಆಯುಧವನ್ನು ಬೀಸಿ ಕ್ಷಣಾರ್ಧದಲ್ಲಿ ಒಂದು ಕೋಟಿ ಕಪಿಸೈನ್ಯವನ್ನು ಅರೆದು ಕೊಂದನು. ಅವನನ್ನು ಎದುರಿಸಲಾಗದೆ ಅದು ಓಡತೊಡಗಿತು. ಆಗ ಆ ಸೇನೆಗೆ ಧೈರ್ಯ ತುಂಬಿದ ಅಂಗದನು ಕುಂಭಕರ್ಣನನ್ನು ಎದುರಿಸಿದನು. ವಾನರಸೇನೆಯು ಅವನ ಮಹಾ ಮೈಯ ಮಂದರ ಪರ್ವತವನ್ನು ಒದೆಯಲು ನುಗ್ಗುವ ಕಡೆದ ಕಡಲಿನ ದೊಡ್ಡ ತೆರೆಗಳಂತೆ ಆರ್ಭಟಿಸುತ್ತ ಮುನ್ನುಗ್ಗಿತು.

ಋಷಭ, ಮೈಂದ, ಆಂಜನೇಯ, ಗಜ ಮುಂತಾದ ವಾನರ ಶೂರರು ನುಗ್ಗಿ ಬರುತ್ತಿರುವುದನ್ನು ಕಂಡು ರಾಕ್ಷಸನ ಪೌರುಷ ಹೆಚ್ಚಿತು. ಮುದ್ಗರದ ಹೊಡೆತಕ್ಕೆ ಅಂಗದನು ರಕ್ತಕಾರಿ ಮೂರ್ಛೆ ಹೋದನು. ಕಪಿಸೇನೆ ಕೆರಳಿ ಕುಂಭಕರ್ಣನ ಮೇಲೆ ಎರಗಿತು. ಹಾಗೆ ನುಗ್ಗಿ ಬಂದ ವಾನರ ವೀರರಾದ ದ್ವಿವಿದ, ಶರಭ, ಗಂಧಮಾದನ, ನೀಲ, ಗವಾಕ್ಷ, ಮೊದಲಾದವರನ್ನು ರಾಕ್ಷಸನು ಹೊಡೆದು ಉರುಳಿಸಿದನು. ಬೇಸಿಗೆಯಲ್ಲಿ ಒಣಗಿನಿಂತ ಕಾಡನ್ನು ದಾವಾಗ್ನಿ ಸುಡುವಂತೆ ಅವನು ವಾನರ ಸೈನ್ಯವನ್ನು ನಾಶಪಡಿಸಿದನು.

ಆಂಜನೇಯನು ಬೆಟ್ಟದ ಶಿಖರವನ್ನು ಕಿತ್ತು ಆಕಾಶಗಾಮಿಯಾಗಿ ಹೋಗಿ ಕುಂಭಕರ್ಣನ ತಲೆಗೆ ಕುಕ್ಕಿದನು. ರಕ್ತ ಹೊಮ್ಮಿ ಕ್ಷಣ ಹೊತ್ತು ಮೈಮರೆತ ರಾಕ್ಷಸನು ಕೋಪಾವಿಷ್ಟನಾದನು. ಮುದ್ಗರದಿಂದ ಆಂಜನೇಯನ ಎದೆಗೆ ಹೊಡೆಯಲು ಅವನು ಮೂರ್ಛಿತನಾದನು.

ಅಷ್ಟರಲ್ಲಿ ಅವನನ್ನು ಎದುರಿಸಲು ಬಂದ ಲಕ್ಷ್ಮಣನು ಪರ್ವತದೇಹಿಯ ಶರೀರವನ್ನು ಬಾಣಗಳಿಂದ ಚುಚ್ಚಿದನು. ಆಗ ಅದು ಮುಳ್ಳುಹಂದಿಯ ದೇಹದಂತೆ

ಕಂಡಿತು! ಲಕ್ಷ್ಮಣನ ಬಾಣಕ್ಕೆ ಕುಂಭಕರ್ಣನ ಬಲಗೈ ಕತ್ತರಿಸಿತು. ಆ ಕೈ ಹಿಡಿದಿದ್ದ ಮುದ್ಗರವು ಅಪ್ಪಳಿಸಲು ಲಕ್ಷ್ಮಣನು ಮೂರ್ಛಿತನಾದನು. ರಾಕ್ಷಸನು ಎಡಗೈಯಲ್ಲಿ ತ್ರಿಶೂಲವನ್ನು ಹಿಡಿದು ಸುಗ್ರೀವನ ಅಂಗರಕ್ಷೆಯಲ್ಲಿದ್ದ ರಾಮಚಂದ್ರನ ಕಡೆಗೆ ನುಗ್ಗಿದನು.

ಅದನ್ನು ಕಂಡ ಸೇನಾಧಿಪತಿ ಕುಳ್ಳ ಶರೀರದ ಗಜನು ಈ ಭೂತವನ್ನು ಹೇಗಾದರೂ ಧಾಶರಥಿಯಿಂದ ದೂರಕ್ಕೆ ಕೊಂಡೊಯ್ಯಬೇಕೆಂದು ಒಂದು ಉಪಾಯವನ್ನು ಯೋಚಿಸಿದನು.

ಅವನು ರಾಕ್ಷಸನ ಹಿಂದಿನಿಂದ ಹೋಗಿ ಬೆನ್ನಿಗೆ ಗುದ್ದಿದನು. ದಾನವನು ಸಿಟ್ಟಿನಿಂದ ಉರಿದು ತಿರುಗಿದನು. ಹತ್ತಿರದಲ್ಲಿ ನಿಂತು ನಗುತ್ತಿದ್ದ ಮಹಾಕುಳ್ಳನನ್ನು, ಹಾಸ್ಯನೇತ್ರದ, ವಿನೋದ ಮುಖದವನನ್ನು ನೋಡಿದನು. ಹಿಡಿಯಲೆಂದು ಎಡಗೈ ಚಾಚಿ ಬರಿಗಾಳಿ ಬಾಚಿದನು! ಗಜನು ನೆಲಮಟ್ಟಕ್ಕೆ ಬಗ್ಗಿ, ಜಾರಿ ಎಗರಿ ಚಿಮ್ಮಿ ಸರ್ರನೆ ಹಿಮ್ಮೆಟ್ಟಿದನು.

ಗಿರ್ರನೆ ತಿರುಗಿಬಂದು ಮತ್ತೆ ಅವನ ಬೆನ್ನಿಗೆ ಗುದ್ದಿದನು. ವಿಷಾದಕ್ಕೊಳಗಾಗಿ ಖಿನ್ನ ಮನಸ್ಕರಾಗಿದ್ದ ವಾನರ ಸೇನೆಯಲ್ಲಿ ಆಶ್ಚರ್ಯ ಉಂಟಾಗಿ ಗೊಳ್ಳೆಂದು ನಗೆಯೆದ್ದಿತು!

ಇಂದ್ರನ ವೈರಿ ಕುಂಭಕರ್ಣನು ಮುನಿದು, ಅತಿಯಾಗಿ ಕೋಪಗೊಂಡು ಮತ್ತೆ ತಿರುಗಿದನು. ಅವನು ಅತ್ತ ತಿರುಗಿದರೆ ಗಜನು ಇತ್ತ ನೆಗೆದನು.

ಅವನು ಇತ್ತ ತಿರುಗಿದರೆ ಗಜನು ಅತ್ತ ನೆಗೆದನು, ತಿರುಗಿದನು, ಸುತ್ತಿದನು; ಸುತ್ತಿದನು, ತಿರುಗಿದನು. ತಿರುತಿರುಗಿ ರಕ್ಕಸನ ತಲೆ ತಿರುಗತೊಡಗಿತು. ಕಣ್ಣು ಸುತ್ತಿ, ಕಾಲ್ತೊಡರಿ, ತತ್ತರಿಸುತ್ತ ಹೇಗೊ ನಿಂತನು.

ಶೂಲವನ್ನು ತೆಗೆದುಕೊಳ್ಳಲು ಕೈ ಹಾಕಿದನು. ಅದನ್ನು ನೋಡಿ ಗಜನು, ಅಲ್ಲಿ ನಿಲ್ಲದೆ ನಗುತ್ತ ಓಡಿದನು. ರಾಕ್ಷಸನ ಎದೆ ಉರಿದುಹೋಯಿತು. 'ನೀನು ಕಪಿ, ಕಪಿಧ್ವಜನಲ್ಲ! ನಿನ್ನನ್ನು ಹೊಸಕಿ ಹಾಕದೆ ಬಿಡುತ್ತೇನೆಯೇ?' ಎಂದು ಮಹಾಶೂಲವನ್ನು ಹಿಡಿದು ಅವನ ಬೆನ್ನು ಹತ್ತಿದನು.

* * *

ಪೀಡಿಸಿದ ತೋಳವನ್ನು ಕಾಡಾನೆಯು ಅಟ್ಟುವಂತೆ, ಗಜನನ್ನು ಅಟ್ಟುತ್ತಿದ್ದ ಕುಂಭಕರ್ಣನನ್ನು ನೋಡಿ ಉಭಯ ಸೇನೆಗಳು ನಗೆಗಡಲಿನಲ್ಲಿ ಮುಳುಗಿದವು!

ರಾಕ್ಷಸರು ಅವನನ್ನು ನೋಡಿ 'ಕಪಿ ವೀರನನ್ನು ನೋಡಿರೊ! ಪಲಾಯನ ಪಟುಭಟನ ಚಟುಲ ವೇಗವನ್ನು ನೋಡಿ! ಧೀರನೇ ಸರಿ! ನೋಡಿ, ನಿಜವಾಗಿಯೂ ಇವನು ಸ್ವರ್ಗವನ್ನು ಕೊಳ್ಳೆಹೊಡೆಯಲು ಹೋಗುತ್ತಿರುವ ಧೈರ್ಯಶಾಲಿ! ವೀರರೇ, ಷಂಡನಾದ ಇವನಿಂದ ಕಲಿತನದ ವಿದ್ಯೆ ಕಲಿಯಿರಿ!' ಎಂದು ತಮ್ಮ ತಮ್ಮಲ್ಲಿ ಹೇಳಿಕೊಳ್ಳುತ್ತ, ಅಳ್ಳೆ ಬಿರಿಯುವಂತೆ ನಗುತ್ತಿದ್ದರು.

ತಮ್ಮ ಹಾಸ್ಯಪ್ರಿಯನ ನೂತನ ಪ್ರಹಸನ ಪ್ರಸ್ತಾವನೆಯ ಚತುರ ಸೂತ್ರಧಾರಿತ್ವವನ್ನು ಕಂಡ ಕಪಿಧ್ವಜರು,

'ನೋಡಿರೋ, ರಾಕ್ಷಸನ ಮತಿಗೆ ಕಳ್ಳು ಕುಡಿಸಿ, ಓಟಕ್ಕೆ ಮೂಗುದಾರವನ್ನಿಕ್ಕಿದ್ದಾನೆ. ಸೇನೆಯ ಬೇಸರವನ್ನು ಹೋಗಲಾಡಿಸಲು, ಕುಣಿಕುಣಿಸಿ ಸೆಳೆದೊಯ್ಯುತ್ತಿದ್ದಾನೆ ನಮ್ಮ ಹಾಸ್ಯ ವಿದ್ಯಾ ಕುಶಲ ಸೇನಾನಿ! ಬನ್ನಿ ನೋಡೋಣ! ಇದಕ್ಕೆ ಕೊಡಬೇಕಾದ್ದು ನಿಮ್ಮ ಉಲ್ಲಾಸದ ಕಾಣಿಕೆ! ನೋಡೋಣ ಬನ್ನಿ, ಕುಂಭಕರ್ಣನ ಕರಡಿಯಾಟವನ್ನು!' ಎಂದು ತಮ್ಮ ಸೋಲನ್ನು ಮರೆತು ನಗತೊಡಗಿದರು!

* * *

ಕುಳ್ಳ ಗಜನು ಮುಟ್ಟಿ ತಟ್ಟಿದನು. ಆಗ ಅವನನ್ನು ಹಿಡಿಯಲೆಂದು ಕುಂಭಕರ್ಣನು ತನ್ನ ಎಡದ ತೋಳು ಸೊಂಡಿಲನ್ನು ಚಾಚಿದನು. ಗಜನು ಅದರ ಮೇಲೆ ಚಕ್ಕನೆ ನಿಂತು, ಪಕ್ಕಕ್ಕೆ ಚಿಮ್ಮಿ ದಿಕ್ಕು ತಪ್ಪಿಸಿ, ಬೇರೆ ದಿಕ್ಕಿಗೆ ಓಡಿದನು. ಸ್ಥೂಲಕಾಯನಾದ ರಾಕ್ಷಸನು ತನ್ನ ರಭಸಕ್ಕೆ ತಾನೇ ಮುಂದೋಡಿದನು! ಮನಸ್ಸು ಹಿಂದಕ್ಕೆ ಎಳೆಯಿತು. ದೇಹವೇಗವು ಆ ಕಡೆಗೆ ಕಾಲುಗಳನ್ನು ಎಳೆಯಿತು. ಚಿತ್ತವೇಗವು ಭಾರೀ ಶರೀರವನ್ನು ಈ ಕಡೆಗೆ ಎಳೆಯಿತು. ಹಾಗಾಗಿ ಅತ್ತಲಿತ್ತ ತೂಗಿ ತೊನೆದನು!

ಅದನ್ನು ನೋಡಿದ ಎರಡೂ ಕಡೆಯ ಸೈನಿಕರಲ್ಲಿ ನಗೆಯ ಹೊನಲು ಉಕ್ಕಿ ಹರಿಯಿತು. ಅವರು ಕುಸಿದು ಬೀಳುವಂತೆ ಗೊಳ್ಳನೆ ನಕ್ಕರು!

ಅವಮಾನಕ್ಕೊಳಗಾದ ಕುಂಭಕರ್ಣನು ಕನಲಿದನು. ಕಿಲಕಿಲನೆ ನಗುತ್ತ ಓಡುತ್ತಿದ್ದ ಕಪಿವೀರನನ್ನು ನೋಡಿ – ಕೋಪದ ಬೆಂಕಿ ಕಾಳ್ಗಿಚ್ಚಾಗಿ, ಅವನನ್ನು ಮತ್ತೆ ಬೆಂಬತ್ತಿದನು. ಗಜನು ಕೊಂಕಿ ಬಾಗುತ್ತ, ನಿಂತು ನೋಡುತ್ತ, ಬೆನ್ನ ಹಿಂದೆ ಬಳುಕಿ ಹೋಗಿ ಕಾಲುಗಳ ನಡುವೆ ಹೊಕ್ಕು ನುಣುಚಿಕೊಂಡನು!

ರಾಕ್ಷಸನು ಹೋಗಲಾರದ ಇಕ್ಕಟ್ಟಿನಲ್ಲಿ ನುಗ್ಗಿ ಸಿಕ್ಕಿಕೊಳ್ಳುವಂತೆ ಮಾಡಿದನು! ಅವಿತುಕೊಂಡಿದ್ದು, ಕಾಣಿಸುತ್ತ ಚಿಮ್ಮಿ ವಂಚಿಸುತ್ತ ತ್ರಿಕೂಟ ಲಂಕಾದುರ್ಗವನ್ನು ಮೂರು ಸುತ್ತು ಸುತ್ತಿದನು!

ಮುಡಿಗೆದರಿ, ಮೈ ಬೆವರಿ, ಏದುಸಿರು ಬಿಡುತ್ತ, ಅಳ್ಳೆಗಳು ಅದುರಿ, ರಕ್ತ ಸೋರಿಡುತ್ತಿರಲು ಕುಂಭಕರ್ಣನು ವಿಡಂಬನಾ ಭೈರವನಂತಹ ಹಾಸ್ಯ ಸ್ಥಿತಿಗೆ ಒಳಗಾದನು ! (ಸುಧಾ, 8-4-2021)

❖❖❖

ಯುದ್ಧ ಬೇಗೆಯಲ್ಲಿ ಬೆಂದ ಸೀತೆ, ತ್ರಿಜಟೆ, ಅನಲೆ

ಸೀತೆಯು ಸಾಗರದ ದೂರ ತೀರದಲ್ಲಿ ಏಳುತ್ತಿದ್ದ ಧೂಮ ದುಶ್ಯಕುನ ದೃಶ್ಯವನ್ನು ನೋಡಿದಳು. ಹೊಗೆ ತುಂಬಿದ ಆಗಸದಲ್ಲಿ ಆಗತಾನೆ ಮೂಡಿಬರುತ್ತಿದ್ದ ಸೂರ್ಯಬಿಂಬ ಮಸುಕಾಗಿತ್ತು. ಅಶೋಕ ವನ ಮಧುಧಾಮವನ್ನು ಹೊಗೆಯ ಮಬ್ಬಿನ ಬಿಂಕವು ಆವರಿಸಿತ್ತು. ಕಮಟು ವಾಸನೆಯು ಮೂಗಿಗೆ ಅಸಹ್ಯವಾಗಿ ಬೀಸುತ್ತಿತ್ತು. ಹೆಣದ ಹೊಗೆಗೆ ಹೇಸಿದಂತೆ ದುಂಬಿಗಳು ಪಕ್ಷಿಗಳು ಮೂಕವಾಗಿದ್ದವು. ಅದನ್ನು ನೋಡುತ್ತ ಸೀತೆಯು ತ್ರಿಜಟೆಯನ್ನುದ್ದೇಶಿಸಿ,

'ತ್ರಿಜಟೆ, ಅದೇನು ಕಾಣುವ ಹೊಗೆ? ಮುಗಿಲವರೆಗೂ ಗೋಡೆಯಂತೆ ಮೇಲೇಳುತ್ತಿದೆ! ಕದನ ಕೋಲಾಹಲ ಕೇಳಿಸುತ್ತಿದೆ ರೋದನಾತ್ಮಕವಾದ ತುಮುಲನಾದ ಕೇಳಿಸುತ್ತಿದೆ. ರಣಭೇರಿಗಳು ನಿಂತು ಸ್ಮಶಾನದ ವಾದ್ಯಗಳು ಗೋಳುಗರೆಯುತ್ತಿವೆ! ನೀನು ನಿನ್ನೆ ನಿನ್ನೊಡೆಯ ದಾನವೇಂದ್ರನ ತಮ್ಮ ಕುಂಭಕರ್ಣನು ರಣಾರಂಗಕ್ಕೆ ಹೋದದ್ದನ್ನು ಹೇಳಿದೆ. ಅನಲೆಯು ಪ್ರತಿದಿನ ಮುಂಜಾವ ಸೊಬಗುಗೊಳ್ಳುವ ಮೊದಲೇ ಬಂದು ರಣವಾರ್ತೆ ತರುತ್ತಿದ್ದಳು. ಇಂದು ಏಕೊ ತಡವಾಗಿದ್ದಾಳೆ. ಶಂಕೆ ಸುಡುತ್ತಿದೆ. ಯಾರಿಗೆ ಏನು ಅಮಂಗಳವೊ?'

ಎಂದು ಹೇಳಿ, ನೊಂದು ನಿಟ್ಟುಸಿರಿಟ್ಟಳು. ಮತ್ತೆ ಮಾತು ಮುಂದುವರಿಸಿ ಕೇಳಿದಳು,

'ರಾಕ್ಷಸ ಸಖಿಯೇ, ಏಕೆ ಸುಮ್ಮನಿರುವೆ? ನಿನ್ನ ಮುಖದಲ್ಲಿ ಆತಂಕ ಕಾಣುತ್ತಿದೆ. ಅಕ್ಕ, ಏಕೆ ಕಣ್ಣೀರು ಸುರಿಸುತ್ತಿರುವೆ? ತಾಯಿಯೇ, ನಿನ್ನ ಮಗಳ ಎದೆ ಸುಕ್ಕಿ ಸೀಯುವ ಮೊದಲೆ ದುಃಖವೇಕೆಂದು ಹೇಳು. ನನ್ನ ಮೈದುನನು ಕ್ಷೇಮವಾಗಿರುವನೆ? ದೀರ್ಘಾಯುಗಳಾದ ವನಚರ ಮಹಾತ್ಮರುಗಳಿಗೆ ಹಾನಿಯಾಗಿಲ್ಲವಷ್ಟೆ?'

ಸೀತೆಯ ಮಾತು ಕೇಳಿದ ತ್ರಿಜಟೆಯು ಕಣ್ಣೀರು ಸುರಿಸುತ್ತ, ತನ್ನುಸಿರ ಸಂಕಟವನ್ನು ನಿಟ್ಟುಸಿರಿನೊಡನೆ ಹೀಗೆ ಉಸುರಿದಳು.

ಲಂಕೆ ಅಳುತಿದೆ, ಮನೆಮನೆಯೊಳುಂ

'ದೇವಿ, ಏನನ್ನು ಹೇಳಲಿ? ಲಂಕೆಯನ್ನು ಮಹಾಶೋಕ ಆವರಿಸಿದೆ. ದೊರೆಯ ತಮ್ಮ ಕುಂಭಕರ್ಣನು ನಿನ್ನೆ ಯುದ್ಧದಲ್ಲಿ ವಾನರರ ಪಡೆಗಳನ್ನು ಸದೆ ಬಡಿದು, ಹೋರಾಡುತ್ತ ಮಡಿದನು. ಅವನ ಜೊತೆಯಲ್ಲಿ ವೈರಿಗಳನ್ನು ಎದುರಿಸಿ ಅನೇಕ ಸೇನಾನಾಯಕರು ಮಡಿದರು. ಎರಡೂ ಕಡೆಯ ಸೈನ್ಯಗಳು ಉರುಳಿ ಶವಗಳ ಬೆಟ್ಟವಾದವು ಎಂದು ಹೇಳುವರು. ನಾರುವ ರಣಭೂಮಿಯನ್ನು ಇನ್ನೊಮ್ಮೆ ಘೋರತರ ಸಂಗ್ರಾಮಕ್ಕೆ ಸಿದ್ಧಗೊಳಿಸಲು, ಇಂದೊಂದು ಹಗಲು ಮಾತ್ರ ವೈರ ವಿಶ್ರಾಂತಿಯೆಂದು ಡಂಗುರ ಹೊಡೆದು ಹೇಳುತ್ತಿರುವರು. ನಾಳೆ ಮತ್ತೆ ಮರುಕಳಿಸುವುದು ಭಯಂಕರ ಕಾಳಗ!

'ನಮ್ಮವರು ಮತ್ತು ನಿಮ್ಮವರು ಮಡಿದ ತಮ್ಮ ತಮ್ಮವರನ್ನು ಸಾಗರದ ದಡಕ್ಕೆ ಕೊಂಡೊಯ್ದು, ಹೆಣರಾಶಿ ಮಾಡಿ ಸುಡುತ್ತಿದ್ದಾರೆ. ಅದೇ ನೀನು ಕಾಣುತ್ತಿರುವ ಆಗಸಕ್ಕೆ ಏರುತ್ತಿರುವ ಹೊಗೆಯ ಗೋಡೆ; ಆತ್ಮಗಳನ್ನು ಪಿತೃಲೋಕಕ್ಕೆ ಕೊಂಡೊಯ್ಯುವ ತೇರು! ಅದೇ ನೀನು ಕೇಳುತ್ತಿರುವ ರೋದನ! ಮತ್ತು ಮಸಣದ ಓಲಗ!'

ಹೇಳುತ್ತ ದುಃಖ ತಡೆಯಲಾಗದೆ ಬಿಕ್ಕಿ ಬಿಕ್ಕಿ ಅತ್ತಳು. ಸೆರಗಿನಲ್ಲಿ ಮೂಗು ಒರೆಸಿಕೊಳ್ಳುತ್ತ ತನ್ನನ್ನೇ ತಾನು ಬಿಗಿಹಿಡಿದಂತೆ ಸುಮ್ಮನಾದಳು. ಅನಂತರ ಸೀತೆಯನ್ನು ನೋಡುತ್ತ ತನ್ನ ದುಃಖಕ್ಕೆ ದನಿ ನೀಡಿದಳು.

ಏನ್ ತಾಯಿ, ನಿನ್ನೊರ್ವಳಿಂದೆ ಏನೇನಪ್ಪುದಿರ್ಕುಮೋ ಆರಾರ್ಗೆ?

'ಅಮ್ಮ, ಇಂದು ಮನೆ ಮನೆಯಲ್ಲಿ ಲಂಕೆ ಅಳುತ್ತಿದೆ ಮಗ ಸತ್ತ ತಾಯಿ; ಪತಿಯನ್ನು ಕಳೆದುಕೊಂಡ ಹೆಣ್ಣು; ತಂದೆ ತೀರಿಹೋದ ಕಂದ; ಅಣ್ಣನಿಗೆ ಅಳುವ ತಂಗಿ! ಆ ಗೋಳನ್ನು ಕೇಳುವವರು ಯಾರು? ... ಅದೂ ಅಲ್ಲದೆ, ಬೇರೆ ಬೇರೆಯೆ ಹುಡುಕಿ ತಮ್ಮ ತಮ್ಮ ಬಂಧಗಳಿಗೆ ಅಂತ್ಯಸಂಸ್ಕಾರವನ್ನು ಬಿಡಿಬಿಡಿಯಾಗಿ ಮಾಡುವುದನ್ನು ರಾಜಾಜ್ಞೆ ನಿಷೇಧಿಸಿದೆ. ಹಾಗಿಲ್ಲದಿದ್ದರೆ ನಾನು ನಿನ್ನ ಬಳಿ ಇಂದು ಇರುತ್ತಿದ್ದೇನವ್ವ ... ನೀನು ನೋಡುವ ಆ ಧೂಮದಲ್ಲಿ ನನ್ನ ತಂದೆಯ ಮೈಯ ಹೊಗೆಯೂ ಇರಬಹುದು ದೇವಿ!'

'ಏನು ಹೇಳಿದೆ ತ್ರಿಜಟೆ?' ಎಂದು ಸೀತೆ ನಿಟ್ಟುಸಿರು ಬಿಟ್ಟು ಕೇಳಲು, ಅಳುತ್ತಾ ಅಳುತ್ತಾ ತ್ರಿಜಟೆ ಹೇಳಿದಳು:

'ಕಳೆದ ರಾತ್ರಿ ನನ್ನ ತಂದೆಯು ಯುದ್ಧರಂಗದಿಂದ ಹಿಂದಿರುಗದಿರಲು ನನ್ನ ತಮ್ಮನು ಹುಡುಕಲು ಹೋದನು. ಕತ್ತಿ ತಲೆ ಸೀಳಿಯೊ; ಬಂಡೆ ಬಡಿದೊ ತಲೆಯೊಡೆದು ಸತ್ತಿದ್ದ ನನ್ನಪ್ಪನನ್ನು ತರುವ ಪ್ರಯತ್ನದಲ್ಲಿ ಅವನಿದ್ದನು. ಆಗ ರಾಜಭಟರು ಅವನನ್ನು ತಡೆದರು. ಕಳೇಬರವನ್ನು ಅವರ ವಶಕ್ಕೆ ಒಪ್ಪಿಸಿದನು. ಕಾಲು ಮುರಿದು ಏಳಲಾಗದೆ ನರಳುತ್ತಿದ್ದ ತನ್ನ ಅಣ್ಣನನ್ನು ಹುಡುಕಿ ಪಡೆದನು. ಮುಂದಾಳುವಾದ ನನ್ನ ಗಂಡನ ಸಹಾಯದಿಂದ ಮನೆಗೆ ತಂದನು. ಅವನ ಸ್ಥಿತಿ ಚಿಂತಾಜನಕವಾಗಿದೆ. ನನಗೆ ನಾಳೆ ಇನ್ನೇನು ಕಾದಿದೆಯೊ? ನಿನ್ನ ಸೇವೆಯೆ ಗತಿಯೊ? ನನಗೆ ಇನ್ನು ಮುಂದೆ ಪತಿಯ ಸೇವಾ ಪುಣ್ಯ ದೊರಕುವುದೊ ಇಲ್ಲವೊ? 'ಏನು ತಾಯಿ, ನಿನ್ನೋರ್ವಳಿಂದ ಯಾರು ಯಾರಿಗೆ ಏನೇನು ಆಗುವುದಿದೆಯೊ?'

ತ್ರಿಜಟೆಯ ಮಾತಿನ ಆಂತರ್ಯ ಅರಿತ ಸೀತೆಯ ಕೊರಳ ಸೆರೆ ಬಿಗಿಯೊತ್ತಿತು. ಅವಳಿಗಾಗಿ ಮರುಗುತ್ತ ಸಂತೈಸುವ ಮಾತುಗಳನ್ನು ಆಡಿದಳು:

'ತ್ರಿಜಟೆ, ನೀನು ಹೇಳಿದ ರೀತಿ ನನಗೂ ಒಮ್ಮೊಮ್ಮೆ–ನಿನ್ನ ದುಃಖಕ್ಕೆ ಮಾತ್ರವಲ್ಲ, ಲೋಕದ ಸಂಕಟಕ್ಕೆಲ್ಲ ನಾನೇ ಕಾರಣಳು ಎಂದೆನಿಸುತ್ತದೆ. ಜನಕರಾಜನು ಭೂಮಿಯ ಗರ್ಭದಿಂದ ನನ್ನನ್ನು ಅಷ್ಟೆ ಅಲ್ಲದೆ ಲೋಕದ ಶೋಕವನ್ನೆಲ್ಲ ಪಡೆದು ರಾಮನಿಗೆ ಕೊಟ್ಟಿದ್ದಾನೆ. ಲಂಕೆಯಿಂದ ಅಯೋಧ್ಯೆಯವರೆಗೆ ದುಃಖ ಉಯ್ಯಾಲೆಯಾಡುವಂತಹ ತೂಗುಮಂಚವನ್ನು ಕಟ್ಟಿದ್ದಾನೆ! ನನ್ನಿಂದಾಗಿ ಅದೆಷ್ಟು ಲಂಕೆಯ ಹೆಣ್ಣು ಮಕ್ಕಳು, ಕಿಷ್ಕಿಂಧೆಯರು ತಮ್ಮ ಮಂಗಳ ಸೂತ್ರಗಳನ್ನು ಕಳೆದುಕೊಳ್ಳುವರೊ? ಸಖಿಯೆ, ನನ್ನ ನಿನ್ನ ಈ ಬಗೆಯ ಆಲೋಚನೆ ಅಹಂಭಾವದ ಅಭಿವ್ಯಕ್ತಿಯೆ?

'ವಿಧಿಯ ಸೂತ್ರದ ಜಗಜ್ಜಾಲದಲ್ಲಿ ಅದರ ಹಸ್ತದ ಕುಶಲ ಪ್ರತಿಮೆಗಳಾಗಿ ಆಡುವವರು ವ್ಯಕ್ತಿಗಳಲ್ಲವೆ? ನಿನ್ನ ತಂದೆಯ ವಿಧಿಗೆ ನಾನೆಷ್ಟು ಕಾರಣಳೊ, ನನ್ನ ವಿಧಿಗೂ ಆತ ಅಷ್ಟೆ ಕಾರಣವಲ್ಲವೆ? ನಮ್ಮ ನಮ್ಮ ಕರ್ಮದ ಫಲವನ್ನು ನಾವು ಉಣಬೇಕು. ತ್ರಿಜಟೆಯೆ, ಆದರೂ ಹೇಳುತ್ತೇನೆ ಕೇಳು. ನಿನ್ನ ಮಾಂಗಲ್ಯದ ಮೇಲೆ ಪಣವಿಟ್ಟು ಈ ಪ್ರತಿಜ್ಞೆ ಮಾಡುತ್ತೇನೆ. ನಿನಗೆ ವೈಧವ್ಯವಾದಾಗ ನನಗೂ ವೈಧವ್ಯವೆಂದು ತಿಳಿ!

'ಕೆಳದಿಯೆ, ಆ ಭೀತಿಯನ್ನು ಬಿಡು. ನಾಳೆ ಯುದ್ಧವು ಎಷ್ಟೆ ಭೀಕರವಾಗಲಿ, ವಾನರರ ಬಲವು ಎಷ್ಟೆ ಘೋರತರವಾದುದಾಗಿರಲಿ ಮತ್ತು ನನ್ನ ಪತಿ ಬ್ರಹ್ಮಾಸ್ತ್ರವನ್ನೇ ತೊಡಲಿ, ನಿನ್ನ ತಾಳಿ ಮಾತ್ರ ಒಂದಿನಿತು ಅಲುಗದಿರಲಿ!'

ತ್ರಿಜಟೆಯು ಆ ನುಡಿಯನ್ನು ಬರಿ ಹರಕೆ ಎಂದು ಭಾವಿಸದೆ ವರವೆಂದು ತಿಳಿದು ಕೈ ಮುಗಿಯುತ್ತ ಕ್ಷಮೆ ಕೋರಿದಳು:

ಮಹಿಮೆ ಮೈದೋರಲೋಸುಗಂ ಮಡಿದರಾ ಸಾವೊಂದು ಸಾವೆ?

'ಮನಸ್ಸು ನೋಯಲು ಹಾಗೆ ಹೇಳಿದೆ. ಈ ಮೂರ್ಖಳನ್ನು ಕ್ಷಮಿಸಿ. ತಾಯಿ, ನಿನ್ನ ನೋವಿನ ಮುಂದೆ ನನ್ನದು ಏತರದು? ಮಹಿಮೆ ಪ್ರಕಟಗೊಳ್ಳಲು ಮಡಿದರೆ ಆ ಸಾವೊಂದು ಸಾವೆ? ಅದು ಬದುಕಿಗೆ ಮೀರಿದ ಅಮೃತವಲ್ಲವೆ?'

ಅದನ್ನು ಕೇಳುತ್ತ ಸೀತೆ ಬೆರಗಾಗಿ ತ್ರಿಜಟೆಯನ್ನು ನೋಡುತ್ತ ನುಡಿದಳು:

'ಸ್ನೇಹಿತೆಯೇ, ವೇದದ ರೀತಿ ಹೇಳಿದ ಈ ವಾಕ್ಯವನ್ನು ನೀನೆಲ್ಲಿ ಕಲಿತೆ?'

'ನೀನೆ ಗುರುವಲ್ಲವೆ?'

ಎಂದು ಧನ್ಯಭಾವದಿಂದ ಹೇಳಿದ ತ್ರಿಜಟೆ ತನ್ನ ಮಾತುಗಳನ್ನು ಹೀಗೆ ಮುಂದುವರಿಸಿದಳು.

'ನಿನ್ನೊಡನೆ ಇಷ್ಟು ದಿನವಿದ್ದು, ನಿನ್ನ ಸೇವೆಯನ್ನು ಮಾಡಿದ್ದು ಬರಿ ದಾಸ್ಯವೆ? ಅದು ತಪಸ್ಸಲ್ಲವೆ? ನಿನ್ನ ನುಡಿ ಕೇಳಿ, ನಡೆನೋಡಿ ಹಗಲಿರುಳು ನಿನ್ನ ಸಾನ್ನಿಧ್ಯದಲ್ಲಿದ್ದೇನೆ. ನಿನ್ನನ್ನು ತಿಳಿಯುವ ಕೃಪೆ ನನಗೆ ಪೂರ್ವಜನ್ಮದ ಫಲ. ತಾಯಿ, ಅಷ್ಟು ಹೇಳಿದುದೇನು ಹೆಚ್ಚೆ?'

'ಸಖೀ, ನೀನು ದೊಡ್ಡವಳು. ನಿನ್ನ ನಾಲಗೆಯಿಂದ ಹಿರಿದಾದ ನುಡಿಗಳು ಹೊಮ್ಮುತ್ತಿವೆ!'

ಎಂದು ಹೇಳುತ್ತ ಸೀತೆ ಸಖಿಯೊಡನೆ ಸಂವಾದದಲ್ಲಿದ್ದಳು.

ಆ ಕಡೆ ವಿಭೀಷಣ ಕುಮಾರಿ ಅನಲಾ ದೇವಿಯು ಕಾಳಗದ ಕಣಕ್ಕಿಂತಲೂ ಮಿಗಿಲಾದ ಭಯಂಕರ ಶೋಕಸಾಗರದ ಸೀಮೆಯಾಗಿದ್ದ ದೊಡಪ್ಪ ರಾವಣನ ಅರಮನೆಯಲ್ಲಿದ್ದಳು. ಅವಳು ಅದನ್ನು ಬಿಟ್ಟು ಮನಶ್ಯಾಂತಿಯನ್ನು ಅರಸುತ್ತ ಅಶೋಕಧಾಮವನ ಹೊಕ್ಕಳು. ನೇರವಾಗಿ ಸೀತೆಯ ಸಾನ್ನಿಧ್ಯಕ್ಕೆ ಸಾಗಿದಳು. ಆ ತಪಸ್ವಿನಿಯ ಪಾದಗಳಿಗೆ ಎರಗಿದಳು. ಸೀತೆಯು ದುಃಖಪೂರಿತ ಕಣ್ಣುಗಳ, ಗದ್ಗದ ಧ್ವನಿಯ ಶೋಕ ಆವರಿಸಿದ ಸುಕೋಮಲಾಂಗಳನ್ನು ಕನಿಕರದಿಂದ – ತಾಯಿ ಮಗಳನ್ನು ಎತ್ತಿಕೊಳ್ಳುವಂತೆ ಎತ್ತಿಕೊಂಡಳು. ಕಣ್ಣೀರು ಒರೆಸಿದಳು;

ಮುಖವನ್ನು ಮುದ್ದಾಡಿದಳು; ಅವಳ ಒಡಲನ್ನು ತನ್ನ ಮೈಗೆ ಅಪ್ಪಿಕೊಂಡು ಕಣ್ಮುಚ್ಚಿ ಮೌನಿಯಾದಳು. ಅದು ತನ್ನ ಹೃದಯದ ನಿಗೂಢ ಶಾಂತಿಯನ್ನು ಯೌಗಿಕ ವಿಧಾನದಿಂದ ಅನಲೆಯ ಆತ್ಮಕ್ಕೆ ದಾನ ಮಾಡುವ ರೀತಿಯಾಗಿತ್ತು. ತುಸು ಸಮಯದ ನಂತರ ತನ್ನ ಅಳಲನ್ನು ಹೀಗೆ ತೋಡಿಕೊಂಡಳು.

'ಅನಲೆ, ನಿನ್ನನ್ನು ನಾನು ಹೇಗೆ ಸಂತೈಸಲಿ? ನೀನು ಅಳಬೇಡ ಎಂದು ಹೇಳಲು ನನಗೆ ಬಾಯಿ ಬರುತ್ತಿಲ್ಲ. ತಾಯಿ, ಬಾಯಿ ಬರುತ್ತಿಲ್ಲ.'

ಬೈತಲೆಯ ಅಕ್ಕ ಪಕ್ಕದ ಕೂದಲನ್ನು ನೇವರಿಸುತ್ತಿದ್ದವಳನ್ನು ಮುಗ್ಧ ನೇತ್ರದ ತರಳೆ ಮುಖವೆತ್ತಿ ನೋಡಿದಳು. ತನ್ನ ಚಿಗುರು ಬೆರಳುಗಳಿಂದ ಸೀತೆಯ ಕಣ್ಣಿನ ಹನಿಗಳನ್ನು ಒರಸುತ್ತ ಹೇಳಿದಳು:

'ದೇವಿಯೇ, ನಿನ್ನ ದುಃಖವನ್ನು ಅತ್ತು ಮುಗಿಸಲು ನಿನಗೆ ನಿನ್ನ ಕಣ್ಣೀರು ಸಾಲದಾಗಿದೆ. ನನ್ನ ಅಳಲಿಗೆ ನಿನ್ನ ನೇತ್ರ ತೀರ್ಥವನ್ನೇಕೆ ಸುರಿಸುವೆ? ನಿನ್ನ ನಯನದಿಂದ ಉರುಳುವ ಒಂದೊಂದು ಅಶ್ರು ಬಿಂದುವು ನಮ್ಮ ಲಂಕೆಯ ಶೋಕ ಜೀವನ ಸಾಗರವನ್ನು ಹೆಚ್ಚಿಸುವುದು. ನೀನು ದುಃಖಿಸಿದರೆ ಅದರ ಒಂದೊಂದು ಹನಿಯು ಬಡಬಾಗ್ನಿಯ ಕಡಲಾಗುವುದು. ಅದು ಲಂಕೆಯ ಮಹಾ ಅಸುರರ ಸಹಸ್ರಾರು ವಾಹಿನಿಗಳನ್ನು ಕುಡಿದು ಮುಗಿಸುವುದು. ಸಕಲಲೋಕ ಭೀಕರನೆಂದು, ಯುದ್ಧ ಭೈರವನೆಂದು ಹೆಸರಾದವನು ನನ್ನ ಚಿಕ್ಕ ದೊಡ್ಡಪ್ಪ ಕುಂಭಕರ್ಣ. ಅವನು ನೇರವಾಗಿ ಮತ್ತು ಸವಿನುಡಿಯಲ್ಲಿ ಹಿರಿದಾಗಿ ಬಾಳಿದವನು. 'ಅಮ್ಮ, ನಿನ್ನ ಕಣ್ಣಿನ ಹನಿ ಕಡಲ ಬಡಬಾಗ್ನಿ ನಿನ್ನೆ ಅವನನ್ನು ನುಂಗಿ ಹಾಕಿತಮ್ಮ!'

ಎಂದು ಹೇಳುತ್ತ ಅನಲೆಯು ದುಃಖ ತಡೆಯಲಾರದೆ ಬಿಕ್ಕಿ ಬಿಕ್ಕಿ ಅತ್ತಳು. ತುಸು ತಡೆದು ಮತ್ತೆ ಮಾತು ಮುಂದುವರೆಸಿದಳು.

ನನ್ನನಂಬರಕೆತ್ತಿ ಮೇಲೆಸೆದು ಪಿಡಿದು 'ನೀನೊಂದು ಪೂವಿನ ಚೆಂಡು' ಎನುತೆನ್ನ ಮುದ್ದಾಡುತಿರ್ದನ್.

'ಆ ದೊಡ್ಡಪ್ಪ ನಮ್ಮೊಡನೆ ಎಷ್ಟೋ ಸಲ ಕುಳಿತು ಸರಸದಲ್ಲಿ ಆಡುತ್ತಿದ್ದ. ನಗೆ ಚಟಾಕಿ ಹಾರಿಸಿ ನಮ್ಮನ್ನು ಅಣಗಿಸುತ್ತ ಅಳ್ಳೆ ಬಿರಿಯುವಂತೆ ನಗಿಸುತ್ತಿದ್ದ! ಕಳ್ಳರ ಆಟದಲ್ಲಿ ನಾವು ಅವನನ್ನು ಅಟ್ಟಿಸಿಕೊಂಡು ಹೋಗಲು ಅವನು ಓಡುತ್ತಿದ್ದ. ನಾನು ಅವನ ಹಿಂದೆ ಓಡುತ್ತ ಹಿಡಿಯಲು ಆಗದಿದ್ದಾಗ, ಹಿಂತಿರುಗಿ ನೋಡುತ್ತ ಕೊನೆಕೊನೆಗೆ ನಗೆ ತಡೆಯಲಾರದೆ ಸೋತಂತೆ ನಿಲ್ಲುತ್ತಿದ್ದ. ನಾನು ಮುಟ್ಟಿ

ನಗುತ್ತಿದ್ದೆ. ನನ್ನನ್ನು ಆಕಾಶಕ್ಕೆ ಎತ್ತಿ ಮೇಲೆಸೆದು ಹಿಡಿದು 'ನೀನೊಂದು ಹೂವಿನ ಚೆಂಡು' ಎಂದು ಹೇಳಿ ಮುದ್ದಾಡುತ್ತಿದ್ದ. 'ಚೆಂಡು ಹೂ! ಚೆಂಡು ಹೂ!' ಎಂದು ಹೇಳಿ ಅಟ್ಟಹಾಸದಿಂದ ಅದ್ಭುತವಾಗಿ ನಗುತ್ತಿದ್ದ! – ಅಯ್ಯೋ, ಆ ಚಿಕ್ಕ ದೊಡ್ಡಪ್ಪ ಇಂದು ಸಮುದ್ರದ ಮಳಲಿನ ತೀರದಲ್ಲಿ ಗಂಧಚಿತೆಯಲ್ಲಿ ಬೆಂದು ಹೋದ. ನನ್ನ ಬದುಕಿರುವ ದೊಡ್ಡ ದೊಡ್ಡಪ್ಪ ಅಸುರೇಶ್ವರನು ಅವನ ಬೂದಿಯನ್ನು ಊರಿಗೆ ತಂದನು! ಅದನ್ನು ಇಟ್ಟಿರುವ ರತ್ನ ಪಾತ್ರೆಯನ್ನು ಬಿಗಿದಪ್ಪಿಕೊಂಡು 'ತಮ್ಮ, ತಮ್ಮ' ಎಂದು ಗೋಳಿಡುತ್ತಿದ್ದನು. ಅದನ್ನು ನಾನು ನೆನೆಯಲಾರೆನು ದೇವಿ, ನಿನಗೆ ಅಹಿತನಾಗಿದ್ದರೇನು? ಆ ನೋಟವನ್ನು ನೋಡಿದ್ದರೆ ನೀನೂ ಸಹ ಮರುಗಿ ಕರಗಿ ಹೋಗುತ್ತಿದ್ದೆ!'

ಜಾನಕಿಯ ಎದೆಗೆ ಮುಖವಿಟ್ಟು, ಗದ್ಗದಿತೆಯಾಗಿ ಮಗಳಂತೆ ಅನಲೆ ಅಳುತ್ತಿದ್ದಳು. ಅದನ್ನು ನೋಡುತ್ತ ತನ್ನ ನಿಜಸ್ವರೂಪವು ಆವಿರ್ಭವಿಸಿದಂತೆ ಸೀತೆಯು ತಾನು ಬೇರೆ ಎಂಬ ಭಾವ ತೊರೆದಳು. ಲೋಕದ ಮಾತೆ ತಾನು ಎಂಬಂತೆ ತನ್ನ ಎರಡು ತೋಳುಗಳಿಂದ ಅನಲೆಯನ್ನು ತಬ್ಬಿಕೊಂಡಳು. ತ್ರಿಜಟೆಯ ಕಡೆ ತಿರುಗಿ,

'ತ್ರಿಜಟೆಯೆ, ಬಾಲೆಯು ಉಪವಾಸವಿದ್ದಾಳೆ. ಶೋಕಭಾರವನ್ನು ತಡೆಯಲಾರದವಳಾಗಿದ್ದಾಳೆ; ತತ್ತರಿಸುತ್ತಿದ್ದಾಳೆ. ಇವಳಿಗೆ ಈ ಹರೆಯದಲ್ಲಿ ಇಂತಹ ದುಃಖವೆ? ಬೇಗ ಹೋಗಿ ಹಣ್ಣುಗಳನ್ನು, ತಿಳಿನೀರನ್ನು ತೆಗೆದುಕೊಂಡು ಬಾ.'

ಎಂದು ಹೇಳಿದಳು. ಅವಳು ಹೋದ ನಂತರ ಸೀತೆ ಅನಲೆಯ ತಲೆಗೆ ತನ್ನ ತೊಡೆಯನ್ನು ತಲೆದಿಂಬಾಗಿಸಿ ಮಲಗಿಸಿಕೊಂಡಳು. ಕೃಶಗಾತ್ರೆಯು ತನ್ನ ಮಲಿನ ವಸ್ತ್ರದ ಸೆರಗಿನಿಂದ ತಂಗಾಳಿ ಬೀಸಿದಳು. 'ಏನು ಬೇಸಗೆಯೊ? ಬೇಗೆ ಲೋಕವನ್ನು ಧಗಿಸುತ್ತಿದೆ' ಎಂದು ತನಗೆ ತಾನು ಹೇಳಿಕೊಂಡು ನಿಟ್ಟುಸಿರು ಬಿಟ್ಟಳು. ಮುಂದೆ ಹಬ್ಬಿರುವ ಸಾಗರದ ನೀಲ ವಿಸ್ತಾರವನ್ನು ನೋಡುತ್ತ ನೀಲಿಯಾಗಸದ ನಿಸ್ಸೀಮ ವಿಸ್ತಾರದ ಕಡೆ ಗಮನ ಹರಿಸಿದಳು. ಮುಗಿಲು ಮುಗಿಲಾಗಿ ಮೇಲೇರುತ್ತಿದ್ದ ದಹನ ಕ್ರಿಯಾ ಧೂಮ ವಿಸ್ತಾರವನ್ನು ನೋಡುತ್ತಿದ್ದ ಅವಳ ಕಣ್ಣಿಂದ ಹನಿ ತುಳುಕಿ ಅನಲೆಯ ಮೈಮೇಲೆ ಬಿದ್ದಿತು!

ತ್ರಿಜಟೆಯು ಬೇಗನೆ ಬಂದು ನೀಡಿದ ತಣ್ಣನೆಯ ನೀರಿನಿಂದ ಅನಲೆಯು ಮುಖ ತೊಳೆದಳು. ಹಣ್ಣುಗಳನ್ನು ಸೇವಿಸಿ ಚೇತರಿಸಿಕೊಂಡಳು. ಅನಂತರ ಸೀತೆಗೆ ಹೀಗೆ ಹೇಳಿದಳು:

‘ದೇವಿಯೆ, ಆದದ್ದು ಆಗಿ ಹೋಗಿದೆ. ಅದಕ್ಕೂ ನೂರರಷ್ಟು ಘೋರವು ಇನ್ನು ಆಗಲಿದೆ. ನೀನು ಇಚ್ಛಿಸಿದರೆ ಅದನ್ನು ನಿಲ್ಲಿಸಲು ಅಸಾಧ್ಯವೇನು ಅಲ್ಲ. ತಾಯಿ, ಅರಮನೆಯಲ್ಲಿ ನಡೆದುದನ್ನು ಹೇಳುತ್ತೇನೆ ಕೇಳು. ಕಡಲ ತೀರದಲ್ಲಿ ತಮ್ಮನ ಕಳೆಬರಕ್ಕೆ ಕೊನೆಯ ಸಂಸ್ಕಾರ ಮಾಡಿ, ಭಸ್ಮಾವಶೇಷವನ್ನು ರತ್ನ ಪಾತ್ರೆಯಲ್ಲಿಟ್ಟು ತಂದು ಗೋಳಿಡುತ್ತಿದ್ದ ದೊಡ್ಡಪ್ಪನನ್ನು ನನ್ನ ಅಣ್ಣ ಇಂದ್ರಜಿತು ಕಂಡನು. ಅವನು ಮಹಾರುದ್ರ ಕೋಪಾವಿಷ್ಟನಾಗಿ ತನ್ನ ತಂದೆಯನ್ನು ಸಂತೈಸುತ್ತ,

ಕೈಕೊಳ್ವೆ ನೀಗಳೆ ನಿಕುಂಭಿಲಾ ಯಾಗಮಂ

‘ದೈತ್ಯ ಕುಲ ಚಕ್ರೇಶನೆ, ಸಂತಾಪವನ್ನು ಬಿಡು, ನನ್ನ ಪ್ರತಾಪ ಭೂತಕ್ಕೆ ಚಿಕ್ಕಯ್ಯನ ಪ್ರಾಣದ ನೂರರಷ್ಟು ಪ್ರಾಣಗಳನ್ನು ಬಲಿ ತೆಗೆದುಕೊಳ್ಳುತ್ತೇನೆ. ವೈರಿ ಸೈನ್ಯವನ್ನು ಯಮನೂರಿನ ಅತಿಥಿಯಾಗಿಸುತ್ತೇನೆ. ಇದಕ್ಕೆ ನನ್ನಾಣೆ, ನಿನ್ನಾಣೆ, ತೀರಿಹೋದ ಚಿಕ್ಕಪ್ಪನಾಣೆ, ನನ್ನ ಹೆತ್ತ ಅವ್ವನ ಮತ್ತು ಕುಲದೈವ ಶಿವನಾಣೆ! ಈಗಲೇ ನಿಕುಂಭಿಲಾ ಯಾಗವನ್ನು ಕೈಗೊಳ್ಳುತ್ತೇನೆ. ಮೃತ್ಯುಗರ್ಭವು ತರತರನೆ ನಡುಗುವಂತೆ ಮಾರಣ ಮಹಾಶಕ್ತಿಗಳನ್ನು ತಕ್ಷಣ ಸೃಷ್ಟಿಸುತ್ತೇನೆ. ಪೂಜ್ಯ ಕುಂಭಕರ್ಣನ ಪ್ರೇತವು ಪಿತೃಲೋಕದಲ್ಲಿ ಸುಪ್ರೀತವಾಗುವಂತೆ ನರವಾನರರ ಸೇನೆಯನ್ನು ನಿರ್ನಾಮ ಮಾಡಿ ಅವರ ರಕ್ತದಿಂದ ತರ್ಪಣವನ್ನು ಅರ್ಪಿಸುತ್ತೇನೆ’ ಎಂದು ಕಠೋರ ಶಪಥವನ್ನು ಮಾಡಿದನು. ನಿಕುಂಭಿಲಾ ಹೆಸರಿನ ಆಲದ ಮರದ ಬುಡದಲ್ಲಿಯ ಯಾಗ ಶಾಲೆಯ ಮಹಾಮಂತ್ರ ಕರ್ಮದ ತಂತ್ರಮಂಟಪದತ್ತ ನಡೆದನು.

‘ಆ ನನ್ನ ಅಣ್ಣನು ಅತಿ ಶಕ್ತಿಯುತನು. ಇಂದ್ರನನ್ನು ಗೆದ್ದು; ಬ್ರಹ್ಮನಿಂದ ನಾನಾ ವರಗಳನ್ನು ಪಡೆದು, ಮಾಯಾಬಲದಿಂದ ದೇವದಾನವರಿಗೆ ಭಯಂಕರ ನಾಗಿರುವವನು. ದೇವಿ, ಅವನು ನಿರ್ವಿಘ್ನವಾಗಿ ಯಾಗವನ್ನು ಮುಗಿಸಿದರೆ ಈ ಭುವನ ತ್ರಯದ ವೀರರಲ್ಲಿ ಯಾರಿಗಾದರೂ ಅವನನ್ನು ಸೋಲಿಸಲು ಸಾಧ್ಯವೆ? ಆ ಯಾಗವು ವಿಘ್ನವಿಲ್ಲದೆ ಸಿದ್ಧಿಯಾದರೆ ಅವನು ಅಜೇಯನು, ಯಾರೂ ಎದುರಿಸಲಾಗದ ವೀರನು ಆಗುತ್ತಾನೆ. ಸುರರು ಮತ್ತು ಅಸುರರು ಜೊತೆಗೂಡಿ ಬಂದರೂ ತೃಣೀಕರಿಸುತ್ತಾನೆ. ಆಗ ಕಪಿಧ್ವಜರು ಯಾವ ಲೆಕ್ಕ? ತಾಯಿ, ಅನಂತರ ಎರಡೂ ಕಡೆಯಲ್ಲಿ ಆಗುವ ಪ್ರಾಣಹತ್ಯೆಯನ್ನು ನೆನೆಯಲಾಗದು.’

ಎಂದು ಹೇಳಿ ತುಸುಹೊತ್ತು ಮೌನವಾಗಿ ಆಲೋಚಿಸಿ ಮಾತನ್ನು ಮುಂದುವರಿಸಿದಳು:

'ಗಂಡಸರು ಹೀಗೆ ಮೈ ಮರೆತು ಕ್ರೋಧ ಮೂರ್ಛಿತರಾಗಿ ಉದ್ಧಟತನದಿಂದ ಸರ್ವನಾಶಕ್ಕಾಗಿ ಒಬ್ಬರಿಗೊಬ್ಬರು ಎದುರಾಗುವಾಗ ಹೆಣ್ಣಾದವಳು ಏಕೆ ತಟಸ್ಥಳಾಗಿರಬೇಕು? ಶ್ರೇಷ್ಠಳೇ, ನೀನು ಒಪ್ಪಿದರೆ ನಾನು ನಿನಗೆ ನೆರವಾಗುತ್ತೇನೆ. ಮಂಡೋದರಿ ದೊಡ್ಡಮ್ಮನು ಸಹಾಯಕ್ಕೆ ಬರುತ್ತಾಳೆ ಎಂದು ನನಗೆ ಗೊತ್ತು. ನನ್ನ ಅತ್ತಿಗೆಯಾದ ಮೇಘನಾದನ ಪತ್ನಿ ತಾರಾಕ್ಷಿಯು ಬೆಂಬಲಿಸುತ್ತಾಳೆ. ತಾಯಿ ಕೇಳು, ನಿನ್ನನ್ನು ಇಲ್ಲಿಗೆ ತರಲು ಸಂಚು ಹೂಡಿದ ಚಂದ್ರನಖಿಯೂ ಈಗ ಬದಲಾಗಿದ್ದಾಳೆ. ಮತ್ತು ದಶಗ್ರೀವನ ಆತ್ಮವು ತನ್ನ ಕಸುಗಾಯಿಯ ಒಗರನ್ನು ಕಳೆದುಕೊಂಡು ಹಣ್ಣಾಗಲು ಮಾರ್ಪಡುತ್ತಿರುವುದು ನನ್ನ ಮನಸ್ಸಿಗೆ ಗೋಚರ ವಾಗುತ್ತಿದೆ. ಆದರೂ ಆ ಮಹಾಸತ್ವನು ಅತ್ಯಭಿಮಾನಿ, ಹಿಂಜರಿಯುವವನಲ್ಲ. ಈ ಕಾಳಗದ ಕೊಲೆಯನ್ನು ತಡೆಯಲು ತಾನು ಮುಂದುವರಿಯುವುದಿಲ್ಲ. ರೋಷಾವೇಶಿಯಾದ ಅವನು ಕ್ಷಾತ್ರ ತೇಜಕ್ಕೆ ಭಂಗ ಬರುವ ರೀತಿಯಲ್ಲಿ ಎಂದೂ ನಡೆದುಕೊಳ್ಳುವುದಿಲ್ಲ.'

ಪುಟ್ಟ ಹೃದಯದೊಳೆಂತು, ಪೇಳನಲೆ, ಇಂತಪ್ಪ ದಿಟ್ಟತನವಿರಿಸಿರ್ಪೆ

'ಅನಲೆಯೆ, ಈ ಪುಟ್ಟ ಹೃದಯದಲ್ಲಿ ಅದು ಹೇಗೆ ಇಷ್ಟು ದಿಟ್ಟತನವನ್ನಿರಿಸಿಕೊಂಡಿರುವೆ? ಹದಿನಾರು ವಸಂತಗಳ ನಿನ್ನ ಮೈ ಹಿರಿಯ ಚೈತನ್ಯದ ನೆಲೆ ಮತ್ತು ಅತಿಶಯವಾದ ಹೆಮ್ಮೆಗೆ ತವರು ಮನೆಯಾಗಿದೆ. ಕುವರಿಯೆ, ನಾನು ಸ್ವತಂತ್ರಳು ಅಲ್ಲ. ನೀನು ಮತ್ತು ನಿನ್ನವರು ಸ್ವತಂತ್ರರು. ತಪಸ್ಸನ್ನು ಹೊರತು ಪಡಿಸಿ ಇನ್ನು ಯಾವುದೂ ನನಗೆ ಹೊಂದುತ್ತಿಲ್ಲ... ನಾನು ನಿನ್ನನ್ನು ಆಶೀರ್ವದಿಸುತ್ತೇನೆ. ಅದಷ್ಟೆ ನಾನು ನಿನ್ನ ಕಾರ್ಯಕ್ಕೆ ನೀಡುವ ನೆರವು. ವಿಭೀಷಣ ಕುಮಾರಿಯೆ, ನಲ್ ಆಸೆ ನಿನ್ನದು. ಅದು ನೆರವೇರಲಿ.'

ಎಂದು ಆಶೀರ್ವದಿಸಿದ ಅವನಿಜೆಗೆ ಅನಲೆಯು,

'ದೇವಿ, ನಿರಾಶೆಯನ್ನು ಬಿಡು. ನನ್ನ ತಂದೆಗೆ ನೆನ್ನೆ ವಾರ್ತೆಯನ್ನು ಹಿರಣ್ಯಕೇಶಿಯ ಕೈಲಿ ಕಳುಹಿಸಿದ್ದೇನೆ. ಇಂದ್ರಜಿತುವು ಕೈಗೊಳ್ಳುವ ಯಾಗವು ಮುಗಿಯುವ ಮೊದಲೆ ವಾನರ ಮಹಾಪ್ರಾಜ್ಞ ಸೇನಾನಿಗಳು ವಿಘ್ನವನ್ನು ತಂದೊಡ್ಡುವುದು ನಿಜ.'

ಎಂದು ಮುಗುಳ್ನಗೆಯೊಡನೆ ಹೇಳಿ, ಆ ಧೈರ್ಯವು ತನಗಿರುವುದೆಂದು ಸೀತೆಗೆ ಮತ್ತೆ ಹೀಗೆ ತಿಳಿಸಿದಳು.

ದೂರಮಿರದಿನ್ ದಿಟಂ ಮಹಾತ್ಮಂಗೆ ಸುಗತಿ!

'ತಾಯಿಯೇ, ದೊಡ್ಡಪ್ಪನು ಇಂದಿಗೆ ಇಲ್ಲಿಗೆ ಬರಲು, ನೀನು ನಮ್ಮೊಂದಿಗೆ ತಾಯಿಯಾಗಿ ನಡೆದುಕೊಳ್ಳುವಂತೆ ನಡೆದುಕೊ. ಕಂದನಿಗೆ ಹಿತದ ಸದ್ಬುದ್ಧಿಯನ್ನು ಹೇಳುವಂತೆ ಹೇಳು. ನಿತ್ಯವೂ ನಿನ್ನನ್ನು ನೆನೆಯುವ ಅವನ ಆತ್ಮಕ್ಕೆ ನಿನ್ನ ಮಹಿಮೆ ಹೊಳೆಯತೊಡಗಿದೆ. ದೇವಿಯೆ, ಮನಸ್ಸು ಮರುಗುವಂತೆ ಹೃದಯ ಕರಗುವಂತೆ; ಅವನ ವೀರ ಹೆಮ್ಮೆ ಕನಿಕರಕ್ಕೆ ಶರಣಾಗುವಂತೆ ಅವನ ಹೃದಯವನ್ನು ಮಿಡಿದು ಹೇಳು! ನನ್ನ ದೊಡ್ಡಪ್ಪನು ಏನೆಂದು ನಿನಗೆ ಗೊತ್ತು. ದರ್ಪಕಾರಣವಾಗಿ ಕಾಠಿಣ್ಯವನ್ನು ತೋರುವವನಾದರೂ, ಅವನ ಎದೆಯ ಕಬ್ಬಿಣಕ್ಕೆ ಪ್ರೀತಿಗೆ ಮಣಿಯುವ ಮೃದುತನವಿದೆ.

'ಇದುವರೆಗೆ ನಿನ್ನಂತಹ ಪತಿವ್ರತೆಯರನ್ನು ಕಾಣದಿರುವುದೇ ಅವನ ದುರ್ಗತಿಗೆ ಕಾರಣವಾಯ್ತು. ಇನ್ನು ಆ ಮಹಾತ್ಮನಿಗೆ ಸುಗತಿ ದೂರವಿಲ್ಲ.'

ಎಂದು ದುರಂತವನ್ನು ಲೆಕ್ಕಿಸದೆ, ನಿಜನುಡಿಯನ್ನಾಡಿದ ಮುಗ್ಧೆ ಅನಲೆಯ ಮುಡಿಯನ್ನು ಸೀತೆ ನೇವರಿಸಿದಳು. ಹೆಗಲಿನಿಂದ ಇಳಿದು ಎರಡು ಕಡೆ ಜೋತಾಡುತ್ತ ಹದಿನಾರು ವಸಂತಗಳ ಎದೆಯನ್ನು ಶೃಂಗರಿಸಿದ್ದ – ನೀಳವಾಗಿ ನುಣುಪಾದ ಕರಿಜಡೆಯನ್ನು ಕೈಗಳಿಂದ ನೇವರಿಸಿದಳು. ರಾವಣನು ಬಂದಾಗ ಹೇಗೆ ತನ್ನ ಆತ್ಮ ಸೂಚಿಸುತ್ತದೆಯೊ ಹಾಗೆ ನಡೆಯುತ್ತೇನೆ ಎಂದು ಭಾಷೆಯಿತ್ತಳು. ದೈತ್ಯಕುಲ ಕನ್ಯೆಯನ್ನು ಹೆತ್ತ ತಾಯಿಯಂತೆ ಪ್ರೀತಿಯಿಂದ ಸಂತೈಸಿದಳು. ದೂರ ಸಮುದ್ರ ತೀರದಿಂದ ಹೊಗೆಯು ಬಾನಿಗೆ ಏರಿ ಮೇಲ್ಮುಖವಾಗಿ ತಪ್ಪು ದಾರಿಯಲ್ಲಿ ಸಾಗುತ್ತಿತ್ತು!

❖❖❖

ಮಗ ಇಂದ್ರಜಿತು ಮರಣಾನಂತರದ ರಾವಣನ ಧೃತಿ

'ಮಡಿದ ನೈಂದ್ರಾಸ್ತ್ರದಿಂ ಮಂಡೋದರಿಯ ಮಗ!' ಎಂದು ದೇವಗಾಯಕರು ವಿಸ್ಮಯಗೊಂಡು ಹಾಡುತ್ತ ಸಾಗಿದರು. ಅದು ಕೋಗಿಲೆಗಳ ಮಧುರಗಾನದಂತೆ ದೇವತೆಗಳ ಹೃದಯಕ್ಕೆ ಮಧು ಮಧುರವಾಗಿ, ಕಿವಿಗೆ ಇಂಪಾಗಿತ್ತು. ಕೋಸಲದ ಸರಯೂ ನದಿಯ ದಡದಲ್ಲಿದ್ದ ತಪಸ್ವಿನಿ ಊರ್ಮಿಳಾದೇವಿಗೆ, ಏನೋ ಹೃದಯ ಭಾರವು ಇಳಿದಂತಾಯಿತು. ಅವಳ ಜೀವ ತಾವರೆಯು ಹೂ ಹಗುರವಾದಂತಾಯಿತು. ನಂದಿಗ್ರಾಮ ಪರ್ಣಶಾಲೆಯಲ್ಲಿ ತಪಶ್ಚರ್ಯೆಯಲ್ಲಿದ್ದ ಭರತನು ಗುರುವಸಿಷ್ಠರ ಮುಖದಲ್ಲಿ ಕಳೆಗುಂದಿದ ದೈನ್ಯಭಾವವು ಇನ್ನಿಲ್ಲವಾದುದನ್ನು ಕಂಡನು. ವಿಚಾರಿಸಲು ಅವರು – ನಸುನಗೆಯ ಸುಖಮುಖದಿಂದ 'ರವಿ ಕುಲವು ಇಂದು ಮಹಾಕ್ಲೇಶದಿಂದ ಪಾರಾಯಿತು' ಎಂದು ತಿಳಿಸಿದರು.

ಲಂಕಾಪುರದ ಹೊರವಲಯದ ವಾನರರ ಶಿಬಿರದಲ್ಲಿ ಮೈಂದನು ರಚಿಸಿದ ಮಹೇಂದ್ರ ಜಿತುವನ್ನು ಜಯಿಸಿದ ಜಯಸ್ತುತಿಯ ಅತಿಶಯಗೀತವನ್ನು ಅವರೆಲ್ಲರು ಕೋಟಿಕಂಠದಲ್ಲಿ ಹಾಡಿದರು.

ಪೂರ್ವದಿಕ್ಕಿನಲ್ಲಿ ಸೂರ್ಯನು ಚಂದ್ರ ಕುಂಕುಮ ಕನಕ ತೀರ್ಥದಲ್ಲಿ ಮಿಂದವನಂತೆ ತಳತಳಿಸುತ್ತ ಉದಯಿಸಿದನು. ಸುಂದರ ಫಾಲ್ಗುಣ ಪ್ರಭಾತ ಸೂರ್ಯ ಜಗತ್ತಿನ ಮನಕ್ಕೆ ಸಂತೋಷವನ್ನು ಸಿಂಪಡಿಸಿದನು. ಆಗ ಕತ್ತಲು ಯಾರನ್ನು ಹುಡುಕಿಕೊಂಡು ಎತ್ತ ಹೋಯಿತು! ದಶಾನನ ಚಿತ್ತ ಗುಹೆಯನ್ನು ಪ್ರವೇಶಿಸಿತೆ? ರಾಜಗೃಹವನ್ನು ಮತ್ತು ಕುಟುಂಬವನ್ನು ಮುತ್ತಿತೆ? ರಕ್ಕಸರ ಎದೆಯ ಸಿರಿಯ ಬೊಕ್ಕಸಕ್ಕೆ ದರಿದ್ರಲಕ್ಷ್ಮಿಯಂತೆ ಹೊಕ್ಕಿತೆ?

ಮಂಡೋದರಿ

ಈ ಅಳಲ್ ಗಿಚ್ಚಿಂದೆ ಸುಡದಿರೆನ್ನೆರ್ದೆಯ ಕೆಚ್ಚಿನ ಮರದ ಬೇರ್ಗಳಂ

ಮಯನ ಮಗಳಾದ ಮಂಡೋದರಿಯು ತನ್ನ ಒಬ್ಬನೇ ಮಗ ಇಂದ್ರಜಿತುವಿನ ದುರ್ಮರಣದ ಸಿಡಿಲ ಹೊಡೆತಕ್ಕೆ ತಡೆಯಲಾರದೆ ಜರ್ಜರಿತಳಾದಳು. ಲಂಕೇಶ್ವರನು

ಅವಳ ಮೋಹದ ಒಡಲನ್ನು ಬಾಚಿ ತಬ್ಬಿ ತನ್ನ ಎದೆಗೆ ಒತ್ತಿಕೊಂಡು ಸಂತೈಸುತ್ತಿದ್ದನು. ಅವನ ಕೆಂಗಣ್ಣುಗಳಿಂದ ದಪ್ಪದಪ್ಪನ ಹನಿ ಉದುರುತ್ತಿದ್ದವು. ಬೆಂಕಿಯು ತಾನು ದಹಿಸುವ ಹಸಿ ಸೌದೆಯ ತುದಿಯಿಂದ ನೀರು ಸೋರಿಸುವಂತೆ – ಹೃದಯದಲ್ಲಿ ಹುದುಗಿದ್ದ ಕುದಿಯುವ ಕಟು ನೀರನ್ನು ಸ್ರವಿಸುವಂತೆ ದುಃಖಿಸುತ್ತಿದ್ದನು! ಪತ್ನಿಯನ್ನು ಸಂತೈಸುತ್ತ ಹೇಳಿದನು:

'ರಾಣಿಯೆ ಶೋಕವನ್ನು ತಡೆದುಕೊ. ನನ್ನನ್ನು ನೋಡು ಮನಸ್ಸನ್ನು ಕಲ್ಲಾಗಿಸು. ನನಗಾಗಿ ಮಗನ ಹಂಬಲವನ್ನು ಮರೆ. ಈ ದುಃಖದಿಂದ ನನ್ನ ಎದೆಯ ಕೆಚ್ಚಿನ ಮರದ ಬೇರುಗಳನ್ನು ಸುಡದಿರು. ಐರಾವತವನ್ನು ಏರಿದ ಇಂದ್ರನನ್ನು ಸೋಲಿಸಿದ ಮಗ, ರಾಮವಾನರರ ಸೇನೆಯನ್ನು ತನ್ನ ಮಾಯೆಯಿಂದ ಕಂಗೆಡಿಸಿ ಕೊಂದ ಮಗ ರಾಕ್ಷಸರ ಕುಲದ ಗೌರವಕ್ಕೆ ಕಲಶ ಪ್ರಾಯನಾಗಿದ್ದ ಮಗ, ನನ್ನ ಸೈನ್ಯವೆಂಬ ಮೇರುಗಿರಿಗೆ ಮೇರುದಂಡದಂತಿದ್ದ ಗಂಡುಗಲಿ ಮೇಘನಾದನು ಹಗೆಯ ಮೋಸಕ್ಕೆ ಸಿಲುಕಿ ಬಲಿಯಾದರೇನು? ಧ್ಯಾನದಲ್ಲಿದ್ದವನನ್ನು ಕೊಂದ ಹೇಡಿ ರಾಮಾನುಜನು ವೀರನಾಗುತ್ತಾನೆಯೆ?

'ರಾಣಿಯೇ, ಇಂದ್ರಜಿತುವನ್ನು ಕೊಂದ ಮೋಸಗಾರನ ಕಳೇಬರವು ನನ್ನ ಈ ನೆಲದಲ್ಲಿ ಹುಳುಗಳ ಉಣಿಸಾಗಿ ಕೊಳೆಯುವುದು. ಹಾಗೆ ಮಾಡಿದಾಗ ನನಗೆ ತೃಪ್ತಿ! ನಿನ್ನ ಕಣ್ಣೀರಿನ ಎರಡರಷ್ಟು ಕಣ್ಣೀರು ಸುರಿಯುವಂತೆ ಮಾಡುತ್ತೇನೆ. ನಮ್ಮ ಸಂಕಟ ಪರಂಪರೆಗೆ ಕಾರಣಳಾದ ಆ ಹೃದಯ ಶೂನ್ಯೆ, ನನ್ನ ಜೀವನ ಶೂಲರೂಪಿ ಭೂಸುತೆಯನ್ನು ತುಂಡರಿಸುತ್ತೇನೆ!...'

ನಿಟ್ಟುಸಿರು ಹೊಮ್ಮಿ, ಧ್ವನಿ ಕುಗ್ಗಿತು. ಕೊರಳಸೆರೆ ಬಿಗಿಯಿತು. ಮಂಡೋದರಿಯ ಕಣ್ಣನ್ನು, ಮುಖವನ್ನು ಸೆರಗಿನಂಚಿನಿಂದ ಒರಸಿದನು. ಲಂಕೇಶ್ವರನು ತನ್ನ ಹೃದಯೇಶ್ವರಿಯ ಮುಖ ಮಂಡಲದಲ್ಲಿ ದೃಷ್ಟಿ ನೆಟ್ಟು ಕಲ್ಲಾದಂತೆ ಕುಳಿತನು. ಮತ್ತೆ ಸಮಾಧಾನಗೊಂಡು ಮಾತು ಮುಂದುವರಿಸಿದನು.

'ಏನಿದು? ಯಾವ ಭಯದಿಂದ ನಿನ್ನ ಮುಖ ವಿಕಾರವಾಗಿದೆ ಹೇಳು. ಬೆದರದಿರು. ಮಹಿಷಿಯೆ, ನನಗೇಕೆ ಕೈ ಮುಗಿಯುತ್ತಿರುವೆ? ನಿನ್ನ ವಿರೂಪಗೊಂಡ ವದನವನ್ನು ನಾನು ನೋಡಲಾಗುತ್ತಿಲ್ಲ! ತಪ್ಪಾಯ್ತು. ಅವಳನ್ನು ಕೊಲ್ಲುವುದಿಲ್ಲ; ಕ್ಷಮಿಸು!'

ಹಾಗೆ ಹೇಳಿದ ಪತಿಗೆ ಕೃತಜ್ಞತೆಯನ್ನು ಅರ್ಪಿಸುವ ರೀತಿಯಲ್ಲಿ ಮಯನ ಮಗಳು ಪೂಜ್ಯಭಾವದಿಂದ ಅವನ ಕಾಲು ಹಿಡಿದಳು. ಅದರ ಧೂಳನ್ನು ತನ್ನ

ಮುಡಿಗೆ ಉದುರಿಸಿಕೊಂಡಳು. ಅಷ್ಟರಲ್ಲಿ ಅಲ್ಲಿಗೆ ಬಂದ ಓರ್ವದಾಸಿಯು ಗದ್ಗದಿಸುತ್ತ ಹೇಳಿದಳು:

'ಧಾನ್ಯಮಾಲಿನಿ ದೇವಿಯ ಪ್ರಾಣ ಇನ್ನೇನು ಹೋಗಲಿದೆ! ಒಡೆಯನೆ, ಅತಿಕಾಯನ ಸಾವಿನ ಸುದ್ದಿ ಕೇಳಿದ ತಕ್ಷಣ ಮೂರ್ಛಿತಳಾಗಿದ್ದಾಳೆ. ದಾದಿಯರು ಉಪಚರಿಸುತ್ತಿದ್ದಾರೆ!'

ಗಾಯದ ಮೇಲೆ ಗಾಯವಡೆದ ಸಿಂಹದಂತೆ ಅಸುರೇಂದ್ರನು ಮತ್ತೆ ಮತ್ತೆ ನಿಟ್ಟುಸಿರು ಬಿಟ್ಟನು. ಮಂಡೋದರಿಯ ಮೈಯನ್ನು ಬಿಳಿದಾದ ಹಂಸ ತೂಲಿಕೆಯ ಮೃದು ಹಾಸಿಗೆಯ ಮೇಲೆ ಮಲಗಿಸಿದನು. ಅವಳನ್ನು ದಾಸಿಯರ ಹಾರೈಕೆಗೆ ಒಪ್ಪಿಸಿದನು. ಕಳೆಗುಂದಿದ ಮುಖದವನಾಗಿ ಧಾನ್ಯಮಾಲಿನಿ ದೇವಿಯ ಅರಮನೆಗೆ ನಡೆದನು.

ಧಾನ್ಯಮಾಲಿನಿ

ನೀರಿನ ಕಾರಂಜಿಗಳ ಲೀಲಾ ವಿನೋದದಿಂದಲೂ, ವಿವಿಧ ಪಕ್ಷಿಗಳ ಮಧುರ ಕಂಠದ ಕಲಕಲನಾದದಿಂದಲೂ, ಗಂಧಮಯ ಕುಸುಮಕುಲದ ರಮಣೀಯತೆಯಿಂದಲೂ ಕೂಡಿದ್ದ ಹೂದೋಟವನ್ನು ಚಕ್ರೇಶ್ವರನು ದಾಟಿದನು. ನೀರವ ಶಾಂತಿಯ, ಕಳವಳದ ಹೊಂಬಿಸಿಲಲ್ಲಿ ಪ್ರಕಾಶಿಸುತ್ತಿದ್ದ ಅರಮನೆಯನ್ನು ಪ್ರವೇಶಿಸಿದನು. ಅವನನ್ನು ಕಂಡು ತಕ್ಷಣ ತಲೆ ಮುಸುಕಿನ ದಾದಿಯರು ಅರುಗಾದರು. ಧಾನ್ಯಮಾಲಿನಿಯು ಮಲಗಿ ನಿದ್ರಿಸುತ್ತಿದ್ದಂತಹ ಭವ್ಯ ಮಂಚದ ಬಳಿ ನಿಂತನು. ತನಗೆ ತಾನು ಹೀಗೆ ಗೊಣಗಿಕೊಂಡನು.

'ಬಾಳು! ಕಳ್ಳನು ಕಟ್ಟಿದ ಸುಳ್ಳಿನ ಸಂತೆ! ಬರಿ ಬೊಂತೆ! ಕಡೆಗೆ, ಬೆಂಕಿಯೊಡನೆ ಸೇರಿ, ಬೂದಿರಾಸಿಯಾಗಿ ಉಳಿಯುವ ಅರ್ಥವಿಲ್ಲದೆ ಅಪ್ರಯೋಜಕ ಕಂಥೆ! ಇದಕ್ಕೇಕೆ ಇಷ್ಟೊಂದು ಚಿಂತೆ!'

ತಲೆಯ ಮೇಲೆ ಚಿಂತೆಯ ಅಚಲ ಬೆಟ್ಟವನ್ನು ಹೊತ್ತಂತೆ ಧಾನ್ಯಮಾಲಿನಿಯ ಬಳಿಯ ಪೀಠದಲ್ಲಿ ಕುಸಿದು ಕುಳಿತನು.

ಮೆಯ್ಯನಲ್ಲದೇಂ ಮನವನಿತ್ತೆನೆ ರಾಕ್ಷಸಂಗೆ?

ಸ್ವಲ್ಪ ಹೊತ್ತು ಸುಮ್ಮನಿದ್ದನು. ಅನಂತರ ಮೆಲ್ಲನೆ ಅತಿಕಾಯನ ಅಂಬಿಕೆಯ ಸುಡುಹಣೆಯ ಕೂದಲುಗಳನ್ನು ಸರಿಸುತ್ತ ಕೈಯಿಟ್ಟು ನೇವರಿಸಿದನು. ಅವಳು

ಬೆಚ್ಚಿದಳು; ನಿಟ್ಟುಸಿರು ಬಿಟ್ಟಳು; ಕಣ್ಣು ತೆರೆದಳು; ಯಾರನ್ನೂ ಗುರುತಿಸದ ನೋಟದಿಂದ ನೋಡಿದಳು. ತನ್ನೊಳಗೆ ತಾನೇ ಇನ್ನಾರೋ ಅಶರೀರಿಯೊಡನೆ ಮಾತಾಡಿದಳು. ದನುಜೇಂದ್ರನು ಕಣ್ಣುರೆಪ್ಪೆ ಬಡಿಯದೆ ಕೇಳಿದನು.

'ಸ್ವಾಮಿಯೇ, ಮುನಿಯದಿರು. ಮೈ ಸೋತಿದ್ದು ನಿಜ; ಆದರೆ ಮನಸ್ಸು ಯಾವಾಗಲೂ ಅದನ್ನು ಸುಡುತ್ತಿತ್ತು. ರಾಕ್ಷಸನಿಗೆ ನಾನು ಮೈಯನಲ್ಲದೆ, ಮನವನ್ನು ನೀಡಿದೆನೆ? ಈ ದಾಸಿಯ ಕೈ ಬಿಡಬೇಡಿ. ಜಗದೀಶ್ವರನು ಮನವನಲ್ಲದೆ ತನುವನ್ನು ನೋಡುವನೆ? ನನಗೆ ನೀನೇ ಸರ್ವೇಶ್ವರ. ಸೀತೆಯನ್ನು, ಪೂಜ್ಯೆಯನ್ನು, ಆ ಲೋಕಮಾತೆಯನ್ನು ಪಶು ರಾಕ್ಷಸನು ಮುಟ್ಟಿ ಹೊತ್ತು ತಂದನು. ಆ ಕಾರಣದಿಂದ ಆ ಪತಿವ್ರತೆಯು ಅಪವಿತ್ರಳಾದಳೆ?

'ಸ್ವಾಮಿ, ನನ್ನ ಮುಡಿಯನ್ನು ನೋಡು. ಪ್ರತಿದಿನ ನಾನು ತ್ರಿಜಟೆಯಿಂದ ಪಡೆದು ಮುಡಿದ ರಘುರಾಮನ ಮಡದಿಯ ಪಾದದ ಪಾಪನಾಶಕ ಧೂಳಿ! ಏನೊ ದುಃಸ್ವಪ್ನದಲ್ಲಿ ಪ್ರಾರಬ್ಧ ಕರ್ಮಪರಿಪಾಕದಿಂದ ನಾನು ನೀನು ಅಗಲಿದೆವು. ಇನ್ನು ಆ ಸ್ವಪ್ನ ಹೊಡೆದು ಹೋಯಿತು! ಅದಕ್ಕಾಗಿ ಆ ದೇವಿ ರಾಮಸತಿಗೆ ನನ್ನ ಶತ ನಮಸ್ಕಾರಗಳು!'

ಹಾಗೆ ಮಾತಾಡಿಕೊಳ್ಳುತ್ತ ಧಾನ್ಯಮಾಲಿನಿಯು ಕಣ್ಣು ಮುಚ್ಚಿದಳು. ಮುಖದ ಸುಕ್ಕು ಅಳಿದು ತರಂಗ ರಹಿತ ಸರೋವರದಂತೆ ಶಾಂತವಾಯಿತು.

ಮರ್ಮಘಾತದ ವೇಧೆಯಿಂ ನರಳ್ದನಾಳದಿಂ ಮಂಡೋದರೀ ಪ್ರಿಯಂ

ತನ್ನ ಕಾಮಾತಿಶಯದಿಂದ ಶವದ ಸಹವಾಸದಲ್ಲಿ ಭೋಗಿಯಾಗಿದ್ದವನು ಬೋಧೆ ತಿಳಿದೆದ್ದನು. ಜಿಗುಪ್ಸೆಯಿಂದ ಯಾತನೆಯ ಅಸಹ್ಯ ಕೆಸರಿನಲ್ಲಿ ಉರುಳಿದಂತೆ ಅತಿ ನಾಚಿಕೆಗೆ ಒಳಗಾದನು. ಮಂಡೋದರಿ ಪ್ರಿಯನು ಹಿಂದೆಂದೂ ಯಾವ ಕಾರಣಕ್ಕೂ ಅನುಭವಿಸಿದ ಒಂದು ಮರ್ಮಘಾತದ ವೇದನೆಯಿಂದ ನರಳಿದನು. ದೇವದಾನವ ಭಯಂಕರನು ಆತ್ಮ ಸಂತಾಪ ದೀನಮನನಾದನು. ಧಾನ್ಯ ಮಾಲಿನಿಯ ಆತ್ಮದ ಕ್ಷಮೆ ಬೇಡುವ ರೀತಿಯಲ್ಲಿ ಮುಡಿಯನ್ನು ಅವಳ ಅಡಗಿಟ್ಟನು.

ಪರಶಿವನ ಮೈ ಪುಲಕಗೊಂಡಿತು. ಆದಿಶಕ್ತಿಯ ಮುಖದಲ್ಲಿ ಮುಗುಳುನಗೆ ಅರಳಿತು. ಮಾಯಾಂಗನೆಯ ಕೈಯ ಮೋಹ ಪಾಶ ನಡುಗಿತು. ಅವಳು ಮುಕ್ತ್ಯಂಗನೆಯ ಅರಳಿದ ನಗು ಮುಖ ಕಂಡು ಕರುಬಿದಳು!

ಪ್ರಭೂ, ತಾರಾಕ್ಷಿದೇವಿಯರ್ ಮೇಘನಾದ ಸ್ವಾಮಿಯೊಡನಗ್ನಿಯಂ ಪುಗಲ್ ನಿಚ್ಚಯಿಸಿಹರ್.

ಅಷ್ಟರಲ್ಲಿ ಅಲ್ಲಿಗೆ ಅನಲೆ ಕಳುಹಿಸಿದ ದೂತಿಯೊಬ್ಬಳು ಬಂದಳು. ಎದುರು ಕೈ ಮುಗಿದು ನಿಂತಳು. ದುರ್ವಾರ್ತೆಯನ್ನು ಶಂಕಿಸಿದ ರಾವಣನು ಅವಳನ್ನು ನೋಡಿ,

'ಅಕಲ್ಯಾಣ ಮುಖಿಯೇ, ಮತ್ತಿನ್ನೇನು ಅಮಂಗಳವನ್ನು ತಂದೆ ಹೇಳು? ಅಶುಭವಲ್ಲದೆ ನನಗೆ ಇನ್ನು ಬೇರೆ ಕರ್ಣಾಮೃತವಿಲ್ಲವೆ? ಏಕೆ ನಡುಗುತ್ತಿರುವೆ? ನಿನಗೆ ನಾಲಗೆ ಉಡುಗಿ ಹೋಗಿದೆಯೆ? ಏಕೆ ಸುಮ್ಮನಿರುವೆ? ಬೇಗ ಹೇಳು, ಇಲ್ಲದಿದ್ದರೆ ತೊಲಗು! ಕಣ್ಣೆದುರು ನಿಂತು ನನ್ನ ಕದಡಿದ ಮನಸ್ಸನ್ನು ಕಾಡಬೇಡ!'

ಎಂದು ಕಾರ್ಮುಗಿಲಿನ ಒಡಲಿನ ರಾಕ್ಷಸಾದ್ಭುತನು ಗುಡುಗಿ ನುಡಿಯಲು ದಾಸಿ ಗದ್ಗದಿಸಿದಳು:

'ಪ್ರಭೂ, ನನ್ನನ್ನು ಅನಲಾ ಲಲನೆ ಕಳುಹಿಸಿದಳು. ತಾರಾಕ್ಷಿ ದೇವಿಯು ಮೇಘನಾದ ಸ್ವಾಮಿಯೊಡನೆ ಅಗ್ನಿ ಪ್ರವೇಶ ಮಾಡಲು ನಿಶ್ಚಯಿಸಿರುವರು. ಅದನ್ನು ತಡೆದು, ತಾವು ಬರುವುದನ್ನೆ ಎದುರು ನೋಡುತ್ತಿರುವರು. ಅದನ್ನು ತಮ್ಮ ಅಡಿಗಳಿಗೆ ನಿವೇದಿಸಲು ನನ್ನನ್ನು ಕಳುಹಿಸಿದರು.'

ಕೇಳಿದ್ದೆ ತಡ ದಶಾನನನು ಜಗ್ಗನೆ ಎದ್ದನು. ಸೊಸೆಯ ದುಃಖದ ಮುಂದೆ ತನ್ನ ದುಃಖ ಬರಿ ನೆಳಲೆಂಬುದನ್ನು ತಿಳಿದನು. ಧೀರೋದಾತ್ತ ಭಾವೋಜ್ವಲ ಮುಖಭಾವದಲ್ಲಿ ಹೇಳಿದನು:

'ನಡೆ, ಹೋಗು. ಅನಲೆಗೆ ನಾನೀಗಲೆ ಬಂದೆ ಎಂದು ಹೇಳು. ತಡಮಾಡದೆ ನಡೆ, ಓಡು!'

ಆಳನ್ನು ಅಟ್ಟಿ ತಕ್ಷಣ ತನ್ನ ದುಃಖವನ್ನು ತೊಳೆದುಕೊಳ್ಳುವವನಂತೆ ಮುಖವನ್ನು ತೊಳೆದುಕೊಂಡನು. ತನ್ನ ಉಡುಪನ್ನು ಸರಿಪಡಿಸಿಕೊಂಡನು. ದುಃಖದ ಛಾಯೆ ಹೊರ ಸುಳಿಯದ ರೀತಿಯಲ್ಲಿ ಧೀರ ವೈಖರಿಯವನಾಗಿ ದೈತ್ಯೇಶ್ವರನು ನಡೆದನು.

ಅವನು ದಿವಂಗತ ಸುತನ ಸತಿಯ ಶೋಕಾಗ್ನಿಯನ್ನು ಉಪಶಮನಗೊಳಿಸುವ, ಭಾರೀ ಮಳೆಯನ್ನು ಕರೆಯುವ ಮನೋ ನಿಶ್ಚಯದ ನೀರನ್ನು ಹೊತ್ತೊಯ್ಯುವ ಕಾರ್ಗಾಳಿಯಂತೆ ಹೋದನು.

ದಿಗಿಲುಗೊಂಡ ಎದೆಗೆ ಧೈರ್ಯ ಹೊಗುವಂತೆ ರಾವಣನು ಇಂದ್ರಜಿತುವಿನ ಮೇಘ ಚುಂಬಿತ ಅರಮನೆಯನ್ನು ಪ್ರವೇಶಿಸಿದನು. ಹಿಂದೆ ತಾನು ಬಂದಾಗ ಬರಮಾಡಿಕೊಳ್ಳುತ್ತಿದ್ದ ಸುತನ ಸಾನ್ನಿಧ್ಯ ಶೂನ್ಯತೆಯ ಸಂಕಟಕ್ಕೊಳಗಾದನು. ಅದನ್ನು ಕಷ್ಟದಿಂದ ಸಂಯಮಿಸಿಕೊಂಡನು. ತಾನು ಬರುವುದನ್ನು ಕಂಡು ದ್ವಾರ ದ್ವಾರಗಳಲ್ಲಿ ಕುಗ್ಗಿ, ಮುಖ ತಗ್ಗಿಸಿ, ದೂರ ಸರಿದು ಕೈ ಮುಗಿಯುತ್ತಿದ್ದ ಸೇವಕ ವರ್ಗವನ್ನು ದಾಟಿ ಹೋದನು. ಅನಲಾ ಕನ್ಯೆಯು ತನ್ನ ಅಪ್ಪುಗೆಯಲ್ಲಿ ಮಗನ ಮನದನ್ನೆ ತರುಣಿ ತಾರಾಕ್ಷಿಯನ್ನು ಸಂತೈಸುತ್ತಿರುವ ಅಂತಃಪುರವನ್ನು ಪ್ರವೇಶಿಸಿದನು.

ಆ ಗೋಳನಾರ್ ಸಹಿಸಲಾಪರ್?

ಆ ಗೋಳನ್ನು ಯಾರು ಸಹಿಸಲು ಸಾಧ್ಯ? ಮಡಿದ ಯೌವನ ಗಂಡನನ್ನು ನೆನೆದು ಅಳುವ ಯುವತಿಯ ಗೋಳನ್ನು ಕೇಳುತ್ತ, ಇಂದ್ರಜಿತುವಿನ ತಂದೆ ಅಲುಗಾಡದೆ ನಿಶ್ಚಲನಾಗಿ ನಿಂತನು. ಅವನು ಮುಂದೆ ರಾಮನ ಬಾಣಗಳಿಂದ ಜಜ್ಜರಿತನಾದನು ಎಂಬುದು ಬರಿ ಕಥೆಯಲ್ಲವೆ? ಅನಲೆಯು ದೊಡ್ಡಪ್ಪನು ಬಂದುದನ್ನು ಕಂಡು ಅತ್ತಿಗೆಗೆ ಹೇಳಿದಳು:

'ಸಖೀ, ಮಾವನದೊ! ಸುತನ ಸಾವಿನ ಸಿಡಿಲು ಬಡಿದು ಉಸಿರು ಕಟ್ಟಿದಂತೆ ಸುಮ್ಮನಿದ್ದಾನೆ, ನಿನ್ನ ನೋವಿನ ವಿಷವನ್ನು ತಾನೆ ಕುಡಿದಂತೆ!'

ಆ ನುಡಿಯನ್ನು ಆಲಿಸಿದ ಎರಡು ಜಡೆಯ ಬೈತಲೆಯ ಶ್ರೀಮಂತ ಉಡಿಗೆಯ ಬೆಡಗಿನ ನಡೆಯ ತರಳೆ ತಾರಾಕ್ಷಿಯು ತತ್ತರಿಸುತ್ತ ಎದ್ದಳು. ಅಳುತ್ತ ತಲೆ ಬಾಗಿಸಿ ನಮಸ್ಕರಿಸುತ್ತ ಪತಿಯ ತಂದೆಯ ಪಾದತಲದಲ್ಲಿ – ದಶಾನನನ ಗುಂಡಿಗೆಯ ಮೇಲೆ ಗರಗಸ ಆಡಿಸಿದಂತೆ ಉರುಳಿದಳು. ಕೈಲಾಸವನ್ನು ಎತ್ತಿ ಅಲುಗಾಡಿಸಿದ ಬಾಹು ಭೀಮನು ಬಾಗಿ ಬಾಲೆಯನ್ನು ಎತ್ತಲು ಹೋಗಿ ತಾನೆ ನೆಲಕ್ಕೆ ಕುಸಿದನು. ಕಣ್ಣೀರಿನ ಮುತ್ತುಗಳೊಡನೆ ತತ್ತರಿಸುವ ಅಕ್ಷರಗಳು ಬೆರತವೊ ಎನ್ನುವಂತೆ ಮಾವನು ಸೊಸೆಯನ್ನು ಸಂತೈಸಿದನು.

ತಣಿವಹುದು ನಿನ್ನಿಯನಾತ್ಮಕ್ಕೆ ನೀನವನ ಮೊಳಕೆಯಂ ಪೆರ್ಮರತನಕ ಪೊರೆಯೆ.

'ತಡೆ, ಮಗಳೆ. ಕಡಲಾಗಿ ಉಕ್ಕುತ್ತಿರುವ ಈ ಕಣ್ಣಂಬ ಒಡಲ ಬಡಬಾಗ್ನಿಯನ್ನು ತಡೆ. ನಿನ್ನ ದುಃಖ ದಾರುಣದ ಕಾಡ್ಗಿಚ್ಚಿಗೆ ಲಂಕೆಯು ಇಲ್ಲವಾಗುವುದು! ಈ ಲಂಕಾಧಿಪನು ಸುಟ್ಟುರಿದು ಹೋಗುವನು! ನಿನ್ನಿಂದಲೆ

ಮುಂದೆ ರಾಕ್ಷಸ ಕುಲ! ಇನ್ನು ನೀನೆ ಲಂಕಾಧಿದೇವಿ. ಲಂಕಾಲಕ್ಷ್ಮಿಯೇ, ನೀನು ಬದುಕಿದರೆ ನಮ್ಮ ಈ ವಂಶ ಉಳಿಯುವುದು. ಇಲ್ಲದಿದ್ದರೆ ನೀನೆ ಕಾರಣವಾಗುವೆ ಕುಲಕ್ಕೆ ಕೊನೆ! ತಾಳು, ಮಗಳೆ; ತಾಳಿ ಬಾಳು; ಬಾಳಿ ಬಾಳಿಸು ನಮ್ಮ ಪೀಳಿಗೆಯನ್ನು. ಮೇಘನಾದನ ಮಹಾರಾಣಿಯಾದ ನೀನು ಅವನಿಂದ ವೀರ ಸತ್ತ್ವ ಪ್ರತಿಮೆಯೆಂಬಂತೆ ಮನೆಯ ಹೆಮ್ಮೆಯ ಕುಡಿ ಮಗು ವಜ್ರಾರಿಯನ್ನು ಪಡೆದಿರುವೆ. ನೀನು ಅವನ ಮೊಳಕೆಯನ್ನು ಹೆಮ್ಮರವಾಗಿ ಬೆಳಸಿದರೆ ಅವನ ಆತ್ಮಕ್ಕೆ ತೃಪ್ತಿಯಾಗುವುದು.

'ಕೇಳು ಮಗಳೆ, ವೈರಿ ಕೋಟೆಯನ್ನು ಮುತ್ತಿನಿಂದಿರುವ ಹೊತ್ತಿದ್ದು. ಹೆಚ್ಚು ಹೇಳಲು ನನಗೆ ಸಮಯವಿಲ್ಲ. ಕಳೆದ ರಾತ್ರಿ ವೀರ ಅತಿಕಾಯನಿಂದ ಗಾಯಗೊಂಡು ವೈರಿಪಡೆ ಒಳಸೋರಿ, ಅಧೈರ್ಯಗೊಂಡು ಕೆಟ್ಟು ಓಡಿ ಹೋಗಿದೆ. ಆದರೆ ಲಂಕೆ ಬೆಂಕಿಯ ಉಪಟಳದಿಂದ ತಲ್ಲಣಗೊಂಡಿದೆ. ಇಂದು ನಾನೇ ನನಗೆ ಸೇನಾಧಿಪತಿಯ ಪಟ್ಟವನ್ನು ಕಟ್ಟಿಕೊಳ್ಳುವೆನು!'

ಎಂದು ಹೇಳಿ ಸ್ವಲ್ಪ ಹೊತ್ತು ಸುಮ್ಮನಿದ್ದನು. ಮತ್ತೆ

'ಬಾಳ್ ಮಗಳೆ, ಬಾಳ್! ಏಳು; ಮೊಮ್ಮಗನು ಎಲ್ಲಿ? ತೋರಿಸು ನನಗೆ!'

ಎಂದು ಹೇಳಿ ಎದ್ದನು. ಆಗ ಅನಲೆಯು 'ತಾಯಿ ಕರೆದುಕೊಂಡು ಹೋಗಿದ್ದಾಳೆ. ಈಗಲೆ ತರುತ್ತೇನೆ.' ಎಂದು ಹೋಗಿ ಸರಮೆಯ ಕೈಯಲ್ಲಿದ್ದ ವಜ್ರಾರಿಯನ್ನು ತಂದು ಲಂಕೇಶ್ವರನ ಕೈಗೆ ನೀಡಿದಳು. ಮಗುವನ್ನು ನೋಡುತ್ತ ರಾಕ್ಷಸನ ಮುಖವು ಮುಗ್ಧ ಶಿಶುವಿನಂತಾಯಿತು! ಹೊಸ ಮುಗುಳು ಹಸುಳೆ ಮೊಮ್ಮಗನನ್ನು ಎತ್ತಿ ಕಣ್ಣಿಗಾನಂದವಾಗುವ ತನಕ ಮುದ್ದಾಡಿದನು. ಸೊಸೆಯ ಬಳಿಗೆ ನಡೆದು,

'ಮಗಳೆ, ನೋಡು ಇಲ್ಲಿದೆ ಬದುಕಿಗೆ ಅರ್ಥ ಮತ್ತು ನಿನ್ನ ಬಾಳಿನ ಗುರಿ. ನಿನ್ನ ಸಾವಿನ ಸುಖವನ್ನು ಈ ಮೇಘನಾದನ ತೇಜದ ಏಳಿಗೆಗಾಗಿ ಬಲಿ ಕೊಡು. ಈತನ ಎಳನಗೆಯ ಸುಖಕ್ಕೆ ನಿನ್ನ ದುಃಖವನ್ನು ಮರೆ. ಈ ನಿನ್ನ ಮತ್ತು ನಮ್ಮ ಸರ್ವಸ್ವಕ್ಕಾಗಿ ನಿನ್ನ ಸರ್ವಸ್ವವನ್ನು ತ್ಯಜಿಸು. ಇಂದ್ರನನ್ನು ಜಯಿಸಿದವನ ಕುಮಾರನಾದ ಈತನನ್ನು ತೆಗೆದುಕೊ! ಏಳು ಮಗಳೆ ಏಳು! ತೆಗೆದುಕೊ, ನೋಡು ಈ ಹಸುಳೆಯ ರೀತಿ ಬಾಳು ತೋಳು ನೀಡಿ ಆಹ್ವಾನಿಸುತ್ತಿದೆ! ಇದರ ತೊದಲು ಇಂಚರವನ್ನು ಕೇಳು!'

ಎಂದು ಹೇಳಿದನು. ಇಂದ್ರಜಿತುವಿನ ಕಾಂತಿಯೆ ಅಚ್ಚುಗೊಂಡಂತೆ ಕಂಗೊಳಿಸುತ್ತಿರುವ ವಜ್ರಾರಿ ಶಿಶುವನ್ನು ಸೊಸೆಯ ತೊಡೆಯ ತೊಟ್ಟಿಲಲ್ಲಿಟ್ಟನು.

ತನ್ನನ್ನು ತಾನು ಬೇರು ಸಹಿತ ಕಿತ್ತುಕೊಳ್ಳುವಂತೆ ಥಟ್ಟನೆ ಅಲ್ಲಿಂದ ಹೊರಗೆ ಹೋದನು.

ಚಂದ್ರನಖಿ

ಪುರಾಧ್ಯಕ್ಷನ ಜೊತೆಗೂಡಿ ಸುಟ್ಟು ಹೋಗಿರುವ ನಗರದ ದುಸ್ಥಿತಿಯನ್ನು ನೋಡಿದನು. ಜನರ ಭಯ ನಿವಾರಣೋಪಾಯಗಳನ್ನು ಹೇಳಿದನು. ಬಲಾಧ್ಯಕ್ಷನಿಗೆ ಕೋಟೆಬಾಗಿಲು ಮತ್ತು ದುರ್ಗ ರಕ್ಷಣೆ ಕುರಿತು ಸೂಕ್ತ ಸೂಚನೆಗಳನ್ನು ನೀಡಿದನು. ದಂಡನಾಯಕನಿಗೆ ತನ್ನ ಮೂಲಬಲವೆಲ್ಲವನ್ನೂ ರಣಕ್ಕೆ ಸಜ್ಜುಗೊಳಿಸಲು ಆಜ್ಞೆಮಾಡಿದನು. ಕೋಲಾಹಲಗಳೊಂದಿಗೆ ರಣವಾದ್ಯಗಳು ಮೊಳಗುತ್ತಿದ್ದವು. ಆಗ ಆತ್ಮದುಃಖಿಯು, ಕ್ರೋಧತಪ್ತನು ಆದ ದಶಗ್ರೀವನು – ಹೋದ ಧೈರ್ಯವು ದೈತ್ಯ ಪಟ್ಟಣಕ್ಕೆ ಮರಳುವಂತೆ ಹಿಂದಿರುಗಿ ಬಂದನು.

ಯುದ್ಧಕ್ಕೆ ಹೊರಡುವ ಮೊದಲು ಸ್ವಲ್ಪ ವಿಶ್ರಾಂತಿಯನ್ನು ಬಯಸಿ ಮಂಚಕ್ಕೆ ಒರಗಿದನು. ಘೋರ ಸಮರಕ್ಕಾಗಿ ತನ್ನ ಧೈರ್ಯದ ಧನುವಿಗೆ ಮೌರ್ವಿಯನ್ನು ಏರಿಸಿ ಮರಣಮಯ ಕರ್ಮಕ್ಕೆ ತನ್ನ ಚಿತ್ತವನ್ನು ಬಾಗಿಸಲು ತೊಡಗಿದನು.

'ಪಾಪಿ; ಪಶ್ಚಾತ್ತಾಪಿ; ಬಂದೆನಾಂ ಬಯಸಿ ಪ್ರಾಯಶ್ಚಿತ್ತಮಂ!'

ಆಗ ಚಂದ್ರನಖಿಯು ಬಾಗಿಲನ್ನು ನಿಧಾನವಾಗಿ ತೆರೆಯುತ್ತ ಬಂದಳು. ಅವನು ಕಣ್ಣೆತ್ತಿ ನೋಡಿ,

'ತಂಗಿ, ಏನು ಬಂದುದು?'

ಎಂದು ಅಸ್ಥಿರವಾದ ಧ್ವನಿಯಲ್ಲಿ ಕೇಳಿದನು. ಹಿರಿಯಣ್ಣನ ಬಳಿ ಹೋಗಿ, ಕಾಲು ಹಿಡಿದು ಪಾದಕ್ಕೆ ಹಣೆ ಒತ್ತಿದಳು. ಕೃಶಳಾಗಿ ಹೋಗಿದ್ದ ಅವಳು ಗದ್ಗದಿಸುತ್ತ ಅಳುತ್ತಿದ್ದಳು. ಹಿಂದೆಂದೂ ಕಾಣದೆ ಇದ್ದ ಅವಳ ಸ್ಥಿತಿಗೆ ರಾಕ್ಷಸನು ಆಶ್ಚರ್ಯಗೊಂಡು ಕೇಳಿದನು:

'ನೀನೇಕೆ ಈ ಮಲಿನ ವಸ್ತ್ರದಲ್ಲಿರುವೆ? ಹೀಗೇಕೆ ಸೊರಗಿರುವೆ?'

'ಪಾಪಿ; ಪಶ್ಚಾತ್ತಾಪಿ; ನಾನು ಪ್ರಾಯಶ್ಚಿತ್ತವನ್ನು ಬಯಸಿ ಬಂದಿರುವೆ.'

'ಏನು ಪಾಪ? ಯಾರಿಗೆ ಪಶ್ಚಾತ್ತಾಪ? ಯಾರಿಗೆ ಪ್ರಾಯಶ್ಚಿತ್ತ?'

'ನಾನು ಪಾಪಿ. ನನಗೆ ಪ್ರಾಯಶ್ಚಿತ್ತ. ಇನ್ನಾರಿಗೆ?'

ಅದು ತಂಗಿಯ ಅಣಕ ನುಡಿ ಎಂದುಕೊಂಡು ರಾಕ್ಷಸನು ನಕ್ಕನು. ಆಗ ಅವಳು,

'ಅಣ್ಣಯ್ಯ ಏಕೆ ನಗುವೆ? ನಾನು ಹಿಂದಿನಂತವಳಲ್ಲ... ನನ್ನ ದೆಸೆಯಿಂದ ಪತಿವ್ರತೆಯನ್ನು ಕದ್ದು ಎಳೆದು ತಂದೆ. ನನ್ನ ದುರಭಿಮಾನದ ಕಾಡ್ಗಿಚ್ಚನ್ನು ಪೋಷಿಸಲು ಲಂಕೆಯನ್ನು ನಾನೆ ಈ ದುರ್ಗತಿಗೆ ತಂದೆ. ಲೆಕ್ಕಕ್ಕೆ ಸಿಗದಷ್ಟು ವೀರರನ್ನು ತಿಂದೆ. ಎಷ್ಟೊ ಸೇನಾನಿಗಳನ್ನು ಕೊಂದೆ. ಕುಂಭಕರ್ಣನನ್ನು ಕೊಂದೆ. ಅತಿಕಾಯ, ಇಂದ್ರಜಿತು ಮೇಘನಾದ ಮುಂತಾದ ಮಕ್ಕಳನ್ನು ಆಹುತಿ ಪಡೆದೆ.

'ಅಣ್ಣ ನಿನ್ನನ್ನು ಕಾಲಿಡಿದು ಬೇಡುತ್ತೇನೆ, ಈ ರಣಮೇಧವನ್ನು ನಿಲ್ಲಿಸು. ನನ್ನನ್ನು ಆ ಲಕ್ಷ್ಮಣನು 'ಶೂರ್ಪನಖಿ' ಎಂದು ಬೈದನು. ನೀನು ಅದನ್ನು ಇಂದು ನಿಜ ಮಾಡಬೇಡ. ನಾನು ನಿನ್ನಡಿಯಲ್ಲಿ ಒಂದು ಭಿಕ್ಷೆ ಬೇಡಲು ಬಂದಿದ್ದೇನೆ. ನೀನು ಅದನ್ನು ನೀಡಬೇಕು!'

'ಭಿಕ್ಷೆ? ನಿನ್ನಂತಹವಳಿಗೆ ಭಿಕ್ಷೆ? ಇಂದಿನ ಈ ವೇಷದಿಂದ ನೀನು ದಿಟವಾಗಿ ಭಿಕ್ಷುಣಿಯೆ ಆಗಿರುವೆ!'

'ನಾನು ಹೊತ್ತಿಸಿದ ಕಿಚ್ಚನ್ನು ನಾನು ನಂದಿಸಲು ನನಗೆ ನೀನು ಅನುಮತಿಯ ಭಿಕ್ಷೆ ನೀಡು.'

'ಚಂದ್ರನಖಿ, ನಿನ್ನ ಕೈ ಬೆಂಕಿ ಹೊತ್ತಿಸಿದ್ದರೂ, ಆ ಕಾಳ್ಗಿಚ್ಚು ನಿನ್ನ ಶಕ್ತಿಯ ಕೈ ಮೀರಿದೆ. ನೀನು ಆರಿಸಲು ಹೋದರೆ, ಅದು ನಿನ್ನನ್ನೇ ಸೆಳೆದುಕೊಳ್ಳುವುದು ದಿಟ!'

'ನನಗೆ ಅದೇ ಹಿತವಾದುದು.'

'ನಿನ್ನಾಸೆ ಏನೆಂದು ಹೇಳು.'

'ನನಗೆ ಹೇಳಲು ಆಸೆ; ಆದರೆ ಹೇಳಲು ನನ್ನ ನಾಲಗೆ ಅಂಜುತ್ತಿದೆ.'

'ನೀನು ನನ್ನ ಒಡಹುಟ್ಟಿದವಳು.'

'ಜನಕಕನ್ಯೆಯನ್ನು ದಾಶರಥಿಗೆ ಒಪ್ಪಿಸುವುದು ನನ್ನ ಇಚ್ಛೆ.'

'ತಂಗಿ, ಅದು ಒಳ್ಳೆಯ ಮಾರ್ಗ. ಅದು ಹೆಂಬೇಡಿಗಳಿಗೆ ಮತ್ತು ಜೀವಗಳ್ಳರಿಗೆ ನಿಜವಾಗಿಯೂ ಸತ್ಪಥ!'

ಎಂದು ದಶಾನನನು ಆರ್ಭಟಿಸಿ ಹೇಳುತ್ತ ಮಂಚದ ಮೇಲೆ ಎದ್ದು ಕುಳಿತನು.

ನಿನ್ನಾತ್ಮಮೇನಾಡುತಿದೆ ಪೇಳ್; ಪೇಳೆನಗೆ ನಿನ್ನಂತರಾತ್ಮಮಂ!

ಚಂದ್ರನಖಿ ಅವನ ಸೋದರಿಯಲ್ಲವೆ? ಅಸುರೇಂದ್ರನ ಒಳಹೊರಗು, ಮೇಲ್ ಕೆಳಗುಗಳನ್ನು ಅರಿತ ಅವಳು ಅಪ್ರತಿಭಳಾಗುವಳೆ? ನಿಟ್ಟುಸಿರು ಬಿಡುತ್ತ ಕುಳಿತಿದ್ದ ಅವನ ಎದುರಿಗೆ ತನ್ನ ದೇಹದ ನಿಲುವನ್ನು ನೇರಮಾಡಿ ನಿಂತ ಲಂಕಾ ಲತಾಂಗಿಯು ಮಾರುತ್ತರವನ್ನು ಹೀಗೆ ಕೊಟ್ಟಳು:

'ಹೆದರಿ ನಡೆಯುವುದು ಹೇಡಿತನ. ತಿಳಿದು ಮಾಡುವುದಕ್ಕೇಕೆ ಆ ಹೆಸರು? ತನ್ನನ್ನು ಹೇಡಿ ಎನ್ನುತ್ತಾರೆ ಎಂಬುವುದಕ್ಕೆ ಅಳುಕಿ ಮಾಡಬಾರದುದನ್ನು ಮಾಡುವವನು ಎರಡರಷ್ಟು ಹೇಡಿ! ನಿನ್ನ ಆತ್ಮವು ಏನು ಹೇಳುತ್ತಿದೆ ಎಂದು ಹೇಳು; ನಿನ್ನ ಅಂತರಾತ್ಮವನ್ನು ಹೇಳು! ನೀನು ಅತ್ತಿಗೆಗೆ ಹೇಳಿದ ಕನಸಿನ ಅರ್ಥವೇನು?

'ಸೀತೆಯಲ್ಲಿ ನಿನಗೆ ಇನ್ನೂ ಅಂದಿನ ಕಾಮರುಚಿ ಇರುವುದೆ ಹೇಳು. ಅಶೋಕ ವನವಾಸಿ ಈ ಸೀತೆ, ಆ ಪಂಚವಟಿವಾಸಿ ಸುಮಂಗಲಿಯ ರೀತಿ ನಿನಗೆ ಮೋಹವನ್ನು ಕೆರಳಿಸುತ್ತಿರುವಳೆ? ಈ ಉಪವಾಸ ವ್ರತಳು, ಈ ಮಲಿನ ವಸನೆ, ಈ ತಪಸ್ವಿನಿ, ಈ ನಿಶ್ಚಲ ಪತಿವ್ರತಾ ಪೂಜ್ಯೆ.'

ಎಂದು ಅಕ್ಷರಗಳನ್ನು ಕಡೆಕಡೆದು ತಡೆ ತಡೆಯುತ್ತ ಆಡಿದಳು.

'ನಿನಗೆ ಭೋಜ್ಯಳೆ, ಹೇಳು? ತಪಸ್ಯೆಯಿಂದ ಬ್ರಹ್ಮನನ್ನು ಒಲಿಸಿಕೊಂಡು ವರಗಳನ್ನು ಪಡೆದ ಅನುಗ್ರಹ ಬುದ್ಧಿಯವನು ನೀನು. ಗೌರವ ಕೆಡುವುದೆಂದು, ಕ್ಷಾತ್ರವು ಮಸುಕಾಗುವುದೆಂದು ನೀನು ಭಯಪಡುವುದಾದರೆ ಆ ಕಾರ್ಯವನ್ನು ನನಗೆ ಆಜ್ಞಾಪಿಸು, ಅನ್ಯರಿಗಾದರೂ...'

ಚಂದ್ರನಖಿ, ಧನ್ಯನಪ್ಪಾ ಪೊಳ್ತು, ತೋರುತಿರ್ಪುದು ಸಾರೆ ಬರ್ಪಂತೆ

'ಸಹೋದರೀ, ನಿನ್ನ ಉಪನ್ಯಾಸ ಸಾಕು. ನಿಲ್ಲಿಸು. ನೀನು ಜಾಣೆ ಎಂಬುದು ನನಗೆ ಗೊತ್ತು. ಇಲ್ಲದೆಯಿರುವುದನ್ನು ಇದೆ ಎಂದು, ಇರುವುದನ್ನು ಇಲ್ಲವೆಂದು ಮನಸ್ಸು ಒಪ್ಪುವ ಹಾಗೆ ಹೇಳುವ ಜಾಣ್ಮೆ ನಿನಗೆ ಹುಟ್ಟಿನಿಂದ ಬಂದದ್ದು. ನಾನು ನಿನಗಿಂತ ಮೊದಲು ಹುಟ್ಟಿದ್ದೇನೆ. ನೀನು ಹೇಳಿದುದೆಲ್ಲವೂ ನಿಜ. ಆದರೆ ಅದು ನೀನು ಕೊಟ್ಟ ಕಾರಣಗಳಿಂದ ಅಲ್ಲ. ಅದಕ್ಕೂ ಮಿಗಿಲಾದ ಹಿರಿಯ ಕಾರಣಗಳಿಂದ! ನನಗೆ ಇಂದಿನ ಸೀತೆ ಅಂದಿನ ಸೀತೆಯಲ್ಲ ಎಂಬುದು ನಿಜ. ಆಕೆಗೂ ಮಿಗಿಲಾದ ಅತ್ಯಧಿಕವಾದ ಗಾಢ ಮೋಹ ಈಕೆಯಲ್ಲಿ ನನಗೆ ಉಂಟಾಗಿದೆ. ಆಕೆಯನ್ನು ತೊರೆದಿರುವೆ. ಆದರೆ ಈಕೆಯನ್ನು ಎಂದೆಂದಿಗೂ ಬಿಡೆನು!

'ಚಂದ್ರನಖಿ, ಹಿಂದೆ ನಡೆದುದನ್ನು ಹೇಳುವೆ, ಆಲಿಸುವಂತವಳಾಗು. ನಾನು ಮಾರೀಚನನ್ನು ಕಂಡೆ, ಅವನನ್ನು ಕನಕ ಮೃಗ ರೂಪದಿಂದ ವಂಚಿಸಲು ಪ್ರೇರೇಪಿಸಿದೆ. ಆ ಕಥೆ ನಿನಗೆ ಗೊತ್ತಿದೆ. ಆಗ ಮಾವನು ಪತಿವ್ರತೆಯ ಮಹಿಮೆಯನ್ನು ಕುರಿತು ಹೇಳಿದ. ನಾನು ಈ ಮೂರು ಲೋಕಗಳಲ್ಲಿ ರಾವಣನ ಶಯ್ಯೆಗೆ ಒಲಿಯದಿರುವ ನಾರಿಯರು ಇಲ್ಲವೆಂದು ಹೇಳಿದೆನು! ಮತ್ತೆ, (ನಿನ್ನೆ ನಾನು ಹೇಳಿದಂತಿವೆ ಆ ಮಾತುಗಳು) ಅವನಿಗೆ ಪ್ರತಿಜ್ಞೆ ಮಾಡಿ ಹೇಳಿದೆ: 'ಇಲ್ಲ, ಮಾರೀಚ ಎಲ್ಲಿಯೂ ಇಲ್ಲ ಆ ನನ್ನ ತಾಯಿ! ಸುಳ್ಳನ್ನು ಹೇಳಲು ಅಯ್ಯೋ, ನನ್ನ ಬಾಯಿ ಹೇಸುತ್ತಿದೆ. ಸುಳ್ಳಿಗೆ ನನ್ನ ಪೂಜೆ ಸಲ್ಲುವುದಿಲ್ಲ. ನನಗೆ ಅಂತಹ ಪಾವನೆ ಕಂಡ ದಿನ ನಾನು ಧನ್ಯ, ಅವಳು ಧನ್ಯಳು!'

'ಚಂದ್ರನಖಿ, ಧನ್ಯನಾಗುವ ಹೊತ್ತು ಹತ್ತಿರ ಬರುತ್ತಿರುವಂತೆ ಕಾಣುತ್ತಿರುವುದು. ಬದುಕಿದ್ದರೆ ಮತ್ತು ಪುಣ್ಯಯೋಗವಿದ್ದರೆ ನಿನಗೆ ಆ ದಿವ್ಯ ದೃಶ್ಯವನ್ನು ನೋಡಲು ಸಾಧ್ಯವಿದೆ.'

ದಾನವೇಶ್ವರನು ಆ ದೃಶ್ಯವನ್ನು ಮನಃಚಕ್ಷುವಿನಲ್ಲಿ ನೋಡುವಂತೆ ರೆಪ್ಪೆ ಬಡಿಯದ ಹಾಗೆ ದೂರ ದೃಷ್ಟಿಯಲ್ಲಿ ಕೇಂದ್ರೀಕರಿಸಿದನು. ಅವನ ಮುಖದಲ್ಲಿ ಮುಗುಳು ನಗೆಯೊಂದು ಬೆದರಿದಂತೆ ಸುಳಿಯಿತು. ತಕ್ಷಣ ತಂಗಿಯನ್ನು ಕುರಿತು,

'ಅಃ! ಅದೊ ಆ ದೃಶ್ಯ ನಿನಗೆ ಕಾಣುವುದಿಲ್ಲ! ಎಂಥಹ ದೃಶ್ಯವದು! ಮೂರು ಲೋಕಗಳು ಇರುವವರೆಗೂ ಮತ್ತು ಮುಂದೆಯೂ ಕಂಡು ಅರಿಯದ, ಕಾಣಲಾರದ ಯುದ್ಧದಲ್ಲಿ ಜಗದೇಕ ವೀರನಾದ ರಘುಕುಲ ಲಲಾಮನನ್ನು ಗೆಲ್ಲುತ್ತೇನೆ. ಗೆದ್ದು, ಸೆರೆಯಾಗಿ ತರುತ್ತೇನೆ. ಲಂಕೇಶ್ವರನ ಸರ್ವ ಗರ್ವವನ್ನು ಇನ್ನಿರದೆ ಸೋಲಿಸಿದ ಮೈಥಿಲಿಗೆ ಕಪ್ಪವೆಂದು ಕಾಣಿಕೆಯನ್ನು ಒಪ್ಪಿಸುತ್ತೇನೆ. ಅದು ಆ ಭವ್ಯ ದಿವ್ಯ ದೃಶ್ಯ!'

ಅಣ್ಣನ ಆ ನುಡಿಗಳನ್ನು ಕೇಳಿ ಚಂದ್ರನಖಿಯ ಮೈ ರೋಮಾಂಚನಗೊಂಡಿತು. ಕಣ್ಣೀರು ತುಳುಕುತ್ತಿರಲು ತತ್ತರಿಸಿದಳು. ಮತ್ತೆ ಮೊಳಕಾಲೂರಿ ನಮಸ್ಕರಿಸುತ್ತ ಹೇಳಿದಳು:

'ನಿಜ, ನಿಜವಾಗಿಯೂ ನೀನು ಮಹಾಕವಿ! ಬರಿ ಕಲ್ಪನೆಯಲ್ಲಿ ಅಲ್ಲ, ಈ ಜಗತ್ತಿನ ರಂಗದಲ್ಲಿ ನೀನು ನಿಜವಾಗಿಯೂ ಕೃತಿಗಳನ್ನು ಕೊರೆಯುವ ಮಹಾಶಿಲ್ಪಿ!'

ಮತ್ತಮೀ ಸೀತೆಯಂ ಬೇಡಿ ಪಡೆವೆನಿಷ್ಟಾರ್ಥಮಂ.

'ತಾಳು! ತಾಳು! ಋತ ಪ್ರತಿಭೆಯು ಕವಿ ಪ್ರತಿಭೆಯಂತೆ ಅಲ್ಲ. ಅದಕ್ಕೆ ದಶಮುಖ, ಶತಮುಖ, ಬಹುಮುಖ, ಅನಂತಮುಖ! ತಂಗಿಯೆ ಕೇಳು, ನಾನಿನ್ನೂ

ಜಾನಕಿಯಲ್ಲಿ ಸೋಲೊಪ್ಪಿಕೊಂಡಿಲ್ಲ. ಆ ಸೋಲಿನಲ್ಲಿಯೆ ನನ್ನ ಗೆಲುವು ಇದೆ. ಇಂದು ನನ್ನ ಮೂಲಬಲಗಳನ್ನೆಲ್ಲ ಯುದ್ಧಕ್ಕೆ ಸಜ್ಜುಗೊಳಿಸುತ್ತೇನೆ. ಇಂದು ನಾನು ವಾನರರಿಗೆ ಅವರು ಹಿಂದೆಂದೂ ಕಾಣದ ಒಂದು ಅತಿ ಪರಾಕ್ರಮವನ್ನು ತೋರಿಸುತ್ತೇನೆ. ನನಗೆ ಬ್ರಹ್ಮನಿಂದ ಒಂದು ಶ್ರೇಷ್ಠವಾದ ವರ ಪ್ರಾಪ್ತವಾಗಿದೆ. ಅದರ ಬಲದಿಂದ ನನ್ನ ಮೂಲ ಬಲದ ನಾನೇ ಒಬ್ಬೊಬ್ಬನೂ, ಎಲ್ಲರೂ ಮತ್ತು ಸರ್ವವೂ ಆಗಿ ದಶಮುಖನೆಂಬ ಬಿರುದು ಶತಮುಖವಾಗುವಂತೆ ಕಾದಾಡುತ್ತೇನೆ... ಮತ್ತೆ ಈ ಸೀತೆಯನ್ನು ಬೇಡಿ ಇಷ್ಟಾರ್ಥವನ್ನು ಪಡೆಯುತ್ತೇನೆ.'

ಎಂದು ಹೇಳಿ ತುಸು ಹೊತ್ತು ಮೌನಿಯಾದನು. ಅನಂತರ ಮಾತು ಮುಂದುವರಿಸಿದನು.

'ಅತಿಕಾಯ, ಇಂದ್ರಜಿತು ಮಡಿದರೇನು? ಮೈ ಬಿಟ್ಟರು ಅಲ್ಲವೆ? ಸಹೋದರಿ, ನೀನು ಭಯಪಡಬೇಡ. ಅಳದಿರು! ಅಂಜದಿರು! ನಿನ್ನ ಸಹೋದರ ಸಿಡಿಲಾಳು ಎಂದು ತಿಳಿ!... ಏಳು ತಂಗಿ, ನನಗೇಕೊ ಬಾಯಾರುತ್ತಿದೆ ಕುಡಿಯಲೇನಾದರು ತೆಗೆದುಕೊಂಡು ಬಾ... ಕೇಳು, ರಣಭೇರಿ ಮೊಳಗುತ್ತಿದೆ!...'

ಚಂದ್ರನಖಿಯು ನೆನೆದ ಕಣ್ಣುಗಳನ್ನು ಒರಸಿಕೊಳ್ಳುತ್ತ ತಣ್ಣನೆಯ ನೀರಿನಲ್ಲಿ ಮುಳುಗಿಸಿಟ್ಟಿದ್ದ ಸೋಮರಸವನ್ನು ತಂದುಕೊಟ್ಟಳು. ಮಂಡೋದರಿ ಪ್ರಿಯನು ಅದನ್ನು ಕುಡಿಯುತ್ತ

'ತಂಗಿ, ಹೋಗಿ ನಿನ್ನ ಅತ್ತಿಗೆಯನ್ನು ಸ್ವಲ್ಪ ನೋಡಿಕೊ. ಜರ್ಜರಿತಳಾಗಿದ್ದಾಳೆ.'

ಎಂದು ಹೇಳಿ ನಿಟ್ಟುಸಿರು ಬಿಡುತ್ತ ಮಾತು ಮುಂದುವರಿಸಿ ಹೇಳಿದನು: 'ಒಬ್ಬನೆ ಮಗನ ಸಾವು ಕೇಳಿ!'

ಕಂಠ ಬಿಗಿದು ಬಂದು ಸುಮ್ಮನಾದನು. ತುಸು ಹೊತ್ತಿನ ನಂತರ ನುಡಿದನು. 'ನಮ್ಮ ಸಂವಾದವನ್ನು ನೀನು ಅವಳಿಗೆ ಹೇಳಬೇಡ.'

ಹಾಗೆ ಹೇಳಿ ಸ್ವಲ್ಪ ಸಮಯದ ನಂತರ ಆಲೋಚಿಸುತ್ತ ಮತ್ತೆ ಹೀಗೆ ಹೇಳಿದನು:

'ನೀನು ಹೇಳಿದರೆ ನನಗೇನು ಚಿಂತೆ? ಹೇಳಬೇಡ ಎಂದು ಹೇಳಿದರೆ ನೀನು ಹೇಳದೆ ಇರುವೆಯಾ? ಕೊನೆಗೆ ನೀವೇ ಗೆಲ್ಲುವಿರಿ! ನಿಮ್ಮದು ಒಳಸಂಚು! ತನ್ನವರು ಗೆಲ್ಲುವುದಾದರೆ ತಾನು ಸೋಲುವುದು ಜಯವೆ!'

* * *

ಈ ಮೇಲಿನ ಕಾವ್ಯಭಾಗ-ರಾವಣನು ತನ್ನ ತಪ್ಪಿನ ಕಾರಣದಿಂದ ಸಾಂಸಾರಿಕ ತೊಂದರೆಗೆ ಮಗನ ಆಪ್ತರ ಮರಣಕ್ಕೆ ಒಳಗಾಗಿ ಮಾನಸಿಕ ಆಘಾತಕ್ಕೆ ಒಳಗಾಗುವ ಚಿತ್ರಣ. ಅದು ಅವನು ಅ ಪೆಟ್ಟಿನಿಂದ ಸದೃಢಗೊಂಡು ಒಳಿತಿನ ಕಡೆಗೆ ಬಾಗುವ ದರ್ಶನ. ಇಂತಹ ಕುಶಲ ಕಾವ್ಯ ಕುಸುರಿಯ ರಸಾನಂದದಲ್ಲಿ ಲೀನವಾಗುವುದೇ ಮೌನ ವಿಮರ್ಶಾಸುಖ. ಇದು ಕುವೆಂಪು ಅವರು ರಾವಣನ ರಾವಣತ್ವವನ್ನು ಇಲ್ಲವಾಗಿಸಿದ, ಅಂತಃಕರಣ ಕಲಕುವ, ಆತ್ಮಶೋಧಕ್ಕೆ ಒಳಗಾಗಿಸಿದ ಘಟನಾವಳಿಗಳ ಭವ್ಯ ಕಥಾರೂಪಕ.

❖❖❖

ತಂದೆನೇ ಸುಂದರಿಯ ರೂಪದೀ ಸೀತಾ ಶ್ಮಶಾನಕಾಳಿಯ

ಲಂಕಾನಗರದ ಬಯಲಿನಲ್ಲಿ ದೈತ್ಯೇಂದ್ರನ ಮೂಲಬಲ ನೆರೆಯಿತು. ಮಹೋದರ, ಸುಪ್ತಘ್ನ, ಮಕರಾಕ್ಷ, ರಾಹುರೋಷ, ಸೂರ್ಯಶತ್ರು, ಶೋಣಿತಾಕ್ಷ, ಬ್ರಹ್ಮಾಕ್ಷ, ಅಗ್ನಿಕೇತು ಮೊದಲಾದ ಮಹಾಸೇನಾಪತಿಗಳು ತಮ್ಮ ತಮ್ಮ ದಳಗಳೊಡನೆ ಸಾವು ಬದುಕಿನ ಕೊನೆಯ ಘೋರ ರಣಕ್ಕೆ ಅಗ್ರ ಪಂಕ್ತಿಯಲ್ಲಿ ನಿಂತಿದ್ದರು. ಅತ್ತ ಪುತ್ರ ವ್ಯಸನದಿಂದ ಸೊರಗಿದ ರಾವಣನು ತನ್ನ ಹೃದಯರಂಗದ ರಣ ತುಮುಲವನ್ನು ರಣ ವಸ್ತ್ರ ಭೂಷಣಗಳಿಂದ ಮರೆಸಿದನು. ಧೈರ್ಯ ರವಿ ರಶ್ಮಿ ಕೋಟಿಯನ್ನು ಸುರಿಸುವ, ಸೂರ್ಯ ಸದೃಶನಾದ ಭೀಮದರ್ಶನ ಶರೀರದ ಅವನು ನಿರಾಶೆಯ ಮೇಘಗಳನ್ನು ನೂಕಿ ನಡೆದನು.

ವಾದ್ಯ ಘೋಷಗಳ ಮಧ್ಯೆಸಾಗಿ ಉನ್ನತ ವೇದಿಕೆಯನ್ನು ಏರಿ ನಿಂತನು. ವೀರ ಸಹಜಾವೇಶಕ್ಕೆ ಒಳಗಾದನು. ತನ್ನೊಡೆಯ ನೃಪ ಚಂದ್ರನನ್ನು ಕಂಡು ಸೇನೆಯ ಕಡಲು ಉತ್ಸಾಹದಿಂದ ಉಕ್ಕಿತು. ಸೇನೆಯನ್ನುದ್ದೇಶಿಸಿ ಮಾತನಾಡುತ್ತ,

‘ಸಾವಿರ ವರ್ಷದ ಘೋರ ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ದಿವ್ಯವರಗಳನ್ನು ಪಡೆದಿರುವೆನು. ಹಾಗೆ ಪಡೆದ ವರಗಳಲ್ಲಿ ಅದ್ಭುತವಾದ ವರವೆಂದರೆ ಸೈನ್ಯದ ಪ್ರತಿಯೊಬ್ಬ ಸೈನಿಕನಲ್ಲಿಯೂ ತಾನಿದ್ದು, ಶತ್ರುವಿಗೆ ಅಸಂಖ್ಯಾತ ರಾವಣರಂತೆ ಕಾಣುವುದಾಗಿದೆ. ಅದರಿಂದ ಪ್ರತಿಯೊಬ್ಬರೂ ನನ್ನಂತೆ ತಗ್ಗದ ಉತ್ಸಾಹದಿಂದ ಯುದ್ಧವನ್ನು ಎದುರಿಸುವುದು ಸಾಧ್ಯ. ಈ ಸೇನೆಯಲ್ಲಿ ಪ್ರತಿಬಿಂದುವು ಸಿಂಧು.’

ಅದನ್ನು ಕೇಳಿ ಸೇನೆ ಜಯಘೋಷ ಮಾಡಿತು. ಹೇರಾನೆ ಘೀಂಕರಿಸಿ, ಅಶ್ವಗಳು ಕೆನೆದು, ರಥಗಳು ಚೀತ್ಕರಿಸಿ ಧರೆ ಕಂಪಿಸುವಂತೆ ಸೇನೆಯು ಕೋಟೆ ಬಾಗಿಲನ್ನು ದಾಟಿ ಹೊರಟಿತು.

ರಾವಣನ ಆ ಮೂಲಬಲವು ವಾನರರ ದಾವಾನಲವನ್ನು ನಂದಿಸುವ ದೃಢ ಧೀರ ನಿಶ್ಚಯದಿಂದ ಮುನ್ನಡೆಯುತ್ತಿರಲು ದಶಮುಖನು ಮಂದಸ್ಮಿತನಾದನು. ಹಾರುವ ಮುನ್ನ ಸೊಡರ ಕಿಡಿಯು ಉಜ್ವಲಿಸುವಂತೆ ಅವನಲ್ಲಿ ತೆಕ್ಕನೆ ಮೈಥಿಲಿಯ

ಮ್ಮೆ ಆಸೆ ಉಕ್ಕಿತು. ಅವನು ಮೊದಲಿನ ಮನೋರಥದ ಯೋಗ್ಯ ಮಾರ್ಗವನ್ನು ಮರೆತನು. ಮತ್ತೊಮ್ಮೆ 'ಅವಳ ಹೃದಯದಾಳವನ್ನು ಪರೀಕ್ಷಿಸುತ್ತೇನೆ.' ಎಂಬ ನೆವವನ್ನು ಕಾರಣವಾಗಿಟ್ಟುಕೊಂಡು ಹೊರಟನು.

ತನ್ನ ತಿಳಿಯಾಳದಿಂ, ಕದಡು ಬಗೆ ತಿಳಿವಂತೆ, ಬಾನ್ ತೊಳೆದುದಾತ್ಮಮಂ!

ಮಾಯೆಯು ಕಟ್ಟಿದ ಮೂಗುದಾರದ ನಿಶಾಚರನು ಸ್ವತಂತ್ರದ ಭ್ರಮೆಯಲ್ಲಿ ವಿಧಿತಂತ್ರ ಪಶುವಿನಂತಾದನು. ಅವನು ಅಶೋಕವನದ ಯಾಗಮಂಟಪದ ಭೋಗ ಯಜ್ಞಸ್ತಂಭದ ಹತ್ತಿರದ ಹಸುರಿನಂತಹ ಪತಿವ್ರತಾ ರೂಪ ದರ್ಶನಕ್ಕೆ ಹೋದನು.

ಅವನು ಸೀತಾ ಕುಟೀರವಿದ್ದ ಎತ್ತರದ ಸ್ಥಳಕ್ಕೆ ಹೋದ ತಕ್ಷಣ ಅವನ ಆತ್ಮದಲ್ಲಿ ಶಾಂತಿ ಭಾವವು ತುಂಬಿತು. ಯುದ್ಧವನ್ನು ಮರೆತ ಚೇತನಕ್ಕೆ ಶುದ್ಧ ಬುದ್ಧಿಯ ಮನಶ್ಶಾಂತಿ ಉಂಟಾಯಿತು. ಬಹುಕಾಲದಿಂದ ತಾನು ಆಲಿಸಿದ ಪಕ್ಷಿಯ ಇಂಚರ ಕಿವಿಗೆ ಕೇಳಿಸಿತು! ಕಡಲ ನೀಲಿ ಕಂಡಿತು! ಕದಡಿದ ಮನಸ್ಸನ್ನು ತನ್ನ ತಿಳಿ ಆಳದಿಂದ ತಿಳಿಯುವಂತೆ – ಬಾನು ಆತ್ಮವನ್ನು ತೊಳೆಯಿತು! ದಿಗಂತದಲ್ಲಿ ನೆಲೆಸಿದಂತಿರುವ ಗಿರಿ ಕಂದರಗಳಿಂದ ಕೂಡಿದ ವನ ಶ್ರೇಣಿಯು ಸಾಹಸಕ್ಕೆ ಬೇರೆ ಬೇರೆ ದಾರಿಗಳಿರುವುದನ್ನು ತೋರಿಸುವಂತೆ ನೆರೆದಿತ್ತು. ತನ್ನ ಸಿರಿಯನ್ನು ಹೀಯಾಳಿಸಿ ನಗುವ ಲೋಕ ಸೌಂದರ್ಯವನ್ನು ಸುರವೈರಿ ನೆಟ್ಟಕಣ್ಣಾಗಿ ನೋಡಿದನು. ಮತ್ತೆ ಎಚ್ಚೆತ್ತುಕೊಂಡು ನಿಟ್ಟುಸಿರು ಬಿಡುತ್ತ ತನ್ನನ್ನೆ ತಾನು ಪರಿಹಾಸ್ಯ ಮಾಡಿಕೊಳ್ಳುವಂತೆ ಹೀಗೆ ಅಂದುಕೊಂಡನು:

'ಓ ಜಾಣ ಮರುಳ ರಾಕ್ಷಸೇಶ್ವರನೇ, ನಿತ್ಯವೂ ಕಣ್ಣಿಗೆ ಸಮುದ್ರದ ಸಾನ್ನಿಧ್ಯವಿರಲು; ನಿತ್ಯವೂ ನಭದ ಶುಭ ಆಶೀರ್ವಾದ ಹಸ್ತ ನೆತ್ತಿಯ ಮೇಲಿರಲು; ಧೃತಿಗೆ ಅಮೃತ ದೀಕ್ಷೆಯಂತೆ ಸುತ್ತಲೂ ವನಾದ್ರಿಗಳು ಸ್ನೇಹ ಧೈರ್ಯ ನೀಡುತ್ತಿರಲು ರಾಮಸತಿ ಇರಲಿ, ಸಾಮಾನ್ಯಳಾದರೂ ಪತಿವ್ರತಾ ನಿಷ್ಠೆಯಿಂದ ಪತಿತಳಾಗುವಳೆ?'

ಸುಯ್ದನೆವೆಯಿಕ್ಕದೆಯೆ ನಿಂದು ಕಂಡನದೊಂದು ತನಗೆ ಮಾತ್ರಮೆ ದಿಟದ ಕಣ್ಮಾಯೆಯಂ.

ಅನಂತರ ಮಂಡೋದರಿ ಪ್ರಿಯನು ಭೂಮಿಜಾತೆಯ ಭವ್ಯ ಸನ್ನಿಧಿಯೆಡೆಗೆ ನಡೆದನು. ಸೀತಾದೇವಿಯನ್ನು ಸೆರೆಯಿಟ್ಟಿರುವ ಕೋಡುಗಲ್ಲು ಇನ್ನೂ ದೂರವಿರಲು ಅವನು ನಿಂತನು; ಬೆಚ್ಚಿದನು; ಆ ಕಡೆಯೆ ನೆಟ್ಟ ದೃಷ್ಟಿಯಿಂದ ನೋಡಿದನು. ಹತ್ತಿರದಲ್ಲಿದ್ದ ಸೇವಕನಿಗೆ ಕೈ ತೋರಿಸುತ್ತ ಹೇಳಿದನು;

'ಓಡು, ನಡೆ! ನೋಡಲ್ಲಿ! ಅದೇನು ಅಗ್ನಿ! ಪರ್ಣಕುಟಿಗೆ ಬೆಂಕಿ ಹೊತ್ತಿಕೊಂಡಿದೆಯೆ? ಮೇದಿನಿಯ ಮಗಳು ಬೂದಿಯಾದಳೆ ನನ್ನ ಮಹತ್ಕಾರ್ಯ ಕೆಟ್ಟಿತೆ? ಕೊನೆಗೆ ಇವಳು ಇನ್ನೊಬ್ಬ ವೇದವತಿಯಾದಳೆ? ರಾವಣನ ಆಶೆಯು ಮಣ್ಣಾಯಿತೆ? ನಾನು ಇದುವರೆಗೆ ಕೈಕೊಂಡ ಸಾಧನೆಯ ಫಲ ಕೈಗೂಡದಾಯಿತೆ? ಆ ಮಹಾಜ್ವಾಲೆ ಕಾಣಿಸುತ್ತಿಲ್ಲವೆ?'

ಬೆಪ್ಪನಂತೆ ಸುತ್ತಲೂ ನೋಡಿದ ಆಳು ಏನನ್ನೂ ಕಾಣದೆ, ಕೈ ಮುಗಿದು ನುಡಿದ:

'ಪ್ರಭೂ, ಪರ್ಣಕುಟಿಯಲ್ಲದೆ ಇನ್ನೇನು ಕಾಣಿಸುತ್ತಿಲ್ಲ!'

'ಮತ್ತೆ ಆ ಕಡೆಗೆ ಕಣ್ ಬಿಟ್ಟು ನೋಡು.'

ಎಂದು ಹೇಳುತ್ತ ರಾಕ್ಷಸನು ಪ್ರಶ್ನಿಸಿದನು:

'ಬೆಂಕಿ ಕಾಣಿಸದೆ?'

ಆ ಕಡೆಗೆ ಚೆನ್ನಾಗಿ ಕಣ್ ನೆಟ್ಟು ನೋಡಿದ ಆಳು ಹೇಳಿದ:

'ನನಗೆ ಕಾಣಿಸುತ್ತಿಲ್ಲ!'

ತನಗೆ ಮಾತ್ರವೇ ದಿಟವಾಗಿ ಕಾಣುತ್ತಿದ್ದ ಕಣ್ಮಾಯೆಯನ್ನು ನೋಡಿ, ಅವನ ಮುಖದಲ್ಲಿ ಬೆವರಹನಿಗಳಾಡಿದವು. ಕಣ್ಣಿವೆಯಿಕ್ಕದೆ ನಿಟ್ಟುಸಿರು ಬಿಟ್ಟನು. ನಿಟ್ಟುಸಿರುಗಳು ಒಂದಾದ ಮೇಲೊಂದು ಹೊಮ್ಮಿ ಬಂದವು. ಮುಖ ಸುಕ್ಕಾಯಿತು. ಲಂಕಾನೃಪನು ಸೇವಕನಿಗೆ ಬುದ್ಧಿ ವಿಕಾರಗೊಂಡವನಂತೆ ಕಂಡನು.

'ಕಾಣಿಸದೆ ನಿನಗೆ?'

ಎಂದು ಮತ್ತೊಮ್ಮೆ ಲಂಕೆಯ ದೊರೆಯು ಕೇಳಲು, ಆಳು ಹೆದರುತ್ತ ಉತ್ತರಿಸಿದನು:

'ಪ್ರಭೂ, ಶಾಂತಿಯಿಂದಿರುವ ಕುಟೀರವನ್ನು ಹೊರತುಪಡಿಸಿ ಇನ್ನೇನೂ ಕಾಣಿಸುತ್ತಿಲ್ಲ. ನನ್ನ ದೃಷ್ಟಿ ದೌರ್ಬಲ್ಯವನ್ನು ಕ್ಷಮಿಸಿ.'

ರಾಕ್ಷಸನು ನಕ್ಕನು. ತನಗೆ ತಾನೆ ಹೇಳಿಕೊಂಡನು,

'ಆ ನಿನ್ನ ದುರ್ಬಲತೆಯೆ ನನ್ನ ಮಾತ್ಸರ್ಯಕ್ಕೆ ಕಾರಣ.'

ತಂದೆನೇ ಸುಂದರಿಯ ರೂಪದೀ ಸೀತಾ ಶ್ಮಶಾನ ಕಾಳಿಯ

ಒಂದು ಅದ್ಭುತ ಚಿತಾಗ್ನಿ ಪರ್ಣಶಾಲೆಯನ್ನು ಹೊತ್ತಿತು ಆ ಕೆಂಡದುರಿಯ ನಡುವೆ ಕುಣಿಯುತ್ತಿದ್ದ ರಣಚಂಡಿಯನ್ನು ಕಂಡನು. ಅವಳು ಮಡಿದ ಲಂಕಾವೀರರ ಶತ ರುಂಡಮಾಲೆಯನ್ನು ತೊಟ್ಟಿದ್ದಳು. ಮುಂಡಗಳನ್ನು ನೇಯ್ದು ಕಟ್ಟಿದ್ದ ವಸ್ತ್ರವನ್ನು ಸೊಂಟಕ್ಕೆ ಸುತ್ತಿಕೊಂಡಿದ್ದಳು. ನೋಡುತ್ತಿದ್ದ ನೃಪನು ಅವುಗಳನ್ನು ಗುರುತಿಸಿದನು. ಕುಂಭಕರ್ಣನ ಶಿರದ ಪಕ್ಕದಲ್ಲಿಯೆ ರಕ್ತದಿಂದ ತೋಯ್ದು ಭೀಕರವಾಗಿದ್ದ ತನ್ನ ಹಸಿತಲೆಯನ್ನು ಕಂಡು ಎಚ್ಚರತಪ್ಪಿ ಕಣ್ಣು ಮುಚ್ಚಿದನು. ಸುಂದರಿಯ ರೂಪದ ಸೀತಾ ಶ್ಮಶಾನ ಕಾಳಿಯನ್ನು ತಂದೆನೇ ಎಂದು ತನ್ನೊಳಗೆ ತಾನು ನೊಂದುಕೊಂಡನು. ಹಿಂಜರಿದು ಅರಮನೆಗೆ ಹಿಂದಿರುಗಿದನು!

ಕಡಿದುದಾತನ ಸೂತ್ರ ಮಾಯೆ

ತ್ರಿಜಟೆಯು ರಾವಣ ಬಂದುದನ್ನು ಮತ್ತು ಅವನು ಹತ್ತಿರಕ್ಕೆ ಬಾರದೆ ದೂರದಿಂದಲೇ ಹಿಂತಿರುಗಿದುದನ್ನು ನೋಡಿದಳು. ಅದನ್ನು ಅವನಿಜೆಗೆ ತಿಳಿಸಿದಳು. ಧ್ಯಾನಸ್ಥಳಾದ ಸೀತೆಯು ಗಂಭೀರ ಮುಖಭಾವದಲ್ಲಿ ನುಡಿದಳು:

'ಅನಲೆಯ ಪ್ರಾರ್ಥನೆಯು ಫಲಿಸಿತು. ಅವನು ಇನ್ನು ಈ ಜನ್ಮದಲ್ಲಿ ಇಲ್ಲಿಗೆ ಬರುವುದಿಲ್ಲ! ತ್ರಿಜಟೆಯೇ, ಅವನ ಸೂತ್ರ ಮಾಯೆ ಕಡಿದು ಹೋಯಿತು. ಆದ್ಯಶಕ್ತಿ ಜಗದಂಬೆಯು ಜೀವಿಗಳ ಪಟ ಆಡಿಸುತ್ತಾಳೆ. ಇನ್ನು ರಾಕ್ಷಸನ ಬಾಳಿನ ಪಟ ಮೃತ್ಯುವಶವಾಗಿದೆ. ಮುಕ್ತಿಯು ಮೋಕ್ಷಾಪೇಕ್ಷೆಯಿಂದ ಕೂಡಿರುವವರನ್ನು (ಮುಮುಕ್ಷು) ಮಾಯೆಯ ರೀತಿ ಪೀಡಿಸಿ ಸುಲಭ ಪಥದಲ್ಲಿ ಶೀಘ್ರವಾಗಿ ತನ್ನೆಡೆಗೆ ಸೆಳೆಯುತ್ತದೆ!'

ತಪಸ್ವಿನಿಯ ಧ್ವನಿ ಶಕ್ತಿಗೆ ಅಚ್ಚರಿಗೊಂಡು ತ್ರಿಜಟೆ ಕೇಳಿದಳು:

'ಮಹಾ ತಾಯಿ, ನೀನಾರು? ನಿನ್ನ ಸಾನ್ನಿಧ್ಯದ ಭೀಷ್ಮ ಪ್ರಭಾವದಿಂದ ನನ್ನ ಮನಸ್ಸು ಹೆದರುತ್ತಿದೆ! ನೀನು ಹೇಳಿದ ಆದ್ಯ ಶಕ್ತಿಯೇ ನೀನು! ಮಾತಾಯಿ, ನಾನು ಮೂರ್ಖಳು, ನಿನಗಿದೊ ನಮಸ್ಕಾರ! ಸಾವಿರ ನಮಸ್ಕಾರ!'

ಅಡಿಗೆರಗಿದ ತ್ರಿಜಟೆಯ ಮುಡಿಯನ್ನು ನೇವರಿಸಿ ತಾಯಿ ಸೀತಾದೇವಿಯು ಹರಸಿದಳು. ಸಾಂತ್ವನ ವಚನ ಸುಧಾವೃಷ್ಟಿಯನ್ನು ಹರಿಸಿದಳು:

ಆವುದಾಗಲಿ ನೆಪಂ ಫಲಧಾಯಕಂ ತಪಂ

'ಅಸುರ ಸಖಿಯೆ ಹೇಳು, ನಿನಗೇಕೆ ಈ ಭಾವ ಗದ್ಗದ? ನಾನು ಜನಕನ ಮಗಳು, ಧರೆಯಲ್ಲಿ ಹುಟ್ಟಿದವಳು, ರಘುರಾಮನ ಸತಿ! ಕೆಳದಿಯೆ, ನೀನು ನನ್ನವಳು, ನಿನಗೇಕೆ ಹೆದರಿಕೆ? ನನಗೆ ಉಂಟಾದ ಒಂದು ನವ್ಯ ಸಾಕ್ಷಾತ್ಕಾರವನ್ನು ನಿನಗೆ ಹೇಳುತ್ತೇನೆ, ಕೇಳು.

'ನೆಪ ಯಾವುದೇ ಆಗಲಿ, ತಪಸ್ಸು ಫಲದಾಯಕವಾದುದು. ಮಂಥರೆಯ ಕಾರಣವಾದ ಈ ಬೃಹತ್ ದುರ್ಘಟನೆಯು ನಿನಗೆ, ರಘುನಾಥನಿಗೆ ಮತ್ತು ರಾಕ್ಷಸೇಂದ್ರನಿಗೆ ಮೂವರಿಗೂ – ಅವರವರ ಕರ್ಮಾನುಸಾರಿ ಜನ್ಮೋದ್ದೇಶ ಸಾಧನೆಗೆ ಮತ್ತು ಆತ್ಮ ವಿಕಸನದ ಪರಿಣಾಮ ಸಿದ್ಧಿಗೆ ಸಹಾಯವಾಗಿದೆ. ಇನ್ನೆಷ್ಟು ಜೀವರಿಗೆ ಅವರವರ ಕರ್ಮಕ್ಷಯಕ್ಕೆ ಮತ್ತು ಧರ್ಮಾಭ್ಯುದಯಕ್ಕೆ ನಿಮಿತ್ತವಾಗಿದೆಯೊ ಹೇಳುವವರು ಯಾರು?'

'ಅಂತಹ ಜೀವರಲ್ಲಿ ನಾನೂ ಒಬ್ಬಳು. ನಾನು ಲಂಕೇಶ್ವರನಿಗೆ ಕೃತಜ್ಞಳು. ಅವನಿಂದಲೇ ನನಗೆ ನಿನ್ನ ಸೇವಾಭಾಗ್ಯ ದೊರೆಯಿತು. ನಾನೆಲ್ಲಿ? ನೀನೆಲ್ಲಿ? ನಮ್ಮಿಬ್ಬರ ಮಧ್ಯೆ ಲಂಕೆ ಮತ್ತು ಅಯೋಧ್ಯೆಗಳ ಅಂತರ. ಆ ದಶಗ್ರೀವನ ಸಾಹಸವಿಲ್ಲದಿದ್ದರೆ ನನಗೆ ನಿನ್ನ ದರ್ಶನ ಲಭಿಸುತ್ತಿತ್ತೆ?'

'ತ್ರಿಜಟೆಯೆ, ಆ ಪರಮಸತ್ಯವು ಕೊನೆಯಲ್ಲಿ ತಿಳಿಯುತ್ತದೆ. ಅಂದು ಅಗೋಚರವಾಗಿದ್ದದ್ದು ಇಂದು ಆತ್ಮ ಗೋಚರವಾಗಿದೆ. ನಾನು ಇಂದು ಅಂದಿನವಳಲ್ಲ. ರಾಮಧ್ಯಾನ ಮಹಿಮೆಯ ನಿರಂತರ ತಪಸ್ಯೆಯಿಂದ ನನಗೆ ಅಲೌಕಿಕ ಸಿದ್ಧಿ ಲಭಿಸಿದೆ. ರಾಮನನ್ನು ಆತ್ಮದಿಂದ ಅರಿತಿದ್ದೇನೆ. ಅವನು ತನ್ನ ನಿತ್ಯ ವಿಭೂತಿಯಿಂದ ಪರಬ್ರಹ್ಮನಾಗಿರುವನು. ಅವನು ಸರ್ವ ಸೃಷ್ಟಿಯ ಲೀಲಾ ವಿಭೂತಿಯು ಆಗಿರುವನು. ಈ ಸಮಸ್ತ ಲೋಕವು ರಾಮಮಯವಾಗಿದೆ.

'ಸಖಿಯೇ, ನಿನ್ನಂತೆ ನಾನು ಮಯನ ಮಗಳ ಪತಿಗೆ ಕೃತಜ್ಞಳಾಗಿದ್ದೇನೆ! ಋತದ ರೀತಿಯಲ್ಲಿ ರಾವಣನಿಗೆ ಒಳಿತಾಗುತ್ತದೆ!...'

ಪೂಜೆ ತಾಂ ಶಕ್ತಿ

ಹಾಗೆ ಹೇಳುತ್ತ ಸೀತೆ ಅಂತರ್ಮುಖಿಯಾದಳು. ಮಾತು ನಿಂತಿತು. ಬೆದರುಗಣ್ಣಿನಿಂದ ದೂರದಲ್ಲಿರುವ ಏನನ್ನೊ ನೋಡುತ್ತ, ಅದನ್ನು ಸ್ವಾಧೀನಪಡಿಸಿಕೊಳ್ಳುವವಳಂತೆ ಮಾತಾಡಿದಳು.

'ತ್ರಿಜಟೆ, ಬೇಗ ಪುಷ್ಪ ತೀರ್ಥಗಳನ್ನು ತೆಗೆದುಕೊಂಡು ಬಾ! ಈ ರಾಮ ಉಂಗುರವನ್ನು ಪೂಜಿಸಬೇಕಾಗಿದೆ. ಸ್ವಾಮಿಯು ದುರ್ಧರ ಮಹತ್ಕಾರ್ಯವನ್ನು

ಕೈಗೊಂಡಿದ್ದಾನೆ. ಕಪಿ ಸೇನೆಯು ಯಮನ ದವಡೆಗೆ ಸಮನಾದ ವಿಪತ್ತಿನ ಕಾಡ್ಗಿಚ್ಚಿನ ಮಧ್ಯೆ ಸಿಕ್ಕಿಕೊಂಡಿದೆ. ಕಪಿಧ್ವಜದ ಸೇನಾನಾಯಕರು ಆ ರಾವಾಣಾಗ್ನಿಯಲ್ಲಿ ನುಗ್ಗಿ ಚಿಟ್ಟೆಗಳಂತೆ ಸೀದು ಸಮರ ದೇವತೆಗೆ ತಮ್ಮ ಪ್ರಾಣಗಳನ್ನು ಅರ್ಪಿಸುತ್ತಿದ್ದಾರೆ.

'ಪೂಜೆಯೆ ಶಕ್ತಿ. ನಾಥ ಪತಿದೇವನನ್ನು ಪೂಜಿಸಿ ನನ್ನ ಆತ್ಮಬಲವನ್ನು ನೈವೇದ್ಯವಾಗಿ ಅರ್ಪಿಸುತ್ತೇನೆ.'

ತ್ರಿಜಟೆಗೆ ಏನೊಂದು ಅರ್ಥವಾಗಲಿಲ್ಲ. ಆದರೂ ಅವಳ ಅಪ್ಪಣೆಯಂತೆ ಹೂ ನೀರುಗಳನ್ನು ಪೂಜೆಗೆ ಅಣಿಮಾಡಿದಳು.

❖❖❖

‘ಕವಿಕ್ರತುದರ್ಶನ’ದಲ್ಲಿಯ ಕನ್ನಡ ಪದಗಳ ಬೆಡಗು

ಕನ್ನಡಿಗರ ಸಾವಿರಾರು ವರ್ಷಗಳ ಜೀವನಾನುಭವದ ಅಭಿವ್ಯಕ್ತಿ ಕನ್ನಡ ಭಾಷೆ. ಅದರ ಅಂತರಾಳ ಅರಿತು ಕುವೆಂಪು ಅವರು ಮಹಾಕಾವ್ಯದಲ್ಲಿ ಕನ್ನಡ ಪದಗಳನ್ನು ಬಳಸಿರುವ ರೀತಿ ಅನನ್ಯವಾಗಿದೆ. ಅವರು ಪ್ರತಿ ನುಡಿ ಯಾವ ವಸ್ತು, ವಿಷಯ, ಸಂದರ್ಭ, ಭಾವಲಹರಿಗೆ ಸೂಕ್ತ ಎಂಬುದನ್ನು ಮಿಡಿದು ಎಚ್ಚರಿಕೆಯಿಂದ ಪ್ರಯೋಗಿಸಿದ್ದಾರೆ. ಅವು ‘ಶ್ರೀರಾಮಾಯಣದರ್ಶನಂ’ನ ರಸಗ್ರಹಣದಲ್ಲಿ ಕಲ್ಲುಸಕ್ಕರೆಯಂತಿವೆ. ಅವುಗಳ ಉಪಯೋಗದಿಂದ ಮಹಾಕಾವ್ಯವು ಭಾವ ಶ್ರೀಮಂತಿಕೆಯಿಂದ ಹಿಗ್ಗಿದೆ.

ಕುವೆಂಪು ಅವರು ಕನ್ನಡ ದೇಸಿ ಪದಗಳನ್ನು ‘ಶ್ರೀರಾಮಾಯಣದರ್ಶನಂ’ನಲ್ಲಿ ಯಥೇಚ್ಛವಾಗಿ ಬಳಸಿದ್ದಾರೆ. ಅವು ಕಥೆಯ ಆಂತರ್ಯವನ್ನು ತಿಳಿಯಲು ಉಪಯುಕ್ತವಾಗಿವೆ. ಆ ದೇಸಿ ಪದಗಳು ಈ ನೆಲದ ದುಡಿಯುವ ವರ್ಗದ ಕುಶಲ ಕಲಾನಿರ್ಮಾಣದಲ್ಲಿ ರೂಪುಗೊಂಡ ಕಲಾ ಪ್ರತಿಮೆಗಳಾಗಿವೆ. ಪ್ರತಿಯೊಂದು ಪದವು ಹಲವು ಅರ್ಥಗಳನ್ನು ತನ್ನ ಒಡಲಲ್ಲಿಟ್ಟುಕೊಂಡು ಕ್ರಿಯೆ ಹಾಗೂ ಭಾವಕ್ಕೆ ತಕ್ಕಂತೆ ಹೊರಳಿ ಹೊಳೆಯುತ್ತವೆ. ಹಾಗಾಗಿ ಅವುಗಳ ಬಳಕೆಯ ಸೂಕ್ಷ್ಮತೆ ಅರಿತು ಸಂದರ್ಭಕ್ಕೆ ಸರಿಯಾಗಿ ಅರ್ಥೈಸಬೇಕಾಗುತ್ತದೆ.

ಕುವೆಂಪು ಅವರು ಹಲವಾರು ಹೊಸ ಕನ್ನಡ ಪದಗಳನ್ನು ಸೃಷ್ಟಿಸಿ ಮಹಾಕಾವ್ಯದಲ್ಲಿ ಬಳಸಿದ್ದಾರೆ. ಅವು ಕನ್ನಡ ಪದ ಸಂಪತ್ತನ್ನು ಹೆಚ್ಚಿಸಲು ಕಾರಣವಾಗಿವೆ. ಆ ಬಗೆಯ ಪ್ರಯೋಗ ಮುಂದಿನ ಕವಿ ಸಾಹಿತಿಗಳಿಗೆ ಮಾರ್ಗದರ್ಶನವೂ ಆಗಿದೆ. ಆ ರೀತಿಯ ಪದ ಸೃಷ್ಟಿಯಲ್ಲಿ ಅವರ ಮನೋಹರ ಭಾವ ಚೈತನ್ಯದ ಪ್ರಕಾಶವಿದೆ. ಅವು ಕನ್ನಡ ಭಾಷಾ ಪರಂಪರೆಗೆ, ಸಂಸ್ಕೃತಿ, ನುಡಿ ಜಾಣ್ಮೆಗೆ ಹೊಂದಿಕೊಂಡು ಸಹಜ ನುಡಿಯೆಂಬಂತೆ ಹೊಮ್ಮಿ ಬಂದಿವೆ. ಅವು ಕನ್ನಡ ಭಾಷಾ ಬಳಕೆ ರೀತಿ ಗತ್ತಿನಲ್ಲಿ ಒಂದಾಗಿ ಔಚಿತ್ಯ ಪೂರ್ಣವಾಗಿವೆ. ಅದು ಅವರ ಭಾಷಾ ಬೆಡಗು.

ದೇಸಿ ಪದಗಳು

ಕುವೆಂಪು ಅವರು 'ಕವಿಕ್ರತುದರ್ಶನ' (ಸಂಚಿಕೆ 1) ರಲ್ಲಿ ಬಳಸಿರುವ ದೇಸಿ ಪದಗಳಲ್ಲಿ ಕೆಲವನ್ನು ಇಲ್ಲಿ ಆಯ್ಕೆ ಮಾಡಿಕೊಂಡಿದ್ದೇನೆ. ಅವುಗಳ ಅಧ್ಯಯನ ಭಾಷಾ ದೃಷ್ಟಿಯಿಂದ ಉಪಯುಕ್ತವಾಗಬಹುದೆಂದು ತಿಳಿದು ಚರ್ಚಿಸಿದ್ದೇನೆ.

ಕಣ್ಣಿ = (ದನಗಳ) ಕೊರಳಿಗೆ ಕಟ್ಟುವ ಹಗ್ಗ.

ಮಿಂಚಿದಳಕ್ಷಿ ಪಕ್ಷಿಯೋಲವಳೊಡಲ ಕಣ್ಣಿಗಣ್ಣೊಳ್ ಸಿಲ್ಕಿ ತಳ್ಳಂಕಗೊಳೆ ದೊರೆಗೆ. (1.1–389,90)

ಕೈಕೆಯು ಪಕ್ಷಿ ಕಣ್ಣಿನಂತೆ ಮಿಂಚಿದಳು. ಅವಳ ಸುಂದರ ಶರೀರವೆಂಬ ಕಣ್ಣಿಗಣ್ಣಿನಲ್ಲಿ ಸಿಕ್ಕ ದೊರೆಗೆ ಅಲ್ಲೋಲ ಕಲ್ಲೋಲವಾಯಿತು.

ಕಣಿ = ಮುಂದಿನ ಜೀವನದಲ್ಲಿ ಬರಲಿರುವುದು; ಭವಿಷ್ಯಫಲ.

ಕಣಿವೇಳ್ದರಾ ನಾಲ್ವರುಂ ನೆಲಕೊಳ್ಳಿತಂಗೆಯ್ದು, ನೆಲದರಿಕೆಯವರಾಗಿ, ನೇಸರಂ ಮೀರಿ ಪೊಳೆದಪರೆಂಬುದಂ, ಕೀರ್ತಿಯಿಂ ಮತ್ತೆ ಸಚ್ಚರಿತೆಯಿಂ. (1.1–431–34)

ಜಗತ್ತಿಗೆ ಒಳ್ಳೆಯದನ್ನು ಮಾಡಿ, ಜಗದ್ವಿಖ್ಯಾತರಾಗಿ (ನೆಲದರಿಕೆಯವರಾಗಿ), ಕೀರ್ತಿ ಮತ್ತು ಸಚ್ಚಾರಿತ್ರ್ಯದಿಂದ ಶೋಭಿಸುವರೆಂದು ಭವಿಷ್ಯ ಫಲ ಹೇಳಿದರು.

ಇಂಬು = ಇಂಪು; ಸುಖ; ಸಂತೋಷ

ತುಂಬುಪೆರೆ ಗರಿಹಗುರ ನೊರೆಮುಗಿಲಿನಂತರದೊಳಿಂಬಾಗಿ ತೇಲಿ, (1.1–317,18)

ಗರಿಹಗುರ ನೊರೆ ಮುಗಿಲಿನ ಆಗಸದಲ್ಲಿ ಪೂರ್ಣಚಂದ್ರನು ಸುಖ ಸಂತೋಷದಿಂದ ತೇಲುತ್ತ.

ಅಗೆ = 1. ಮೊಳಕೆ; ಅಂಕುರ, 2. ಸಸಿ

ಶೈಶವಂ ಕಳೆದು ಬಾಲ್ಯಂ ಮೆಯ್ಗೆ ಮೈದೋರೆ ಗುರು ವಸಿಷ್ಠನ ಕೈಯೊಳಾಳ್ವ ಪಾರ್ಥಿವ ಜನಕೆ ತಗುವ ವಿದ್ಯಾಭ್ಯಾಸದಂಕುರಕ್ಕಗೆಯಾಯ್ತು (1.1–667–69)

ನಾಲ್ವರು ಆಳುವ ರಾಜಕುಮಾರರಿಗೆ ಶೈಶವ ಕಳೆದು ಬಾಲ್ಯ ಮೈದೋರಲು ಗುರು ವಸಿಷ್ಠರ ಕೈಯಲ್ಲಿ ಸೂಕ್ತ ವಿದ್ಯಾಭ್ಯಾಸದ ಮೊಳಕೆ ಅಂಕುರವಾಯಿತು.

ಉಬ್ಬೇಳು = ಉಬ್ಬಿ ಏಳು; ನೆಗೆದು ಮೇಲಕ್ಕೆ ಏರು; ತಲೆದೋರು.

ಸಿಮಿಸಿಮಿಸಿ ಛಟಛಟಿಸಿ ಧಗಧಗಿಸುತುಬ್ಬೇಳ್ವ ರಕ್ತಾಗ್ನಿ ತಾಂಡವ ಜ್ವಾಲಾಜಲದ ಮಧ್ಯೆ (1.1–334–35)

ಸಿಮಿಸಿಮಿಸಿ ಛಟಛಟಿಸಿ ಧಗಧಗಿಸುತ್ತಾ ನೆಗೆದು ಮೇಲಕ್ಕೆ ಏಳುವ ರಕ್ತಾಗ್ನಿ ತಾಂಡವ ಜ್ವಾಲಾಜಲದ ಮಧ್ಯೆ.

ಕಡಿದು = ತೀಕ್ಷ್ಣವಾದ; ಉಗ್ರವಾದ

ಕೌಸಲೆ, ತಾಯಿ, ಮಗನುಲ್ಬಣ ಸ್ಥಿತಿಗೆ ಕಡಿದು ಕಾತರೆಯಾಗಿ (1.1–514–15)

ಮಗನ ಉಲ್ಬಣ ಸ್ಥಿತಿಗೆ ತಾಯಿ ಕೌಸಲ್ಯೆ ತೀಕ್ಷ್ಣವಾಗಿ ಕಾತರಳಾದಳು.

ಕುವೆಂಪು ಸೃಷ್ಟಿಯ ಪದಗಳು

'ಬುದ್ದಿಗೆ ಪುಷ್ಟಿ, ಭಾವಕ್ಕೆ ಕಾಂತಿ' ನೀಡುವ ಮಹಾಕಾವ್ಯದಲ್ಲಿ ಕುವೆಂಪು ಅವರು ಹಲವಾರು ಕನ್ನಡ ಪದಗಳನ್ನು ಹೊಸದಾಗಿ ಠಂಕಿಸಿದ್ದಾರೆ. ಅವು ಕಥೆಯ ವಸ್ತು, ಸಂದರ್ಭ, ಪಾತ್ರದ ಮನಸ್ಥಿತಿ, ಭಾವದ ಓಟವನ್ನು ಸಮರ್ಥವಾಗಿ ಅಭಿವ್ಯಕ್ತಿಸಿವೆ. ಅರ್ಥದ ಹಸಿರನ್ನು ಚಿಗುರಿಸಿವೆ. ಅಂತಹ ಕೆಲವು ಪದಗಳನ್ನು ಈ ಕೆಳಗೆ ನೀಡಲಾಗಿದೆ.

ಬಾಳ್ಗಬ್ಬ : ಕುವೆಂಪು ಅವರು ಬಾಳು ಮತ್ತು ಗಬ್ಬ ಪದಗಳನ್ನು ಕೂಡಿಸಿ 'ಬಾಳ್ಗಬ್ಬ'ವಾಗಿಸಿದ್ದಾರೆ.

ಗಬ್ಬ = ಬಸಿರು; ಗರ್ಭ.

ಬಾಳ್ಗಬ್ಬದೊಳ್ ಕರುಣೆ ತಾಂ ಬೇನೆಗುದಿದೊಡಮಲ್ತೆ ಮೆರೆದಪುದು ಪೊರಪೊಣ್ಮುತಾ ಮಹಾಕಾವ್ಯ ಶಿಶು ತಾಂ ಚಾರು ವಾಗ್‌ವೈಖರಿಯ ಛಂದಶ್ಶರೀರದಿಂ? (1.1–32–34)

ಬಾಳು ಎಂದರೆ ಬದುಕು; ಜೀವಿಸು. ಅದು ಹೊಟ್ಟೆ ಹೊರೆಯುವ ಅರ್ಥ ಹೊಂದಿದ್ದರು ಆಂತರ್ಯದಲ್ಲಿ ನೆಮ್ಮದಿ ಸುಖದಿಂದ ಸಂತುಷ್ಟವಾಗಿರು ಎಂಬ

ಧ್ವನಿ ಹೊಂದಿದೆ. ನೇಗಿಲಿನ ಗುಳಕ್ಕೆ 'ಬಾಳು' ಎಂದು ಕರೆಯುವರು. ಚಾಮರಾಜನಗರದ ಕಡೆ ಮಳೆಬಿದ್ದಾಗ ಹೊಲ ಊಳಲು 'ಬಾಳುಹೊಡೆ' ಎಂದು ಹೇಳುತ್ತಾರೆ. 'ಬಾಳು' ಎಂದರೆ 'ಉಳುಮೆ.' ವ್ಯವಸಾಯ ಸಂಸ್ಕೃತಿಯ ಫಲ. ಉತ್ತರ ಕನ್ನಡದಲ್ಲಿ ಹೆಣ್ಣುಮಕ್ಕಳಿಗೆ 'ಬಾಳು,' ಎಂದು ಹೆಸರಿಡುವರು. ಜಿ. ಎಚ್. ನಾಯಕ ಅವರ ಆತ್ಮಕಥೆ 'ಬಾಳು'. ಅವರ ತಾಯಿಯ ಹೆಸರು 'ಬಾಳು'.

ಬೇಂದ್ರೆಯವರು ಬದುಕು ಮತ್ತು ಬಾಳು ಕುರಿತು ಹೀಗೆ ಚಿಂತನೆ ನಡೆಸಿದ್ದಾರೆ: 'ಬದುಕಲು ಶಿಕ್ಷಣಬೇಕು, ಬಾಳಬೇಕಾದರೆ ಸಂಸ್ಕೃತಿ ಬೇಕು. ಕನ್ನಡದಲ್ಲಿ ಬದುಕುವುದು ಬಾಳುವುದು ಅಂತ ಮಾತು ಇವೆ. ಬದುಕುವವರೆಲ್ಲ ಬಾಳು ಮಾಡುವುದಿಲ್ಲ.' (ಮಾತೆಲ್ಲ ಜ್ಯೋತಿ: ಬದುಕು ಬಾಳು)

ಸಂಸ್ಕೃತಿಯ ಪರಿಣಾಮವಾದ ಬಾಳಿನ ಗರ್ಭದಲ್ಲಿ ಕರುಣೆ ಬೇನೆ ಗುದಿಗೊಳಗಾಗಿ ಚೆಲುವಾದ ವಾಗ್ವೈಖರಿಯ ಛಂದಃಶರೀರವನ್ನು ಹೊಂದಿ ಮಹಾಕಾವ್ಯ ಶಿಶುವಾಗಿ ಅವತರಿಸುತ್ತದಲ್ಲವೇ?

* * *

'ಬಾಳ್ಗಬ್ಬ' ಪದವನ್ನು ಬಾಳ್ + ಕಬ್ಬ ಎಂದು ಅರ್ಥೈಸಬಹುದು.

ಕಬ್ಬ = ಕಾವ್ಯ; ಕವನ.

ಬಾಳ್‌ಕಬ್ಬವೆಂದರೆ 'ಜೀವನವೇ ಕಾವ್ಯ.'

ಬೇನೆ ಕರುಣಾಮೈತ್ರಿಯಿಂದ ಬಾಳ್ಗಬ್ಬವಾಗಬೇಕು.

ಬೇಂದ್ರೆಯವರು ತಮ್ಮ ಪಾಡನ್ನು ಹಾಡಾಗಿಸಿದರು. ಬದುಕಿನಲ್ಲಿ ಬೆಂದು ಬೇಂದ್ರೆಯಾದರು. ಅವರು ಆ ಅನುಭವವನ್ನು 'ಪಟ್ಟ ಪಾಡೆಲ್ಲವು ಹುಟ್ಟು ಹಾಡಾಗುತ ಹೊಸದಾಗಿ ರಸವಾಗಿ ಹರಿಯುತಿವೆ' ಎಂದು 'ಸಖೀಗೀತ'ದಲ್ಲಿ ಕಾವ್ಯವಾಗಿಸಿದರು.

ನೆಲದರಿಕೆ = ಲೋಕದಲ್ಲೆಲ್ಲಾ ಹರಡಿದ ಖ್ಯಾತಿ–ಪ್ರಸಿದ್ಧಿ; ಜಗದ್ವಿಖ್ಯಾತಿ.

ನೆಲದರಿಕೆ ನೇಸರ್ಬಳಿಗೆ ಕಳ್ತಲೆಯನಡಕಿ ಪೋದಂಟುತಲ್ತೆ? (1.1–216–17)

ಜಗದ್ವಿಖ್ಯಾತ ಸೂರ್ಯನ ವಂಶಕ್ಕೆ (ನೇಸರ್ಬಳಿ) ಕತ್ತಲೆಯನ್ನು ತುಂಬಿ ಹೋದಂತಲ್ಲವೆ?

ಕೊಡಗೆಚ್ಚಲ್ = ಕೊಡದಂತೆ ದೊಡ್ಡದಾಗಿರುವ ಕೆಚ್ಚಲು.

ಕಾಮಧೇನುವಿನ ಕೊಡಗೆಚ್ಚಲಂ ಪಾಲ್ಗರೆದು ಗೆಯ್ದ ಪಾಯಸಮಿದಂ (1, 1–355, 56)

ಕಾಮಧೇನುವಿನ ಕೊಡಗೆಚ್ಚಲಿನಿಂದ ಹಾಲು ಕರೆದು ಮಾಡಿದ ಪಾಯಸವಿದು.

ನೀರ್ಮುಗಿಲ್ = ನೀರಿನ ಮೋಡ; ಮೇಘ

ನೀರ್ಮುಗಿಲ್ ತವಿಸಿದುದು ಬೇಸಗೆಯ ಬೇಗೆಯಂ (1.1–394)

ನೀರಿನ ಮೋಡವು ಮಳೆಯನ್ನು ಸುರಿಸಿ ಬೇಸಗೆಯ ಬೇಗೆಯನ್ನು ತಣಿಸಿತು.

ಕೂರ್ಗೆಲಸ = ಕ್ರೂರವಾದ ಕೆಲಸ; ಕೆಟ್ಟ ಕೆಲಸ.

ಕೂರ್ಗೆಲಸದಿಂ ಪಿಂತಿರುಗುತಿರ್ದ ಪಾರ್ಥಿವನೊಳುದಿಸಿತು ಕರುಣೆ (1.1–575–76)

ಕ್ರೂರವಾದ ಕೆಲಸದಿಂದ ಹಿಂತಿರುಗುತ್ತಿದ್ದ ರಾಜನಲ್ಲಿ ಕರುಣೆ ಉದಿಸಿತು.

ಕಿರುಗಜ್ಜ = ಕಿರುಗರ್ಜನೆ; ಕಿರುಗುಡುಗು

ಗಜ್ಜ = ಗರ್ಜನೆ; ಗುಡುಗು

ಮಂದಣ ಮಹಾದುಃಖ ದಾವಾನಳಕೆ ತನ್ನ ಕಿರುಗಜ್ಜದಾ ಒಂದೆ ಕಿಡಿಯ ಮುನ್ನುಡಿಯಿಡುವ ವಿಧಿ ವಿಲಾಸದಲಿ! (1.1–586–88)

ಕಾಡು ತಾನೇ ಅಳುವಂತೆ ಅನಾಥ ಶಿಶು ರೋಧಿಸುತ್ತಿತ್ತು. ಆ ರೋದನವು ರಾಮಾಯಣ ಕಥೆಯ ಮುಂದಿನ ಮಹಾದುಃಖದ ಕಾಡಿನ ಬೆಂಕಿಗೆ ತನ್ನ ಕಿರುಗರ್ಜನೆ ಮಳೆಯಲ್ಲಿ ಹೊಮ್ಮಿಸಿದ ಮಿಂಚಿನ ಕಿಡಿ–ಮುನ್ನುಡಿಯಿಡುವ ವಿಧಿ ವಿಲಾಸದಂತಿತ್ತು!

ಕವಿಯು ಶಿಶುರೋದನವನ್ನು ಮತ್ತು ಮುಂದೆ ರಾಮಾಯಣ ಕಥೆಯಲ್ಲಿ ಎಲ್ಲರೂ ರೋಧಿಸುವುದನ್ನು ಪ್ರತಿಮಾತ್ಮಕವಾಗಿ 'ಕಿರುಗಜ್ಜ' ಪದದಲ್ಲಿ ಹಿಡಿದಿಟ್ಟಿದ್ದಾರೆ.

ಇತರ ಕಾವ್ಯಗಳಲ್ಲಿ ಬಳಕೆಯಾಗಿರುವ ಪದಗಳು

ಕನ್ನಡ ಸಾಹಿತ್ಯ ಪರಂಪರೆ ಹಿರಿದಾದುದು. ಅಲ್ಲಿ ಬಳಸಿರುವ ಪದಗಳು ಅತಿ ಸಹಜವಾಗಿ ಈ ಕಾವ್ಯದಲ್ಲಿ ತಮ್ಮ ಪ್ರಕಾಶವನ್ನು ಬೀರಿವೆ. ಅಂತಹ ಕೆಲವು ಪದ ಪ್ರಯೋಗವನ್ನು ಅಧ್ಯಯನಕ್ಕಾಗಿ ಪರಿಶೀಲಿಸೋಣ.

ನೀಡ = ಹಕ್ಕಿಯ ವಾಸಸ್ಥಾನ; ಗೂಡು.

ನೀಡದೊಳ್ ಬಳೆದು, ಕಾಡಿನಲಿ ಹಾರಾಡಿದಾ ಗರುಡ ಶಿಶು, ಗರಿ ಬಲಿತಮೇಲಲ್ಪದೇಶಂಗಳಂ ಚರಿಸಿ ತಣಿವುದೆ? (1.1–91–93)

ಗೂಡಿನಲ್ಲಿ ಹುಟ್ಟಿ ಬೆಳೆದು, ಕಾಡಿನಲ್ಲಿ ಹಾರಾಡಿದ ಗರುಡ ಮರಿಯು ಗರಿ ಬಲಿತ ಮೇಲೆ ಸಣ್ಣಪುಟ್ಟ ಪ್ರದೇಶಗಳನ್ನು ಸಂಚರಿಸಿ ತೃಪ್ತಿ ಪಡೆಯುತ್ತದೆಯೆ?

ನೇಸರ್ಬಳಿ = ಸೂರ್ಯನ ವಂಶ; ಇನಕುಲ

ನೆಲದರಿಕೆ ನೇಸರ್ಬಳಿಗೆ ಕಳ್ತಲೆಯನಡಕಿ ಪೋದಂಟುತಲ್ತೆ? (1.1–216) ('ನೆಲದರಿಕೆ' ಪದದಲ್ಲಿ ವಿವರಣೆಯಿದೆ)

ಕಣ್ಣಾಗು = ದೃಷ್ಟಿಯಿಡು; ತೀವ್ರವಾಗಿ ಬಯಸು.

ಸಂಯಮಿಗಳುಂ ಬೆಚ್ಚಿ ಕಣ್ಣಾಗಿರೆ, (1.1–330)

ಸಂಯಮಿಗಳು ಸಹ ಬೆಚ್ಚಿ ದೃಷ್ಟಿಯಿಟ್ಟು ನೋಡುತ್ತಿರಲು.

ಅಲಂಪು = ಪ್ರೀತಿ; ಸಂತೋಷ; ಸಂಭ್ರಮ.

ಪೊಣ್ಮಿದುದು ಮೈನವಿರ್ ತಿರೆವೆಣ್ಗಲಂಪಿನಿಂ, ಪಚ್ಚನೆ ಪಸುರ್ ಗರುಕೆಯಂತೆ. (1.1–402, 03)

ಭೂಮಿತಾಯಿ ರೋಮಾಂಚನಗೊಂಡು ಸಂತೋಷವು ಹಚ್ಚನೆ ಹಸುರು ಗರುಕೆಯಂತೆ ಹೊಮ್ಮಿತು.

ಪೂವಲಿ = ಹೂವುಗಳ ಮಳೆ; ಪುಷ್ಪವೃಷ್ಟಿ

ನಲಿ–ನಲಿದು ನರ್ತಿಸಿದರಪ್ಸರೆಯರೆರಚಿ ಪೂವಲಿಗಳಂ (1.1–425,26) ಅಪ್ಸರೆಯರು ಹೂಮಳೆ ಸುರಿಸುತ್ತ ನಲಿನಲಿದು ನರ್ತಿಸಿದರು.

ಬೆಳ್ವಕ್ಕ = (ಅಮಾವಾಸ್ಯೆಯ ಅನಂತರ) ದಿನದಿನಕ್ಕೆ ಬೆಳಕು ಹೆಚ್ಚಾಗುವ ದಿನಗಳು ಮತ್ತು ಆ ದಿವಸಗಳ ಕಾಲ; ಶುಕ್ಲಪಕ್ಷ.

ಇದು 'ಶುಕ್ಷಪಕ್ಷ' ಪದದ ಕನ್ನಡೀಕರಣ.

ಗೆರೆನಗೆಯ ಕಿರಿಯೊಡಲ ಪಸುಳೆದಿಂಗಳ್
ದಿನಂ ದಿನದಿನಂ ಬಳೆವಂತೆ ಬೆಳ್ವಕ್ಕದಿರುಳಿನಬ್ಬೆಯ ತೊಡೆಯ ತೊಟ್ಟಿಲಲಿ (1.1–434–36)

ಗೆರೆ = ಮಿತಿ,

ತಿಂಗಳ್, ತಿಂಗಳು = ಚಂದ್ರ; ಪರೆ.

ಮಿತಿಯಾದ ನಗೆಯ ಪುಟ್ಟ ಶರೀರದ ಹಸುಳೆ ಚಂದ್ರ ಶ್ರೀರಾಮನು ಬೆಳ್ವಕ್ಕದ ಚಂದ್ರನು ದಿನದಿಂದ ದಿನಕ್ಕೆ ವೃದ್ಧಿ ಹೊಂದುತ್ತ, ಬೆಳಕು ಹೆಚ್ಚಾಗುವಂತೆ–ತಾಯಿಯ ತೊಡೆಯ ತೊಟ್ಟಿಲಲ್ಲಿ ಬೆಳೆದನು.

ಕೋಟರ = ಮರದ ಪೊಟರೆ; ಡೊಗರು; ಟೊಳ್ಳು.

ದಿಟ್ಟಿ ಮಾಸಿದ ಕಣ್ಣ ಕೋಟರದ (1.1–549)

ದೃಷ್ಟಿ ಮಂದವಾದ ಕಣ್ಣ ಡೊಗರಿನ.

ಕುವೆಂಪು ಅವರು 'ಶ್ರೀರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಕನ್ನಡಿಗರ ಭಾವಶ್ರೀಮಂತಿಕೆಯ ನುಡಿನಿಧಿಯನ್ನು ಪ್ರತಿ ಸಾಲುಸಾಲಿನಲ್ಲಿ ಅರ್ಥಪೂರ್ಣವಾಗಿ ಮುತ್ತಿನಂತೆ ಕೋದಿದ್ದಾರೆ. ಕನ್ನಡ ಸಾಹಿತ್ಯ ಅಭ್ಯಾಸಿಗಳಿಗೆ ಅದೊಂದು ತವನಿಧಿಯಂತಿದೆ. ನಾನು 'ಶ್ರೀರಾಮಾಯಣ ದರ್ಶನಂ ಪದಾರ್ಥಕೋಶ'ವನ್ನು ರಚಿಸುವ ಪ್ರಯತ್ನದಲ್ಲಿದ್ದೇನೆ. ಸಂಶೋಧನಾ ವಿದ್ಯಾರ್ಥಿಗಳು ಮತ್ತು ಕನ್ನಡ ಕಾವ್ಯ ಸಹೃದಯರು 'ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯ ಪ್ರಕಟವಾಗಿ 70 ವರ್ಷಗಳಾಗಿರುವ ಈ ಸಂದರ್ಭದಲ್ಲಿ ಅಧ್ಯಯನ ಮಾಡುತ್ತ; ಅಲ್ಲಿಯ ಭಾಷಾ ಪ್ರಯೋಗ ಸವಿಯನ್ನು ಅನುಭವಿಸುತ್ತ; ಭಾಷಾ ಸಂಸ್ಕೃತಿಯ ಅರಿವಿಗೆ ಒಳಗಾಗಲಿ ಎಂದು ಆಶಿಸುತ್ತೇನೆ.

('ಉದಯ ವಿಕಾಸ' ಷಣ್ಮಾಸಿಕ ಸಾಹಿತ್ಯ ಸಂಸ್ಕೃತಿ ಅಧ್ಯಯನ ಪತ್ರಿಕೆ. ಜುಲೈ–ಡಿಸೆಂಬರ್ 2019. ಉದಯಭಾನು ಕಲಾಸಂಘ, ಬೆಂಗಳೂರು.)

❖❖❖

ಜನಪದ ನುಡಿ ಸಾಂಗತ್ಯ

ಪಂಚವಟಿಯ ಪರ್ಣಕುಟಿ

ಅಗಸ್ತ್ಯರ ಸೂಚನೆಯಂತೆ ನಡೆಯುತ್ತ ರಾಮ ಸೀತೆ ಲಕ್ಷ್ಮಣರು ಗೋದಾವರಿ ನದಿಗೆ ಸಮೀಪದ ಪಂಚವಟಿ ಎಂಬ ಎತ್ತರದ ಸ್ಥಳಕ್ಕೆ ಬಂದರು. ಆ ಸ್ಥಳವನ್ನು ನೋಡಿದ ಸೀತೆಯು ಪರ್ಣಕುಟಿಗೆ ಒಳ್ಳೆಯ ಆಶ್ರಯವೆಂದು ತಿಳಿಸಿದಳು. ಲಕ್ಷ್ಮಣನು ಅತ್ತಿಗೆಯ ಆಲೋಚನೆಗೆ ಒಪ್ಪಿದನು. ರಾಮಚಂದ್ರನು 'ನಿಮಗೆ ರುಚಿಸಿದುದೆ ನನಗೆ ಹಿತ. ಬನ್ನಿ, ನಾವೆಲ್ಲರೂ ಕೂಡಿ ಎಲೆಮನೆಯನ್ನು ಕಟ್ಟೋಣ' ಎಂದು ಹೇಳಿದನು. ಆಗ ಅವರು ಎಲೆಮನೆಯನ್ನು ಕಟ್ಟಿದ ರೀತಿಯನ್ನು ಕವಿ ಹೀಗೆ ವಿವರವಾಗಿ ಚಿತ್ರಿಸಿದ್ದಾರೆ:

ಬನ್ನಿಗಂಬವ ಹೂಡಿ, ಬಿದಿರಗಳು ತೊಲೆ ಮಾಡಿ,
ಹುಲ್ಲೆಲೆಗಳಂ ಹೊದಿಸಿ, ಹೆಡಗೆವಳ್ಳಿಯ ಸೀಳಿ
ಸಲಕಂ ಬಿಗಿದು ಕಟ್ಟಿ, ಹಂಬು ಬೆತ್ತವ ಕಡಿದು,
ಸಿಗಿದು, ತಟ್ಟಿಯ ಹೆಣೆದು, ತಡಿಕೆ ಗೋಡೆಯನಿಟ್ಟು,
ಬೆಳಕಂಡಿಯಂ ಬಿಟ್ಟು ಹುತ್ತದೆರೆಯಂ ಮೆತ್ತಿ,
ಕಣೆ ನೆಯ್ದ ಬಾಗಿಲಂ ಬಲಿದು, ಸುತ್ತೆತ್ತಲುಂ
ಮುಳ್ಳೊಡ್ಡನಡಿಕಿ, ಮೇಣ್ ತಡಬೆಯುಣುಗೋಲ್ಗಳಂ
ಪೂಡಿ, ವಿರಚಿಸಿದರಾಶ್ರಮವನತಿ ಶ್ಲಾಘ್ಯಮಂ
ವನ ಭೋಗ್ಯಮಂ!(1.11–59–66)

ಬನ್ನಿಮರದ ಇನ್ನೊಂದು ಹೆಸರು ಶಮೀವೃಕ್ಷ. ಹಿಂದೂಗಳು ಎಲ್ಲ ಶುಭಸಮಾರಂಭದ ಪ್ರಾರಂಭದಲ್ಲಿ ಬನ್ನಿಗಂಬ ಹೂಡಿ ಪೂಜಿಸುತ್ತಾರೆ. ರಾಮಲಕ್ಷ್ಮಣರು ಪರ್ಣಕುಟಿಯನ್ನು ಕಟ್ಟುವ ಮೊದಲು ಬನ್ನಿಗಂಬವನ್ನು ಹೂಡುತ್ತಾರೆ. ಬಿದಿರಗಳುವನ್ನು ತೊಲೆ ಮಾಡುತ್ತಾರೆ. ಅದರ ಮೇಲೆ ಹುಲ್ಲೆಲೆಗಳನ್ನು ಹೊದಿಸುತ್ತಾರೆ. ಹೆಡಗೆ ಬಳ್ಳಿಯನ್ನು ಸೀಳಿ ಪಟ್ಟಿ (ಸಲಕ)ಯನ್ನು ಬಿಗಿದು

ಕಟ್ಟುತ್ತಾರೆ. (ಸಲಕವೆಂದರೆ ಮರ ಬಿದಿರು ಮುಂತಾದುವುಗಳ ಉದ್ದವಾದ ತೆಳು ಪಟ್ಟಿ) ಹರಡಿಕೊಂಡಿರುವ ಬೆತ್ತವನ್ನು ಕಡಿದು, ಸಿಗಿದು ತಟ್ಟಿಯನ್ನು ಹೆಣೆಯುತ್ತಾರೆ. ಬೆಳಕಂಡಿಯನ್ನು ಬಿಟ್ಟು ತಡಿಕೆ ಗೋಡೆಯನ್ನು ಕಟ್ಟುತ್ತಾರೆ. ಹುತ್ತದ ಮಣ್ಣು (ಹುತ್ತದೆರೆ) ಮೆತ್ತುತ್ತಾರೆ. ಕಣೆನೇಯ್ದ ಕೋಲುಗಳನ್ನು ಜೋಡಿಸಿ ಮಾಡಿದ ಬಾಗಿಲನ್ನು ಸ್ಥಿರವಾಗಿ ಬಿಗಿಯುತ್ತಾರೆ. ಸುತ್ತಲೆಲ್ಲ ಮುಳ್ಳು ಒಡ್ಡುಗಳನ್ನು ಅಡಕುತ್ತಾರೆ. ತಡೆಬಾಗಿಲುಗಳಿಗೆ ಉಣುಗೋಲನ್ನು ಹೂಡುತ್ತಾರೆ. (ಉಣುಗೋಲು = ಮರದ ದಿಮ್ಮಿ ಅಥವಾ ಹಲಗೆಗೆ ರಂಧ್ರವನ್ನು ಮಾಡಿ ಆ ಕಡೆ ಈ ಕಡೆ ಸರಿದಾಡಿಸಲು ಬರುವಂತೆ ಸೇರಿಸಿದ ಗಳು). ಹೀಗೆ ಅತಿ ಮೆಚ್ಚುಗೆಗೆ ಒಳಗಾಗುವ ವನ ಭೋಗ್ಯವಾದ ಆಶ್ರಮವನ್ನು ನಿರ್ಮಿಸುತ್ತಾರೆ.

ಕುವೆಂಪು ಅವರು ಮೇಲಿನ ಪರ್ಣಕುಟಿ ಕಟ್ಟುವ ರೀತಿಯನ್ನು ಗ್ರಾಮೀಣ ಹಿನ್ನೆಲೆಯಲ್ಲಿ ಜನಪದರ ಆಡುನುಡಿಯ ಕ್ರಿಯಾಶೀಲ ಬಗೆಯಲ್ಲಿ ವರ್ಣಿಸಿದ್ದಾರೆ. ಅಲ್ಲಿ ಬಳಸಿರುವ ಬಿದಿರು ತೊಲೆ, ಹುಲ್ಲೆಲೆ, ಹೆಡಗೆವಳ್ಳಿ, ಸಲಕು, ಹಂಬುಬೆತ್ತ, ಸಿಗಿದು, ಹೆಣೆದು, ತಡಿಕೆಗೋಡೆ, ಬೆಳಕಂಡಿ, ಹುತ್ತದೆರೆ, ಕಣೆನೆಯ್ದ ಬಾಗಿಲು, ಮುಳ್ಳೊಡ್ಡು, ಅಡಕಿ, ತಡಬೆಯ ಉಣುಗೋಲು ಮುಂತಾದ ಪದಗಳು ಅವರ ಮಹಾಕಾವ್ಯದಲ್ಲಿ ಒಂದಾದ ಜನಪದ ನುಡಿ ಸಾಂಗತ್ಯ.

ಕುಟುರವಕ್ಕಿ

ಸಳವಂ ಕುಟುರವಕ್ಕಿಯಂ
ಬಿಡದಿರದೆ ಬೆಂಬತ್ತುತೆಳ್ಬಟ್ಟುತೊದೆವಂತೆ.(2.2–564,65)

ಕುವೆಂಪು ಅವರು ಕಾಡಿನಲ್ಲಿ ತಾವು ಕಂಡ ಕುಟುರು ಹಕ್ಕಿಯನ್ನು ಈ ಮೇಲಿನ ಸಾಲುಗಳಲ್ಲಿ ಚಿತ್ರಿಸಿದ್ದಾರೆ. ಅದು 'ಕುಟುರ್' ಎಂದು ಧ್ವನಿಮಾಡುವ ಹಕ್ಕಿ. ಮನುಷ್ಯನ ಕಾಡು ನಾಶಕ್ಕೆ ಹಲವು ಪಕ್ಷಿಗಳು ಸರ್ವನಾಶವಾಗಿರುವಂತೆ ಅದು ಇಂದು ನಾಶವಾಗಿರಬಹುದು. ಅದನ್ನು ಸಳವ–ಗಿಡುಗವು ಬಿಡದೆ ಹಿಂಬಾಲಿಸಿ ಅಟ್ಟುತ್ತ ಒದೆಯುವದನ್ನು ಇಲ್ಲಿ ಜಟಾಯುವು–ರಾವಣನು ಸೀತೆಯನ್ನು ಕದ್ದೊಯ್ಯುತ್ತಿದ್ದ ಪುಷ್ಪಕ ವಿಮಾನವನ್ನು ಅಟ್ಟಾಡಿಸಿದ್ದನ್ನು ಹೋಲಿಕೆಗಾಗಿ ನೀಡಿದ್ದಾರೆ. ಇಲ್ಲಿ ದೇಸಿ ಪಕ್ಷಿಯ ಚಿತ್ರಣಕ್ಕೆ ದೇಸಿ ಪದಗಳಾದ ಸಳವ, ಬೆಂಬತ್ತು, ಎಳ್ಬಟ್ಟು (ಬೆನ್ನಟ್ಟು)ವನ್ನು ಕವಿ ಪ್ರಯೋಗಿಸಿ ದೇಸಿ ಭಾವಕೋಶವನ್ನು ಹಿಗ್ಗಿಸಿದ್ದಾರೆ.

ಅವುಂಚು

ಅವುಂಚು, ಕವಿಚು, ಕವಚು, ಕಾಂಚು, ಕೌಚು(ಕ್ರಿ). ತಿರುವು ಮುರುವಾಗು; ಅಡಿಮೇಲಾಗು' ಬೋರಲಾಗು' ಮಗುಚು.

ಕವಿಚು, ಕವುಚು, ಕೌಚು (ಕ್ರಿ). ಹೊಂದಿಸು; ಆವರಿಸು; ಮುಚ್ಚು.

ಈ ಮೇಲಿನ ಅರ್ಥಗಳನ್ನು 'ಕವಿಚು' ಪದ ಹೊಂದಿದೆ.

ನಮ್ಮಮ್ಮ ಸಂಜೆಹೊತ್ತು ಕೋಳಿಗಳನ್ನು 'ಅವುಂಚು' ಎಂದು ಹೇಳುತ್ತಿದ್ದಳು. ನಾವು ಮಂಕರಿಯನ್ನು ಬೋರಲಾಗಿ ಮಾಡಿ ಕೋಳಿಗಳನ್ನು ಅದರಲ್ಲಿ ಕೌಚುತ್ತಿದ್ದೆವು. ಈ ಮೇಲಿನ ನಿಘಂಟಿನ ಎಲ್ಲ ಅರ್ಥಗಳನ್ನು 'ಅವುಂಚು' ಪದ ಹಿಡಿದಿಟ್ಟುಕೊಂಡಿದೆ.

ಈ 'ಅವುಂಚು' ಪದ ಗ್ರಾಮೀಣ ಜೀವನದಲ್ಲಿ ಬಳಕೆಯಲ್ಲಿರುವ ಸಹಜ ಪದ. ಅದನ್ನು ಕುವೆಂಪು ಅವರು ಮಹಾಕಾವ್ಯದಲ್ಲಿ ಬೆಳುದಿಂಗಳು ಕಿಷ್ಕಿಂಧಾ ಧಾತ್ರಿಯನ್ನು ತನ್ನ ತೆಕ್ಕೆಯೊಳಕ್ಕೆ ತೆಗೆದುಕೊಂಡುದಕ್ಕೆ ಧ್ವನಿ ಪೂರ್ಣವಾಗಿ ಪ್ರಯೋಗಿಸಿದ್ದಾರೆ.

'ಧವಳಿಸಿತವುಂಚಿ ಕೌಮುದಿ ಧೌತ ಧಾತ್ರಿಯಂ
ಸುಪ್ತಜನ ರಾತ್ರಿ.' (2.4–18, 19)

ಜನರು ನಿದ್ರಾವಶರಾಗಿರುವಾಗ ಬೆಳುದಿಂಗಳು ಬಿಳಿದಾಗಿ ಬೆಳಗುತ್ತ ಕಾಂತಿಯುತ ಪೃಥ್ವಿಯನ್ನು ಅವುಚಿತು.

ಕಾಡದಟು

ರಾಮಲಕ್ಷ್ಮಣರು ರಾತ್ರಿ ಸುಗ್ರೀವನೊಡನೆ ಮಂತ್ರಾಲೋಚನೆ ನಡೆಸಿ, ಬೆಳಿಗ್ಗೆಯೆ ಅವರಿಗಾಗಿ ಕಾದು ಕುಳಿತಿರುತ್ತಾರೆ. ಸುಗ್ರೀವನು ಬರಲು ತಡವಾದಾಗ ಲಕ್ಷ್ಮಣ ಅಣ್ಣನನ್ನು ಹೀಗೆ ಕೇಳುತ್ತಾನೆ:

'ಇನ್ನೆಗಂ

ಹೆರರ ಕಯ್ ಹಾರೈಸದೆಮ್ಮಾರ್ಪನಾಂ ನೆಮ್ಮಿ
ಮುಂಬರಿದ ನಮಗೀಗಳೇಕೀ ಕಪಿಧ್ವಜರ
ಕಾಡದಟಿನೊಂದು ಹಂಗು?'(2.6–16–19)

ನಾಗರಿಕರಲ್ಲದ ಕಾಡು ಜನರ ಪರಾಕ್ರಮವನ್ನು ತಿಳಿಸಲು ಕಾಡನ್ನು ಒಂದು ಜೀವಂತ ಚೇತನವಾಗಿ ಪರಿಗಣಿಸಿ ಅಲ್ಲಿಯ ಜನರ ಶೌರ್ಯ ಸಾಹಸವನ್ನು ವ್ಯಕ್ತಪಡಿಸಲು ಕುವೆಂಪು ಸೃಷ್ಟಿಸಿರುವ ಪದ 'ಕಾಡದಟು' ಪ್ರತಿಮಾ ಪೂರ್ಣವಾಗಿದೆ.

ಕರಡು

ಮೊಳಕೈಯನೊತ್ತಿ ಬಂಡೆಯ ಚಾಚುಡುಬ್ಬಕ್ಕೆ,
ಕರ್‌ನವಿರ ಕರಡಗಲ್ಲವನಿಳುಹುತಂಗಯ್ಗೆ(3.5–289, 90)

ಹನುಮಂತನು ಸೀತಾವಾರ್ತೆಯನ್ನು ತಿಳಿಸಿದಾಗ ಚಿಂತಾಮಗ್ನನಾಗಿದ್ದ ರಾಮನಿಗೆ ಆ ಚಿಂತೆ ದೂರವಾದುದನ್ನು ಈ ಮೇಲಿನ ಸಾಲುಗಳು ವ್ಯಂಜಿಸುತ್ತವೆ. ಇಲ್ಲಿ ಕವಿಯು ರಾಮಚಂದ್ರನ ಮುಖದಲ್ಲಿ ಬೆಳೆದ ಗಡ್ಡವನ್ನು ವರ್ಣಿಸಲು ಮಲೆನಾಡಿನ ಗ್ರಾಮೀಣ ಪದ 'ಕರಡ' ಬಳಸಿದ್ದಾರೆ. ಕರಡವೆಂದರೆ ಕಾಡು ಅಥವಾ ಬೆಟ್ಟದ ಮೇಲೆ ಬೆಳೆದು ಒಣಗಿದ ಹುಲ್ಲು.

ಗಲ್ಲದ ದಾಡಿಯನ್ನು ಸವರುತ್ತಿದ್ದರೆ ಒಣಗಿದ ಹುಲ್ಲಿನಂತಿರುತ್ತದೆ. ಮಲೆನಾಡಿನ ಜನರ 'ಕರಡ' ಪದ ಅವನ ಕೆನ್ನೆ ಗಲ್ಲದ ಗಡ್ಡಕ್ಕೆ ಪ್ರತಿಮಾತ್ಮಕವಾಗಿ ಬಳಸಿರುವುದು ಕವಿಯ ಕಾಡಿನ ಒಡನಾಟದ ಅನುಭವ.

❖❖❖

ಕೆಲವು ಟಿಪ್ಪಣಿಗಳು

ಜನಮನದ ಶಕ್ತಿ

ಭಾರತೀಯ ಕಾವ್ಯ ಪರಂಪರೆಯಲ್ಲಿ ಯಜ್ಞಯಾಗಾದಿಗಳು ಪ್ರಸ್ತಾಪವಾದಾಗ ರಾಜನಾದವನು ಭೂಸುರರು ಅಂದರೆ ಬ್ರಾಹ್ಮಣರಿಗೆ–ಅವರು ತೃಪ್ತರಾಗುವ ಹಾಗೆ ದಾನ ನೀಡಬೇಕೆಂದು ನಿರೂಪಿತವಾಗಿದೆ. ಅದನ್ನು ಬದಲಾಯಿಸಿ 'ಪ್ರಜೆಗಳಂ ಬಡವರಂ ಸತ್ಕರಿಸವರ್ಗೆ ಬಗೆ ತಣಿವವೋಲ್' ಎಂದು ಮೊದಲಿಗೆ ಪ್ರಜೆಗಳಲ್ಲಿ ಬ್ರಾಹ್ಮಣರನ್ನು ಒಂದಾಗಿಸಿ ಕಾವ್ಯ ರಚಿಸಿದವರು ಕುವೆಂಪು.

ಬ್ರಾಹ್ಮಣರ ಆಶೀರ್ವಾದದಿಂದ ಒಳಿತಾಗುತ್ತದೆ ಎಂದು ಹಿಂದಿನ ಮಹಾಕಾವ್ಯಗಳಲ್ಲಿ ಉಲ್ಲೇಖಿತವಾಗಿದೆ. ಅದನ್ನು ಬಿಟ್ಟು ಪ್ರಜೆಗಳು ಬಡವರು 'ದೊರೆಗೊಳ್ಳಿತಕ್ಕೆ!' ಎಂದು ಆಶೀರ್ವದಿಸಲು ಅದು 'ಕೃಪಣ ವಿಧಿಯಂ ಪಿಂಡಿ ತಂದೀವುದೈ ನಿನಗೆ ನೆಲದರಿಕೆಯೊಳ್ಮಕ್ಕಳಂ' ಎಂದು ಭಾರತೀಯ ಕಾವ್ಯ ಸಾಹಿತ್ಯದಲ್ಲಿ ಪ್ರಕಟಪಡಿಸಿದ ಮೊದಲಿಗರು ಕುವೆಂಪು.

ನೆಲದ ಜನರ ವಿಜ್ಞಾಪನೆಯನ್ನು ವಿಧಿ ಒಪ್ಪಿ ಒಳಿತನ್ನು ಉಂಟು ಮಾಡುತ್ತಾನೆ ಎಂದು ಹೇಳಿದ ಕವಿಯ ನುಡಿಯಲ್ಲಿ ಪ್ರಜೆಗಳಾದ ನೆಲದ ಜನರೆಲ್ಲರೂ ಒಂದೆ ಎಂಬ ಸಮಾನ ತತ್ವವಿದೆ.

'ಜನಮನದ ಶಕ್ತಿ
ಮೇಣವರಭೀಪ್ಸೆಯೆ ಮಹಾತ್ಮರಂ ನಮ್ಮೆಳೆಗೆ
ತಪ್ಪದೆಳೆತರ್ಪುದು ಕಣಾ!'(1.1–261,63)

ಮುಂಗಾರು ಮಳೆಯ ಕಟ್ಟಿರುವೆಗಳು

ಕುವೆಂಪು ಅವರು ದಶರಥನು ಅಯೋಧ್ಯೆಯಲ್ಲಿ ನಡೆಸುವ ಯಜ್ಞರಂಗಕ್ಕೆ ಬಂದು ಸೇರಿದ ಲಕ್ಷ ಲಕ್ಷ ಜನರನ್ನು ವರ್ಣಿಸಲು ಮಲೆನಾಡಿನ ಮಳೆಯ

ಕಾಲದ ಕಟ್ಟಿರುವೆಗಳನ್ನು ಉಪಮಾನವಾಗಿ ನೀಡಿದ್ದಾರೆ. ಆ ಇರುವೆಗಳನ್ನು 'ತೊಯ್ದು ಕಂಪಿನ ನೆಲದಿನುಕ್ಕೆದ್ದು ಸಾಲ್ಗೊಂಡು ಲಕ್ಕ ಲಕ್ಕಂ ಪರಿದು' ಎಂದು ಹೇಳಿದ್ದಾರೆ. ಆ ಇರುವೆಗಳು ಹೊರಟಿದ್ದು ಜೇನಿರುವ ಹುತ್ತವನ್ನು ಮುತ್ತುವ ಉದ್ದೇಶದಿಂದ ಯಜ್ಞದಲ್ಲಿ ನೀಡುವ ದಾನ ಪ್ರಜೆಗಳಿಗೆ ಬಡವರಿಗೆ 'ಜೇನು'.

ಇದೊಂದು ಮಲೆನಾಡಿನ ಅನುಭವ ಕಾವ್ಯಾನುಭವವಾಗಿ ರಸಿಕರನ್ನು ಮುಂಗಾರು ಮಳೆಯ ಇರುವೆಗಳ ಮೆರವಣಿಗೆಯ ತಾಣಕ್ಕೆ ಕೊಂಡೊಯ್ಯುತ್ತದೆ.

ಕವಿಶೈಲದುನ್ನತಿಯ ಸಂಜೆಗಿರಿನೆತ್ತಿ

ದಶರಥನು ಬೊಗಸೆಯೊಡ್ಡಿ ಯಜ್ಞಮೂರ್ತಿಯಿಂದ ಪಾಯಸದ ದಿವ್ಯ ಪಾತ್ರೆಯನ್ನು ತೆಗೆದುಕೊಂಡು ಪ್ರದಕ್ಷಿಣೆ ಹಾಕಿ ನಮಸ್ಕರಿಸುತ್ತಾನೆ. ಆಗ ತೇಜಃ ಪುಂಜ ಯಜ್ಞಮೂರ್ತಿ ಅಗ್ನಿಯ ಮೈಯ ಜ್ವಾಲೆಯಲ್ಲಿ ಅಡಗಿಕೊಂಡಂತೆ ಮರೆಯಾಗುತ್ತಾನೆ. ಅದನ್ನು ತಾನು ಕಂಡ ಪ್ರಕೃತಿಯ ಚಿತ್ರಣದೊಂದಿಗೆ ಮೇಳೈಸಿ ಕುವೆಂಪು ನೀಡಿರುವ ವರ್ಣನೆ ನಿಸರ್ಗಧ್ಯಾನದ ಪ್ರತೀಕದಂತಿದೆ.

ಅವರ ಮನೆ ಕವಿಶೈಲದ ಹಿಂಭಾಗದ ಎತ್ತರ ಪ್ರದೇಶ 'ಸಂಜೆಗಿರಿ'. ಅಲ್ಲಿ ಅವರು ಸದಾ ಸೂರ್ಯಾಸ್ತದ ಸೊಬಗನ್ನು ಸವಿಯುವ ರೂಢಿ. ಚೈತ್ರ ಸೂರ್ಯ ಮುಳುಗುವಂತೆ ಯಜ್ಞಮೂರ್ತಿ ಅಗ್ನಿಯ ನೆತ್ತರು ಕೆಂಪಿನಲ್ಲಿ ಮುಳುಗಿದ ಎಂದು ವರ್ಣಿಸಿರುವುದು ಸಹಜ ಸೊಬಗಿನ ಅನುಭವವಾಗಿದೆ.

'ದೂರದ ತರಂಗಿತ ದಿಗಂತದಲಿ ಚೈತ್ರರವಿ
ಮುಗಿಲ ನೆತ್ತರ್ಗೆಂಪಿನಲಿ ಮುಳುಗುವೋಲಂತೆ!'(1.1–368, 69)

ಪ್ರಳಯದಶನಿ

ರಾವಣನು ಸೀತೆಯ ಮೇಲಿನ ಆಸೆಯ ಕಾರಣದಿಂದ ಸೀತಾ ಸ್ವಯಂವರಕ್ಕೆ ಬಂದು ಶಿವಧನುಸ್ಸನ್ನು ಎತ್ತಲಾರದೆ ಕುಸಿದು ಬೀಳುತ್ತಾನೆ. ಅದನ್ನು ಕುವೆಂಪು ಅವರು ಉಪಮಾನದಲ್ಲಿ ಹೀಗೆ ಚಿತ್ರಿಸಿದ್ದಾರೆ:

'ಕೈಲಾಸಮಂ ಪಿಡಿದು
ತೊನೆದ ದೈತ್ಯಂ ಕುಸಿದು ಬಿದ್ದನು, ಪರ್ವತಾಗ್ರಂ
ಪ್ರಳಯದಶನಿಗೆ ಕೆಡೆದು ಬೀಳ್ವಂತೆ!'(1.2–395–97)

ರಾವಣನು ದಶಾನನ. ಅವನು ಶಿವಭಕ್ತ. ಕೈಲಾಸ ಪರ್ವತವನ್ನು ಹಿಡಿದು ಅಲ್ಲಾಡಿಸಿದ ಮಹಾಸಾಹಸಿ. ಅಂತಹವನು ಸೀತೆಯನ್ನು ಪಡೆಯಲು ಶಿವಕೋದಂಡವನ್ನು ಹೆದೆಯೇರಿಸಲು ಬರುತ್ತಾನೆ. ಬಿಲ್ಲಿನ ತುದಿಗೆ ಹೆದೆ ಕಟ್ಟುವಾಗ ಸೀತೆಯ ಸುಕೃತದಿಂದ ಚಾಪ ಭಾರಕ್ಕೆ ಅವನ ಕೈ ತತ್ತರಿಸುತ್ತದೆ. ಶರೀರ ಬೆವರುತ್ತದೆ. ಚಿತ್ತಪಲ್ಲಟವಾಗುತ್ತದೆ. ಕೈಲಾಸವನ್ನು ಅಲ್ಲಾಡಿಸಿದ ರಾಕ್ಷಸನು – ಪರ್ವತಾಗ್ರವು ಪ್ರಳಯದಶನಿಗೆ ಮುರಿದು ಬೀಳುವಂತೆ ಕುಸಿದು ಬೀಳುತ್ತಾನೆ!

ಭಾರತೀಯ ಪುರಾಣಗಳ ಪ್ರಕಾರ ಮಹಾಪ್ರಳಯ ಸಂಭವಿಸಿದಾಗ ಸೃಷ್ಟಿಯೆಲ್ಲವೂ ನಿಷ್ಕ್ರಿಯವಾಗುತ್ತದೆ. ಈ ಮಹಾಪ್ರಳಯವು ಹದಿನಾಲ್ಕು ಹಂತಗಳಲ್ಲಿ ಸಂಭವಿಸಿ ಹದಿನಾಲ್ಕನೆಯ ಹಂತದಲ್ಲಿ ಪೂರ್ಣಗೊಳ್ಳುತ್ತದೆ. ಮೊದಲ ಹಂತದಲ್ಲಿ ಪಾತಾಳವೂ ಎರಡನೆಯ ಹಂತದಲ್ಲಿ ರಸಾತಲವೂ ಮೂರನೆಯ ಹಂತದಲ್ಲಿ ಮಹಾತಲವೂ ಲಯವಾಗುತ್ತದೆ. ಹೀಗೆ ಏಳು ಹಂತದಲ್ಲಿ ಅತಳ ವಿತಳ ಮುಂತಾದ ಏಳು ಅಧೋಲೋಕಗಳು ಲಯವಾಗುತ್ತವೆ. ಮತ್ತೆ ಏಳು ಹಂತದಲ್ಲಿ ಭೂಲೋಕ, ಭುವರ್ಲೋಕ ಮುಂತಾದ ಏಳು ಊರ್ಧ್ವಲೋಕಗಳೂ ನಾಶವಾಗುತ್ತವೆ. ಹತ್ತನೆಯ ದಿವಸ ಏಳು ಅಧೋಲೋಕಗಳೂ ನಾಶಗೊಂಡು ಊರ್ಧ್ವಲೋಕದಲ್ಲಿ ಒಂದಾದ ಸುವರ್ಲೋಕ (ಅಥವಾ ಸ್ವರ್ಗಲೋಕ) ನಾಶವಾಗುತ್ತದೆ. ಆ ದಿವಸ ಸುವರ್ಲೋಕದ ಕಿರೀಟ ಪ್ರಾಯವಾದ ಮೇರು ಪರ್ವತ ಕುಸಿದು ಬೀಳುತ್ತದೆ ಎಂದು ಶಿವಪುರಾಣ ವರ್ಣಿಸುತ್ತದೆ. ಪ್ರಳಯದಶನಿ ಎಂದರೆ ಪ್ರಳಯದ ಹತ್ತನೆಯ ಹಂತ ಎಂದರ್ಥ. ಆ ಹಂತದಲ್ಲಿ ಪರ್ವತಾಗ್ರ (ಅಂದರೆ ಮೇರು ಪರ್ವತ) ಕೆಡೆದು ಬೀಳುವ ಹಾಗೆ ಕೈಲಾಸ ಪರ್ವತವನ್ನು ಹೊತ್ತಿದ್ದ ರಾವಣನು ಪರ್ವತದ ಸಮೇತ ಕೆಳಗೆ ಬಿದ್ದ ಎಂದು ಕುವೆಂಪು ಅವರು ಪ್ರತಿಮಾತ್ಮಕವಾಗಿ ಮೇಲಿನ ಸಾಲುಗಳಲ್ಲಿ ವರ್ಣಿಸಿದ್ದಾರೆ.

(ವಿವರಗಳಿಗೆ ನೋಡಿ: ಬಿ. ಕೆ. ಚತುರ್ವೇದಿ, ಶಿವಪುರಾಣ ಡೈಮಂಡ್ ಪಾಕೆಟ್ ಬುಕ್ಸ್ 2006)

'ಸೀಕರಿಸುರಿಯೆ', 'ಅಮಮ'

ಕುವೆಂಪು ಅವರು ದಶರಥನ ಬೀಭತ್ಸ ವರ್ತನೆಯನ್ನು ಚಿತ್ರಿಸುವಾಗ 'ಸೀಕರಿಸುರಿಯೆ' ದೇಸಿಪದ, 'ಅಮಮ' ಅವ್ಯಯಗಳನ್ನು ಬಳಸಿ ಕುಶಲಕಾವ್ಯವಾಗಿ ಕಡೆದಿಟ್ಟಿದ್ದಾರೆ. ರಾಜನ ಕೆರಳಿದ ಕೋಪ ಉಗ್ರವಾಯಿತು ಎಂಬುದನ್ನು ರೂಪಕಾಲಂಕಾರದ ಸೀಕರಿಸುರಿಯೆ ಪದದಲ್ಲಿ ಧ್ವನಿಸಿದ್ದಾರೆ. 'ಸೀಕರಿ' ಎಂದರೆ ಸೀದು ಕರಕಲಾಗುವುದು. ಅದನ್ನು 'ಸೀಕಲು' ಎಂದು ಗ್ರಾಮೀಣರು ಇಂದೂ ಬಳಸುತ್ತಾರೆ.

ಮುಂದುವರೆದು 'ತನ್ನ ಕಣ್ಣಂ ತಾನೆ ಕೀಳ್ತನಮಮಾ' ಎಂದು ಹೇಳಿ ಆಶ್ಚರ್ಯ ಭಾವವನ್ನು ಸೂಚಿಸುವ ಅವ್ಯಯ 'ಅಮಮ' ಬಳಸಿದ್ದಾರೆ. ಅವನ ಹೃದಯ ವಿದ್ರಾವಕ ಸ್ಥಿತಿಯ ಕೋಪ ಹೊರಕ್ಕೆ, ಇತರರ ಕಡೆಗೆ ಹರಿಯುವುದನ್ನು ತನ್ನ ಕಡೆಗೆ ಹೊರಳಿಸಿಕೊಂಡು ತನ್ನ ಬಗ್ಗೆ ತಾನು ಕ್ರೂರವಾಗಿ ವರ್ತಿಸಿದ್ದಾನೆ. ಅದನ್ನು ಚಿತ್ರಿಸಲು ಕವಿ 'ಅಮಮ' ಪದ ಬಳಸಿದ್ದಾರೆ.

ನೋಡುಗರ ನಟ್ಟ ನೋಟ ನಿಂತಂತ, ಗಾಬರಿ ಬೆರೆತ ಅಚ್ಚರಿಯ ಕ್ಷಣವಾಗಿ ಅದು 'ಭೀತಿ ಬಡಿಯಲ್ಕೆ ನೊಳ್ಪರ್ಗೆ!' ಆಗಿದೆ. ಅವನ ಶೋಕ ರೌದ್ರರೂಪ ತಾಳಿ, ಘೋರವಾಗಿ ಅಲ್ಲಿ ನೆರದವರಿಗೆ ಬೀಭತ್ಸ ರಸಾನುಭವವಾಗುವಂತೆ ಮಾಡಿದೆ.

'ನೆಣವಸೆ', 'ಸುಟ್ಟಿದೋರು'

ಕಣ್ಣು ಪೂರ್ಣ ಮಾಂಸದ ಮುದ್ದೆ. ಅದು ಕೊಬ್ಬಿನ ಅಂಶದಿಂದ ಕೂಡಿದ್ದು. ಯಾವುದೇ ಮೂಳೆ ಅದರಲ್ಲಿಲ್ಲ. ದಶರಥ ಕಣ್ಣನ್ನು ತಾನೇ ಕ್ರೂರವಾಗಿ ಕಿತ್ತುಕೊಂಡು ಕೈಲಿ ಹಿಡಿದುಕೊಂಡುದನ್ನು ಕವಿ ಗ್ರಾಮೀಣ ಪದ 'ನೆಣವಸೆ' = (ಕೊಬ್ಬು) ಬಳಸಿ ಅದರ ಲಕ್ಷಣವನ್ನು ತಿಳಿಸಿದ್ದಾರೆ. ಆ ಕೊಬ್ಬು ಕಣ್ಣು ರಕ್ತವನ್ನು ಸೋರುತ್ತ ಇತ್ತು. ಅದನ್ನು ಅಂಗೈಯಲ್ಲಿ ಹಿಡಿದುಕೊಂಡು ಸಂಕಟದ ಉರಿಯಿಂದ ರಾಜನು ರೇಗುತ್ತಾನೆ (ಕನಲ್ದು). ಕವಿಯು ಅವನ ಆ ದುರಂತ ಸ್ಥಿತಿಗೆ ಕಾರಣವಾದ ಕೈಕೆಯನ್ನು ಸೂಚಿಸಿ ಹೇಳುವಾಗ ದೇಸಿಪದ 'ಸುಟ್ಟಿದೋರು' ಬಳಸಿದ್ದಾರೆ. ಅದರ ವಾಚ್ಯಾರ್ಥ 'ಬೆರಳಿನಿಂದ ತೋರಿಸು.' ಆದರೆ ಅದರೊಳಗಿರುವ 'ಸುಟ್ಟು' – ಬೇಗೆಯಿಂದ ಸುಡುವ ತಳಮಳದ ಕಾರಣವನ್ನು ನಿರ್ದೇಶಿಸುತ್ತದೆ. ಇದು ಮಹಾಕವಿಯು ಪ್ರತಿಪದದ ನಾಡಿ ಮಿಡಿದು ಕಥೆಯ ಪಾತ್ರದ ಭಾವಾಭಿವ್ಯಕ್ತಿಗೆ ಬಳಸಿರುವ ಚತುರ ಪದ ಪ್ರಯೋಗವಾಗಿದೆ.

ಕಣ್ಣಾರ್

ದಶರಥನು ಕಣ್ಣನ್ನು ಕಿತ್ತು ಅಂಗೈಲಿ ಹಿಡಿದುಕೊಂಡು ಕೈಕೆಯನ್ನು ಬೊಟ್ಟುಮಾಡಿ ತೋರಿಸುತ್ತ ಹೇಳುತ್ತಾನೆ:

'ನಾನು ಕಂಗೊಳಿಸಲು ಕಾರಣವಾದ ಈ ಕಣ್ಣು ನನ್ನ ದೇಶ ಕೋಸಲದ ಪ್ರತೀಕ. ನೋಡು ಅಂಗೈನ ನೆಲ್ಲಿಕಾಯಿಯಂತೆ ಸ್ಪಷ್ಟವಾಗಿ ಕಾಣಿಸುತ್ತಿದೆ. ಇದನ್ನು ತೆಗೆದುಕೊ. ನನ್ನ ಕುವರ ನಯನಾಭಿರಾಮನನ್ನು ನನಗೆ ಕೊಡು! ಕಣ್ಣಾರ್ವಿನಂ ನೋಡಿ ತೆರೆವೆನಸುವಂ.'

ಕವಿಯು ರಾಮನು ತಂದೆ ದಶರಥನ ಆಂತರ್ಯದ ಸೊಗಸಿನ ಮನೋಹರತೆಯ ಪ್ರತೀಕ ಎಂಬುದನ್ನು 'ನಯನಾಭಿರಾಮ' ಪದದಲ್ಲಿ ಅಭಿವ್ಯಕ್ತಿಸಿದ್ದಾರೆ. ಅವರು ದೊರೆಯ ಪುತ್ರವಾತ್ಸಲ್ಯವನ್ನು 'ಕಣ್ಣಾರ್' ಪದದಲ್ಲಿ ಪ್ರಕಟಪಡಿಸಿರುವ ರೀತಿ ಅನನ್ಯವಾಗಿದೆ. 'ಕಣ್ಣಾರ್' ಪದ ತೃಪ್ತಿಯಾಗುವಂತೆ ಎಂದು ಅರ್ಥ ಹೊಮ್ಮಿಸುತ್ತದೆ. ಅದಕ್ಕೆ 'ಕಣ್ಣು ತುಂಬುವಂತೆ' ಎಂಬ ಇನ್ನೊಂದು ಅರ್ಥವೂ ಇದೆ.

'ಕಣ್ಣು ತುಂಬುವಂತೆ' ಪದ ಅಸುವನ್ನು ನೀಗುತ್ತೇನೆ ಎಂಬ ಧ್ವನ್ಯಾರ್ಥವನ್ನು ಒಳಗೊಂಡಿದೆ. ಈ ರೂಪಕದಲ್ಲಿ ದಶರಥನ ಪ್ರೀತಿ, ವೇದನೆ, ತಳಮಳ, ಮಾನಸಿಕ ವಿಕಾರದ ಹಲವು ಭಾವಗಳು ಹೆಪ್ಪುಗಟ್ಟಿವೆ.

ತರುಹಿಡಿಂಬ

ಶಿಖಿಬಕಾಸುರ ಬಾಹು ಭೀಮರಿಂದೆಂಬಂತೆ
ತಿರುಪ್ಪಿದುದು ದೈತ್ಯ ದೇಹದ ತರುಹಿಡಿಂಬರಂ.
ನಿರಿನಿರಿ ನಿಟಿಲ್ಲೆಂದು ಮುರಿದರೆದು, ಬೂದಿಯಂ
ಬುತ್ತಿಗೂಳ್ ಮಾಡಿ ಮುಕ್ಕಿದುದು.(1.6–324–27)

ಮಂಥರೆಯು ಕಾಡಿನ ಬೆಂಕಿಯನ್ನು ನೋಡಿ ಅದನ್ನೇ ರಾಮನೆಂದು ಭಾವಿಸಿ ಮುನ್ನುಗ್ಗುತ್ತಾಳೆ. ಕವಿಯು ಆ ಕಾಡ್ಗಿಚ್ಚನ್ನು ವರ್ಣಿಸುವಾಗ ಬಕಾಸುರನೆಂಬ ಅಗ್ನಿಯು ಬಾಹುಭೀಮರ ರೀತಿ ಭಾರೀಗಾತ್ರದ ತರುಹಿಡಿಂಬರನ್ನು ತಿರುಗಿಸಿ ನುಂಗಿ ನೊಣೆದಿತು. ಆ ದೈತ್ಯ ಮರಗಳು ನಿರಿನಿರಿ ನಿಟಲ್ಲೆಂದು ಮುರಿದು ಬೀಳಲು ಅದನ್ನು ತನ್ನ ಆಹಾರವಾಗಿ ಮುಕ್ಕಿತು ಎಂದು ಅರಣ್ಯದ ತರುಲತೆಗಳ ಮೇಲೆ ಕಾಡ್ಗಿಚ್ಚಿನ ಕ್ರೂರ ಆಕ್ರಮಣವನ್ನು ವರ್ಣಿಸಿದ್ದಾರೆ.

ಆ ಬೃಹತ್ತಾದ ಮರಗಳನ್ನು ಹಿಡಿಂಬರಾಕ್ಷಸರೆಂದು ಕರೆದು, ಅವು ಅಗ್ನಿಯ ಭೀಮಬಾಹುವಿಗೆ ಆಹುತಿಯಾದುದನ್ನು ಪುರಾಣ ಪ್ರತಿಮೆಗಳಲ್ಲಿ ಹಿಡಿದಿಟ್ಟಿದ್ದಾರೆ.

ತರುತಿಲೋತ್ತಮೆ

ಚಿತ್ರಕೂಟದಲ್ಲಿ ಒಂದು ಪ್ರಾತಃಕಾಲದಲ್ಲಿ ರಸಋಷಿ ರಘುರಾಮನಿಗೆ ತರುತಿಲೋತ್ತಮೆ ಇಂದ್ರಲೋಕವನ್ನು ಸೃಷ್ಟಿಸಿದಳು ಎಂದು ಕುವೆಂಪು ಚಿತ್ರಿಸಿದ್ದಾರೆ. ಅವರು ತರುರಂಬೆ ಅಥವಾ ತರು ಊರ್ವಶಿ ಎಂದು ಹೇಳದೆ ತರುತಿಲೋತ್ತಮೆ ಎಂದು ಇಂದ್ರನ ಆಸ್ಥಾನದ ಅಪ್ಸರಿಯನ್ನು ಪ್ರಕೃತಿ ಸಹಜವಾದ ಮರವನ್ನು ವರ್ಣಿಸಲು ಬಳಸಿದ್ದಾರೆ. ಅವರು ಹಾಗೆ ಕರೆದಿರುವುದು ಅವರ ಸೂಕ್ಷ್ಮಾವ

ಲೋಕನದ ಸಾಕ್ಷಿ. ತರುವಿಗೂ ತಿಲೋತ್ತಮೆಗೂ ನಿಸರ್ಗದ ಸೃಷ್ಟಿಯಲ್ಲಿ ವಿಶೇಷ ಸಂಬಂಧವಿದೆ. ತಿಲೋತ್ತಮೆಯ ಹೆಸರಿನ ಮೂಲ ಹೀಗಿದೆ:

ತಿಲೋತ್ತಮೆ = ಒಬ್ಬ ಅಪ್ಸರೆಯ ಹೆಸರು. ಪ್ರಕೃತಿಯ ಸರ್ವ ಸೌಂದರ್ಯದಲ್ಲಿಯೂ ತಿಲಾಂಶದಷ್ಟನ್ನು ತೆಗೆದು ರೂಪಿಸಿದ ಅಪ್ಸರೆಯಾದುದರಿಂದ, ಎಲ್ಲ ಅಪ್ಸರೆಯರಿಗಿಂತಲೂ ಎಳ್ಳಿನಷ್ಟಾದರೂ ಹೆಚ್ಚು ಚೆಲುವುಳ್ಳವಳಾದ್ದರಿಂದ ಈ ಹೆಸರು ಬಂದಿತೆಂದು ಹೇಳುತ್ತಾರೆ.

ಆ ತಿಲೋತ್ತಮೆ ವೃಕ್ಷವು ಕೊಂಬೆ ಕೊಂಬೆಗಳಿಂದ ಪುಷ್ಪವೃಷ್ಟಿಮಾಡಿ, ನಾನಾ ವರ್ಣ ಶೃಂಗಾರದಿಂದ ಮೆರೆದು ಗಾಳಿಗೆ ತೊನೆದಾಡುತ್ತಿದೆ. ಅದು ಹಕ್ಕಿಯ ಇಂಚರದ ಉಲಿತವನ್ನು ಕಾಲುಗೆಜ್ಜೆ, ಕಿಂಕಿಣಿಯಾಗಿ ಧರಿಸಿ ನರ್ತಿಸುತ್ತ ಚಿತ್ರಕೂಟದಲ್ಲಿ ರಾಮಚಂದ್ರನಿಗೆ ಇಂದ್ರಲೋಕವನ್ನು ಸೃಷ್ಟಿಸಿದೆ!

ಕವಿಯು ಮರದಲ್ಲಿರುವ ಪಕ್ಷಿಗಳ ಇಂಚರವನ್ನು ತರುತಿಲೋತ್ತಮೆಯ ಕಾಲುಗೆಜ್ಜೆಯ ಕಿಂಕಿಣಿಯಾಗಿ ಆಲಿಸಿರುವುದು ಅದನ್ನು ಅವಳ ನರ್ತನವೆಂದು ಹೇಳಿರುವುದು ಅವರ ಶ್ರವಣ ಪ್ರತಿಭೆ.

ಹಕ್ಕಿಯಿಂಚರದುಲಿಯೆ
ಕಾಲ್ಗೆಜ್ಜೆ ಕಿಂಕಿಣಿಯವೋಲಾಗೆ ನರ್ತಿಸುವೆ
ತರುತಿಲೋತ್ತಮೆ ಸೃಷ್ಟಿಸಿದಳಿಂದ್ರ ಲೋಕಮಂ
ಚಿತ್ರಕೂಟದೊಳೆ ಆ ರಸಋಷಿ ರಘೂದ್ವಹಂಗೆ(1.8–228–231)

ವಿಕ್ರಮ

ರಾಮನನ್ನು ಹಿಂತಿರುಗಿ ಬರುವಂತೆ ಮಾಡಲು ಅಯೋಧ್ಯಾ ಜನ ಹೊರಟದ್ದನ್ನು ಕುವೆಂಪು ಅವರು 'ಪಾದುಕಾ ಕಿರೀಟಿ' ಸಂಚಿಕೆಯಲ್ಲಿ ಚಿತ್ರವತ್ತಾಗಿ ನೀಡಿದ್ದಾರೆ. ಅದು ಹೀಗಿದೆ:

ರವಿಕುಲದ ನಾಗರಿಕತೆಯೆ ವಿಪಿನದೇಶಮಂ
ವಿಕ್ರಮದೊಳಾಕ್ರಮಿಸಿತೆನೆ, ಪರಿದುದು ಅಯೋಧ್ಯೆ(1.9–224, 25)

ಈ ಸಾಲುಗಳಲ್ಲಿಯ 'ವಿಕ್ರಮ' ಪದ 'ಪರಾಕ್ರಮ, ಶೌರ್ಯ' ಎಂಬ ಅರ್ಥವನ್ನು ನಮ್ಮ ಮನಸ್ಸಿನಲ್ಲಿ ಮೂಡಿಸುತ್ತದೆ. ಆದರೆ ತುಸು ಶಾಂತವಾಗಿ ಆ ಸಂದರ್ಭವನ್ನು ಅವಲೋಕಿಸಿದರೆ ಅಲ್ಲಿ ಪರಾಕ್ರಮ ಮುಂತಾದುವು ಹೆಜ್ಜೆಯಿಡಲು ಆಗುವುದಿಲ್ಲ. 'ವಿಕ್ರಮ'ದ ಇನ್ನೊಂದು ಅರ್ಥ ಹೆಜ್ಜೆಯಿಡುವಿಕೆ; ಪಾದನ್ಯಾಸ; ವಿಶೇಷವಾಗಿ ಕ್ರಮಿಸುವುದು. ಆ ದುಃಖತಪ್ತ, ಅಯೋಧ್ಯಾಜನ ಹೆಜ್ಜೆಯೂರುತ್ತ

ನಡೆದು ಆ ಕಾಡಿನಲ್ಲಿ ಸಂಚಾರ ಮಾಡುತ್ತ ಬಂದಿದ್ದಾರೆ. ಹಾಗೆ ಪ್ರಯಾಣ ಬೆಳೆಸುತ್ತ ಆ ಕಾಡನ್ನು ಆಕ್ರಮಿಸಿದ್ದಾರೆ.

'ವಿಕ್ರಮದೊಳ್' ಪದವು ಸಂಚಾರಗೈಯುತ್ತ ವಿಪಿನ ದೇಶವನ್ನು ಆಕ್ರಮಿಸಿದರು ಎಂಬ ಅರ್ಥವನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡಿದೆ. 'ಪರಿದುದು ಅಯೋಧ್ಯೆ – ಅಯೋಧ್ಯೆಯಲ್ಲಿರುವ ಜನರೆಲ್ಲ ಬಂದರು ಎಂಬುದು ಲಕ್ಷ್ಯಾರ್ಥ ಸೂಚಿತವಾಗಿದೆ. ಹೀಗೆ ಈ ಮಹಾಕಾವ್ಯದಲ್ಲಿ ಕವಿಯು ಪದ ಪದಗಳ ಹಿಂದಿನ ಪದರುಗಳಲ್ಲಿ ಅಡಗಿದ ಕನ್ನಡಿಗರ ಭಾಷಾ ಸಂಪತ್ತಿನ ಭಾವಸೂಕ್ಷ್ಮವನ್ನು ಕುಂದಣಿಸಿರುವುದು ಕಂಡುಬರುತ್ತದೆ. ಕಾವ್ಯರಚನೆಯಲ್ಲಿ ಆಯಾ ಸಂದರ್ಭಕ್ಕೆ ಕವಿಯು ಪ್ರೌಢಿಮೆಯಿಂದ ರಚಿಸುವ ಪದಬಂಧ ಅಧ್ಯಯನಶೀಲವಾಗಿದೆ.

ಪರೆ, ಹರೆ

ಪರೆ, ಹರೆ (ನಾ). ಮರದ ಕೊಂಬೆ, ರಂಬೆ

ಈ ಹಳಗನ್ನಡ ಪದವನ್ನು ಕುವೆಂಪು ಅವರು ಕಾಡಿನ ಅನುಭವಶಾಲಿ ಗುಹನ ಬಾಯಿಯಲ್ಲಿ ಹೀಗೆ ಹೇಳಿಸಿದ್ದಾರೆ.

'ನೋಡಿಮಾ ಮುರಿದ ಹರೆ
ಸಾಲ್ಗೊಂಡು ಬಿದ್ದಿಹವು ಹೊದೆ ಹೊದೆಯೆಡೆಯೆ ಹಾದಿ
ಗುರುತಾಗಿ.' (1.9–287–289)

ಚಿತ್ರಕೂಟಕ್ಕೆ ಹಾದಿ ಹುಡುಕಲು ಹೊರಟ ಭರತ, ಶತ್ರುಘ್ನ ಗುಹರ ಸಂವಾದದಲ್ಲಿ ಹಾದಿ ಪದ ಹಕಾರದ ಪ್ರಾಸನುಪ್ರಾಸದಲ್ಲಿ 'ಹರೆ' ಯೆಂಬ ಹಳಗನ್ನಡದ ರಂಬೆ, ಕೊಂಬೆಯ ಗುರುತಾಗಿ ಸೂಚಿತವಾಗಿದೆ. ಅದು ಕನ್ನಡ ಭಾಷಾ ಮಾರ್ಗದ ಹಳತು ಹಿಡಿದು ಸಾಗಿ ನಮ್ಮ ಭಾಷಾ ಸಂಸ್ಕೃತಿ ಅರಿವ ಕವಿಯ ಸೂಕ್ಷ್ಮ ಕಾವ್ಯ ಕಲೆಯಾಗಿದೆ.

ಹಿರಿದಾದ ಮರ ಕೊಂಬೆ ಮುರಿದು ಉರುಳಿತು ಎಂಬುದನ್ನು 'ಹರೆ' ಗಿಂತ ಹಿಂದಿನ ಅದರ ರೂಪ 'ಪರೆ' ಯಲ್ಲಿ ಸೂಚಿಸಿ, ಸಾಂಕೇತಿಕವಾಗಿ ಭಾಷೆ ಮುರಿದು ಬಿದ್ದು ಹೊಸರೂಪಕ್ಕೆ ಹೊರಳುವುದನ್ನು ಹೀಗೆ 'ಪ' ಕಾರ ಒಳಪ್ರಾಸದಲ್ಲಿ ಬಿಂಬಿಸಿದ್ದಾರೆ:

'ಪೆರ್ಮರಂ ಪರೆ ಮುರಿದುರುಳ್ದುವಯ್' (2.11–14)

ಕನ್ನಡ ಭಾಷೆಯ ಮೂಲರೂಪ, ಅದರ ಸೊಗಡನ್ನು ಕಿಂಚಿತ್ತು ಕೆಡದ ಹಾಗೆ ಹೊಸಗನ್ನಡ ಕಾವ್ಯ 'ಶ್ರೀ ರಾಮಾಯಣ ದರ್ಶನಂ'ನಲ್ಲಿ ಬಳಸಿರುವ ರೀತಿ ಕುವೆಂಪು ಅವರ ಭಾಷಾ ಸಂವೃದ್ಧಿಗೆ ಸಾಕ್ಷಿಯಾಗಿದೆ.

ಅಲೆ

ಈ ಪದ ಕಿವಿಗೆ ಬಿದ್ದೊಡನೆ ನೀರಿನ ತೆರೆ, ತರಂಗ ಕಣ್ಮುಂದೆ ಸುಳಿಯುತ್ತದೆ. ಅದರ ಇನ್ನೊಂದು ಅರ್ಥ ಹೊಳೆಯುವುದು, ಅಲೆದಾಡು ಸಂಚರಿಸು. ಆದರೆ ಅದಕ್ಕೆ ಇರುವ ಹಳಗನ್ನಡ ಅರ್ಥ ಹಿಂಸೆ; ತೊಂದರೆ; ಕಾಟ.

'ಹರಿಶ್ಚಂದ್ರಕಾವ್ಯ'ದಲ್ಲಿ ಶಿವನು ಹರಿಶ್ಚಂದ್ರನ ಸತ್ಯ ನಡೆಗೆ ಮೆಚ್ಚಿ ತಲೆದಡವಿ ಆಶೀರ್ವದಿಸುತ್ತಾನೆ. ಕೌಶಿಕನಿಗೆ 'ನೀನು ಕೊಡುವೆನೆಂದು ಹೇಳಿದುದನ್ನು ಕೊಡು' ಎಂದು ತಿಳಿಸುತ್ತಾನೆ. ಆ ಸಂದರ್ಭದಲ್ಲಿ ಕವಿ ರಾಘವಾಂಕನು ಅಲೆ ಪದವನ್ನು ಹೀಗೆ ಪ್ರಯೋಗಿಸಿರುವುದು ಕಂಡುಬರುತ್ತದೆ.

'ನುಡಿಯೊಳನೃತಂ ತೋರದಂತೆ ನಿನ್ನಲೆಗೆ ನಿಂ
ದಡೆ ಮೆಚ್ಚಿ ಮೇಲೇನ ಕೊಡುವೆನೆಂದೆಂದೆಯದ
ಕೊಡು ಬೇಗದಿಂದ ವಿಶ್ವಾಮಿತ್ರ.' (14–10)

'ನಿನ್ನಲೆಗೆ' ಪದದಲ್ಲಿರುವ 'ಅಲೆ' ಯು ಹಿಂಸೆ, ತೊಂದರೆ ಕಾಟದ ಅರ್ಥವನ್ನು ಅಭಿವ್ಯಕ್ತಿಸಿದೆ. ಆ ಪದವನ್ನು ಕುವೆಂಪು ಅವರು 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದಲ್ಲಿ ಹೀಗೆ ಪ್ರಯೋಗಿಸಿದ್ದಾರೆ.

'ರಾವಣನ ಸಹೋದರನ
ಖರನಲೆಗೆ ಮುನಿಗಣಂ ಚಿತ್ರಾದ್ರಿಯಂ ತ್ಯಜಿಸೆ.'(1.10–44, 45)

ಮುಡಿಪು: ಆತ್ಮಸೌಂದರ್ಯ

ಕಿಷ್ಕಿಂಧಾ ಸಂಪುಟದ ಸಂಚಿಕೆ–1 ರ ಪ್ರಾರಂಭದಲ್ಲಿ ಕುವೆಂಪು ಅವರು ವೀಣೆಯನ್ನು ಪ್ರಾರ್ಥಿಸಿದ್ದಾರೆ. ಅವರಿಗೆ ವೀಣೆ – ವಾಕ್ ಸುಂದರಿ ವಾಗ್ದೇವಿಯ ಕೈಯಲ್ಲಿರುವ ತ್ರಿಭುವನ ಸಮ್ಮೋಹಿನಿ, ಕವನ ಮನೋಹರಿ. ಅವರು ಅದನ್ನು ಸರ್ವಕ್ಕೆ ಸಾಕ್ಷಿಯಾಗಿ ಮಂತ್ರಮಯ ಕಣ್ಣುಗಳಿಂದ ಈಕ್ಷಿಸುತ್ತಿದೆ ಎಂದು ಪರಿಭಾವಿಸಿದ್ದಾರೆ. ಅವರ ಪ್ರಾರ್ಥನೆ ಹೀಗಿದೆ: ನೀನು ಕಂಡುದನ್ನು ಶತ ತಂತಿಗಳ ನಾದಮಯ ಕಂಠದಿಂದ ಇನಿದಾಗಿ ಹಾಡು. ಅದನ್ನು ಕೇಳುತ್ತ ನಿನ್ನ ದರ್ಶನವೆ ನಮ್ಮ ದರ್ಶನವೆಂಬಂತೆ ನಮ್ಮೆದೆಯಲ್ಲಿ ಪ್ರತಿಭೆ ಪ್ರಜ್ವಲಿಸಲಿ! ರನ್ನ

ಪಂಪ, ವಾಲ್ಮೀಕಿ ವ್ಯಾಸ, ಹೋಮರ್ ಮಿಲ್ಟನ್ ಮುಂತಾದವರಿಗೆ ನೀನು ಪ್ರೀತಿಯಿಂದ ವಿದ್ವತ್ ಪ್ರತಿಭೆ ದಯೆ ಮಾಡಿರುವೆ. ಹೇ ವೀಣಾದೇವಿಯೆ ನಿನ್ನ ಕನ್ನಡ ಕಂದನಾದ ನನಗೆ ಅಂತಹದೇ ಕಲ್ಪನಾ ಶಕ್ತಿಯನ್ನು, ವಾಕ್ ಮಂತ್ರದ ಯುಕ್ತಿಯನ್ನು, ಆಯುರಾರೋಗ್ಯ ಶಾಂತಿ ಸೌಭಾಗ್ಯವನ್ನು ದಯಪಾಲಿಸು.

ಕುವೆಂಪು ಅವರು ಆ ದೇವಿಗೆ ತಾನು ತನ್ನಲ್ಲಿರುವ ಯಾವ ವಸ್ತುವನ್ನು ಮೀಸಲಾಗಿರಿಸಬಹುದೆಂದು ಆಲೋಚನೆಗೆ ತೊಡಗಿದ್ದಾರೆ. ಆ ಚಿಂತನೆಯ ಫಲವಾಗಿ ಅನಂತಶಕ್ತನು ತನಗೆ ಸುಂದರ ಸುರುಳಿಗುರುಳಂತೆ ಅನುಗ್ರಹಿಸಿರುವ ಆತ್ಮ ಸೌಂದರ್ಯವನ್ನು ಮುಡಿಪಿಟ್ಟು ಪೂಜಿಸಲು ತೀರ್ಮಾನಿಸಿದ್ದಾರೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಆತ್ಮ ಸೌಂದರ್ಯವನ್ನು ಮುಡುಪಾಗಿಸಿ ಪ್ರಾರ್ಥಿಸಿದ ಮೊದಲಿಗರು ಕುವೆಂಪು.

ಅವರು ಕಾವ್ಯದ ಮೂಲಸೆಲೆ ನಾದದ ಶ್ರುತಿಗೆ ತನ್ನ ದೇಹ, ಪ್ರಾಣ, ಮನಗಳನ್ನು ವೀಣೆಯಂತೆ ಶ್ರುತಿ ಶುದ್ಧಗೊಳಿಸಿ ಕಾವ್ಯ ರಚಿಸಿದುದನ್ನು ರೂಪಾತ್ಮಕವಾಗಿ ಈ ಮಹಾಕಾವ್ಯದಲ್ಲಿ ಅಭಿವ್ಯಕ್ತಿಸಿದ್ದಾರೆ.

ಪ್ರಕೃತಿಯಲ್ಲಿ ಕಾಣುವ ಎಲ್ಲ ಸುಂದರ ವಸ್ತುವು ಕಾಲನ ಹೊಡೆತಕ್ಕೆ ಸಿಕ್ಕಿ ತಮ್ಮ ಸೌಂದರ್ಯ ಲಕ್ಷಣವನ್ನು ಕಳೆದುಕೊಳ್ಳುತ್ತವೆ. ಆದರೆ ಆ ಪರಮಾತ್ಮ ದಯಪಾಲಿಸಿರುವ ಆತ್ಮಸೌಂದರ್ಯ ಸದಾ ಹೊಳೆವ ನಾಶರಹಿತ ಬೆಳಕು. ಅದನ್ನು ಅರ್ಪಿಸಿ ಕೃತಾರ್ಥರಾದ ಕುವೆಂಪು ಅವರ ದಿವ್ಯ ಪ್ರಾರ್ಥನೆಯ ಅಪೂರ್ವದರ್ಶನ ಇದಾಗಿದೆ.

ತಿಂಗಳ್ಮನೆ

ತಿಂಗಳ್, ತಿಂಗಳು (ನಾ). 1. ಚಂದ್ರ, ಪೆರೆ. 2. ಚಂದ್ರನ ಬೆಳಕು; ಇಂದುಕಾಂತಿ. 3. ಚಂದ್ರನು ಭೂಮಿಗೆ ಒಂದು ಸುತ್ತು ಬರುವ ಕಾಲದ ಅವಧಿ; ಸಾಮಾನ್ಯವಾಗಿ ಮೂವತ್ತು ದಿನಗಳು.

ತಿಂಗಳ ಬೆಳಕು, ತಿಂಗಳ ಬೆಳಗು = ಚಂದ್ರನ ಬೆಳಕು; ಬೆಳುದಿಂಗಳು.

ತಿಂಗಳ ಮಾವ = ಚಂದ್ರನಿಗೆ ಅಕ್ಕರೆಯಿಂದ ಸಂಬೋಧಿಸುವ ಹೆಸರು. ಮಂಡ್ಯ ಮೈಸೂರು ಸೀಮೆಯಲ್ಲಿ ಜನ ಚಂದ್ರನನ್ನು 'ತಿಂಗಳು' ಎಂದು ಕರೆಯುವರು.

ತಿಂಗಳ್ಮನೆ = ಕುವೆಂಪು ಅವರು ಚಂದ್ರನನ್ನು 'ತಿಂಗಳ್ಮನೆ' ಎಂಬ ಹೊಸ ಪದ ಸೃಷ್ಟಿಸಿ ಕರೆದಿದ್ದಾರೆ.

ಮಾರೀಚನು ಜಿಂಕೆ ರೂಪದ ಕನಕ ಕಾಂತಿಯಿಂದ ಸೀತೆಯ ಮುಂದೆ ಸುಳಿದಾಡುತ್ತಾನೆ. ಆ ಜಿಂಕೆಯನ್ನು ಕವಿ 'ತಿಂಗಳ್ಮನೆಯ ಮಿಗ' ಎಂದು ಕರೆದಿದ್ದಾರೆ. ಚಂದ್ರನಲ್ಲಿರುವ ಕಲೆ ಜಿಂಕೆಯ ರೂಪದಲ್ಲಿದೆ. ಹಾಗಾಗಿ ಅದು ಚಂದ್ರನ ಮನೆಯ ಜಿಂಕೆ. ಅದು ದಂಡಕಾರಣ್ಯದಲ್ಲಿ ದಾರಿ ತಪ್ಪಿ ಅಲೆದು ಬರುತ್ತ ಈ ನೆಲದಲ್ಲಿ ತನ್ನ ವಾಸಸ್ಥಾನ ಭೂಮಿ ಪುತ್ರಿ ಸೀತೆಯ ಮುಖ ಚಂದ್ರವೇ ಎಂದು ಭಾವಿಸುತ್ತದೆ. ಚಂದ್ರನ ಮುಖ ಮಂಡಲದಿಂದ ಬಂದ ಆ ಮಿಗ ಧರಾತ್ಮಜೆಯ ವದನವೇ ತನ್ನ ಸದನವೆಂದು ತಿಳಿಯುತ್ತದೆ. ಶಂಕೆಯಿಂದ ಅವಳ ಹಿಂದೆ ಮುಂದೆ ಸುಳಿದಾಡಿ ಹೊಳೆದು ಓಲಾಡುತ್ತದೆ.

ಇದೊಂದು ಮಾಯಾಮೃಗ ಜಿಂಕೆಯ ಮೂಲನೆಲೆ ಮತ್ತು ಗಮನಿಸಬೇಕಾದ ಸ್ಥಳವನ್ನು ಸೂಕ್ಷ್ಮವಾಗಿ ಅವಲೋಕಿಸಿ ಕವಿ ಕಲ್ಪಿಸಿಕೊಂಡಿರುವ ಮನೋಹರ ಭಾವಲಹರಿ!

ತಿಂಗಳ್ಮನೆಯ ಮಿಗಮೆ ದಂಡಕಾಟವಿಯಲ್ಲಿ
ದಾರಿತಪ್ಪುತ್ತಲೆದು ಬರುತಿರೆ, ಧರಾತ್ಮಜಾ
ವದನಮಂ ತನ್ನ ಸದನಂಗೆತ್ತು, ಶಂಕೆಯಿಂ
ಪಿಂತೆ ಮುಂತೆ ತೊಳಲ್ವವೋಲಾಡಿತಾ ಜಿಂಕೆ.(2.2–81–84)

ದೊರೆನಿರಿಗೆ

ದೊರೆ ಮತ್ತು ನಿರಿಗೆ ಅಚ್ಚಗನ್ನಡ ಪದಗಳು. ದೊರೆ ಪದ ಒಡೆಯ; ರಾಜ ಎಂಬ ಅರ್ಥದ ಜೊತೆಗೆ ಹಿರಿಮೆ; ಯೋಗ್ಯತೆ ಎಂಬ ಅರ್ಥವನ್ನು ಹೊಂದಿದೆ. ಸೀರೆ, ದೊತ್ರ ಮೊದಲಾದವುಗಳ ಮಡಿಕೆ, ಪದರವು ನಿರಿಗೆ, ಈ ಪದದ ಇನ್ನೊಂದು ಅರ್ಥ ರೀತಿ; ಕ್ರಮ; ಪದ್ಧತಿ.

ಕುವೆಂಪು ಅವರು ತಾಟಕಾಸುತನಾದ ಮಾರೀಚನು ತನ್ನ ಪರ್ಣಕುಟಿಗೆ ರಾಕ್ಷಸ ಚಕ್ರವರ್ತಿ ರಾವಣ ಬಂದುದನ್ನು ಕಂಡು ಉಪಚರಿಸುವಾಗ 'ದೊರೆನಿರಿಗೆ' ಪದ ಪ್ರಯೋಗಿಸಿದ್ದಾರೆ. ಮಾರೀಚನು ದೊರೆಯ ಹಿರಿಮೆಗೆ ತಕ್ಕ ಪದ್ಧತಿಯನ್ನು ಅನುಸರಿಸಿ ರಾಜನನ್ನು ಗೌರವಿಸಿದ ಎಂದು ಈ ಪದದಲ್ಲಿ ಧ್ವನಿಸಿದ್ದಾರೆ.

ದೈತ್ಯೇಂದ್ರನಂ ನೋಡಿ ಕಂಡಿದಿರೆಳ್ದುವೋಗಿ
ಬಯಸಿದನು ಸೊಗಬರವನಾ ತಾಟಕಾ ಸುತಂ;
ದೊರೆಯನುಪಚರಿಸಿದನು ದೊರೆನಿರಿಗೆಯಿಂ(2.1–202–4)

ಇಂದ್ರ ದಿಜ್ಞಯನಕ್ಕೆ ನೀರುರ್ಕ್ಕಲೆಮೆದೆರೆದುದೊಯ್ಯನೆ ಉಷಃಕಾಂತಿ

ರಾಮಲಕ್ಷ್ಮಣರು ಋಷ್ಯಮೂಕ ಪರ್ವತದಲ್ಲಿ ಸುಗ್ರೀವನೊಡನೆ ನಡೆಸಿದ ಮಂತ್ರಾಲೋಚನೆಯ ರಾತ್ರಿ ಕಳೆಯಿತು. ಅವರು ಸುಗ್ರೀವನನ್ನು ಎದುರು ನೋಡುತ್ತ ಹೊತ್ತಾರೆಯೆ ಕಾದು ಕುಳಿತರು. ಆಗ ಅವರು ಕಂಡ ಪೂರ್ವದಿಕ್ಕಿನ ಚಿತ್ರಣವನ್ನು ಕುವೆಂಪು ಹೀಗೆ ಚಿತ್ರಿಸಿದ್ದಾರೆ: 'ಇಂದ್ರ ದಿಜ್ಞಯನಕ್ಕೆ ನೀರುರ್ಕ್ಕಲೆಮೆದೆರೆದು ದೊಯ್ಯನೆ ಉಷಃ ಕಾಂತಿ.' ಈ ನುಡಿಯು 'ನೀಂ ಸತ್ಯವ್ರತನೆ ದಿಟಂ!' ಸಂಚಿಕೆಯಲ್ಲಿ ವಾಲಿ ಸುಗ್ರೀವರಿಗೆ ಅನ್ವಯಿಸುವ ಹಾಗೆ ರೂಪಕಾಲಂಕಾರದಲ್ಲಿದೆ. ಇದು ಸಾಂಸ್ಕೃತಿಕ ದೈತ್ಯ ಪ್ರತಿಭೆ ಕುವೆಂಪು ಅವರ ಸಾಹಿತ್ಯ ವಾತಾವರಣದಿಂದ ಹೊಮ್ಮಿ-ಮುಂದಿನ ಘಟನೆಯ ಅಂತರಾರ್ಥವನ್ನು ಹುದುಗಿಸಿಕೊಂಡಿರುವ ಪೂರ್ವ ಸೂಚನಾ ನುಡಿಯಾಗಿದೆ.

ಪೂರ್ವದಿಕ್ಕನ್ನು ಇಂದ್ರದಿಕ್ಕು ಎಂದು ಕರೆಯುತ್ತಾರೆ. ಕವಿಯು ಆ ದಿಕ್ಕನ್ನು ಬಣ್ಣಿಸುವಾಗ 'ಇಂದ್ರ ದಿಜ್ಞಯನ' ಎಂಬ ಪದ ಸೃಷ್ಟಿಸಿ ಪ್ರಯೋಗಿಸಿದ್ದಾರೆ. ಅಷ್ಟದಿಕ್ಪಾಲಕರಲ್ಲಿ ಒಬ್ಬನಾದ ಇಂದ್ರನು ಪೂರ್ವದಿಕ್ಕಿನ ಪಾಲಕನಾಗಿದ್ದಾನೆ. ಇಂದ್ರನು ವಾಲಿಯ ತಂದೆಯೂ ಹೌದು. ರಾಮನು ಸುಗ್ರೀವನೊಡನೆ ಮಂತ್ರಾಲೋಚನೆ ನಡೆಸಿ ವಾಲಿಯನ್ನು ಸಂಹರಿಸಬೇಕೆಂದು ನಿರ್ಧರಿಸಿದಾಗ ಸಹಜವಾಗಿ ತನ್ನ ಮಗನಿಗಾಗಿ ತಂದೆಯಾದ ಇಂದ್ರನ ಹೃದಯ ಮರುಗಿತು. ಅವನ ಆ ದುಃಖವನ್ನು ಕವಿ ಇಂದ್ರನ ದಿಕ್ಕಾದ ಪೂರ್ವದಿಕ್ಕಿನ ಕಣ್ಣುಗಳಿಗೆ ನೀರುಕ್ಕಿತು ಎಂದು ಮಾರ್ಮಿಕವಾಗಿ ಅಭಿವ್ಯಕ್ತಿಸಿದ್ದಾರೆ.

ವಾಲಿಯ ಸಂಹಾರವಾದ ಮೇಲೆ ಅವನ ತಮ್ಮ ಸೂರ್ಯಪುತ್ರ ಸುಗ್ರೀವ ಸಿಂಹಾಸನಾ ರೂಢನಾಗುತ್ತಾನೆ. ಅವನ ಅದೃಷ್ಟ ಬದಲಾಯಿಸುತ್ತದೆ. ಸುಗ್ರೀವನ ಈ ಏಳಿಗೆಯನ್ನು 'ಎಮೆದೆರೆದುದು ಒಯ್ಯನೆ ಉಷಃಕಾಂತಿ' ಎಂದು ಕವಿ ಬಣ್ಣಿಸಿದ್ದಾರೆ. ವಾಲಿ ಸುಗ್ರೀವರು ಕ್ರಮವಾಗಿ ಇಂದ್ರ ಸೂರ್ಯರ ವರ ಪುತ್ರರು. ಅದು ಭಾವೋಪಯೋಗಿಯಾದ ಪೌರಾಣಿಕ ಸತ್ಯ.

ಕವಿಯು ಲೋಕೋಪಯೋಗಿಯಾಗಿ ಭಾಷೆಯನ್ನು ಪ್ರಮಾಣವೆಂದು, ಭಾವೋಪಯೋಗಿಯಾಗಿ ಭಾಷೆಯನ್ನು ಅಪ್ರಮಾಣವೆಂದು ತೀರ್ಮಾನಿಸುವ ಶುಷ್ಕ ವಿಚಾರವಾದಿಯಲ್ಲ. ಬದಲಾಗಿ ಭಾಷೆಯನ್ನು ತನ್ನ ಕಾವ್ಯದಲ್ಲಿ ಧ್ವನಿಪೂರ್ಣವಾಗಿ ಬಳಸಬಲ್ಲ ಪ್ರತಿಭಾಶಾಲಿಯಾಗಿದ್ದಾನೆ. ಕವಿ ಒಂದು ಭಾಷಾ ಸಂಸ್ಕೃತಿಯ ಪ್ರತಿಯೊಂದು ಸಂಗತಿಯನ್ನು ಆ ಭಾಷೆಯ ಅಭಿವ್ಯಕ್ತಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಬಳಸುತ್ತಾನೆ. ಅದಕ್ಕೆ ಕುವೆಂಪು ಅವರ ಈ ಮೇಲಿನ ನುಡಿ ಒಂದು ಉತ್ತಮ ಉದಾಹರಣೆಯಾಗಿದೆ.

ವರ್ಷಶಾಪಂ

'ಸುಗ್ರೀವಾಜ್ಞೆ' ಸಂಚಿಕೆಯಲ್ಲಿ ಕವಿಯು ಬಿರುಬೇಸಿಗೆಗೆ ನೆಲವು ಬಾಯಾರಿರಲು, ಮಳೆಗಾಲದ ಆಗಮನದ ಸೂಚನೆಯನ್ನು ಹೀಗೆ ನೀಡಿದ್ದಾರೆ:

ಸೀತೆಗೆ ರಾಮನಂತೆ, ಮುಂಗಾರ್ಗೆ ತಿರೆ
ಬಾಯಾರುತಿರೆ, ಓ ಆ ದಿಗಂತದೆಡೆ, ವರದಂತೆವೋಲ್
ಕಾಣಿಸಿತು ವರ್ಷಶಾಪಂ, ರವಿಸಂಗಿ, ಶರಧಿ ಶಿಶು,
ನೀರದಸ್ತೂಪನೀಲಂ. (2.9–17–20)

'ಶಾಪ' ಎಂದ ತಕ್ಷಣ ನಮ್ಮ ಮನಸ್ಸಿಗೆ ಬರುವುದು 'ಕೆಡುಕನ್ನು ಬಯಸಿ ಹೇಳುವ ಮಾತು.' ಆದರೆ ಕವಿಯು ವರ್ಷದ ಜೊತೆಗೆ ಶಾಪವನ್ನು ಸೇರಿಸಿ ಒಂದು ವಿಶಿಷ್ಟ ಅರ್ಥ ಹೊಮ್ಮಿಸಿದ್ದಾರೆ. 'ಶಾಪ' ಪದಕ್ಕೆ 'ಪ್ರಮಾಣ', 'ಪ್ರತಿಜ್ಞೆ' ಎಂಬ ಅರ್ಥವೂ ಇದೆ. ಆ ಅರ್ಥದಲ್ಲಿ 'ಶಾಪ' ಪದವನ್ನು 'ವರ್ಷ'ದ ಜೊತೆ ಕವಿ ಬಳಸಿದ್ದಾರೆ. 'ವರ್ಷಶಾಪಂ' ವಿಶಿಷ್ಟ ಪದವು 'ಮಳೆಯನ್ನು ತರುವ ಪ್ರತಿಜ್ಞೆ ಹೊತ್ತ' ಎಂಬ ಅರ್ಥವನ್ನು ವ್ಯಂಜಿಸುತ್ತದೆ.

ರಾಮನು ಸೀತೆಗೆ ಹೇಗೋ ಹಾಗೆ ಮುಂಗಾರಿಗೆ ತಿರೆಯು ಬಾಯಾರುತ್ತಿತ್ತು. ಆಗ ಓ ಆ ದಿಗಂತದ ಎಡೆಯಲ್ಲಿ ಮಳೆಯನ್ನು ತರುವ ಪ್ರತಿಜ್ಞೆ ಹೊತ್ತ, ರವಿಯ ಸ್ನೇಹಿತ, ಶರಧಿ ಶಿಶುವಿನ ನೀಲಿಯ ಮೋಡದಟ್ಟಣೆ ವರದಂತೆ ಕಾಣಿಸಿತು.

ವಿಮರ್ಶಕನ ಕಾಣ್ಕೆಯಿಲ್ಲದ ಬರಿಯ ಜಾಣ್ಮೆ

ಕವಿಕಲ್ಪನೆಯ ಕೂಡೆ
ಏರಲೆಳಸಿಯುಮೇರಲಾರದ ವಿಮರ್ಶಕನ
ಕಾಣ್ಕೆಯಿಲ್ಲದ ಬರಿಯ ಜಾಣ್ಮೆಯೋಲ್. (2.11–118–120)

ಹೋಗುವ ನೆಂಟರನ್ನು ಸ್ವಲ್ಪ ದೂರ ಕಳುಹಿಸಿ ಬರುವ ಮನೆಯವರಂತೆ, ಬಂಡೆ ಗಿಡ ಬಳ್ಳಿಗಳು ತುಸುದೂರ ಹಾರಿ ಕವಿಕಲ್ಪನೆಯ ಜೊತೆ ಏರಲಾರದ ವಿಮರ್ಶಕನ ದರ್ಶನ ರಹಿತ ಜಾಣ್ಮೆಯಂತೆ ಗಮನಗೆಟ್ಟು ಮತ್ತೆ ಸಮುದ್ರಕ್ಕೆ ಉರುಳಿದವು.

ಆಂಜನೇಯನು ಯೋಗಶಕ್ತಿಗೊಳಗಾಗಿ ಮಹೇಂದ್ರ ಪರ್ವತದಿಂದ ಲಂಘಿಸುವಾಗಿನ ಚಿತ್ರವನ್ನು ನೀಡುವಾಗ ಕವಿ ಮೇಲಿನ ಸಹಜ ಪ್ರಾಕೃತಿಕ ಕ್ರಿಯೆಯ ಜೊತೆಗೆ ಕಾವ್ಯವಿಮರ್ಶಕನ ಮಿತಿಯನ್ನು ಉಪಮಾನಾತ್ಮಕವಾಗಿ ತಿಳಿಸಿದ್ದಾರೆ.

ಹೊಳವು

ಮಳೆ ನಿಂತ ನಂತರ ಉಂಟಾಗುವ ಬೆಳಕು; ಹೊರಪು. ಆಗ ಆಗಸ ಕಾಂತಿಯಿಂದ ಹೊಳೆಯುತ್ತದೆ. ಕುವೆಂಪು ಅವರು ರಾವಣನು ಕರೆದಿದ್ದ ಯುದ್ಧ ಪೂರ್ವ ಸಭೆಯಲ್ಲಿ ನಡೆದ ಮಾತಿನ ಗದ್ದಲವನ್ನು ವರ್ಣಿಸುತ್ತ, ಅದು ಇದ್ದಕ್ಕಿದ್ದ ಹಾಗೆ ಇಲ್ಲವಾದ ಆ ಸಂದರ್ಭವನ್ನು ಹೀಗೆ ಚಿತ್ರಿಸಿದ್ದಾರೆ.

ಇರಲಿರಲ್,
ಇದ್ದಿದ್ದವೊಲ್, ಸದ್ದು ಹೊಳವಾಯ್ತು (3.7–169, 70)

ಕವಿಯ ಸೂಕ್ಷ್ಮ ಗ್ರಾಹಿ ಮನಸ್ಸು ಸದ್ದು ಇಲ್ಲದಾದ ಸಭೆ ಬಣ್ಣಿಸಲು 'ಸದ್ದು ಹೊಳವಾಯ್ತು' ಎಂಬ ಗ್ರಾಮೀಣ ಪದ ಬಳಸಿದೆ. 'ಮಳೆ ನಿಂತ ನಂತರ ಉಂಟಾಗುವ ಬೆಳಕು' ಹೇಗೋ ಹಾಗೆ ಸದ್ದು ಅಡಗಿದ ನಂತರ ಹೊಳವಾಯ್ತು. ಮಳೆ ಬರುವಾಗ ಸದ್ದಿರುತ್ತದೆ. ಸಭೆಯಲ್ಲಿರುವ ಸದ್ದು ಮಳೆಬಿದ್ದಂತೆ ಇತ್ತು. ಮಳೆ ನಿಂತಾಗ ಆಗಸದಲ್ಲಿ ಬೆಳ್ಳನೆ ಬೆಳಕು ಕಂಡಂತೆ, ಸದ್ದು ಅಡಗಿದಾಗ ಓಲಗದಲ್ಲಿ ಬೆಳಕಾದಂತಾಯಿತು ಎಂಬ ಭಾವ. ಆ ಸಭೆ ನಿಶ್ಶಬ್ದವಾಗಿ ಸಭಾಮರ್ಯಾದೆಯ ಲಕ್ಷಣದ ಸೂಚನೆ ನೀಡುವ ಧ್ವನಿಯಾಗಿ 'ಹೊಳವು' ಪದ ಪ್ರಯೋಗವಾಗಿದೆ.

ಹಣ್ಣಾದಾಗ ಬಂದೀತು ಹಾಡು

'ದಶಗ್ರೀವನಾತ್ಮಮುಂ,
ತನ್ನ ಕಸುಗಾಯ್ತನದೊಗರ್ ಕಳೆದು, ಪಣ್ತನಕೆ
ತಿರುಗುತಿರ್ಪೊಂದು ಸೂಚನೆ ತೋರುತಿಹುದೆನೆಗೆ.'(4.3–223–25)

ವಿಭೀಷಣನ ಮಗಳು ಅನಲೆಯು ತನ್ನ ದೊಡ್ಡಪ್ಪ ರಾವಣನು ಒಗರು ಕಳೆದುಕೊಂಡು ಬದಲಾಗುತ್ತಿರುವುದನ್ನು ಸೀತೆಗೆ ತಿಳಿಸಲು ಈ ಮೇಲಿನ ಹಣ್ಣಿನ ಪ್ರತಿಮೆಯಲ್ಲಿ ಸಮರ್ಥವಾಗಿ ಧ್ವನಿಸಿದ್ದಾಳೆ.

* * *

ಬೇಂದ್ರೆಯವರು ತನ್ನ ವೈಯಕ್ತಿಕ ಬೆಳವಣಿಗೆ, ಜೀವನಾನುಭವ, ಪರಿಸರದ ಪ್ರಭಾವ ಎಲ್ಲವೂ ಹೇಗೆ ತನ್ನನ್ನು ಕವಿಯಾಗಿಸಿತು ಎಂದು ಹಣ್ಣಿನ ಪ್ರತಿಮೆಯಲ್ಲಿ ಹೀಗೆ ಚಿತ್ರಿಸಿಕೊಂಡಿದ್ದಾರೆ:

ನಿನ್ನನದು ಕಸುಗಾಯಿ
ಇಂದಿನದು ತುಸು ಪಾಡು

ನಾಳೆ ಹಣ್ಣಾದಾಗ ಬಂದೀತು ಹಾಡು (ಜೀವಲಹರಿ : ನಮ್ಮ ಬಾಳು ತೋೕರಿಕೆ)

ಪ್ರತಿವ್ಯಕ್ತಿಯೂ ತನ್ನಲ್ಲಿರುವ ಕಸುಗಾಯಿತನ ಕಳೆದುಕೊಂಡು, ಪಾಡಾದ ಸ್ಥಿತಿಗೆ ಬರಬೇಕು. ಅನಂತರ ಹಣ್ಣು ಆಗುವುದು ಅತಿಸಹಜ. ಆ ಹಣ್ಣಿನ ಸವಿ ರಾವಣನ ಬಾಳಿನ ಸವಿ; ಕವಿಯ ಪಾಡು ಹಾಡಾಗುವ ಕಾವ್ಯಸವಿ.

(ಉತ್ತರ ಕರ್ನಾಟಕದಲ್ಲಿ ಮಾವು ದೋರುಗಣ್ಣಿನ ಹಂತ ದಾಟಿ ಪಕ್ವತೆಯ ಹಂತ ತಲುಪಿದ ಸ್ಥಿತಿಯನ್ನು 'ಪಾಡು' ಎನ್ನುವರು)

ಅಭಂಗ ಶ್ಲೇಷೆ

ಸೀತಾಕಾಂತನಂತರದಿ
ಘೂರ್ಣಿಸಿತ್ತೊಂದನತಿದೂರಂ ಮನಃಕ್ರಾಂತಿ!(1.11–410, 11)

ಇದೊಂದು ಅಭಂಗ ಶ್ಲೇಷೆಯ ವಾಕ್ಯರಚನೆ. ಮುಂದಿನ ಕಥಾಂತರವನ್ನು ಪೂರ್ವಸೂಚನೆಯಾಗಿ ಭಂಗಪಡಿಸದೆ ಗುಪ್ತವಾಗಿ ಅಡಗಿಸಿಡುವುದು ಅಭಂಗ ಶ್ಲೇಷೆ. ಕಥೆಯ ಪೂರ್ವ ಸೂಚನಾ ಧ್ವನಿ ಹೊಮ್ಮಿಸುವ ಕುಶಲಕರ್ಮ. ಇದು 'ಅಯೋಧ್ಯಾಕಾಂಡ'ದ ಸಂಚಿಕೆ 11 'ಪಂಚವಟಿಯ ಪರ್ಣಕುಟಿ'ಯ ಕೊನೆಯ ನುಡಿಯಾಗಿದೆ. ಇದು ಕುವೆಂಪು ಅವರ ಮಹಾಕಾವ್ಯ ರಚನಾ ಕುಶಲತೆ.

ಚಂದ್ರನಖಿಯ ಮೇಲೆ ಆಕ್ರಮಣ ಆದಾಗ ಪ್ರಕೃತಿ ಏನೂ ಆಗಿಲ್ಲ ಎಂಬಂತೆ ಶಾಂತವಾಗಿತ್ತು. ಆದರೆ ರಾಮನ ಮನಃ ಪ್ರಕೃತಿಯಲ್ಲಿ ಶಾಂತಿ ಇರಲಿಲ್ಲ. ಸದ್ಯದ ಭವಿಷ್ಯದಲ್ಲಿ ಏನೋ ಕಾದಿದೆ ಎಂದು ಅವನ ಮನಸ್ಸು ಚಡಪಡಿಸುತ್ತಿತ್ತು. ರಾವಣನ ಮನೆಯ ಹೆಣ್ಣಿನ ಮೇಲೆ ದಾಳಿ ಮಾಡಿದ್ದೇವೆ. ಸದ್ಯದ ಭವಿಷ್ಯದಲ್ಲಿ ನಮ್ಮ ಮನೆಯ ಹೆಂಗಸಿನ ಮೇಲೆಯೂ ದಾಳಿ ಆಗಬಹುದು ಎಂದು ಚಿಂತಿಸಿದ.

('ಉದಯ ವಿಕಾಸ' ಷಣ್ಮಾಸಿಕ ಸಾಹಿತ್ಯ ಸಂಸ್ಕೃತಿ ಅಧ್ಯಯನ ಪತ್ರಿಕೆ., ಜನವರಿ–ಜೂನ್ 2021, ಉದಯಭಾನು ಕಲಾಸಂಘ, ಬೆಂಗಳೂರು)

❖❖❖

ಕುವೆಂಪು ಸೃಜಿಸಿದ ಸಾಹಿತ್ಯ ಸಾಂಸ್ಕೃತಿಕ ಐತಿಹ್ಯಗಳು

ಹಂಪಿಯ ಕನ್ನಡ ವಿಶ್ವವಿದ್ಯಾಲಯದವರು ಕುಪ್ಪಳ್ಳಿಯ ಕುವೆಂಪು ಕನ್ನಡ ಅಧ್ಯಯನ ಕೇಂದ್ರದಲ್ಲಿ ಬೇಂದ್ರೆ ಕುವೆಂಪು ಸಾಹಿತ್ಯ ಅಧ್ಯಯನ ಕಮ್ಮಟವನ್ನು (2015 ಮಾರ್ಚ್ 27,28,29) ನಡೆಸಿದರು. ಪ್ರೊ. ಕೆ.ಸಿ. ಶಿವಾರೆಡ್ಡಿಯವರು 'ಬೇಂದ್ರೆ ಕಾವ್ಯ: ದೇಸಿ ಪದ ಪ್ರಯೋಗ' ಕುರಿತು ಉಪನ್ಯಾಸ ನೀಡಲು ಆಹ್ವಾನಿಸಿದ್ದರು.

ಬೇಂದ್ರೆ ಕುವೆಂಪು ಸಾಹಿತ್ಯ ಅಧ್ಯಯನ ವಿಮರ್ಶೆ ಸಂವಾದಗಳ ಬೌದ್ಧಿಕ ವಿಕಾಸದ ಜೊತೆಗೆ ಕುವೆಂಪು ಅವರು ಸೃಜಿಸಿದ ಸಾಹಿತ್ಯ ಸಾಂಸ್ಕೃತಿಕ ಐತಿಹಾಸಿಕ ತಾಣಗಳ ಭೇಟಿ ಈ ಕುಮ್ಮಟದ ವೈಶಿಷ್ಟ್ಯವಾಗಿತ್ತು. ಆ ಮೂಲಕ ಶಿಬಿರಾರ್ಥಿಗಳು ಕುವೆಂಪು ಪರಿಸರದ ಪ್ರಕೃತಿಯ ಒಡನಾಟದಲ್ಲಿ ಕುವೆಂಪು ಕಾವ್ಯಾನುಭವ ಪಡೆದರು.

ಕವಿಶೈಲ

ಪ್ರೊ. ಶಿವಾರೆಡ್ಡಿಯವರು ಎಲ್ಲರೂ 'ಕವಿಶೈಲಕ್ಕೆ ಹೋಗೋಣ ಬನ್ನಿ ಎಂದರು. ಸುಮಾರು ಎಪ್ಪತ್ತು ಜನ ಯುವಕ ಯುವತಿಯರ ಜೊತೆ 'ಕವಿಶೈಲಕ್ಕೆ ವಿಶಾಲ ಮೆಟ್ಟಿಲುಗಳನ್ನು ಏರಿ ಹೋಗುವಾಗ ನನ್ನಲ್ಲೂ ಹೊಸಹುರುಪು ತುಂಬಿಕೊಂಡಿತು. ಆ ದಿಬ್ಬದ ಹಾದಿಯಲ್ಲಿ ನಮ್ಮನ್ನು ಸ್ವಾಗತಿಸುವಂತೆ ಬೃಹತ್ ಗಾತ್ರದ ಅತೀ ಎತ್ತರದ ಭವ್ಯ ರೂಪಾಂತ ಸ್ವಾಗತ ಕಂಬಗಳು ಕಂಡವು. ಕಲಾವಿದ ಕೆ. ಟಿ ಶಿವಪ್ರಸಾದ್‌ರ ಕಲ್ಪನೆಯಲ್ಲಿ ಪ್ರಕೃತಿಯ ಆಂತರ್ಯದ ಬೃಹತ್ ಚೇತನ ಹೊರಹೊಮ್ಮಿ ಭೂಮಾಕಾರ ಪಡೆದಿದೆಯೋ ಎಂಬಂತೆ ಅವು ಗೋಚರಿಸಿದವು.

ಆ ಪ್ರದೇಶವನ್ನು ಕುವೆಂಪು ಅವರು 'ಕವಿಶೈಲ ಎಂದು ಕರೆಯುವ ಮೊದಲು ಅಲ್ಲಿಯ ಅತಿ ಸಹಜ ಪ್ರಾಕೃತಿಕ ಉತ್ಸವದಂತಹ ಉಲ್ಲಾಸಕ್ಕೆ ಅವರ ಪೂರ್ವಿಕರು ದಿಬ್ಬಣಗಲ್ಲು' ಎಂದು ಕರೆಯುತ್ತಿದ್ದರಂತೆ. ಓಹ್ ಎಷ್ಟು ಅರ್ಥಪೂರ್ಣ ದೇಸೀ ಬೆಡಗು.

ಕುವೆಂಪು ಅವರು 'ಕಾಡು ಮುತ್ತು ಕೊಡುತರಲಿರುವ ಸೊಬಗು ವೀಡು ನನ್ನ ಮನೆಯನ್ನು ನೋಡಲು ಬನ್ನಿ' ಎಂದು ತಮ್ಮ ಗುರು ಟಿ. ಎಸ್. ವೆಂಕಣ್ಣಯ್ಯ ಸ್ನೇಹಿತ ತೀ. ನಂ ಶ್ರೀಕಂಠಯ್ಯ ಹಿರಿಯರಾದ ನಾ. ಕಸ್ತೂರಿಯವರನ್ನು 1935 ರ ಬೇಸಿಗೆಯಲ್ಲಿ ಕುಪ್ಪಳ್ಳಿಗೆ ಕವಿಶೈಲಕ್ಕೆ ಕರೆದುಕೊಂಡು ಹೋಗಿದ್ದರು. 25-5-1935 ರಂದು ಪೂಜ್ಯ ಸ್ವಾಮಿ ಸಿದ್ದೇಶ್ವರಾನಂದರನ್ನು ಕನ್ನಡ ನವೋದಯ ಆಚಾರ್ಯ ಬಿ. ಎಂ ಶ್ರೀಕಂಠಯ್ಯ ಅವರನ್ನು ಅಲ್ಲಿಗೆ ಕರೆದುಕೊಂಡು ಹೋಗಿದ್ದರು. ಆ ಎರಡು ಸಂದರ್ಭಗಳಲ್ಲಿ ಅವರೆಲ್ಲರೂ ಕವಿಶೈಲದ ಅರೆಬಂಡೆಯ ಮೇಲೆ ತಂತಮ್ಮ ಹೆಸರಿನ ಪ್ರಥಮಾಕ್ಷರಗಳನ್ನು ಕಲ್ಲುಗಳಿಂದ ಹೊಡೆದು ಕೆತ್ತಿದ್ದಾರೆ. ಅದು ಕರ್ನಾಟಕದ ಸಾಹಿತ್ಯ ಸಾಂಸ್ಕೃತಿಕ ಇತಿಹಾಸ. ಶಿಬಿರಾರ್ಥಿಗಳು ಕನ್ನಡ ಶ್ರೇಷ್ಠರ ಹಸ್ತಾಕ್ಷರ ಕೆತ್ತನೆಯನ್ನು ಮುಟ್ಟಿ ನೋಡುತ್ತಾ ಭಾವಪರವಶರಾದರು. ಆ ಬಂಡೆಯ ಪಕ್ಕದಲ್ಲಿಯೇ ಇರುವ ಕುವೆಂಪು ಸಮಾಧಿಗೆ ತಲೆಬಾಗಿದರು.

ಪೂರ್ವಕ್ಕೆ ಬಂಡೆಯಿದ್ದರೆ ಪಶ್ಚಿಮಕ್ಕೆ ಕಣ್ಣಿಟ್ಟು ಹರಿದಷ್ಟು ಹಬ್ಬಿರುವ ಸಮೃದ್ಧ ಹಸಿರು ಅರಣ್ಯವಿದೆ. ಕವಿಶೈಲದ ಆ ಸುಂದರ ಸಂಜೆಯಲ್ಲಿ ಚಿಗುರೆಯ ಕಣ್ಣು ಹೊತ್ತಂತಹ ಲಲನೆಯರ ಸಂತೋಷವೂ ಮುಖದಲ್ಲಿ ಮುಕ್ಕಳಿಸಿದಂತೆ ನಲಿದಾಡುತ್ತಿತ್ತು. ಫೋಟೋಗಳನ್ನು ಕ್ಲಿಕ್ಕಿಸಿದರು. ಸೆಲ್ಫಿಯಲ್ಲಿ ಹುಡುಗಿಯರು ತಮ್ಮನ್ನೇ ತಾವು ಕಂಡು ಸುಖಿಸುತ್ತಿದ್ದರು. ಪಶ್ಚಿಮ ದಿಗಂತದಲ್ಲಿ ಸೂರ್ಯ ಮುಳುಗುವ ಸೊಬಗು ಗೋಚರಿಸಿತು. ರೆಡ್ಡಿಯವರು ಎಲ್ಲರೂ ಕಣ್ ಬಿಟ್ಟು ಸೂರ್ಯನತ್ತ ಗಮನಹರಿಸಿ ಮೌನವಾಗಿರಿ ಎಂದರು.

ಹೊಳೆ ಹೊಳೆವ ಬೆಳಕನ್ನು ತನ್ನಲ್ಲಿ ಒಂದಾಗಿಸಿಕೊಳ್ಳುವ ಅರಣ್ಯದ ನಿಗೂಢ ಕತ್ತಲನ್ನು ವೀಕ್ಷಿಸುತ್ತಾ ಆ ಬೈಗು ಗೆಂಪಿಗೆ ನಾನು ದಿಙ್ಮೂಢನಾದೆ. ಬೆಳಕಿನಂತೆ ಹಗಲಿನ ಸದ್ದು ಅದರೊಡನೆ ಕರಗುತ್ತಿತ್ತು. ಆ ಮೌನಾನುಭವವೇ ಸಗ್ಗದ ಸವಿಯಾಗಿತ್ತು.

'ಮುಳುಗುತಿದೆ ಸಂಜೆ ರವಿ ಕುಂಕುಮದ ಚೆಂಡಿನೊಲು ದೂರ ದೂರದಲಿ' ಎಂದು ಕುವೆಂಪು ಕಂಡು ಹರ್ಷಿಸಿದಂತೆ ನಾವೂ ಹರ್ಷಿಸಿದೆವು. ಅಲ್ಲಿಂದ ಮೌನವಾಗಿ ಇಳಿದು ಬರುವಾಗ ರೆಡ್ಡಿ ಅವರು ನಾಳೆ ಬೆಳಿಗ್ಗೆ ನವಿಲು ಕಲ್ಲು, ಸಿಬ್ಬಲು ಗುಡ್ಡೆ, ರಾಮತೀರ್ಥಕ್ಕೆ ಹೋಗೋಣ ಎಂದು ಹೇಳಿದರು. ಆಸಕ್ತಿ ಇರುವವರು ಬೆಳಗ್ಗೆ ನಾಲ್ಕು ಗಂಟೆಗೆ ತಯಾರಾಗಿ ಬಸ್ ನಲ್ಲಿರಬೇಕು ಎಂದು ಫರ್ಮಾನು ಹೊರಡಿಸಿದರು.

ನವಿಲುಕಲ್ಲು

ಬೆಳಗಿನ ಜಾವ ನಾಲ್ಕು ಗಂಟೆಯಲ್ಲಿ ಸಹಕಾರ ಸಾರಿಗೆ ಬಸ್ಸು ಕುವೆಂಪು ಶತಮಾನೋತ್ಸವ ಭವನದ ಮುಂದೆ ನಿಂತಿತು. ನವಿಲುಗಣ್ಣಿನ ವಿದ್ಯಾರ್ಥಿನಿಯರು ಲವಲವಿಕೆಯಿಂದ ಬಂದು ಬಸ್ಸಿನಲ್ಲಿ ಆಸೀನರಾದರು. ವಿದ್ಯಾರ್ಥಿಗಳು ತಡವಾಗಿ ಬಂದರು. ಕಮಲಾ ನೆಹರೂ ಕಾಲೇಜಿನ ನಗುಮೊಗದ ಉಪನ್ಯಾಸಕಿಯು ತಡವಾಗಿ ಬಂದರು. 'ಕಮಲಗಳೆಲ್ಲಾ ಕಣ್ಬಿಟ್ಟಿರುವಿರಾ?' ಎಂದು ಕೇಳಿದರು. ಆಗ ಓರ್ವ ತುಂಟಿ ಹುಡುಗಿ 'ಸೂರ್ಯ ಇನ್ನೂ ಕೃಪೆದೋರಿಲ್ಲ.' ಎಂದಳು! ಹುಡುಗರೆಲ್ಲಾ ಗೊಳ್ಳೆಂದು ನಕ್ಕರು! ಸುಮಾರು 60 ಜನ ಬಸ್ಸಿನಲ್ಲಿ ತುಂಬಿಕೊಂಡರು.

ಬಸ್ ಮುಂದೆ ಚಲಿಸುತ್ತಿದ್ದಂತೆ ಹೆಡ್ ಲೈಟ್ ಬೆಳಕು ಕತ್ತಲನ್ನು ಸೀಳಿ ಮುನ್ನುಗ್ಗುತ್ತಿದ್ದಿತು. ಆ ಬೆಳಕಿಗೆ ರಸ್ತೆಯ ಎರಡೂ ಬದಿಯ ಮರಗಳು ಹಿಂದಕ್ಕೆ ಚಲಿಸುತ್ತಾ ಕಾಡಿನ ಪಹರೆಯ ಜಾಗೃತ ಚೇತನಗಳಂತೆ ಕಂಡವು. ಕುಪ್ಪಳಿಯಿಂದ ನವಿಲು ಕಲ್ಲಿಗೆ ಸುಮಾರು ಹದಿನಾಲ್ಕು ಕಿಲೋಮೀಟರ್ ದೂರವಿದೆ. ಆ ಕಗ್ಗತ್ತಲಿನಲ್ಲಿ ಯುವ ಚೇತನಗಳ ಉತ್ಸಾಹದಲ್ಲಿ ದಾರಿ ಸವೆದದ್ದೇ ಗೊತ್ತಾಗಲಿಲ್ಲ.

ಬಸ್ ಇಳಿದು ನವಿಲು ಕಲ್ಲಿನತ್ತ ಸಾಗುವ ದಾರಿಯಲ್ಲಿ ಕತ್ತಲೆ ರಾಜ್ಯವಾಳುತ್ತಿತ್ತು. ಅದು ಕಾಡು ದಾರಿ. ರೆಡ್ಡಿಯವರು ಮುಂದೆ ನಡೆದರು. ಅವರ ಹಿಂದೆ ನಾವು ಹೊರಟೆವು ಆಧುನಿಕ ಮೊಬೈಲ್ ಬೆಳಕಿನಲ್ಲಿ ನಡೆಯುತ್ತಾ ಸಾಗಿದೆವು. ಅವುಗಳ ಬೆಳಕು ನಿಂತಾಗ ಪಕ್ಕದಲ್ಲಿದ್ದವರನ್ನು ಮುಟ್ಟಿದರೆ ಕತ್ತಲೆಯನ್ನು ಮುಟ್ಟಿದಂತಾಗುತ್ತಿತ್ತು! ಎಚ್ಚರ ಎಡವಿ ಬಿದ್ದೀರಾ, ಏರು, ಅಡ್ಡಗಲ್ಲಿದೆ, ಬಳ್ಳಿ ಸರಿಸಿ ಎಂದು ಹೇಳುತ್ತಾ ಹೋದೆವು. ನಿರ್ಜನ ನೀರವ ಕಾಡಿನಲ್ಲಿ ಮಿಂಚುಹುಳುಗಳಂತೆ ಬೆಳಕು ಬೀರುವ ಮೊಬೈಲ್‌ಗಳ ಪ್ರಕಾಶದಲ್ಲಿ ನವಿಲುಕಲ್ಲು ಗಿರಿ ತಲುಪಿದೆವು. ನವಿಲುಗಳ ವಿಹಾರ ಸ್ಥಾನವೇ ನವಿಲುಕಲ್ಲು.

ಗಿರಿಯ, ವಿಶಾಲ ಜಾಗದಲ್ಲಿ ಎಲ್ಲರೂ ಪೂರ್ವಾಭಿಮುಖವಾಗಿ ಕುಳಿತೆವು. ರೆಡ್ಡಿ ಅವರ 'ಮೌನವೇ ಇಲ್ಲಿ ನಿಮ್ಮ ಉಸಿರಾಗಬೇಕು' ಎಂದರು ಎಲ್ಲರೂ ಶಾಂತಚಿತ್ತರಾಗಿ ನಿಶ್ಚಲತೆಯಿಂದ ಕಾಡಿನ ನೀರವತೆಯಲ್ಲಿ ಒಂದಾದೆವು.

1935ರ ಮೇ ತಿಂಗಳಲ್ಲಿ ಕುವೆಂಪು ಅವರು ಟಿ. ಎಸ್. ವೆಂಕಣ್ಣಯ್ಯ, ತೀ ನಂ ಶ್ರೀ, ನಾ. ಕಸ್ತೂರಿ ಅವರನ್ನು ಬೆಳಗ್ಗೆ ಐದು ಗಂಟೆಗೆ ಕಾರಿನಲ್ಲಿ ನವಿಲುಕಲ್ಲಿಗೆ ಕರೆದುಕೊಂಡು ಬಂದಿದ್ದರು. 25-5-1936 ರಂದು ಬೆಳಗ್ಗೆ ನಾಲ್ಕು ಗಂಟೆಗೆ ಬಿ. ಎಂ. ಶ್ರೀ ಮತ್ತು ಸ್ವಾಮಿ ಸಿದ್ಧೇಶ್ವರಾನಂದಾಜಿ ಅವರನ್ನು ಎಬ್ಬಿಸಿಕೊಂಡು ಗ್ಯಾಸ್ ಲೈಟ್ ಹಿಡಿದು ಇಲ್ಲಿಗೆ ಕರೆದುಕೊಂಡು ಬಂದಿದ್ದರು. ಅದು ನಾಡಿನ

ಸಾಂಸ್ಕೃತಿಕ ಇತಿಹಾಸ. ಅದೇ ಬಗೆಯಲ್ಲಿ ಇಂದು ನಾಡಿನ ಕುವೆಂಪು ಅಭಿಮಾನಿ ಯುವ ಚೈತನ್ಯಗಳಿಗೆ ನವಿಲುಕಲ್ಲು ದರ್ಶನವನ್ನು ರೆಡ್ಡಿ ಅವರು ಮಾಡಿಸಿದರು. ಇದು ನಾಡಿನ ಪ್ರಾಕೃತಿಕ ಸಿರಿ ತಿಳಿಯುವ ಪರಿಸರ ಹಾಗೂ ಸಾಂಸ್ಕೃತಿಕ ಜಾಗೃತಿ.

ಅಂದು ಪೂರ್ವ ದಿಗಂತದಲ್ಲಿ ಮಂಜಿನ ತೆಳ್ಳನೆಯ ಪರದೆ ಆವರಿಸಿತ್ತು. ಉಷೋದಯವಾಯಿತು. ಸೂರ್ಯೋದಯ ಕಾಣುವ ಭಾಗ್ಯ ದೊರೆಯಲಿಲ್ಲ. ಒಂದು ವನಗಾಯಕ ಪಕ್ಷಿ ತನ್ನ ಸವಿಯಿಂಚರದಲ್ಲಿ ಹಾಡುತ್ತಾ ನಮ್ಮೆಲ್ಲರ ಮೇಲೆ ಹಾರಾಡಿತು. ಬೆಳಕು ಕಣ್ ಬಿಟ್ಟಿತು. ರೆಡ್ಡಿ ಅವರು ಕವನ ವಾಚಿಸತೊಗಡಿದರು.

ನಾ ಧನ್ಯ ನಾ ಧನ್ಯ ನಾ ಧನ್ಯನಿಂದು
ಉಷಾರವಿಯ ದರುಶನಕೆ ಇಲ್ಲಿಗೈ ತಂದು!
ಮಾತೆ ಮೈದೋರಿಹಳು: ಕೈ ಮುಗಿದು ನಿಂದು
ಕಣ್ತುಂಬಿ ನೋಡು; ಮಾತಾಡದಿರು, ಬಂಧು.
ಆತ್ಮದಾನಂದದಲಿ ಮುಳುಗಿ ಮುಳುಗಿ ಮಿಂದು
ನಾ ಧನ್ಯ ನಾ ಧನ್ಯ ನಾ ಧನ್ಯ ನಾ ಧನ್ಯನಿಂದು!
(ನವಿಲುಕಲ್ಲಿನಲ್ಲಿ, ಮತ್ತೊಮ್ಮೆ! : ಅನಿಕೇತನ)

ಮೌನದಲ್ಲಿ ಮಿಂದಿದ್ದ ಎಲ್ಲರಿಗೂ ಆ ಕವನ ಧನ್ಯತಾ ಭಾವವನ್ನು ತುಂಬಿತು. ಕಾವ್ಯ ವಾಚನದ ರಸಾನುಭವವಾಯಿತು. ನವಿಲು ಕಲ್ಲಿನ ಸುತ್ತಲೂ ಕಣ್ಣು ಹರಿದಷ್ಟು ದೂರ ವಿಶಾಲವಾಗಿ ಹಬ್ಬಿದ ಹಸಿರು ನೋಡುವುದೇ ಜೀವದಾನಂದವಾಯಿತು.

ಸಿಬ್ಬಲು ಗುಡ್ಡೆ

ಬಸ್ ಸಿಬ್ಬಲು ಗುಡ್ಡೆಗೆ ಹೊರಟಿತು. ಅಲ್ಲಿ ವಿನಾಯಕನ ದೇವಸ್ಥಾನವಿದೆ. ಕೆಳಗೆ ಮೆಟ್ಟಿಲು ಇಳಿದು ಸಾಗಿದರೆ ತುಂಗಾ ನದಿ ಇದೆ. ಅಲ್ಲಿರುವ ಮೀನುಗಳಿಗೆ ಹಾಕಲು ಎರಡು ಕೆ.ಜಿ. ಅಕ್ಕಿಯನ್ನು ರೆಡ್ಡಿಯವರು ಕೊಂಡುಕೊಂಡರು. ಎಲ್ಲರೂ ನದಿಯ ದಡದ ಮೆಟ್ಟಿಲುಗಳ ಮೇಲೆ ಅಲ್ಲಲ್ಲಿ ಕುಳಿತರು. ನೀರಿನಲ್ಲಿ ಶಾಂತವಾಗಿ ಒನೆದಾಡಿ ನಲಿವ ಮೀನುಗಳಿಗೆ ಹಿಡಿಹಿಡಿ ಅಕ್ಕಿ ಹಾಕಿ ಯುವಕ ಯುವತಿಯರು ಖುಷಿಪಟ್ಟರು.

ತುಂಗಾ ಸಲಿಲದ ಮರಳು ರಾಶಿ ತೋರಿಸುತ್ತಾ ರೆಡ್ಡಿಯವರು ಮುಗಿಲಿನಲ್ಲಿ ಹಾರುವ ಬೆಳ್ಳಕ್ಕಿಗಳನ್ನು ವೀಕ್ಷಿಸಿ ಎಂದರು. ಕತ್ತೆತ್ತಿನೋಡಿದ ಯುವ ಸಮೂಹ ಏನು ವಿಶೇಷವೆಂದು ಪ್ರಶ್ನಿಸಲು ಕಾತುರರಾಗಿದ್ದಾಗ ರೆಡ್ಡಿ ಅವರು 'ಇದೇ ಜಾಗದಲ್ಲಿ ಕುವೆಂಪು ಅವರು ಬೆಳ್ಳಕ್ಕಿಗಳನ್ನು ನೋಡುತ್ತಾ "ದೇವರು ರುಜು ಮಾಡಿದನು" ಕವನ ರಚಿಸಿದ್ದು' ಎಂದು ಹೇಳಿದರು.

ದೇವರು ರುಜುಮಾಡಿದನು;
ರಸವಶನಾಗುತ ಕವಿ ಅದ ನೋಡಿದನು!

***

ಸಿಬ್ಬಲು ಗುಡ್ಡೆಯ ಹೊಳೆಯಲಿ ಮೀಯುತ
ಕವಿ ಮನ ನಾಕದಿ ನೆಲೆಸಿತ್ತು;
ಮಧು ಸೌಂದರ್ಯದ ಮಧುರ ಜಗತ್ತು
ಹೃದಯ ಜಿಹ್ವೆಗೆ ಜೇನಾಗಿತ್ತು!
(ದೇವರು ರುಜುಮಾಡಿದನು : ಪಕ್ಷಿಕಾಶಿ)

ರಾಮತೀರ್ಥ

ಕವಿಯ ರಮ್ಯ ಮನೋಹರ ಕಲ್ಪನೆಯಲ್ಲಿ ನಾವು ತೇಲಾಡುತ್ತಾ ಬಸ್ ಹತ್ತಿದೆವು. ಆ ಗುಂಗಿನಲ್ಲಿರುವಾಗಲೇ ಆರು ಕಿಲೋಮೀಟರ್ ದೂರದ ಕುರುವಳ್ಳಿ ತಲುಪಿಬಿಟ್ಟಿದ್ದೆವು. ಅಲ್ಲಿಯ ಅರಳಿಕಟ್ಟೆಯ ಪಕ್ಕ ಮೆಟ್ಟಿಲಿಂದ ತುಂಗಾನದಿ ಪ್ರವೇಶಿಸಿದೆವು.

ತುಂಗಾ ನದಿಯ ಕಲ್ಲುಸಾರದ ಮೇಲೆ ತರುಣ ತರುಣಿಯರು ನಲಿದಾಡುತ್ತಾ ಸಾಗಿದರು. ತುಂಗಾನದಿಯ ಈ ಕಡೆಯ ದಡದಿಂದ ಆ ಕಡೆಗೆ ದಾಟಲು ಹಾಕಿದ ಚಪ್ಪಡಿ ಕಲ್ಲಿನ ಸೇತುವೆಯೇ ಕಲ್ಲುಸಾರ. ಅತೀ ಉದ್ದನೆಯ ಅಗಲವಾಗಿ ದಪ್ಪವಾಗಿರುವ ಬೃಹತ್ ಚಪ್ಪಡಿ ಕಲ್ಲುಗಳನ್ನು ತಂದು ನಿರ್ಮಿಸಿರುವ ಸೇತುವೆ ನೋಡಿ ನಮ್ಮ ಪೂರ್ವಿಕರ ಸಾಹಸಕ್ಕೆ ಮೈಜುಮ್ಮೆಂದಿತು.

ಕಲ್ಲುಸಾಗರದ ಮೇಲೆ ಹೋಗುವಾಗ ಬೆಳಗಿನಲ್ಲಿ ತಿಳಿನೀರು ನಳನಳಿಸುತ್ತಿತ್ತು. ಅಲ್ಲಿ ಒಂದು ಕಡೆ ಎಡಭಾಗದಲ್ಲಿ ನೀರು ಅಲುಗಾಡದಂತಿತ್ತು. ರೆಡ್ಡಿಯವರು 'ನೀವು ಐದು ಜನ ಬನ್ನಿ ನಿಮ್ಮನ್ನು ಹತ್ತುಜನರನ್ನಾಗಿ ಮಾಡುವೆ' ಎಂದು ಕರೆದರು. ನಾವು ಅಲ್ಲಿ ಹೋಗಿ ನಿಂತೆವು. ನಮ್ಮ ಪ್ರತಿಫಲದ ಫೋಟೋ ನೋಡಿದಾಗಲೆಲ್ಲಾ ಪ್ರೊಫೆಸರ್ ಅವರ ಆತ್ಮೀಯ ಭಾವ ಮನದಲ್ಲಿ ಪ್ರತಿಬಿಂಬಿಸುತ್ತದೆ.

ಎಲ್ಲರೂ ತುಂಗಾನದಿ ದಾಟುತ್ತಾ ರಾಮತೀರ್ಥದ ಕಲ್ಲು ಮಂಟಪದ ಬಳಿ ಬಂದೆವು. ಆ ಮಂಟಪದ ಬುಡದಲ್ಲಿ ಒಂದು ಕಟ್ಟೆಯಿದೆ. ಅಲ್ಲಿ ಹುಡುಗಿಯರು ನೀರಾಟ ಆಡಲು ಇಳಿದರು. ಕೆಲವು ನಿಮಿಷದ ನಂತರ ಚೌಡೇಶ್ ಅವರ ಮುಂದೆ ಹೋಗಿ ಸುಮ್ಮನೆ ನಿಂತರು. ಆ ತರುಣಿಯರು ತಮ್ಮ ತಮ್ಮಲ್ಲಿ ನೀರು ಎರಚಾಡುತ್ತಿದ್ದರು. ಸುಮ್ಮನೆ ನಿಂತಿದ್ದ ಚೌಡೇಶ್‌ನತ್ತ ನೀರು ಚಿಮ್ಮಿದರು. ಆತ ಮೌನವಾಗಿ ನಿಂತಿದ್ದ. ಅವನ ಬಟ್ಟೆ ಸ್ವಲ್ಪ ನೆನೆಯಿತು. ಅವರು ಅವನತ್ತ ಹೆಚ್ಚು ನೀರು ಚಿಮ್ಮಿ ನಗುತ್ತಿದ್ದರು. ಅವನು ಒಮ್ಮೆಲೆ ಬಗ್ಗಿ ಸರಸರನೆ ನೀರನ್ನು ಅವರತ್ತ ಒಂದೇ ಸಮನೆ ಎರಚಿದನು. ಲಲನೆಯರೆಲ್ಲಾ ತುಂಗಾ ಜಲದಲ್ಲಿ ನೆನೆದು ತೊಪ್ಪೆಯಾದರು. ನಾಚಿ ನಿಂತರು! ಇದು ತುಂಗೆ ಸಹಸ್ರಾರು ವರ್ಷದಿಂದ ಕಂಡ ಯುವ ಜೀವಿಗಳ ಮಾಟ!

ಆ ಮಂಟಪ ದಾಟಿ ಮುಂದೆ ಹೋದರೆ ಆಚೆಯ ದಡದಲ್ಲಿ ತೀರ್ಥಹಳ್ಳಿ. ಕುವೆಂಪು ಅವರ ಕಾನೂರು ಹೆಗ್ಗಡತಿ ಕಾದಂಬರಿಯ ಮೊದಲ ಅಧ್ಯಾಯದ ವಿಷಯ: ರಾಮತೀರ್ಥದೆಡೆ ಕಲ್ಲುಸಾರದ ಮೇಲೆ. ಹೆಗ್ಗಡತಿ ಕಥನ 19ನೇ ಶತಮಾನದ ಆದಿ ಭಾಗದ್ದು. ತೀರ್ಥಹಳ್ಳಿ ಕೊಪ್ಪದ ರಸ್ತೆಯಲ್ಲಿ ನಡೆದದ್ದಾಗಿದೆ. ಮಲೆಗಳಲ್ಲಿ ಮದುಮಗಳು ಕಥೆ 18ನೇ ಶತಮಾನದ ಅಂತ್ಯಭಾಗದ್ದು ತೀರ್ಥಹಳ್ಳಿ ಆಗುಂಬೆ ರಸ್ತೆಯಲ್ಲಿ ನಡೆದದ್ದಾಗಿದೆ.

ಕುವೆಂಪು ಜೀವನ ಕಥೆ ಕವನಗಳಲ್ಲಿ ಒಂದು ಪಾತ್ರವಾಗಿ ಹರಿದ ತುಂಗಾನದಿ ರಾಮತೀರ್ಥದ ದರ್ಶನ ಮಾಡಿ ನಾವೆಲ್ಲಾ ಕುಪ್ಪಳಿಗೆ ಹಿಂದಿರುಗಿದೆವು.

'ಎಲ್ಲರೂ ವಿಚಾರ ಸಂಕೀರ್ಣಕ್ಕೆ ಸಮಯಕ್ಕೆ ಸರಿಯಾಗಿ ಬನ್ನಿ' ಎಂದು ರೆಡ್ಡಿಯವರು ಹೇಳಲು, ಪಿಎಚ್‌ಡಿ ವಿದ್ಯಾರ್ಥಿ ಗುಂಡಪ್ಪ 'ಸರ್ ಉಪನ್ಯಾಸ ಸಂವಾದಗಳ ಜೊತೆಗೆ ನಮ್ಮ ಇಡೀ ಚೈತನ್ಯವನ್ನೂ ಜಾಗೃತಗೊಳಿಸುವ ಇನ್ನಾವ ರಮ್ಯ ಕುವೆಂಪು ತಾಣಕ್ಕೆ ಇಂದು ಸಂಜೆ ಕರೆದುಕೊಂಡು ಹೋಗುವಿರಿ?' ಎಂದು ಕೇಳಿದನು.

ಪ್ರೊ. ಅವರು ಸಂಜೆ ಬೇಂದ್ರೆ ಕುವೆಂಪು ಗೀತ ಗಾಯನ ನಾಳೆ ಬೆಳಗ್ಗೆ 5.30 ಕ್ಕೆ ಕುವೆಂಪು ಅವರ ಮನೆಯ ಬಳಿಗೆ ಬನ್ನಿ; ಎಲ್ಲರೂ 'ಸಂಜೆಗಿರಿಗೆ' ಹೋಗೋಣ ಎಂದರು. ಆಗ ದಿವ್ಯಳು 'ಪ್ರಕೃತಿಯಾರಾಧನೆಯೆ ಪರಮನಾರಾಧನೆ। ಪ್ರಕೃತಿಯೊಲ್ಮೆಯೆ ಮುಕ್ತಿಯಾನಂದ ಸಾಧನೆ' ಎಂದು ಕುವೆಂಪು ನುಡಿ ಹೇಳಿದಳು. ಅದನ್ನು ಕೇಳಿ ಎಲ್ಲರ ಮುಖಮಂಡಲ ಅರಳಿತು.

ಸಂಜೆಗಿರಿ

ಬೆಳಗ್ಗೆ 5.30ಕ್ಕೆ ಕುವೆಂಪು ಅವರ ಮನೆಯ ಬಳಿ ಸೇರಿದೆವು. ಕವಿ ಮನೆಯ ಪಕ್ಕದಲ್ಲಿ ರೆಡ್ಡಿ ಅವರು ಬಾಡಿಗೆಗೆ ಇದ್ದಾರೆ. ಅಲ್ಲಿ ಹೋಗಿ ಅವರನ್ನು ಮಾತಾಡಿಸಿದೆ. ಅವರು ನನಗೆ ಮತ್ತು ನನ್ನ ಶ್ರೀಮತಿಗೆ ಎರಡು ಉದ್ದನೆಯ ಕೋಲುಗಳನ್ನು ನೀಡಿದರು. ನನ್ನ 'ಏಕೆ?' ಎಂಬ ಪ್ರಶ್ನೆಗೆ 'ನಡೆಯಿರಿ ಮುಂದಕ್ಕೆ ಪ್ರಯೋಜನ ಕಾಣುವಿರಿ' ಎಂದರು.

ಕವಿ ನಿವಾಸದ ಎಡಭಾಗದಿಂದ ಬೆಟ್ಟದೋರೆ ಏರಿ ಹೋಗುವಾಗ ಅಲ್ಲಿ ಬಿರಿದ ಕಾಡು ಮಲ್ಲಿಗೆ ಹೂಗಳು ಕಂಪು ಬೀಸಿ ಆಹ್ವಾನ ನೀಡಿದವು. ಆ ಕಂಪಿನ ಸೆಳೆತಕ್ಕೆ ಯುವತಿಯರು ಮುದಗೊಂಡರು. ರೆಡ್ಡಿ ಅವರು ಮುಂದೆ ಸಾಗುತ್ತಿದ್ದಂತೆ ನಾವೆಲ್ಲ ಅವರನ್ನು ಹಿಂಬಾಲಿಸಿದೆವು. ಕವಿಶೈಲ ಬಂದಿತು. ಎಡಕ್ಕೆ ತಿರುಗಿದರು. ನಮಗೆ ಕಾಡಿನಲ್ಲಿ ನಡೆದಾಡಿದ ಅನುಭವವಾಯಿತು. ಏರುಹತ್ತಿ ಹೋಗಿ ಕೊರಕಲ್ಲಿನಲ್ಲಿ ಇಳಿಯುವಾಗ ರೆಡ್ಡಿ ಅವರು ನೀಡಿದ್ದ ಕೋಲಿನ ಉಪಯೋಗ ಗೊತ್ತಾಯಿತು.

ಎತ್ತರದ ವಿವಿಧ ಮರಗಳ ಕೆಳಗೆ ಪೊದೆಯಲ್ಲಿ ನುಗ್ಗಿ ಬಿದಿರು ಮೆಳೆಯಲ್ಲಿ ಸುಳಿದು ಹೋಗುವುದು ಬಯಲು ಸೀಮೆಯ ನನ್ನಂತಹವರಿಗೆ ಹಸಿರ ಸಿರಿಯಲ್ಲಿ ಸುಖಿಸಿದಂತಾಯಿತು. ಹನುಮಂತ, ಕೃಷ್ಣಮೂರ್ತಿ, ಗುಂಡಪ್ಪ, ಜಯಕುಮಾರ್, ಮಮತ, ಶಾಂತಲಾ ಮುಂತಾದ ಯುವ ಚೈತನ್ಯಗಳ ಜೊತೆ ನಡೆಯುವಾಗ ಎಲ್ಲ ಚಿಂತೆಗಳಿಂದ ಮುಕ್ತವಾದ ಒಂದು ಸಗ್ಗ ಸುಖಾನುಭವವಾಯಿತು. ತರಗೆಲೆಯನ್ನು ತುಳಿದ ಮರ್ಮರನಾದದೊಡನೆ ತಮ್ಮ ಮಾತಿನ ಕಲಕಂಠ ಬೆಳೆಸಿ ಯುವ ಸಮೂಹ ಮುನ್ನಡೆಯುತ್ತಿತ್ತು. ರಮಣೀಯವಾದ ಅರಣ್ಯದಲ್ಲಿ ಕಮನೀಯವಾದ ತರುಲತೆಗಳೊಡನೆ ಓಡಾಡುವುದೇ ಒಂದು ನಲಿವಾಗಿತ್ತು. ಪಕ್ಷಿಗಳ ಕಲರವ, ಹೆಮ್ಮರಗಳ ನಡುವಿಂದ ತೂರಿ ಬರುವ ಎಳೆ ಬಿಸಿಲಿನಲ್ಲಿ ಓಡಾಡುವುದೇ ಪ್ರಕೃತಿಯ ಸವಿರುಚಿ ಎನಿಸಿತು.

ಅಲ್ಲಿ ಒಂದು ಕಡೆ ಎಡಕ್ಕೆ ತಿರುಗಿ ಸ್ವಲ್ಪ ದೂರ ಸಾಗಿದ ನಂತರ ಒಂದು ದಿಣ್ಣೆ ಅಲ್ಲಿ ಎಲ್ಲರೂ ತಿರುಗಾಡುವಾಗ ರೆಡ್ಡಿಯವರು ಸ್ವಲ್ಪ ನಿಲ್ಲಿ ಎಂದು ಹೇಳಿದರು. 'ಅದು ಕವಿಶೈಲದಿಂದ ಮೇಲೇರುವ ನೆತ್ತಿ, ಅಲ್ಲಿಂದ ಕುವೆಂಪು ಅವರು ಸೂರ್ಯನನ್ನು ನೋಡುತ್ತಾ ಸುಖಿಸುತ್ತಿದ್ದರು' ಎಂದು ತಿಳಿಸಿ ಸಂಜೆ ಗಿರಿಯಲಿ ಸಂಜೆ ಕವನವನ್ನು ನೆನಪು ಮಾಡಿಕೊಂಡರು.

'ಸಂಜೆಗಿರಿಯಲಿ ಸಂಜೆ ಯಾವ ದೊರೆ ನನಗೆ ಸರಿ?
ಸ್ವರ್ಗದಲಿ ಕುರುಬುತಿಹನಿಂದ್ರನೆನ್ನಂ ನೋಡಿ,
ಧೇನು ಸುರತರು ಸುರಾಂಗನೆಯರಂ ರೋಡಾಡಿ!
ಈ ನಿಸರ್ಗ ಸಿರಿಗೆ ಮೇಣಾವ ಸಗ್ಗಸಿರಿ
ವೆಗ್ಗಳಂ?

(ಸಂಜೆಗಿರಿಯಲಿ ಸಂಜೆ; ಕೃತ್ತಿಕೆ)

ಅಲ್ಲಿಂದ ಹಿಂದಿರುಗುವಾಗ ಅಲ್ಲಿಯವರೇ ಆದ ಟ್ರಸ್ಟ್ ಉದ್ಯೋಗಿ ಗುಂಡಣ್ಣನವರ ಸೂಚನೆಯಂತೆ ಇನ್ನೊಂದು ದಾರಿಯಲ್ಲಿ ಇಳಿದು ಬಂದೆವು. ಆ ನಿಬಿಡ ಕಾನನದಲ್ಲಿ ಒಂದು ಕಡೆ ಬೆಟ್ಟ ಮಲ್ಲಿಗೆಯ ಕಂಪು ತಣ್ಣೆಲರಿನೊಡನೆ ಸುಳಿದಾಡಿತು. ತರುಣಿಯರೆಲ್ಲ ಅಲ್ಲಿಗೆ ಹೋಗಿ ಮಲ್ಲಿಗೆಯನ್ನಾಯ್ದರು, ಮುಡಿದುಕೊಂಡು ಕೆಂಪಾದರು. ಅವು ಅವರ ಕಡುಗಪ್ಪು ಕೂದಲಲ್ಲಿ ಬಿಳಿ ಚಿಟ್ಟೆಯಂತೆ ಕಾಣುತ್ತಿದ್ದವು. ಅಷ್ಟರಲ್ಲಿ ನಾವು ಕವಿ ಶೈಲದ ಬಳಿಗೆ ಬಂದಿದ್ದೆವು. ರೆಡ್ಡಿಯವರು ಎಲ್ಲರೂ ಈ ಸುಂದರ ಬೆಳಕಿನಲ್ಲಿ ಒಂದು ಫೋಟೋ ಸೆಷನ್‌ಗೆ ರೆಡಿಯಾಗಿ ಎಂದರು. ಎಲ್ಲರೂ ಬಂಡೆಯೇರಿ ಕುಳಿತೆವು. ಆ ಪ್ರಾಥಃಕಾಲದ ಫೋಟೋಗೆ ಲಲನೆಯರ ಹೊಳಪುಗಣ್ಣು ಬೆಳಕು ನೀಡಿತ್ತು!

ಶಿಲಾತಪಸ್ವಿ

ಕಾಡಿನಲ್ಲಿ ಸುತ್ತಾಡಿ ಬಂದು ಕುವೆಂಪು ಅವರ ಮನೆಗೆ ಇಳಿದು ಬರುವಾಗ ಎಡಭಾಗದಲ್ಲಿ ಒಂದು ಆಳೆತ್ತರ ಮುನುಷ್ಯಾಕಾರದಲ್ಲಿ ಒಂದು ಒಂಟಿ ಒರಟು ಕಲ್ಲು ನಿಂತಂತಿದೆ. ಅದನ್ನು ನೋಡಿ ಅಶ್ವಿನಿಯು ಅದರತ್ತ ಸಾಗಿದಳು ಅವಳನ್ನು ಹಿಂಬಾಲಿಸಿದ ರೆಡ್ಡಿಯವರು ಅಲ್ಲಿ ನಿಂತರು. ನಾವೆಲ್ಲಾ ಅತ್ತ ಹೋದೆವು. ರೆಡ್ಡಿಯವರು ಆ ಕಲ್ಲನ್ನು ಎಲ್ಲರೂ ಸೂಕ್ಷ್ಮವಾಗಿ ಗಮನಿಸಲು ಹೇಳಿ ಮೌನವಾದರು. ಅನಂತರ ಅದನ್ನು 'ಶಿಲಾತಪಸ್ವಿ' ಎಂದು ಕರೆದು ಕುವೆಂಪು ಕಾವ್ಯ ರಚಿಸಿರುವ ವಿಷಯ ತಿಳಿಸಿ ಈ ಸಾಲುಗಳನ್ನು ಹೇಳಿದರು.

ನನ್ನ ಸೋದರರೆಲ್ಲ ಮರಗಿಡಗಳಂದದಲಿ
ಮೂಡಿದರು; ಉಸಿರೆಳೆದು ಬೆಳೆಬೆಳೆದು ಚಂದದಲಿ
ನಲಿದಾಡಿದರು; ಕೆಲರು ಸ್ವಪ್ನವನು ಸೀಳಿ
ತಿರುಗಾಡಿದರು ಪ್ರಾಣಿ ರೂಪವನುತಾಳಿ;

* * *

ಎಲ್ಲ ಜಡತೆಯ ಬಯಕೆ ಚೈತನ್ಯ ಸಿದ್ಧಿಯೈ.

ಈ ರಹಸ್ಯವನರಿತ ಮಾನವನೇ ಬುದ್ಧನೈ!

(ಶಿಲಾ ತಪಸ್ವಿ: ಕಲಾಸುಂದರಿ)

ಅದನ್ನು ಆಲಿಸಿ ಈ ಜಗತ್ತಿನ ಸೃಷ್ಟಿ ವಿಕಾಸಗಳ ಬೋಧ ಶಿಲಾತಪಸ್ವಿ ಕಾವ್ಯ ಎಂಬ ಅರಿವಾಯಿತು.

ಕವಿಮನೆಯನ್ನು ಪ್ರವೇಶಿಸುವಾಗ ಅವರ ಭವ್ಯ ಚೇತನದ ಸ್ಪರ್ಶವಾದಂತಾಯಿತು. 'ಆ ಸ್ಥಳಕ್ಕೆ ಕುಪ್ಪಳಿಸಿಕೊಂಡು ಬರಬೇಕಾಗಿದ್ದುದರಿಂದ ಕುಪ್ಪಳಿ ಎಂದು ಹೆಸರಾಗಿದೆ' ಎಂದು ಕುವೆಂಪು ತಿಳಿಸಿದ್ದಾರೆ. ಅವರು ತಮ್ಮ ಬಾಲ್ಯವನ್ನು ನೆನೆದು ರಚಿಸಿದ ಈ ಕವನ ನೆನಪಾಯಿತು.

ಆ ಕಾಲವೊಂದಿತ್ತು! ದಿವ್ಯ ತಾನಾಗಿತ್ತು! ಬಾಲ್ಯವಾಗಿತ್ತು!
ಮಣ್ಣು ಹೊನ್ನಾಗಿ; ಕಲ್ಲೆ ಹೂವಾಗಿ, ನೀರಮೃತವಾಗಿ,
ಮನೆ ಮೇರುವಾಗಿ, ಕವಿಶೈಲ ತಾನೆ ಕೈಲಾಸವಾಗಿ,
ಕಾಡೆ ನಂದನವಾಗಿ, ನೆಲವೆ ನಾಕವ ನಗುವ ಕಾಲವೊಂದಿತ್ತು!
(ಕುವೆಂಪು ಸಮಗ್ರ ಗದ್ಯ ಸಂಪುಟ 6, ಪು. 380)

ಮನೆಯನ್ನು ಪ್ರವೇಶಿಸುತ್ತಾ ಮುನ್ನಡೆದಂತೆ ಎದುರಿಗೆ ಮೂಲೆಯಲ್ಲಿ ಕುವೆಂಪು ಅವರು ಇಂಗ್ಲಾದಿಯಲ್ಲಿ ಮದುವೆಯಾದ ಮಂಟಪವಿರುವುದು ಕಂಡಿತು. ಅದು ಇನ್ನೂ ರಂಗ ರಂಗಿನಿಂದ ಕೂಡಿದೆ! ಮನೆಯ ಹಿಂದು ಗಡೆ ಅಜ್ಜಯ್ಯನ ಅಭ್ಯಂಜನದ ಬಚ್ಚಲು ಮನೆ ನೋಡಿ ಕುವೆಂಪು ಅವರ 'ಮಲೆನಾಡಿನ ಚಿತ್ರಗಳು' ಕೃತಿ ಮನದ ಮುಂದೆ ಸುಳಿಯಿತು. ಆ ಬಚ್ಚಲು ಮನೆಯ ಬಲಭಾಗದಲ್ಲಿ ದಾಲ್ಚಿನ್ನಿ ಮರವಿದೆ. ಏಲಕ್ಕಿ ಗಿಡವಿದೆ. ಆ ಕಂಪು ಸವಿಯುತ್ತಾ ಅಡುಗೆ ಮನೆ, ಕುವೆಂಪು ಅವರ ಫೋಟೋಗಳು, ಮಹಡಿ ಎಲ್ಲವನ್ನೂ ನೋಡಿ ಬಂದೆವು.

ಆ ಪ್ರದೇಶದಲ್ಲಿ ಅಶೋಕ ವೃಕ್ಷವಿದೆ ಎಂದು ತಿಳಿದಿದ್ದ ನನ್ನ ಶ್ರೀಮತಿಯು ರೆಡ್ಡಿ ಅವರನ್ನು ಅದನ್ನು ತೋರಿಸಲು ಕೇಳಿಕೊಂಡಳು. ಕವಿಮನೆಯ ಮುಂದೆ ಬಲಗಡೆ ತಿರುಗಿ ಸ್ವಲ್ಪ ದೂರ ನಡೆದರೆ ತಗ್ಗಿನಲ್ಲಿ ಅಶೋಕವೃಕ್ಷವಿದೆ. ಅದು ಪೂರ್ತಿ ಹೂ ಬಿಟ್ಟಾಗ ಒಂದು ಎಲೆಯೂ ಇಲ್ಲದೆ ಬುಡದಿಂದ ಮುಡಿಯ ತನಕ ಹೂ ವೈಭವ! ಕೇಸರಿ ಹಳದಿ ವರ್ಣದ ಹೂ ಬೆಡಗೇ ಬೆಡಗು (ಲಂಕೆಯಲ್ಲಿ ರಾವಣನು ಸೀತಾದೇವಿಯನ್ನು ಸೆರೆಯಿಟ್ಟುದ್ದು ಅಶೋಕವನದಲ್ಲಿ) ಆ ಹೂವನ್ನು ಮುಟ್ಟಿ ನೋಡಿ ಅದರ ಬಣ್ಣ ಬೆಡಗಿಗೆ ಎಲ್ಲರೂ ಮೋಹಕಗೊಂಡರು!

ಅಶೋಕದ ಹೂ ಗೊಂಚಲನ್ನು ಕುವೆಂಪು ಅವರು 'ವನಲಕ್ಷ್ಮಿ ಹೊತ್ತಿಸಿದ ಹೂವಿನ ಹಿಲಾಲು' ಎಂದು ಕರೆದಿದ್ದಾರೆ.

ತೀವಿದಾ ಕತ್ತಲೆಗೆ ವನಲಕ್ಷ್ಮಿ ಬೇಸತ್ತು,
ಸಿರಿಗುರುಳಿರುಳ ಮುಡಿಯ ಕಿರುತಾರೆಗಳನಾಯ್ದು,
ರಕ್ತಾರುಣನ ಮಿಂಚೊಳದ್ದಿ, ಗೊಂಚಲ ನೆಯ್ದು,
ದೀವಟಿಗೆ ಹಿಡಿರೆಂದು ತರುಹಸ್ತಗಳಿಗಿತ್ತು
ಹೂವಿನ ಹಿಲಾಲುಗಳ ಹೊತ್ತಿಸಿರಲಲ್ಲಲ್ಲಿ
ಜ್ವಲಿಸುತಿವೆ ನೋಡದೋ ಅಶೋಕಹೂ ವೇಷದಲ್ಲಿ!
(ಅಶೋಕದ ಹೂಗೊಂಚಲು: ಕೃತ್ತಿಕೆ)

ಆ ರಸ್ತೆಯ ಬಲ ಭಾಗದಲ್ಲಿಯೇ ಪನ್ನೇರಳೆ ಮರವಿದೆ. ತಿಳಿ ಹಳದಿ ನಸು ಗುಲಾಬಿ ಬಣ್ಣದ ಕಂಪು ಸೂಸುವ ಪನ್ನೇರಳೆ ಬಿಸಿಲ ಬೇಗೆಯಲಿ ದೇಹವನು ತಣಿಸುವ ಹಣ್ಣು. ಅದರ ಹೂ ಮೋಹಕ, ಆಕರ್ಷಕ. ಆ ಶಾಂತ ಪರಿಸರ ರಸಿಕ ಸಹೃದಯರಿಗೆ ಸೊಬಗು ಕಂಪು ತಂಪು ಸೊಂಪು ನೀಡುತ್ತದೆ. ಆ ಅರಣ್ಯ ಪರಿಸರದ ಸೊಬಗು "ಶ್ರೀ ರಾಮಾಯಣ ದರ್ಶನಂ' ಮಹಾಕಾವ್ಯದಲ್ಲಿ ಉಸಿರಾಡಿದೆ.

❖❖❖

ಲೇಖಕರ ಕೃತಿಗಳು

1. ಹಾಡುಹಕ್ಕಿ ಅಂಬಿಕಾತನಯದತ್ತ (1995)
   (ಮೂರನೇ ಆವೃತ್ತಿ – 2012)
2. ಡಿ.ಆರ್.ಬೇಂದ್ರೆ (1997)
   (ಮೈಸೂರು ವಿಶ್ವವಿದ್ಯಾಲಯವು ಪ್ರಕಟಿಸಿರುವ ಆಂಗ್ಲ ಕೃತಿ)
3. ನಾಕುತಂತಿ – ಒಂದು ಟಿಪ್ಪಣಿ (2000)
   (ಮೂರನೇ ಆವೃತ್ತಿ – 2012)
4. ರಸ್ತೆ ನಿಯಮಗಳು (2000)
   (ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಕೃತಿ) ಆರನೇ ಆವೃತ್ತಿ – 2020.
5. ಹೂತ್ತದ ಹುಣಸಿ (2000) (ದ.ರಾ.ಬೇಂದ್ರೆ ಕಾವ್ಯ ವಿಮರ್ಶೆ)
   (ಎರಡನೇ ಆವೃತ್ತಿ – 2011)
6. ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ – ಒಂದು ಅಧ್ಯಯನ (2001)
   (ಪಿ.ಎಚ್.ಡಿ. ಮಹಾಪ್ರಬಂಧ) ಎರಡನೇ ಆವೃತ್ತಿ 2012
7. ಬರೆಹದಲ್ಲಿ ಬೇಂದ್ರೆಯವರ ಬದುಕು (2008)
   (ದ.ರಾ.ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ ಪ್ರಕಟಿಸಿರುವ ಕೃತಿ)
8. ಅಂತರಂಗದತ್ತ ನಯನ (2010)
9. ಮಹಾಕವಿ ಲಕ್ಷ್ಮೀಶನ ವಚನ ಜೈಮಿನಿ ಭಾರತ (2012)
10. ಹರಿಹರ ಮಹಾಕವಿಯ ವಚನ ಗಿರಿಜಾಕಲ್ಯಾಣ (2013)
11. ಬೇಂದ್ರೆಯವರ ಸಾಹಿತ್ಯದಲ್ಲಿ ಶರಣ ಚಿಂತನೆ (2015)
12. ತಿರುತಿರುಗಿಯು ಹೊಸತಾಗಿರಿ (2015)
    (ದ.ರಾ,ಬೇಂದ್ರೆಯವರ ನಾದಲೀಲೆಯ ಅಧ್ಯಯನ)
13. ರಾಘವಾಂಕ ಮಹಾಕವಿಯ ವಚನ ಹರಿಶ್ಚಂದ್ರ ಚಾರಿತ್ರ (2016)

14. ಸಂತಕವಿ ಕನಕದಾಸರ ನಳದಮಯಂತಿ ಪ್ರೇಮಕಥೆ (2018)

15. ಬೇಂದ್ರೆಕಾವ್ಯ (2018) ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

16. ಬೇಂದ್ರೆಕಾವ್ಯ : ಪದನಿರುಕ್ತ (2018)

17. ಹಸಿರು ಹಚ್ಚೆ ಚುಚ್ಚಿ – (2019)

18. ಕುವೆಂಪು ಹನುಮದ್ದರ್ಶನ (2020)

19. ಶ್ರೀರಾಮಯಣ ದರ್ಶನಂ ಪಾತ್ರಗಳ ಕಥಾವಳಿ (2021)

20. ಕುವೆಂಪು ಶ್ರೀರಾಮಾಯಣದರ್ಶನಂ ವಚನದೀಪಿಕೆ (2021)


❖❖❖

14. [illegible] (2018)
15. [illegible] (2018) [illegible]
16. [illegible] (201[illegible])
17. [illegible] (2019)
18. [illegible] (2020)
19. [illegible] (2021)
20. [illegible] (2021)

◇◇◇

ಕರ್ಣಚೈತ್ರನ ಪರ್ಣಶಾಲೆ

(ಕುವೆಂಪು ಶ್ರೀ ರಾಮಾಯಣದರ್ಶನಂ ಮಹಾಕಾವ್ಯ ವಿಮರ್ಶೆ)



ಜಗದ್ಭವ್ಯ ರಾಮಾಯಣ ಎನ್ನುವಂತೆ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಸೃಷ್ಟಿಸಲು ಸಾಧ್ಯವಾದ ಕುವೆಂಪು ವಿಶ್ವ ಮಾನವ ಸಂದೇಶವನ್ನು ಬೇರೆಯವರು ಅಳವಡಿಸಿ ಕೊಳ್ಳಲಿ ಎಂದು ಕೊಟ್ಟಿದ್ದಲ್ಲ, ಸ್ವತಃ ಅಂತೆಯೇ ಬದುಕಿ ತೋರಿದವರು ಎನ್ನುವುದನ್ನು ಸ್ಪಷ್ಟಪಡಿಸಲು ಬೇಂದ್ರೆ ಅವರ ಬಗ್ಗೆ ಹೇಳಿದ "ಚಾರುತ್ವದ ಕುಂದಣದಲ್ಲಿ ಚಾರಿತ್ರ್ಯದ ರತ್ನ" ಎನ್ನುವ ಮಾತನ್ನು ಡಾ.ಜಿ.ಕೃಷ್ಣಪ್ಪ ಉಲ್ಲೇಖಿಸಿದ್ದಾರೆ. ಅಂಥ ಮಹೋನ್ನತ ಚಾರಿತ್ರ್ಯ ಪುರುಷ ನಡೆದ ದಾರಿಯತ್ತ ಬೆರಗು ಗಣ್ಣಿನಿಂದ ಕಣ್ಣು ಹಾಯಿಸಿ, ಆ ದಾರಿಯಲ್ಲಿ ಸಾಗುವುದರಿಂದ ನಮ್ಮ ಬದುಕೂ ಹಸನಾದೀತು ಎನ್ನುವ ಭರವಸೆಯಿರಿಸಿ ಕೊಂಡು ಕೃಷ್ಣಪ್ಪನವರು ರಾಮಾಯಣ ದರ್ಶನದ ವಿಮರ್ಶೆ ಯಲ್ಲಿ ತೊಡಗಿರುವುದರಿಂದಲೇ ಅನ್ಯರಿಗೆ ಸಾಧ್ಯವಾಗದ ಹಲವು ಹೊಳಹುಗಳು ಗೋಚರಿಸುವುದನ್ನು ಸಾಕ್ಷೀಕರಿಸು ವಂತೆ 'ಕರ್ಣಚೈತ್ರನ ಪರ್ಣಶಾಲೆ' ರೂಪುಗೊಂಡಿದೆ. ಅಪಾರ ವಿದ್ವತ್ತನ್ನು ಬಯಸುವ ಈ ಶ್ರಮಸಾಧ್ಯವಾದ ಕೆಲಸವನ್ನು ಮಾಡಿರುವುದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

– ಡಾ.ಬೈರಮಂಗಲ ರಾಮೇಗೌಡ
ಬೆಂಗಳೂರು

ಪ್ರಕಾಶಕರು
ಅನ್ನಪೂರ್ಣ ಪಬ್ಲಿಷಿಂಗ್ ಹೌಸ್
ನಂ:176,12ನೇ ಕ್ರಾಸ್, ಮಾಗಡಿ ಮುಖ್ಯ ರಸ್ತೆ
ಅಗ್ರಹಾರದಾಸರಹಳ್ಳಿ, ಬೆಂಗಳೂರು - 560079